7. That a portion of the allowance made for the *Lungurkhana* and *Kyrat* for Mussulmen *Fakeers* to be paid in to the *Mutt*.

Dated 24th Rubei Sani 1196 Higiri corresponding with the year A. D. 1779/80.
Registerd in the Huzur Dufter 3rd Jamadilevel in the year 1196 Hijiri.
Registerd in the Dewan's Dufter 1st Jamadilevel in the year 1196 Hijiri.
Copy registered in the Sultan's Dufter 1st Jamadi level in the year 1196 Hijiri corresponding to A. D. 1779—80.

The above is a translation from Persian language.

jayalakshmi vilasa press, mysore.

GENERAL NO. 2396/101 OF 1868-69

MYSORE COMMISSIONER'S OFFICE.

Bangalore, 27th July, 1 68

TO

The Secretary to the Government of India,

Foreign Department

SIMLA.

SIR,

In reply to para 2 of your letter 1201, dated 16th instant, I have the honor to submit for the information of the Government of India the following explanation

2. The Sringeri Guru is the direct representative of the Sectarian Shunkar Acharya and is the acknowledged spiritual Director not only of the greater proportion of the Hindus of Southern India, but also of those of the leading Maharatta Houses, such as Holakr and the former Peshwas It may be said that his influence is far greater than that of any Hindu spiritual guide in India and I presume it is for this reason that he is regarded with such unlimited respect He is the only Guru in the Province who is permitted to carry the Adda Palkee or Cross Palankeen, and he has in his possession Sunuds of great antiquity from the Nizam, the Peishwas, the Mysore Rajah, Holkar and others all enjoing the utmost respect to be paid to him

3· Owing to the extraordinary veneration in which he has always been held, a Sirdari of Silledars has been attached to him from the earliest period and on the occasion of his visiting H. M. Territory an extra escort has always been given, to which purport the Guru holds several communications to and from the Madras Government.

4· The Guru enjoys Enam lands valued at more than half a lac in the Kadur District near the sources of the Toongabhadra river, and during his periodical tours in Mysore receives from his disciples large sums of money which he distributes in charity. The late Rajah used to pay him Rs. 1000 a month

5 The Guru Narsing Bhartee is a venerable old man of 72, who has been a great traveller and has a considerable reputation for learning He is deservedly respected, being very unassuming in manner and having a well established character for benevolence and wisdom.

6 I may observe that I do not think it expedient to curtail the Guru of his customary guard of honor, but I have endeavoured to dissuade him from proceeding in Her Majesty's Territory with any additional followers, although he can quote undoubted precedents for the practice.

I have, &,

(Signed) L BOWRING,

Commissioner

No. 1360.

FROM

W. S. SETON KARR, Esq.,

Secretary to the Government of India.

TO

THE COMMISSIONER OF MYSORE.

SIR,

I have the honor to acknowledge the receipt of your letter dated 27th ultimo, No. 2369/101, submitting an explanation in regard to the escort of Silledar Horse furnished to the Sringeri Guru.

2. In reply, I am directed to state that His Excellency the Viceroy and Governor General in Council accepts your explanation of the custom in force regarding the native gentleman and approves the views set forth in the 6th paragraph of the letter under acknowledgment.

I have the honor to be,
Sir.
Your most obedient Servant,
(Signed) W. S. SETON KARR,
Secretary to the Government of India,

SIMLA,
19th August, 1868.

True copy,

(Signed) L. BOWRING.

[illegible]

श्री.

[illegible]

ಕ್ರೈ॥ ರಿ॥ ನಂಬರು.
295.

ಶ್ರೀ ಶ್ರಿಂಗೇರಿ ಸ್ವಾಮಿಗಳವರ ಮಠಕ್ಕೆ ಸೇರಿದ ಸರ್ವ ಧರ್ಮಾಧಿಕಾರ
ಲಕ್ಷ್ಮೀನರಸಿಂಹಶಾಸ್ತ್ರಿಗಳಿಗೆ-- ಅಂಕಿ.

ಈ ದಿವಸ ಶ್ರೀ ಶ್ರಿಂಗೇರಿ ಸ್ವಾಮಿಗಳವರು ನರಶೀಪುರದ ಶ್ರೀ ಗುಂಜಾನರಸಿಂಹಸ್ವಾಮಿಯವರ ದೇವಸ್ಥಾನಕ್ಕೆ ದಯಮಾಡಿಸಿ, ಪೂಜೇ ಮುಂತಾದ್ದುಮಾಡಿ ಬರಬೇಕಾದ್ದರಿಂದ ಮಾಮೂಲ್ ಅನುಸರಿಸಿ ಮರ್ಯಾದಿ ಮುಂತಾದ್ದು ನಡಿಯಲು ಹುಕ್ಕುಂ ಆಗಬೇಕೆಂದು ವಗೈರೇ ನೀವು ಬರಸಿದ ಖತ್ತು ತಲಪಿತು,

ಶ್ರೀ ಶ್ರೀಗೇರಿ ಸ್ವಾಮಿಗಳವರು ಮಾಮೂಲ್ ಮತ್ತು ಪದ್ಧತಿ ಅನುಸರಿಸಿ ಶ್ರೀ ಗುಂಜಾನರಸಿಂಹಸ್ವಾಮಿಗಳವರ ದೇವಸ್ಥಾನಕ್ಕೆ ದಯಮಾಡಿಸಿ ಮಾಮೂಲ್ ಮತ್ತು ಪದ್ಧತಿ ಅನುಸರಿಸಿ ದೇವರಿಗೆ ಅರ್ಚನೆ ಕರ್ಪೂರಾರತಿ ಮಾಡಿ ದಯಮಾಡಿಸಬಹುದು. ಇದರಲ್ಲಿ ಗೈರ್‌ಮಾಮೂಲ್ ಮತ್ತು ಜನರ ನೆಮ್ಮದಿಗೆ ಭಂಗಕರವಾದ ಕೃತ್ಯ ನಡೆಯಲು ಆಕರಮಾಡಕೂಡದು. ಹಾಗೆ ಮಠದಕಡೆ ಜನರಿಂದ ಗಲಾಟೆಗೆ ಆಕರವಾದಲ್ಲಿ ರಿಗಲರ್‌ಪೋಲೀಸ್ ರೂಲ್ಸ್‌ಅನುಸರಿಸಿ ಅಂಥಾಜನರವಿಷಯದಲ್ಲಿ ನಡೆಸಲು ಆಸ್ಪದವಾದೀತೆಂಬ ಈಸಂಗತಿಗಳನ್ನೆಲ್ಲಾ ಶ್ರೀಸ್ವಾಮಿಗಳವರಿಗೆ ಅರಿಕೇಮಾಡಿ, ಮಾಮೂಲ್ ಮತ್ತು ಪದ್ಧತಿ ಅನುಸರಿಸಿ ನಡೆಯಬೇಕಾಗಿಧೆ. ಅದಕ್ಕೆ ವಿರೋಧವಾದ ಯಾವ ಕೃತ್ಯವೂ ನಡೆಯಬಾರದು. ಈ ವಿಷಯವನ್ನು ಕುರಿತು ದೇವಸ್ಥಾನದ ನೌಕರಿಗೂ ಹುಕ್ಕುಂ ಕೊಟ್ಟು ಉಸ್ತುವಾರೀಗೆ ಪೋಲೀಸ್ ಇಲಾಖೆಯವರಿಗೂ ತಿಳಿಯಪಡಿಸಿಧೆ:

7—9—76.
ನರಶೀಪುರ ತಾಲ್ಲೂಕ್
ತಲಕಾಡು.

(Sd) *M. SHAIK IBRAHIM.*

ಥ- ಮೆ-

ತಲ್ಕಾಡು ತಾಲ್ಲೂಕ್
ಮೇಜಿಸ್ಟ್ರೇಟರ
ಮೊಹರು.

ಜಯಲಕ್ಷ್ಮೀವಿಲಾಸಮುದ್ರಾಕ್ಷರಶಾಲಾ ದೊಡ್ಡಪೇಟೆ ಮೈಸೂರು.

ಮುಲ್ಕಿ ೫೩ ನಂಬರು.
೩೯

ನರಶೀಪುರದ
ತಾಲ್ಲೂಕ ಮೊಹರು

ನರಶೀಪುರದ ತಾಲ್ಲೂಕು ಕಚೇರಿಯಿಂದ.

ಕಸುಬಾ ಲಕ್ಷ್ಮೀನರಸಿಂಹಸ್ವಾಮಿಯವರ ದೇವಸ್ಥಾನದ ಪಾರುಪತ್ಯೇಗಾರ ಕೃಷ್ಣಪ್ಪನವರಿಗೆ

ಇಂಡಾರ್ಸ್ ಹುಕುಂ.

ಶ್ರೀ ಶೃಂಗೇರಿ ಜಗದ್ಗುರುಗಳಾದ ನರಸಿಂಹಭಾರತೀಸ್ವಾಮಿಗಳವರು ನರಶೀಪುರಕ್ಕೆ ಚಿತ್ತೈಸಿದ್ದಾಗ್ಯೆ ದೇವರಪೂಜಾ ಮಂಗಳಾರತಿ ಪಾದಕಾಣಿಕೆ ಮುಂತಾದ್ದು ಮಾಡುವದಕ್ಕೆ ಮಾಮೂಲಿಮೇರೆ ಸದರೀ ಲಕ್ಷ್ಮೀನರಸಿಂಹಸ್ವಾಮಿಯವರ ದೇವಸ್ಥಾನಕ್ಕೆ ದಯಮಾಡಿಸಿದ್ದವೇಳೆ ಅರ್ಚಕ ಕೃಷ್ಣಭಟ್ಟ ಬಾಗಿಲು ಹಾಕಿಕೊಂಡಿದ್ದನಿಮಿತ್ಯ ಸ್ವಲ್ಪಹೊತ್ತು ಸ್ವಾಮಿಗಳವರು ಬಾಗಿಲು ತಗೆಯತಕ್ಕದ್ದರ ನಿರೀಕ್ಷಣೆಮಾಡುವಂತೆ ಮಾಡಲ್ಪಟ್ಟ ಸದರಿ ಅರ್ಚಕನಿಗೆ ಬಂದೋಬಸ್ತು ಆಗತಕ್ಕ ವಿಷಯದಲ್ಲಿ ನೀನು ಹುಜೂರು ಫಿರ್ಯಾದಿಮಾಡಿದ್ದಕ್ಕೆ ತಾಲ್ಲೂಕಿಂದ ಜಾಹಿರ್ಮಾಡಿದ್ದ ರಿಪೋರ್ಟಿನಮೇಲೆ ಈ ದಫಾಕ್ಕೆ ನಿಮ್ಮ ಮುನಾಸಬ್ ಅರ್ಚಕನಿಗೆ ಜುರ್ಮಾನೆವಿಧಿಸಿ ಫೈಸಲ್‌ಮಾಡುವಂತೆ ಕೊಟ್ಟಿರುವ ಹುಕುಂ ಅಮಲ್‌ಜಾರಿ ಆಗಿರುವ ತಪ್ಸೀಲನ್ನ ಅರ್ಜೀದಾರಗೆ ತಿಳಿಸುವಂತೆ ಸರ್ಕಾರ ಹುಜೂರು ಮಿ ೧೭ನೇ ಮಾರ್ಕೂಂ ಮುಜರಾಯಿ ೧ನೇ ನಂಬರು ಹುಕುಂ ಸಾದರಾದಕಾರಣ ಈ ಮೊಕದ್ದಮಾ ಕಟ್ಟು ಮುಂತಾದ ಕಾಗದ ಪತ್ರಗಳ ನೋಡುವಾಗ್ಯೆ ಕೂಡ್ಲೆ ಅರ್ಚಕ ಬಾಗಿಲು ತೆಗದ್ದಾಗಿಯೂ ಶ್ರೀ ಸ್ವಾಮಿಗಳವರು ಕಟ್ಲೆಪ್ರಕಾರ ಪೂಜಾ, ಪಾದಕಾಣಿಕೆ, ಮಂಗಳಾರತಿ ಮುಂತಾಗಿ ನೆರವೇರಿಸಿದಬಳಿಕ ಮಾಮೂಲ್‌ಮೇರೆ ಮರಿಯಾದೆ ನಡೆಸಿರುವದಾಗಿ ಅರ್ಚಕ ಕೃಷ್ಣಭಟ್ಟನಕೈಫಿಯತಿನಿಂದ ತಿಳಿಯಬರುವದಲ್ಲದೆ ದೇವಸ್ಥಾನದ ಬಾಗಿಲು ಹಾಕಿದ ತಪ್ಪಿತಕ್ಕಾಗಿ ಸನ್ ೧೮೬೬ನೇ ಇಸವಿ ಏಪ್ರಿಲ್ ೧೬ನೇ ಮಾರ್ಕೂಂ ಮುಜರಾಯಿ ೩೧ನೇ ನಂಬರು ಹುಕುಂ ಪ್ರಕಾರ ಈ ದಫಾಕ್ಕೆ ಸದರಿ ಅರ್ಚಕ ಕೃಷ್ಣಭಟ್ಟನಿಗೆ ೨ರೂಪಾಯಿ ಜುರ್ಮಾನೆ ಮೊಕರರ್‌ಮಾಡಿ ವಸೂಲ್ಮಾಡಿರುತ್ತೆ. ತಿಳಿಯುವದು. ತಾರೀಖು ೧೮ನೇ ಮಾಹೆ ಜೂನ್ ಸನ್ ೧೮೬೬ನೇ ಇಸವಿ ಮೊಕ್ಕಾಂ ಕಸುಬಾ. ... ...

ರುಜು ನಾರಾಯಣರಾವ್ ಮಾಮಲೇದಾರ್,
ಎಂದು ಮಹಾರಾಷ್ಟ್ರಲಿಪಿಯಲ್ಲಿ ಬರದಿದೆ.

ಜೂನ್ ತಾರೀಖು ೨೦ರಲ್ಲು ದಾಖಲ್.

ಜಯಲಕ್ಷ್ಮೀವಿಲಾಸ ಮುದ್ರಾಕ್ಷರಶಾಲಾ ದೊಡ್ಡಪೇಟೆ ಮೈಸೂರು.

17

ಮೈಸೂರು ಸಂಸ್ಥಾನದ ಎಗ್ಜಿಕ್ಯೂಟಿವ್ ಕೌನ್ಸಿಲ್ ಪ್ರಸಿಡೆಂಟ್ ಮತ್ತು

ದಿವಾನ್ ಸರ್. ಕೆ. ಶೇಷಾದ್ರಯ್ಯನವರ

ಸನ್ನಿಧಾನಂಗಳಿಗೆ.

——.o:——

[illegible]

ನಿವಾಸಿಗಳಾದ ಬ್ರಾಹ್ಮಣರು ಮೊದಲಾದ ಚತುರ್ವರ್ಣದ ಪ್ರಜೆಗಳು ಬರೆದುಕೊಂಡ ಅರ್ಜಿ—

ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರು ಕಳೆದ ಜೂನ್ ಮಾಹೆಯಲ್ಲಿ ಮೈಸೂರಿಗೆ ಬಿಜಯಂಗೈಯುತ್ತಿದ್ದ ಕಾಲದಲ್ಲಿ ಶಿಷ್ಯಜನರ ಪ್ರಾರ್ಥನಾಪೂರ್ವಕ ಶ್ರೀರಂಗಪಟ್ಟಣದ ಕೋಟೆಯೊಳಕ್ಕೆ ದಯಮಾಡಿಸಿ ಅಲ್ಲಿ ರಂಗನಾಥಸ್ವಾಮಿದೇವರ ದರ್ಶನವಂ ಮಾಡಿದ್ದಕ್ಕಾಗಿ ದೇವರಿಗೆ ಸಂಪ್ರೋಕ್ಷಣೆ ಆಗಬೇಕೆಂದು ಶ್ರೀವೈಷ್ಣವರಲ್ಲಿ ಕೆಲವರು „ಅ ಖಿ ಲ ವೈ ಷ್ಣ ವ ಸ ಭಾ„ ಎಂದು ದೊಡ್ಡ ಹೆಸರನ್ನಿಟ್ಟುಕೊಂಡು ಸರ್ಕಾರದಲ್ಲಿ ಫಿರ್ಯಾದುಮಾಡಿದ್ದರಮೇಲೆ ಸ್ಮಾರ್ತಜನಗಳು ಸಂಪ್ರೋಕ್ಷಣೆ ಮಾಡಕೂಡದೆಂದು ತಕರಾರುಮಾಡಿದ್ದಕ್ಕಾಗಿ ೧೮೯೫ನೇ ಇಸವಿ ಜೂನ್ ೨೩ನೇ ತಾರೀಖಿನಲ್ಲಿ ಮುಜರಾಯಿ ಸೂಪರಿಂಟೆಂಡೆಂಟರವರು ಖುದ್ದು ವಿಚಾರಣೆ ಮಾಡಿ ಗೌರ್ನಮೆಂಟಿಗೆ ಮಾಡಿದ ರಿಪೋರ್ಟನ್ನು ಪರಾಂಬರಿಸಿ ಗೌರ್ನಮೆಂಟನವರಿಂದ ತೀರ್ಮಾನದ ಹುಕುಂ ಕೊಡೋಣವಾಗಿರುತ್ತೆ. ಈ ತೀರ್ಮಾನವು ದ್ವೇಷಾಸೂಯಾಪರರಾದ ಕೆಲವರಿಗೆ ತೃಪ್ತಿಕರವಾಗದೆ ಅವರು ವರ್ತಮಾನಪತ್ರಿಕೆಗಳಿಂದ ಮನಸ್ವಿಚರ್ಚೆಯನ್ನು ಮಾಡುತ್ತಾ ಇರುವದಲ್ಲದೆ ತಮ್ಮ ಅಭಿಪ್ರಾಯದಂತೆ ಸಂಪ್ರೋಕ್ಷಣೆಗೆ ಹುಕುಂ ಕೊಡದೇಹೋದಲ್ಲಿ ಮತಸಂಬಂಧವಾದ ಮರಣವನ್ನು ಹೊಂದುತ್ತೇವೆಂಬದಾಗಿ ಬರಿಯೋಣವೇ ಮುಂತಾದ್ದರಿಂದ ಗೌರ್ನಮೆಂಟನವರಿಗೆ ಘಾಬರಿಯನ್ನುಂಟುಮಾಡಿ ತನ್ಮೂಲಕ ನ್ಯಾಯಕ್ಕೆ ವಿರುದ್ಧವಾಗಿರತಕ್ಕ ತಮ್ಮ ಸ್ವಾರ್ಥಗಳನ್ನು ಪಡೆಯಬೇಕೆಂದು ಪುನಃಪುನಃ ಶ್ರೀಮನ್ಮಹಾರಾಜ್ಞೀ ರೀಜೆಂಟರವರಿಗೂ ರಸಿಡೆಂಟ್ ಸಾಹೇಬರಿಗೂ ಅರ್ಜಿಯನ್ನು ಕೊಡುವದೇ ಮುಂತಾದ ಧರಸಾಧನಾಪ್ರಯತ್ನದಲ್ಲಿರುತ್ತಾರೆ.

ಈ ವಿಚಾರವನ್ನು ಕುರಿತು ನಾವು ಗೌರ್ನಮೆಂಟಿಗೆ ಶೃತಪಡಿಸತಕ್ಕದ್ದೇನೂ ಇಲ್ಲದೇ ಇದ್ದಾಗ್ಯೂ ಪ್ರೊಸೀಡಿಂಗ್ಸಿನ ೮ನೇ ಪ್ಯಾರಾದಲ್ಲಿ ನಮೂದಿಸಿರುವ ಸಂದರ್ಭದಲ್ಲಿಯೂ ಶ್ರೀವೈಷ್ಣವರಿಗೆ ಶ್ರೀ ರಂಗನಾಥಸ್ವಾಮಿದೇವರಮೇಲೆ ಇರತಕ್ಕ ಹಕ್ಕುದಾರಿ ವಿಚಾರದಲ್ಲೂ ಅರಿಕೆಮಾಡಿಕೊಳ್ಳುವವನ್ನು ಘನತೆಯನ್ನು ಹೊಂದಿದ ಕೌನ್ಸಿಲ್ ಸಭೆಯವರು ಸಾವಧಾನವಾಗಿ ಪರ್ಯಾಲೋಚಿಸಬೇಕೆಂದು ಬೇಡುತ್ತೇವೆ.

೧ ನೋಡು   ಮೇಲ್ಕಂಡ ಪ್ರೊಸಿಡಿಂಗ್ಸಿನ ನಾಲ್ಕನೇ ಪ್ಯಾರಾ.

* ವೇದೋಕ್ತ ಕರ್ಮಾನುಷ್ಠಾಯಿಗಳಾದ ಬ್ರಾಹ್ಮಣರಿಗೆ ನಿಷಿದ್ಧರೂಪವಾಗಿರುವ ಆಗಮಗಳ ಪ್ರಕಾರ ಪೂಜೆಗಳಂ ನಡೆಸಲ್ಪಡುವ ಒಂದು ದೇವಾಲಯದಲ್ಲಿ ಒಬ್ಬ ಮಠಾಧಿಪತಿಯಾದವರು ಪೂಜೆಮಾಡಬಹುದೆಂಬ ಸಾಮಾನ್ಯ ಜಿಜ್ಞಾಸೆಯನ್ನಾಗಲೀ ಅಥವಾ ಮಾಮೂಲ್ ಅನುಸರಿಸಿ ಶೃಂಗೇರಿಸ್ವಾಮಿಗಳವರಿಗೆ ಇಂಥಾ ವಿಷಯಗಳಲ್ಲಿ ಯಾವದಾದರೂ ವಿಶೇಷ ಬಾಧ್ಯತೆ ಉಂಟೆ ಎಂಬ ಮುಖ್ಯವಾದ ಜಿಜ್ಞಾಸೆಯನ್ನಾಗಲಿ, ಪ್ರಕೃತ ಮೊಕದ್ದಮೆಯನ್ನು ಫೈಸಲ್ ಮಾಡುವದರಲ್ಲಿ ಆಲೋಚಿಸಬೇಕಾದ್ದು ದೈವಾತ್ ಅನಾವಶ್ಯಕವಾಗಿದೆ. ಕಳೆದ ಜೂನ್ ತಿಂಗಳು ೧೧ನೇ ತಾರೀಖಿನಲ್ಲಿ ಶೃಂಗೇರಿಸ್ವಾಮಿಗಳವರು ದೇವರಿಗೆ ಪೂಜೆಮಾಡಬೇಕೆಂಬ ಉದ್ದೇಶ್ಯದೊಡನೆ ದೇವಾಲಯಕ್ಕೆ ದಯಮಾಡಿಸಿದವರಲ್ಲವೆಂದು ಹೇಳುವದು ಪ್ರಕೃತ ಮೊಕದ್ದಮೆಯ ವ್ಯವಸ್ಥೆಗೆ ಸಾಕಾದ್ದಾಗಿದೆ. * *

* *

ವಿಷ್ಣುದೇವಾಲಯಗಳಲ್ಲಿ ಶೃಂಗೇರಿ ಜಗದ್ಗುರುಗಳವರು ಪೂಜೆಮಾಡತಕ್ಕದ್ದಕ್ಕೆ ಅವರಿಗೆ ವಿಶೇಷ ಬಾಧ್ಯತೆ ಇರತಕ್ಕದ್ದನ್ನು ವಿಚಾರಮಾಡತಕ್ಕದ್ದು ಈ ಮೊಕದ್ದಮಾ ತೀರ್ಮಾನಕ್ಕೆ ಮುಖ್ಯವಾದ ಅಂಶವಾಗಿತ್ತು.

ಹಾಗೆ ಮಾಡಿಸಿ ತೀರ್ಮಾನವನ್ನು ಅಪ್ಪಣೆಕೊಡಿಸಿದ್ದ ಪಕ್ಷದಲ್ಲಿ ಶ್ರೀವೈಷ್ಣವರು ಪುನಃಪುನಃ ಚರ್ಚಿಸುವದಕ್ಕೂ ಶೃಂಗೇರಿಮಠದ ಶಿಷ್ಯರಾದ ನಾಲ್ಕು ವರ್ಣದವರೂ ಈ ವಿಚಾರವಾಗಿ ಗೌರ್ನಮೆಂಟಿನವರಿಗೆ ತೊಂದರೆ ಕೊಡುವದಕ್ಕೂ ಅವಕಾಶವಾಗುತ್ತಿರಲಿಲ್ಲ. ಎಂಬುವದನ್ನು ಭಯಭಕ್ತಿಗಳೊಡನೆ ಅರಿಕೆ ಮಾಡಿಕೊಳ್ಳುತ್ತೇವೆಯೇ ಹೊರ್ತು ಗೌರ್ನಮೆಂಟನವರ ನಡವಳಿಕೆಮೇಲೆ ಆಕ್ಷೇಪರೂಪವನ್ನಾಗಿ ಅರಿಕೆಮಾಡುವಹಿಲ್ಲ ಎಂಬುವದನ್ನು ಘನವಾದ ಚಿತ್ತದಲ್ಲಿ ಲಾಲಿಸಬೇಕು.

೨ ಬ್ರಾಹ್ಮಣ್ಯವು ಕೆಲವು ಶತಮಾನಗಳ ಕೆಳಗೆ ಬೌದ್ಧರ ಪ್ರಾಬಲ್ಯದಲ್ಲಿ ಕ್ಷೀಣಗತಿಗೆ ಬಂದದ್ದರಿಂದ ದೇವಾಲಯ ಮೊದಲಾದವುಗಳೆಲ್ಲಾ ಬೌದ್ಧಾಕ್ರಾಂತಗಳಾಗಿರಲು ಶ್ರೀಮಚ್ಛಂಕರಭಗವತ್ಪಾದರವರು ಅವತಾರವಂಮಾಡಿ ಈ ದುರ್ಮತಗಳನ್ನೆಲ್ಲಾ ಖಂಡಿಸಿ ಬ್ರಾಹ್ಮಣ್ಯವನ್ನು ಜೀರ್ಣೋದ್ಧಾರಮಾಡಿ ಷಣ್ಮತಗಳನ್ನೂ ಸನ್ಯಾಸಾಶ್ರಮವನ್ನೂ ಶಿವವಿಷ್ಣ್ವಾದಿ ಪಂಚಾಯತನಾರಾಧನ ಕ್ರಮವನ್ನೂ ಸಹಾ ಶಾಸ್ತ್ರೀಯವಾದದ್ದೆಂದು ಸ್ಥಾಪಿಸಿದಂಥಾವರಾಗಿ ಅದರಂತ ತಾವು ಆಚರಣೆಮಾಡುತ್ತಾ ತಮ್ಮ ಶಿಷ್ಯಮಂಡಲಿಯಿಂದ ನಡೆಸುತ್ತಲೂ ಬಂದರು. ಅನ್ಯಮತಾಕ್ರಾಂತವಾಗಿ ನಾಮಾವಶಿಷ್ಟವಾದ್ದ ಆಸೇತು ಹಿಮಾಚಲಪರ್ಯಂತ ಇರತಕ್ಕ ದೇವಾಲಯಗಳಿಗೆಲ್ಲಾ ಪ್ರೋಕ್ಷಣೆ ಅವುಗಳನ್ನ ವಿಧ್ಯುಕ್ತವಾಗಿ ಶುದ್ಧಿಮಾಡಿ ಶಿವವಿಷ್ಣುದೇವರುಗಳಿಗೆಲ್ಲಾ ಜೀರ್ಣೋದ್ಧಾರ ಕುಂಭಾಭಿಷೇಕ ಮುಂತಾದ್ದನ್ನ ಶಾಸ್ತ್ರೋಕ್ತವಾದ ವಿಧಿಗಳಿಂದ ನಡಿಸಿ, ದೇವತಾಸಾನ್ನಿಧ್ಯ ಉಂಟಾಗುವಂತೆಮಾಡಿ ತಾವು ಸ್ವತಃ ಆ ದೇವರುಗಳನ್ನ ಪೂಜೆಮಾಡಿ ನಂತರ ಆಯಾಯ ಸ್ಥಳದಲ್ಲಿರತಕ್ಕ ಬ್ರಾಹ್ಮಣರಿಗೆ ಪೂಜೆಮಾಡುವವಕ್ಕೆ ಅಪ್ಪಣೆಕೊಡಿಸಿವರೆಂಬುವದು ಶಂಕರವಿಜಯ ಮೊದಲಾದ ಅನೇಕ ಗ್ರಂಥಗಳಿಂದ ತಿಳಿಯಬರುತ್ತೆ.

೩ ಶ್ರೀಶಂಕರ ಭಗವತ್ಪಾದರವರ ತರುವಾಯ ಆ ಪೀಠವನ್ನಲಂಕರಿಸಿದ ಗುರುಪರಂಪರೆಯವರೆಲ್ಲಾ ಮೇಲೆ ಹೇಳಿದ ಕ್ರಮದಲ್ಲಿ ಆಚಾರ ವಿಚಾರಗಳನ್ನ ಪರಾಮರ್ಶಿಸುವದಕ್ಕಾಗಿ ಸಂಚಾರ ಹೊರಟಕಾಲಗಳಲ್ಲಿ ಶಿಷ್ಯರ ಶಿವವಿಷ್ಣು ದೇವಾಲಯಗಳಿಗೆ ದಯಮಾಡಿಸಿ ದೇವತಾರಾಧನೆಯನ್ನ ನಡೆಸುತ್ತಾ ಇದಾರೆ.

೪ ಏತನ್ಮಧ್ಯೆ ಅಂದರೆ ಶ್ರೀಶಂಕರಭಗವತ್ಪಾದರವರು ಅವತಾರಮಾಡಿ ಮತಾಚಾರ ನಿಬಂಧನೆಗಳನ್ನ ಸ್ಥಿರಪಡಿಸಿದನಂತರ ಸುಮಾರು ಸಾವಿರಾರು ವರುಷಗಳವರಿಗೂ ಸ್ಮಾರ್ತರೇ ವಿಷ್ಣುದೇವಾಲಯಗಳಲ್ಲಿ ವೈದಿಕಾಗಮೋಕ್ತವಾದ ಪೂಜಾವಿಧಿಗಳನ್ನ ನಡೆಸುತ್ತಾಬಂದರು. ನಂತರ ಶ್ರೀ ರಾಮಾನುಜಾಚಾರ್ಯರವರು ಅವತಾರಮಾಡಿ ತಮ್ಮ ಮತಕ್ಕೆ ಸೇರಿಸಿಕೊಂಡವರಷ್ಟರಲ್ಲಿ ಕೆಲವು ಸ್ಮಾರ್ತರು ವಿಷ್ಣುದೇವಾಲಯಗಳಲ್ಲಿ ಪೂಜಕರಾಗಿಯೂ, ಸ್ಥಾನೀಕ ಮುಂತಾದ ನೌಕರಿಯಲ್ಲಿಯೂ ಸೇರಿಕೊಂಡಿದ್ದರು. ಈ ನೌಕರಿಯಿಂದಲೇ ಅವರು ಜೀವಿಸುತ್ತಿದ್ದದ್ದರಿಂದ ಇವರಿಗೆ ಸಂಬಂಧಿಗಳಾಗಿಯೂ ಮಿತ್ರವರ್ಗದವರಾಗಿಯೂ ಇದ್ದ ಇತರ ಸ್ಮಾರ್ತಬ್ರಾಹ್ಮಣರು ಇವರ ಜೀವನಕ್ಕೆ ಉಪಹತಿಮಾಡುವದಕ್ಕೆ ಸಮ್ಮತವಿಲ್ಲದೆ ಇದ್ದದ್ದರಿಂದಲೂ ಇಂಥಾವರ ಪೂಜೆಯಿಂದ ದೇವರಸಾನ್ನಿಧ್ಯವು ಒಂದುವ್ಯಾಳೆ ಕಡಮೆಯಾದಾಗ್ಯೂ ಶ್ರೀ ಜಗದ್ಗುರುಗಳವರು ಆಗಾಗ್ಯೆ ದಯಮಾಡಿ ದೇವರನ್ನ ಪೂಜಿಸೋಣದರಿಂದ ಕಳಾಸಾನ್ನಿಧ್ಯವು ವೃದ್ಧಿಯಾಗುತ್ತೆಂತಲೂ ಇದರಿಂದ ತಾವು ದೇವತಾಪ್ರಸಾದವನ್ನ ಪರಿಗ್ರಹಿಸಬಹುದೆಂದು ಯೋಚಿಸಿ ತಟಸ್ಥರಾಗಿದ್ದರು. ಇದರನ್ನ ಕುರಿತು ಆಕ್ಷೇಪಿಸದೆ ಅವರುಗಳು ದೇವತಾರಾಧನೆ ಮಾಡಿಕೊಂಡು ಬರುವದಕ್ಕೆ ಅವಕಾಶಕೊಟ್ಟದ್ದರಿಂದಲೇ ಶ್ರೀ ಜಗದ್ಗುರುಗಳವರಿಗೆ ಸಮಸ್ತ ಪ್ರಾಣಿಗಳಲ್ಲಿಯೂ ಇರತಕ್ಕ ದಯಾಳುತ್ವವೂ ಬ್ರಾಹ್ಮಣವರ್ಣಕ್ಕೆ ಸೇರಿದ ಮತಾಂತರಸ್ಥರಲ್ಲಿಯೂಕೂಡ ಇರತಕ್ಕ ಅನುರಾಗವು ಜಗದ್ವಿಖ್ಯಾತವಾಗಿದ್ದಾಗ್ಯೂ ಇಂಥಾ ಮಹಾನುಭಾವರು ರಾಜರು ಮತ್ತು ರಾಷ್ಟ್ರದ ಕ್ಷೇಮಾರ್ಥವಾಗಿ ಶಿವವಿಷ್ಣು ದೇವಾಯಗಳಲ್ಲಿರತಕ್ಕ ದೇವರುಗಳಿಗೆ ಮಾಡತಕ್ಕ ಪೂಜೆಯು ಬಹುಕಾಲದಾರಭ್ಯ ಆಚಾರವಾಗಿ ನಡೆದುಬರುವಂಥಾದ್ದಾದಾಗ್ಯೂ ಇವರನ್ನ ಈ ಪೂಜಕರಾದ ಶ್ರೀವೈಷ್ಣವರು ದ್ವೇಷಾಸೂಯದಿಂದ ಈಚೀಚಿಗೆ ಅಡ್ಡಿಮಾಡುವದಕ್ಕೆ ಉಪಕ್ರಮಿಸಿದರು. ಅಂಥಾಸಂದರ್ಭಗಳಲ್ಲೆಲ್ಲಾ ಆಯಾಯ ಕಾಲದಲ್ಲಿದ್ದ ರಾಜರು ಈ ಪೂಜಕರಿಗೆ ನಿರ್ಬಂಧಪಡಿಸಿ, ಶ್ರೀಜಗದ್ಗುರುಗಳವರು ಪೂಜೆಮಾಡುವದಕ್ಕೆ ಅವಕಾಶಗೊಳಿಸಿದ್ದಲ್ಲದೆ ಕೆಲವು ಸಂದರ್ಭಗಳಲ್ಲಿ ನೌಕರಿಯಿಂದ ಇವರನ್ನ ಬರತರಫ್‌ಮಾಡೋಣದರಮೂಲಕ ಶಿಕ್ಷೆಯನ್ನ ಕೊಟ್ಟಿರುತ್ತಾರೆ. ಈಗ್ಯೆ ೫೪ ವರ್ಷಗಳಮುಂಚೆ ಅಂದರೆ ವಿಳಂಬಿಸಂವತ್ಸರದಲ್ಲಿ ಶ್ರೀಜಗದ್ಗುರುನರಸಿಂಹಭಾರತೀಸ್ವಾಮಿಗಳವರು ತಿರಮಕೂಡ್ಲು ನರಶೀಪುರದ ಶ್ರೀ ಗುಂಜಾನರಸಿಹ್ಮಸ್ವಾಮಿಗೆ ಪೂಜೆಮಾಡುವಕಾಲದಲ್ಲಿ ಅಡ್ಡಿನಡಿಸುವದಕ್ಕೆ ಬಂದ ದೇವಸ್ಥಾನದ ನೌಕರರಿಗೆ ನಿರ್ಬಂಧಪಡಿಸಿ ಶ್ರೀಗಳವರು ಕ್ರಮವಾಗಿ ಪೂಜೆಮಾಡುವದಕೆ, ಅವಕಾಶ

ವಂಕೊಡಿಸಿದ್ದಲ್ಲದೆ ಅಡ್ಡಿಮಾಡಿದ ಶ್ರೀವೈಷ್ಣವರನ್ನು ನೌಕರಿಯಿಂದ ವಜಾಮಾಡಿ ಇವರು ಮಾಡುತ್ತಿದ್ದ ನೌಕರಿಯನ್ನು ಸ್ಮಾರ್ತರಿಂದ ನಡಿಸುತ್ತಾಬಂದರು. ಆ ಕಾಲದಲ್ಲಿ ಸಂಭವಿಸಿದ ಆಗಮೋಕ್ತವಾದ ರಥೋತ್ಸವಾದಿಗಳನ್ನೂ ಸಹ ಸ್ಮಾರ್ತರೇ ನಡೆಯಿಸಿರುತ್ತಾರೆ. ಎಂಬುವದು ತಿರುಮಕೂಡಲುನರಸೀಪುರ ತಾಲ್ಲೂಕ್ ಮತ್ತು ಕಮಿಷನರ ಹುಜೂರು ರಿಕಾರ್ಡಿನಲ್ಲಿಯೂ ದಾಖಲೆ ಇರುತ್ತೆಂದು ತಿಳಿಯಬರುವದರಿಂದ ಅದರನ್ನೂ ಪರಾಮರಿಸಿದಲ್ಲಿ ವ್ಯಕ್ತಪಡುತ್ತೆ.

೫ ಶ್ರೀಜಗದ್ಗುರುಗಳವರು ಮೈಸೂರು ಸೀಮೆಯಲ್ಲಿರತಕ್ಕ ಪ್ರಸಿದ್ಧವಾದ ದೇವಾಲಯಗಳಲ್ಲಿರುವ ದೇವರುಗಳನ್ನ ಆರಾಧನೆ ಮಾಡುವದು ಮಾತ್ರವಲ್ಲದೆ ಮದ್ರಾಸು, ಬೊಂಬಾಯಿ, ಮುಂತಾದ ಪ್ರಸಿಡೆನ್ಸಿಯಲ್ಲಿರತಕ್ಕ ಆಗಮೋಕ್ತಾರಾಧನೆಗೆ ಒಳಪಟ್ಟಿರುವ ಪ್ರಸಿದ್ಧ ಶಿವ ವಿಷ್ಣುದೇವಾಲಯಗಳಲ್ಲಿಯೂ ದೇವತಾರಾಧನೆ ಮಾಡಿರುತ್ತಾರೆಂಬುವದು ಲೋಕಪ್ರಸಿದ್ಧವಾಗಿರುತ್ತೆ. ಅಂದರೆ ದಕ್ಷಿಣದೇಶದಲ್ಲಿ ಪ್ರಸಿದ್ಧವಾದ ದೇವಾಲಯಗಳು ತಿರುಪತಿ, ಶ್ರೀರಂಗ, ಕಾಂಚಿ, ಅನಂತಶಯನ, ದರ್ಭಶಯನ ಮುಂತಾದ ಸ್ಥಳಗಳಲ್ಲಿ ಅನೇಕಾವರ್ತಿ ಪೂಜೆ ಮಾಡಿರತಕ್ಕ ದಾಖಲೆಗಳಪೈಕಿ ಪ್ರಕೃತ ದೊರತಿರುವಷ್ಟರನ್ನೂ ಪರಾಂಬರಿಕೆ ಬಗ್ಗೆ ಹಾಜರ್ಮಾಡಿರುತ್ತೇವೆ. ಇದರಂತೆಯೆ ಈ ದೇಶದ ದೇವಾಲಯಗಳಲ್ಲಿ ಶ್ರೀಗಳವರು ದೇವತಾರಾಧನೆ ಮಾಡುವದಕ್ಕಾಗಿ ಅನೇಕ ರಾಜರು ಮತ್ತು ಅಧಿಕಾರಿಗಳು ಕೊಟ್ಟರತಕ್ಕ ಲಿಖಿತಪಟ್ಟಿಗಳು ಸರಕಾರದಲ್ಲೂ, ಮತ್ತು ಶ್ರೀಮಠದಲ್ಲೂ, ಅನೇಕವಾಗಿರುತ್ತೆ. ಇವುಗಳಲ್ಲ ಪ್ರಕೃತ ನಮಗೆ ದೊರತಿರತಕ್ಕ ದಾಖಲೆಗಳು ಅಂದರೆ ಟೀಪ್ಪೂಸುಲ್ತಾನರು ಕೊಟ್ಟರತಕ್ಕ ಒಂದೆರಡು ಸನ್ನದಿನ ನಕಲು, ಈ ಸಂಸ್ಥಾನದ ರಾಜ್ಯಭಾರ ಬ್ರಿಟೀಷ್ ಆಫೀಸರ ಅಧೀನಕ್ಕೆ ಒಳಪಟ್ಟಿದ್ದಕಾಲ ಅಂದರೆ ೧೮೩೨ನೇ ಇಸವಿ ನಂದನಸಂವತ್ಸರದಲ್ಲಿ ಕಮಿಷನರ್ ಕ್ಯಾಷ್ ಮೆಜರ್ ಸಾಹೇಬರು ಕೊಟ್ಟಿರುವ ಒಟ್ಟು ಪರವಾನೆ ನಕಲನ್ನೂ, ಚೀಫ್ ಕಮಿಷನರ್ ಬೌರಿಂಗ್‌ಸಾಹೇಬರವರು ಇಂಡಿಯಾ ಗೌರ್ನಮೆಂಟಗೆ ಬರದ ಲೆಟರು, ಅದರ ಜವಾಬಿನ ನಕಲನ್ನೂ, ಹೈದರಾಬಾದ್ ಸರಕಾರದವರು ಕೊಟ್ಟಿರುವ ಸನ್ನದಿನ ತರ್ಜುಮಾನಕಲನ್ನೂ ಸಹ ಇದರ ಸಂಗಡ ಹಾಜರ್ಮಾಡಿರುತ್ತೇವೆ. ಈ ಪೈಕಿ ನಂದನ ಸಂವತ್ಸರದ ಒಟ್ಟು ಪರವಾನೆಯಲ್ಲಿ ನಮೂದಿಸಿರುವ ಮದ್ರಾಸ್ ಬಂಗಾಳಾ ಗೌನರವರು ಕೊಟ್ಟರತಕ್ಕ ಲೆಟರುಗಳು ಮತ್ತು ದಿವಾನ್ ಪೂರ್ಣಯ್ಯನವರು ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರವರು ಕೊಟ್ಟರತಕ್ಕ ಸನ್ನದು ವಗೈರೆ ಕಾಗದಪತ್ರಗಳ ಸಂಖ್ಯೆ ೪೫) ಆಗುತ್ತೆ. ಇವುಗಳೆಲ್ಲಾ ಕಮಿಷನರ ಬಳಿಗೆ ಹಾಜರಾಗಿರುತ್ತೆಂಬುವದು ಸದರಿ ಒಟ್ಟು ಪರವಾನೆಯಿಂದಲೇ ಗೊತ್ತಾಗುತ್ತೆ ಇವುಗಳು ವಾಪಸ್ ಆಗದೆ ಚೀಫ್‌ಕಮಿಷನರ ಆಫೀಸ್ ರಿಕಾರ್ಡಿನಲ್ಲಿರುತ್ತೆಂಬದಾಗಿ ಕೇಳುತ್ತೇವೆ. ಅವುಗಳನ್ನ ಪರಾಮರಿಸಬೇಕೆಂದು ಬೇಡುತ್ತೇವೆ

೬ ಮೇಲೆ ನಮೂದಿಸಿರತಕ್ಕ ರಿಕಾರ್ಡುಗಳಿಂದ ಶ್ರೀ ಶೃಂಗೇರಿ ಜಗದ್ಗುರುಗಳವರಿಗೆ ಪ್ರಕೃತದಲ್ಲಿ ಪಾಂಚರಾತ್ರವೈಖಾನಸಾದಿ ಆಗಮೋಕ್ತವಾಗಿ ಆರಾಧಿಸಲ್ಪಡುತ್ತಿರುವ ಶಿವವಿಷ್ಣು ದೇವಾಲಯಗಳಲ್ಲಿರುವ ದೇವರುಗಳಿಗೆ ಸ್ವತಃ ಪೂಜೆಮಾಡತಕ್ಕ ವಿಶೇಷಬಾಧ್ಯತೆಯು ಮತ್ತು ಹಕ್ಕು ಉಂಟೆಂಬುವದು ರುಜುವಾತು ಆಗುವದು ಸರಿಯಷ್ಟೆ; ಪ್ರಕೃತ ಚರ್ಚೆಗೆ ಸಮ್ಮಂಧಪಟ್ಟ ಶ್ರೀರಂಗಪಟ್ಟಣದ ರಂಗನಾಥಸ್ವಾಮಿಯವರಿಗೆ ಶ್ರೀಗಳವರು ಸ್ವತಃ ಪೂಜೆಮಾಡುವ ಹಕ್ಕು ಉಂಟೆಂಬುವದಕ್ಕೆ ಮೇಲೆ ಹೇಳಲ್ಪಟ್ಟ ಟೀಪ್ಪೂಸುಲ್ತಾನರವರ ಸನ್ನದೇ ಸಾಕ್ಷಿಯಾಗಿರುವದಲ್ಲದೆ, ಇದಕ್ಕೆ ಅನುಸಾರವಾಗಿ ಪೂಜೆ ಮಾಡುತ್ತಿದ್ದರೆಂಬ ಸಂಗತಿಯನ್ನು ಹೇಳತಕ್ಕಂಥಾ ದೊಡ್ಡವಂಶೀಯರಾದ ಮಹಮ್ಮದೀಯರ್ ದೊಡ್ಡಮನುಷ್ಯರು ಅನೇಕರಿರುತ್ತಾರೆ. ಅವರುಗಳನ್ನೂ ಸಾಕ್ಷ್ಯ ಕೊಡುವದರಲ್ಲಿ ಅಭ್ಯಂತರವಿರುವದಿಲ್ಲ. ಇದು ಅವಶ್ಯಕವಾದ್ದೆಂದು ತೋರುವಪಕ್ಷದಲ್ಲಿ ಗೌರ್ನಮೆಂಟಿನವರು ಅವರಿಂದಲೂ ತಿಳಿದುಕೊಳ್ಳಬಹುದು.

೭ ಶ್ರೀರಂಗಪಟ್ಟಣದ ಶ್ರೀ ರಂಗನಾಥದೇವರನ್ನ ಇಂಥಾವರು ಇಂಥಾಕಾಲದಲ್ಲಿ ಈ ರೀತಿಯಾಗಿ ಪ್ರತಿಷ್ಠೆ ಮಾಡಿದ ಸಂಗತಿ ನಿಸ್ಸಂದೇಹವಾಗಿ ಗೊತ್ತಾಗದೇ ಇದ್ದಾಗ್ಯೂ, ಇದು ಬಹಳ ಪುರಾತನವಾದದ್ದು. ಕೆಲವು ಶತಮಾನಗಳಕೆಳಗೆ ಗೌತಮಮಹರ್ಷಿಗಳು ಪೂಜಿಸುತ್ತಿದ್ದರೆಂಬುವದನ್ನ ಎಲ್ಲರೂ ಒಪ್ಪಿಕೊಳ್ಳುತ್ತಾರಷ್ಟೆ; ಮಹರ್ಷಿಗಳು ತಾಂತ್ರಿಕಾಗಮದೀಕ್ಷಾಬದ್ಧರಾದವರಲ್ಲ; ಪಾಷಂಡಿಗಳೂ ಅಲ್ಲ. ಇವರುಗಳು ವೈದಿಕಾಗಮದಲ್ಲಿ ಅರ್ಚನೆ ಮಾಡುತ್ತಿದ್ದರೆಂಬುವದು ಶಾಸ್ತ್ರಸಿದ್ಧವಾಗಿರುತ್ತೆ. ಅದನ್ನ ಅನುಸರಿಸಿಯೇ ಶ್ರೀಮಚ್ಛಂಕರಭಗವತ್ಪಾದರವರು ಈದೇವರನ್ನ ಅರ್ಚಿಸಿದರು. ಅದರಂತ ಅವರ ಮತವನ್ನವಲಂಬಿಸಿದ ಗುರುಪರಂಪರೆಯುವರೆಲ್ಲಾ ಪೂಜಿಸುತ್ತಾಬಂದರು. ಈ ಗೌತಮ ಮಹರ್ಷಿಗಳಿಗೆ ಗೋಹತ್ಯಾಪವಾದ ಸಂಘಟನೆ ಮಾಡಬೇಕೆಂದು ಕೆಲವು ದುಷ್ಟರಾದ ಬ್ರಾಹ್ಮಣರು ನಡೆಸಿದ ತಂತ್ರ ಅವರಿಗೆ ತಿಳಿದು ಇಂಥಾ ದುಷ್ಕೃತ್ಯ

ವನ್ನು ಮಾಡಿದ ಬ್ರಾಹ್ಮಣರು ಇವರ ವಂಶೀಯರು ತಪ್ತಮುದ್ರಾಂಕಿತರಾಗಿ ಪಾಂಚರಾತ್ರ ಶೈವಾದ್ಯಾಗಮದೀಕ್ಷಾಬದ್ಧರಾಗಿ ಕೆಟ್ಟು ಹೋಗಲಿ, ಎಂದು ಶಾಪಕೊಟ್ಟರೆಂತ ಗ್ರಂಥಗಳು ಇರೋಣದರಿಂದ ಗೌತಮಋಷಿಗಳ ಪಾಂಚರಾತ್ರಾಗಮ ದೀಕ್ಷಾಬದ್ಧರಲ್ಲವೆಂಬುವದು ಸ್ಪಷ್ಟವಾಗುತ್ತೆ.

೮ ಶ್ರೀರಂಗಪಟ್ಟಣದ ಶ್ರೀರಂಗನಾಥದೇವರಿಗೆ ಹಿಂದೂಮತಕ್ಕೆ ಸೇರಿದ ನಾಲ್ಕು ವರ್ಣದವರೂ ಭಕ್ತರು ಈಗ ಚರ್ಚೆಮಾಡುತ್ತಿರುವ ಶ್ರೀವೈಷ್ಣವರು ಈ ಭಕ್ತಸಮುದಾಯವೆಂಬ ಸಮುದ್ರದಲ್ಲಿ ಕೆಲವು ತುಂತುರೆಗಳಾಗಿರುತ್ತಾರೆ. ಆದಾಗ್ಯೂ ತಮ್ಮ ಮತಸ್ಥರು ಪ್ರಕೃತದಲ್ಲಿ ಪೂಜಕರಾಗಿರುತ್ತಾರಷ್ಟೆ ಆದ್ದರಿಂದ ದೇವರ ತಮ್ಮ ಸ್ವಂತ ಪದಾರ್ಥವೆಂದು ಭಾವಿಸುವ ದುರಭಿಮಾನ ವಿನಹ ಇತರ ಭಕ್ತರಿಗೆ ಇರತಕ್ಕದ್ದಕ್ಕಿಂತಲೂ ಬ್ಯಾರೆ ಯಾವ ವಿಧವಾದ ವಿಶೇಷ ಬಾಧ್ಯತೆಯೂ ದೇವರಲ್ಲಿ ಇವರಿಗೆ ಇರುವಹಾಗೆ ತೋರುವದಿಲ್ಲ. ಈ ದೇವಾಲಯವು ಸಂಸ್ಥಾನಕ್ಕೆ ಸೇರಿದ್ದು, ಸರ್ಕಾರದ ಜನರಲ್ ರೆವಿನ್ಯೂಯಿಂದ ಈ ದೇವರ ಆರಾಧನೆಖರ್ಚು ಸಲ್ಲುತ್ತಾಯಿದೆ. ದೇವರಿಗೆ ಧರಿಸತಕ್ಕ ವಸ್ತ್ರಾಭರಣಗಳಲ್ಲಿ ಪ್ರಾಯಶಃ ಮೈಸೂರು ಸಂಸ್ಥಾನದ ಮಹಾರಾಜರವರ ಸಂತತಿಯಿಂದಲೇ ಕೊಡಲ್ಪಟ್ಟದ್ದಾಗಿರುತ್ತೆ. ಭಕ್ತರಿಂದ ಕೊಡಲ್ಪಟ್ಟದ್ದು ಅತ್ಯಲ್ಪವಾಗಿದ್ದಾಗ್ಯೂ ಅದೂ ಸರ್ಕಾರಕ್ಕೆ ಸೇರಿದ್ದಾಗಿರುತ್ತೆ. ಹೀಗೆ ಸಂಸ್ಥಾನಕ್ಕೆ ಒಳಪಟ್ಟ ಬಾಧ್ಯತೆಯನ್ನು ಶ್ರೀವೈಷ್ಣವರಲ್ಲಿ ಕೆಲವರು ಮಾತ್ರ ತಮಗೇನೇ ಇರುವಂತೆ ಎಣಿಸಿ ಗದ್ದಲ ಮಾಡುವದು ಎಷ್ಟರಮಟ್ಟಿಗೆ ಊರ್ಜಿತಪಡತಕ್ಕದ್ದೋ ಅದರನ್ನು ಗೌರ್ನಮೆಂಟಿನವರೇ ಆಲೋಚಿಸಬೇಕು. ಈ ಕಾರಣದಿಂದ ಇವರಿಗೆ ವಿಶೇಷ ಬಾಧ್ಯತೆ ಏನೂ ಇಲ್ಲದೇ ಇದ್ದಾಗ್ಯೂ ಚಿಪ್ಸಾಸ್ವಾರ್ಥವಾಗಿ ಇದೆಯೆಂದು ಇಟ್ಟುಕೊಳ್ಳುವ ಸಂದರ್ಭದಲ್ಲಿಯೂ ಇವರ ಮತಸ್ಥಾಪಕರಾದ ಶ್ರೀರಾಮಾನುಜಾಚಾರ್ಯರವರ ಅವತಾರಕ್ಕಿಂತ ಸಾವಿರಾರು ವರುಷಗಳ ಹಿಂದೆ ಶ್ರೀಮಚ್ಛಂಕರ ಭಗವತ್ಪಾದರವರು ಅವತಾರಮಾಡಿದರೆಂಬ ಅಂಶವನ್ನು ಶ್ರೀವೈಷ್ಣವರು ಒಪ್ಪಿಕೊಳ್ಳದೇ ಇದ್ದರೆ ನಿಧಿ ಇಲ್ಲವಷ್ಟೆ ಇದರಿಂದ ಶ್ರೀಜಗದ್ಗುರುಗಳವರಿಗೆ ಇರತಕ್ಕ ಬಾಧ್ಯತೆಯು ಇವರಿಗಿಂತ ಸಾವಿರಾರು ವರುಷಗಳಮಟ್ಟಿಗೂ ಪ್ರಾಚೀನವಾಗಿರುತ್ತೆಂಬುವದು ಸಾಮಾನ್ಯವಾಗಿ ಸಕಲರಿಗೂ ತಿಳಿಯಬರುವಂಥಾ ಅಂಶವು ಇವರಿಗೆ ತಿಳಿಯದೇ ಹೋದದ್ದು ಮಾತ್ರವಲ್ಲದೆ, ಶ್ರೀ ಜಗದ್ಗುರುಗಳವರಿಗೆ ಹಕ್ಕೇ ಇಲ್ಲವೆಂದು ಹೇಳುವದು ಪರ್ಯಾಲೋಚನೆಯಿಲ್ಲದಮಾತಾಗಿ ತೋರುತ್ತೆ ಅಥವಾ ಪ್ರಕೃತ ಸಂದರ್ಭದಲ್ಲಿ ಇವರುಮಾಡತಕ್ಕ ವ್ಯಾಜ್ಯವು ಊರ್ಜಿತವಾಗದೇ ಇದ್ದಾಗ್ಯೂ ಮುಂದೆ ಮಾಡಬೇಕಾಗುವ ಇಂಥಾ ವ್ಯಾಜ್ಯಗಳಿಗೆ ತಾವು ಫಿರ್ಯಾದಿಗಳಾಗಿ ನಿಲ್ಲುವದಕ್ಕೆ ಇದು ಬಾಧ್ಯತೆಯನ್ನು ಕೊಡತಕ್ಕ ಪ್ರಸೀಡೆಂಟ್‌ಯಾನೆ ಪೀಠಿಕಾ ರಚನೆಯಾಗಿರುತ್ತೆಂದು ಭಾವಿಸಿರಬಹುದಾಗಿತೋರುತ್ತೆ.

೯ ಶ್ರೀರಂಗನಾಥದೇವರಿಗೆ ಸಂಪ್ರೋಕ್ಷಣೆ ಆಗಬೇಕೆಂದು ವ್ಯಾಜ್ಯಮಾಡುವರ ಸಂಖ್ಯೆಯು ಈ ದೇವರಲ್ಲಿ ಅಭಿಮಾನವಿರತಕ್ಕ ಮತ್ತು ಇವರಿಗೆ ಸಮಾನವಾಗಿ ಹಕ್ಕು, ಬಾಧ್ಯತೆವುಳ್ಳ ಇತರ ಭಕ್ತರ ಸಮುದಾಯ ಸಂಖ್ಯೆಗೂ ಮೊಕಾಬಿಲೆ ನೋಡಿದರೆ ಒಟ್ಟು ಸಮುದಾಯದಲ್ಲಿ ಲಕ್ಷ ಪ್ರಜೆಗೆ ವ್ಯಾಜ್ಯಮಾಡುವರು ಒಬ್ಬರೆಂದೂ ಕೂಡ ಗಣಿಸುವದಕ್ಕೆ ಸಾಲದ್ದಾಗಿರುತ್ತೆ. ಆದ್ದರಿಂದ ಶ್ರೀಜಗದ್ಗುರುಗಳವರು ಆಗಾಗ್ಯೆ ಶ್ರೀರಂಗನಾಥದೇವರ ಆರಾಧನೆಮಾಡತಕ್ಕದ್ದು ಸರ್ವಜನ ಸಮ್ಮತವಾದಹಾಗು ಸರ್ಕಾರದವರು ದಾರಾಳವಾಗಿ ನಂಬತಕ್ಕದ್ದಾಗಿರುತ್ತೆ.

೧೦ ಮೇಲೆ ಹೇಳಲ್ಪಟ್ಟಿರುವ ಸಂಗತಿಗಳೆಲ್ಲಾ ಸರ್ಕಾರೀ ವ್ಯಾವಹಾರಿಕರೀತ್ಯಾ ಶ್ರೀಜಗದ್ಗುರುಗಳವರಿಗೆ ಶ್ರೀ ರಂಗನಾಥದೇವರನ್ನು ಆರಾಧಿಸತಕ್ಕ ವಿಷಯದಲ್ಲಿರತಕ್ಕ ವಿಶೇಷ ಬಾಧ್ಯತೆಯನ್ನು ತೋರಿಸತಕ್ಕವುಗಳಾಗಿ ಇರುತ್ತವೆ. ಈ ಸಂಬಂಧವಾದ ಶಾಸ್ತ್ರಾಧಾರ ಅಪ್ರತಿಹತವಾದ ಸದಾಚಾರ ಮುಂತಾದ್ದರನ್ನು ಇದರಡಿಯಲ್ಲಿ ಶೃತಪಡಿಸಿರುತ್ತೇವೆ ಏನಂದರೆ.--

೧೧ ಶ್ರೀಜಗದ್ಗುರುಗಳವರು ಶ್ರೀ ರಂಗನಾಥದೇವರಿಗೆ ಅರ್ಚನೆ ಮಾಡತಕ್ಕದ್ದು ಪಾಂಚರಾತ್ರಾಗಮಕ್ಕೆ ವಿರುದ್ಧವಾಗಿರುತ್ತೆಂದು ಫಿರ್ಯಾದಿಗಳು ಹೇಳುವ ಅಂಶವನ್ನು ಖಂಡನೆಮಾಡತಕ್ಕ ಶಾಸ್ತ್ರ ಮತ್ತು ಆಚಾರವು ಹೇರಳವಾಗಿರುತ್ತೆ. ಆ ವಿಚಾರವನ್ನು ಪೂರ್ವಪಕ್ಷ ಸಮಾಧಾನ ಸಿದ್ಧಾಂತರೂಪವಾಗಿ ಶೃತಪಡಿಸಲು ಬಹಳ ವಿಳಂಬವಾಗುತ್ತಾದ್ದರಿಂದ ಸೂಕ್ಷ್ಮವಾಗಿ ಸಾಮಾನ್ಯಾಂಶಗಳನ್ನು ತಿಳಿಸದೆ ಇದ್ದರೆ ವಿಧಿಯಿಲ್ಲವಾಗಿ ತಿಳಿಸುವದೇನಂದರೆ:-- ಶೃತಿಸ್ಮೃತಿಗಳಲ್ಲಿ ಪರಸ್ಪರ ಭಿನ್ನಾಭಿಪ್ರಾಯಬಂದಾಗ್ಯೆ ಶೃತಿಯೇ ಪ್ರಬಲವಾದದ್ದೆಂತಲೂ, ತದ್ವತ್ ಸ್ಮೃತಿ ಪುರಾಣಗಳಲ್ಲಿ ಸ್ಮೃತಿಬಲವಾದ್ದೆಂತಲೂ ಪುರಾಣ ಇತಿಹಾಸಾದಿಗಳಲ್ಲಿ ಪುರಾಣಬಲವಾದ್ದೆಂತಲೂ ಹೀಗೆ ಎಲ್ಲಾದ್ದರಲ್ಲಿಯೂ ಭಿನ್ನಾಭಿಪ್ರಾಯಗಳು ಬಂದಕಾಲದಲ್ಲಿ ಮಹಾಜನಗಳು ಅನುಸರಿಸಿ ನಡೆಸಿಕೊಂಡು

ಬರುವ ಆಚಾರವೇ ಬಲಿಷ್ಠವಾದದ್ದೆಂತಲೂ ಈ ಆಚಾರದಲ್ಲಿ ನವೀನಗಳು ಪ್ರಾಚೀನಗಳು ಇರುತ್ತಪಟ್ಟ ಇವುಗಳಲ್ಲಿ ಪುರಾತನಕ್ಕೆ ಪ್ರಾಶಸ್ತ್ಯವಿರುತ್ತದೆಂಬುವದು ಸಾಮಾನ್ಯವಾಗಿ ಸರ್ವರಿಗೂ ತಿಳಿದಿರುತ್ತೆ. ಈಗ ಶ್ರೀವೈಷ್ಣವರು ಶ್ರೀರಂಗನಾಥದೇವರಿಗೆ ತಾವು ನಡಿಸತಕ್ಕ ಆರಾಧನೆಯು ಪಾಂಚರಾತ್ರಾಗಮಕ್ಕೆ ಒಳಪಟ್ಟಿರುತ್ತೆಂದೂ ಇದು ಶ್ರೀವೈಷ್ಣವರು ದೇವಾಲಯಕ್ಕೆ ಸೇರಿದಾರಭ್ಯ ಆಚರಣೆಗೆ ತಂದಿರುತ್ತಾರೆಂತಲೂ ಗೊತ್ತಾಗಿರೋಣದರಿಂದ ಇವರ ಮತವೇ ನೂತನವಾಗಿರುವಲ್ಲಿ ಇವರ ಆಚಾರ ಪುರಾತನವಾಗಲಾರದಷ್ಟೆ; ಆದ್ದರಿಂದ ಇವರ ಆಚಾರವು ನವೀನಾಚಾರವೇ ಸರಿಯೆಂದು ಧಾರಾಳವಾಗಿ ಹೇಳಬಹುದು. ಶ್ರೀಜಗದ್ಗುರುಗಳವರು ಮಾಡತಕ್ಕ ಆರಾಧನೆಯು ಶ್ರೀರಾಮಾನುಜ ಮತಕ್ಕಿಂತ ಸಾವಿರಾರು ವರ್ಷಗಳ ಹಿಂದಿನಿಂದಾ ಆಚರಣೆಯಲ್ಲಿ ಇರುತ್ತಾಗಿ ಇದು ಪ್ರಾಚೀನವಾದ ಆಚಾರವೆಂಬುವದು ಸ್ಪಷ್ಟವಾಗಿರುತ್ತೆ. ಮತ್ತು ಶ್ರೀಜಗದ್ಗುರುಗಳವರು ಪರಮಹಂಸಾಶ್ರಮದಲ್ಲಿ ಮಹರ್ಷಿಗಳಂತ ಇರತಕ್ಕವರುಗಳಾದ್ದರಿಂದ ಇತರ ಗೃಹಸ್ಥಾಶ್ರಮಗಳಂತೆ ದೀಕ್ಷಾ ವಿಧಿಗಳಿಗೆ ಬದ್ಧರಾಗುವದಿಲ್ಲ. ಇವರು ಎಲ್ಲಾ ದೀಕ್ಷಿತರಿಗಿಂತಲೂ ಶ್ರೇಷ್ಠವಾದವರು. ಮತ್ತು ಪಾಂಚರಾತ್ರಾಗಮದೀಕ್ಷೆಗೆ ಬದ್ಧರಲ್ಲದ ಗೌತಮಮಹರ್ಷಿಗಳು ಈ ದೇವರನ್ನ ಆರಾಧಿಸುತ್ತಾ ಇದ್ದರೆಂಬುವದು ಗ್ರಂಥಗಳಲ್ಲಿ ಹೇಳಲ್ಪಟ್ಟಿರುವದಲ್ಲದೆ ಇದರನ್ನ ಶ್ರೀವೈಷ್ಣವರೇ ಒಪ್ಪಿಕೊಳ್ಳುತ್ತಾರೆ. ಆಗ್ಯೆ ಇವರದೆಂದು ಹೇಳಿಕೊಳ್ಳುವ ಶ್ರೀರಂಗನಾಥದೇವರು ಹ್ಯಾಗೆ ಅಶುಚಿ ಆಗಲಿಲ್ಲವೋ ಅದರಂತೆಯೆ ಗೌತಮಮಹರ್ಷಿಗಳು ಮಾಡುತ್ತಿದ್ದ ವಿಧಿಯನ್ನ ಅನುಸರಿಸಿ ಶ್ರೀಜಗದ್ಗುರುಗಳವರ ಪರಂಪರೆಯವರೆಲ್ಲಾ ಆರಾಧಿಸತಕ್ಕದ್ದು ಅಶುಚಿತ್ವವನ್ನುಂಟುಮಾಡತಕ್ಕದ್ದಲ್ಲವೆಂಬುವದು ಮತ್ತು ಆಧುನಿಕರಿಂದ ಪ್ರತಿಷ್ಠಿತವಾದ ಬಿಂಬಕ್ಕೆ ಮಾಡತಕ್ಕ ಆರಾಧನೆಯಂತೆ ಶ್ರೀವೈಷ್ಣವರು ಈ ಅನಾದಿ ದೇವರಿಗೆ ಮಾಡುವ ಆರಾಧನೆಯಿಂದ ಉಂಟಾದ ದೋಷಗಳನ್ನ ಪರಿಹಾರ ಮಾಡತಕ್ಕ ಶ್ರೀಜಗದ್ಗುರುಗಳವರು ಮಾಡತಕ್ಕ ಆರಾಧನಾಕ್ರಮವು ಸದಾಚಾರವಾದ್ದೆಂತಲೂ ಆಲೋಚನಾಪರರಾದವರು ತೀರ್ಮಾನಿಸದೆ ಇರಲಾರರು. ಈ ಮೇರೆ ಲೌಕಿಕಪಾರಮಾರ್ಥಿಕ ಎರಡುವಿಧವಾದ ನ್ಯಾಯಗಳು ಅಪೇಕ್ಷಿಸುವ ಸಮಾಧಾನರೂಪವಾದ ಸಂಗತಿಗಳನ್ನೆಲ್ಲಾ ಶೃತಪಡಿಸಿರುತ್ತೇವೆ.

೧೨ ಮೇಲೆ ವಿವರಿಸಲ್ಪಟ್ಟ ಗ್ರಂಥಗಳು, ರಾಜರು ಮುಂತಾದವರು ಕೊಟ್ಟಿರತಕ್ಕ ಸನ್ನದಿನ ದಾಖಲೆಗಳು ದೃಷ್ಟಾಂತಗಳು, ಚಿರಕಾಲಾರಭ್ಯ ನಡೆದುಬರುವ ಮಾಮೂಲು ಶಾಸ್ತ್ರಸಮ್ಮತವಾದ ಆಚಾರವು, ಸರ್ವಜನ ಸಮ್ಮತಿಯೂ, ಇವುಗಳೆಲ್ಲಾ ಶ್ರೀರಂಗನಾಥದೇವರನ್ನ ಆರಾಧಿಸತಕ್ಕದ್ದಕ್ಕೆ ಶ್ರೀಜಗದ್ಗುರುಗಳವರಿಗೆ ಇರತಕ್ಕ ವಿಶೇಷ ಹಕ್ಕುಬಾಧ್ಯತೆಗಳನ್ನ ಸ್ಥಿರಪಡಿಸುತ್ತವೆ. ಇವುಗಳನ್ನೆಲ್ಲಾ ಘನವನ್ನ ಹೊಂದಿದ ಕೌನ್ಸಲ್ ಸಭೆಯವರು ಪರ್ಯಾಲೋಚಿಸತಕ್ಕ ಸಮಯದಲ್ಲಿ ಶ್ರೀಜಗದ್ಗುರುಗಳವರು ಈ ಮೇರೆ ದೇವತಾರಾಧನೆ ಮಾಡತಕ್ಕದ್ದು ಆ ಮಹಾನುಭಾವರ ಸ್ವಪ್ರಯೋಜನಕ್ಕಾಗಿ ಅಲ್ಲ. ರಾಜರು ಮತ್ತು ರಾಷ್ಟ್ರದ ಕ್ಷೇಮಾರ್ಥವಾಗಿ ಇವರುಗಳ ಅಪೇಕ್ಷೆಯನ್ನು ನೆರವೇರಿಸುವದಕ್ಕಾಗಿ ಮಾಡುತ್ತಾರೆ ಎಂಬುವದರನ್ನು ಮನಸ್ಸಿನಲ್ಲಿಟ್ಟುಕೊಂಡು ಭಾರಿಭಾರಿಗೂ ದುಷ್ಟರು ತೊಂದರೆ ಕೊಡುವದಕ್ಕೆ ಆಸ್ಪದವಿಲ್ಲದಂತೆ ನ್ಯಾಯವಾಗಿಯೂ, ಖಂಡಿತವಾಗಿಯೂ, ಇರುವ ತೀರ್ಮಾನವನ್ನ ಅಪ್ಪಣೆ ಕೊಡಿಸಬೇಕೆಂದು ವಿನಯಪೂರ್ವಕವಾಗಿ ಬರೆದುಕೊಂಡ ಅರ್ಜಿ.

ಜಯಲಕ್ಷ್ಮೀವಿಲಾಸ ಮುದ್ರಾಕ್ಷರಶಾಲಾ ಮೊಹಲ್ಲ ಪೇಟೆ ಮೈಸೂರು.

[illegible]

ವಾಸುದೇವಶಾಸ್ತ್ರಿ ರುಜು

[illegible]

लक्ष्मीनरसिंहशास्त्री – ([illegible])

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]







[illegible]

[illegible]

[illegible]

[illegible]

ಯು(ರೆಗೆ ರಸರುಜು

ಮ ಚಿಸಾ ಹಸರುಜು

[illegible]

[illegible]

[illegible]

[illegible]

[illegible]

[illegible]

ಬಳ ವ್ಯಯುನ ನರಾಜ

[illegible]

[illegible]

[illegible]

[illegible]

[illegible]

[illegible]

[illegible]

(2) [illegible]

[illegible]

[illegible]

[illegible]

ಮಂಯ [illegible] ವಮ [illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಕಮಿಶನರಯಾನೆ ಇಲಾಖಾ ಸರಕಾರ ಕುಂಪನಿ ಬಹದ್ದರವರ ಪ್ರಾಂತ್ಯ,

ಮೈಸೂರು.

ನಂದನಸಂವತ್ಸರದ ಭಾದ್ರಪದ ಶುದ್ಧ ೧೧ ಯಲ್ಲೂ ಅರಮನೆಶೀಮೊಗಡಿಗಳ ಅವಿಸಾಲರವರಿಗೆ ಬರೆಸಿ ಕಳುಹಿಸಿದ ನಿರೂಪ ಅದಾಗಿ:---

ಶ್ರೀ ಶೃಂಗೇರೀಜಗದ್ಗುರುಗಳವರ ಶ್ರೀ ಮಠದಿಂದ ಮಠಮುದ್ರೆ ಬ್ರಾಹ್ಮಣರುಎಂದು ನಿಮ್ಮ ನಿಮ್ಮ ತಾಲ್ಲೂಕಿನಲ್ಲಿ ಮಾಮೂಲ್‌ಮೇರಿಗೆ ಅವರ ಶಿಷ್ಯವರ್ಗಗಳ ಶ್ರೀ ಮಠದ ಆಚಾರವಿಚಾರ ವಿಚಾರಿಸಿಕೊಂಡು ಶ್ರೀ ಮಠಕ್ಕೆ ಬರತಕ್ಕ ಚರಣಕಾಣಿಕೆ, ಮೂಲಾನಕ್ಷತ್ರಕಾಣಿಕೆ, ಅಗ್ರತಾಂಬೂಲ, ದೀಪಾರಾಧನೆಕಾಣಿಕೆ, ಪ್ರಾಯಶ್ಚಿತ್ತಕಾಣಿಕೆ ಮುಂತಾಗಿ ಶಿಷ್ಯವರ್ಗ ಜನರಿಂದ ಬರಮಾಡಿಕೊಳ್ಳುವಲ್ಲಿ ಯಾರಾದರೂ ಕಾಣಿಕೆ ಕೊಡದೆ ಮುದ್ರಾತಿಕ್ರಮವಾಗಿ ನಡೆದುಕೊಂಡವರಿಗೆ ತಾಕೀತ್‌ಮಾಡಿ ಬಂದೋಬಸ್ತು ಮಾಡಿಸಿಕೊಡುವಬಗ್ಗೆ ಸದರೀ ಶಿಷ್ಯರಿಂದ ವಸೂಲಾದ ಕಾಣಿಕೆಗಳಿಗೆ ಯಾವ ಸರ್ಕಾರದವರೂ ಸುಂಕ ವಸೂಲ್ ಮಾಡದಿರುವಬಗ್ಗೆ ಶ್ರೀ ಶೃಂಗೇರಿ ಶ್ರೀಮಠಕ್ಕೆ ಪೂರ್ವಾರಭ್ಯದಿಂದ ಸೇರಿದ ಶಿಷ್ಯಜನರಲ್ಲಿ ಕೆಟ್ಟಹೆಣ್ಣುಗಳನ್ನು ಶ್ರೀಮಠದವರ ಹವಾಲಿಗೆ ಕೊಟ್ಟು ರಶೀತಿ ತಗದುಕೊಳ್ಳುವಬಗ್ಗೆ ಸದರೀ ಶ್ರೀಮಠಕ್ಕೆ ಪೂರ್ವಾರಭ್ಯದಿಂದ ಸೇರಿದ ಬ್ರಾಹ್ಮಣರು ಮತ್ತು ಸಮಸ್ತ ಇತರ ಜಾತಿಯವರುಗಳಲ್ಲಿಯೂ ಸದ ಆಯಾಯ ವರ್ಣಾಶ್ರಮರೀತ್ಯಾ ಆಯಾಯ ಕಾಲಗಳಲ್ಲಿ ಮುಂಜಿ, ಮದುವೆ, ಪ್ರಾಯಶ್ಚಿತ್ತ, ವಗೈರೆ ಮಾಡಿಕೊಳ್ಳತಕ್ಕ ಭಾಗದಲ್ಲಿ ಮತವಿಚಾರಗಳಿಗೆ ಯಾವ ಸರಕಾರದವರೂ ಪ್ರವೇಶ ಮಾಡಕೂಡದೆಂಬುವಬಗ್ಗೆ ಶ್ರೀ ಜಗದ್ಗುರುಗಳವರ ಸವಾರಿಯು ಯಾವ ಗ್ರಾಮಗಳಿಗೆ ಬಂದಾಗ್ಯೂ ಆ ಸ್ಥಳದಲ್ಲಿರುವ ಶಿವ, ವಿಷ್ಣು, ವಗೈರೆ ವಿಶಿಷ್ಟ ದೇವಸ್ಥಾನಗಳನ್ನು ಶ್ರೀಗಳವರು ಪೂಜೆಮಾಡತಕ್ಕಬಗ್ಗೆ ಬಿಟ್ಟುಕೊಡತಕ್ಕಬಗ್ಗೆ ಸಹಾ.

೧೭೭೬ನೇ ಇಸವಿ ಏಪ್ರಿಲ್ ೨೦ಕ್ಕೆ ಸರಿಯಾದ ದುರ್ಮುಖಿಸಂ॥ ಚೈತ್ರಮಾಸದಲ್ಲಿ ಮೈಲಾಪುರಿ ಚನ್ನಪಟ್ಟಣದ ಗವರ್ನರ್ ಲಾರ್ಡ್‌ಪಿಕ್ಟ್ಯಿ ಸಾಹೇಬರು ಕೊಟ್ಟಿರುವ ೩೬-೫೪ನೇ ನಂಬರ್ ಹುಕ್ಕುಂ, ಸದರಿ ದುರ್ಮುಖಿ ಸಂ॥ ಶ್ರಾವಣಶುದ್ಧ ೭ ಯಲ್ಲೂ ಬಂಗಾಳಾ ಗೌವರ್ನರ್‌ಜನರಲ್ ಸಾಹೇಬರು ಕೊಟ್ಟಿರುವ ೧೭೮ನೇ ನಂಬರು ಹುಕ್ಕುಂ. ೧೭೭೭ನೇ ಜನವರಿ ೨೦ಕ್ಕೆ ಸರಿಯಾದ ದುರ್ಮುಖಿಸಂ॥ ಪುಷ್ಯಮಾಸದಲ್ಲಿ ಮೈಲಾಪುರಿ ಚನ್ನಪಟ್ಟಣದ ಗವರ್ನರ್ ಲಾರ್ಡ್‌ಪಿಕ್ಟ್ಯಿಸಾಹೇಬರು ಕೊಟ್ಟಿರುವ ೮೮ನೇ ನಂಬರುಹುಕ್ಕುಂ. ೧೭೮೨ನೇ ಅಕ್ಟೋಬರ್ ೨೮ಕ್ಕೆ ಸರಿಯಾದ ಶುಭಕೃತು ಸಂ॥ ಆಶ್ವೀಜಮಾಸದಲ್ಲಿ ತಂಜಾವೂರು ರೆಸಿಡೆಂಟರು ಜಾನ್ ಸಲಿವಾನ್ ಸಾಹೇಬರವರು ಕೊಟ್ಟಿರುವ ೧೮ - ೨೮ನೇ ನಂಬರ್ ಹುಕ್ಕು. ೧೭೮೨ನೇ ನವಂಬರ್ ೨೭ರಲ್ಲಿ ಮೈಲಾಪುರಿ ಚನ್ನಪಟ್ಟಣದ ಗವರ್ನರ್ ಲಾರ್ಡ್‌ಮಕಾರ್ಟ್ನಿಯವರು ಕೊಟ್ಟಿರುವ ೬೫ - ೩೪ನೇ ನಂಬರ್ ಹುಕ್ಕುಂ. ಸದರಿ ಡಿಶಂಬರ್ ೮ನೇ ತಾರೀಖಿನಲ್ಲಿ ಮಾಸ್ತ್ರ ಷಾರ್ಟ್‌ಸಾಹೇಬರವರು ತಂಜಾವೂರು ಮೊಕ್ಕಾಂನಿಂದ ಕೊಟ್ಟಿರುವ ೩೯ - ೮೬ ನೇ ನಂಬರ್ ಹುಕ್ಕುಂ. ೧೭೮೩ನೇ ಏಪ್ರಿಲ್ ೨೮ಕ್ಕೆ ಸರಿಯಾದ ಶೋಭಕೃತುಸಂ॥ ಚೈತ್ರಮಾಸದಲ್ಲಿ ಕರ್ನಲ್ ಲ್ಯಾಂಗ್ಸ್‌ಸಾಹೇಬರು ತಂಜಾವೂರು ಮೊಕ್ಕಾಂನಿಂದ ಕೊಟ್ಟಿರುವ ೮೫ - ೯೬ನೇ ನಂಬರ್ ಹುಕ್ಕುಂ. ೧೭೮೩ನೇ ಮೇ ತಾರೀಖು ೪ ರಲ್ಲೂ ಜನರಲ್‌ಕೂಟೆಸಾಹೇಬರು ಕೊಟ್ಟಿರುವ ೪೫ - ೯೯ ನೇ ನಂಬರು ಹುಕ್ಕುಂ. ೧೭೮೩ನೇ ಮೇ ತಾರೀಖು ೧೬ರಲ್ಲು ಕರ್ನಲ್ ಫ್ರೋಲಾರ್ಟನ್ ಸಾಹೇಬರವರು ಕೊಟ್ಟಿರುವ ೧೧೫ - ೧೫೧ನೇ ನಂಬರ್ ಹುಕ್ಕುಂ. ೧೭೮೫ನೇ ಇಸವಿ ಮಾರ್ಚಿ ೧೬ಕ್ಕೆ ಸರಿಯಾದ ಕ್ರೋಧಿಸಂ॥ ಫಾಲ್ಗುಣಮಾಸದಲ್ಲಿ ತಂಜಾವೂರು ರೆಸಿಡೆಂಟ್ ಹಡ್ಲಸ್ಟನ್‌ಸಾಹೇಬರುಕೊಟ್ಟಿರುವ ೧೬೬ - ೧೩೬ನೇ ನಂಬರ್ ಹುಕ್ಕುಂ. ಸದರಿ ೧೭೮೫ನೇ ಏಪ್ರಿಲ್ ೧೮ಕ್ಕೆ ಸರಿಯಾದ ವಿಶ್ವಾವಸು ಸಂ॥ ಚೈತ್ರಮಾಸದಲ್ಲಿ ಮೈಲಾಪುರಿ ಚನ್ನಪಟ್ಟಣದ ಗವರ್ನರ್ ಲಾರ್ಡ್‌ಜನರಲ್ ಮೆಡೋಸಾಹೇಬರವರು ಕೊಟ್ಟಿರುವ ೧೮೮ - ೧೯೮ನೇ ನಂಬರ್ ಹುಕ್ಕುಂ. ೧೭೮೬ನೇ ಜನವರಿ ೧೬ಕ್ಕೆ ಸರಿಯಾದ ವಿಶ್ವಾವಸು ಸಂ॥ ಪುಷ್ಯಮಾಸದಲ್ಲಿ ಲಾರ್ಡ್‌ವಾಲಿಸ ಸಾಹೇಬರವರು ಕೊಟ್ಟಿರುವ ೮೮ನೇ ನಂಬರು ಹುಕ್ಕುಂ. ೧೭೮೫ನೇ ಮಾರ್ಚಿ ೧೪ರಲ್ಲೂ ವೆಬ್ಬಸಾಹೇಬರವರು ಕೊಟ್ಟಿರುವ ೧೨೫ನೇ ನಂಬರು ಹುಕ್ಕುಂ. ೧೭೯೦ನೇ ಸಾಧಾರಣ ಸಂ॥ ವೈಶಾಖಶುದ್ಧ ೧೧ ಯಲ್ಲು ಮ್ಯಾಯಸ್‌ಸಾಹೇಬರು ಸತ್ಯಮಂಗಲದ ಮೊಕ್ಕಾಂನಿದ ಕೊಟ್ಟಿರುವ ೨೦೧-೩೧೫ನೇ ನಂಬರುಹುಕ್ಕುಂ. ಸದರಿ ವೈಶಾಖ ಬಹುಳ ೧೧ ಯಲ್ಲೂ ಕಾರ್ಜಿಪ್‌ಸಾಹೇಬರು ಕೊಯಮುತ್ತೂರು ಮೊಕ್ಕಾಮಿನಿಂದ ಕೊಟ್ಟಿರುವ ೩೪೫ - ೪೧೫ನೇ ನಂ॥ ಹುಕ್ಕುಂ. ಸದರೀ ಜ್ಯೇಷ್ಠಶುದ್ಧ ೮ ಯಲ್ಲೂ ಸರ್ವಯಜಮಾನರಾದ ಲಾರ್ಡ್‌ಕಾರ್ನ್‌ವಾಲೀಸ್‌ಸಾಹೇಬರು ಕೊಟ್ಟಿರುವ ೪೨೮ - ೪೫೪ನೇ ನಂ॥ ಹುಕ್ಕುಂ. ಸದರೀ ಶ್ರಾವಣಶುದ್ಧ ೧೩ ಯಲ್ಲು ಮೇಜರ್‌ಕ್ಲೋಸ್‌ಸಾಹೇಬರವರು ಕೊಟ್ಟಿರುವ ೪೬೮ - ೫೩೬ನೇ ನಂ॥ ಹುಕ್ಕುಂ. ಸದರಿ ಶ್ರಾವಣಬಹುಳ ೫ ಯಲ್ಲೂ ದಂಡಿನ ಯಜಮಾನರಾದ ಚಾಲ್ಮರ್ಸ್‌ಸಾಹೇಬರು ಕೊಯಮುತ್ತೂರು ಮೊಕ್ಕಾಂನಿಂದ ಕೊಟ್ಟಿರುವ ೫೪೫ - ೫೬೮ನೇ ಹುಕ್ಕುಂ. ೧೭೯೧ನೇ ಮೇ ೧ಕ್ಕೆ ಸರಿಯಾದ ವಿರೋಧಿಕೃತು ಸಂ॥ ವೈಶಾಖಮಾಸದಲ್ಲಿ ಜನರಲ್‌ಹಾರಿಸ್ ಸಾಹೇಬರು ಕೊಟ್ಟಿರುವ ೬೬೮ - ೭೮೨ನೇ ನಂ॥ ಹುಕ್ಕುಂ. ಸದರೀ ೧೭೯೧ನೇ ಮೇ ೫ ರಲ್ಲೂ ಲಾರ್ಡ್‌ವೆಲ್ಲಸ್ಲಿಸಾಹೇಬರವರು ಕೋರ್ಟಾಫ್ ಡೈರೆಕ್ಟರುಗಳಿಗೆ ಡಿಸ್ಪ್ಯಾಚನ್ನು ಬರಿಯುವದಕ್ಕೆ ಇಂಡಿಯಾ ಕಂಪೆನಿಯವರು ಕೊಟ್ಟಿರುವ ೧೪೧ನೇ ನಂ॥ ಹುಕ್ಕುಂ. ಸದರಿ ಮೇ ೧೫ರಲ್ಲೂ ಕೋರ್ಟಾಫ್ ಡೈರೆಕ್ಟರುಗಳು ಕೊಟ್ಟಿರುವ ೧೭೨ನೇ ನಂಬರು ಹುಕುಂ. ೧೭೯೨ನೇ ಮಾರ್ಚಿ ೩ಕ್ಕೆ ಸರಿಯಾದ ವಿರೋಧಿಕೃತು ಸಂವತ್ಸರದ ಫಾಲ್ಗುಣಮಾಸದಲ್ಲಿ ಲಾರ್ಡ್ ಕಾರ್ನ್‌ವಾಲೀಸ್‌ಸಾಹೇಬರು ಕೊಟ್ಟಿರುವ ೯೨೪ - ೯೪೮ನೇ ನಂಬರು ಹುಕ್ಕುಂ. ೧೭೯೨ನೇ ಮೇ ೧೪ಕ್ಕೆ ಸರಿಯಾದ ಪರೀಧಾವಿ ಸಂವತ್ಸರದ ವೈಶಾಖಮಾಸದಲ್ಲಿ

ಲಾರ್ಡ್ ವೆಲ್ಲಸ್ಲಿಸಾಹೇಬರವರು ಕೊಟ್ಟಿರುವ ೩೧೧ನೇ ನಂಬರು ಹುಕ್ಕುಂ. ೧೭೯೩ನೇ ಪ್ರಮಾದೀಚ ಸಂವತ್ಸರದ ವೈಶಾಖ ಶು॥ ೪ ಯಲ್ಲೂ ಮೈಲಾಪುರಿಚನ್ನಪಟ್ಟಣದ ಗವರ್ನರ್ ಲಾರ್ಡ್‌ಹೋಬಾರ್ಟ್ ಸಾಹೇಬರವರು ಕೊಟ್ಟಿರುವ ೯೯೬ನೇ ನಂಬರು ಹುಕ್ಕುಂ. ಸದರಿ ವೈಶಾಖ ಬ॥ ೫ ಯಲ್ಲೂ ವೆಬ್ ಸಾಹೇಬರು ಕೊಟ್ಟಿರುವ ೯೯೪ನೇ ನಂಬರು ಹುಕ್ಕುಂ. ಸದರಿ ಜ್ಯೇಷ್ಠ ಶು॥ ೭ ಯಲ್ಲೂ ಜಾರ್ಜ್‌ಸಾಹೇಬರು ಕೊಟ್ಟಿರುವ ೨೧೪ನೇ ನಂಬರು ಹುಕ್ಕುಂ. ಸದರಿ ಪ್ರಮಾದೀಚ ಸಂವತ್ಸರದ ಕಾರ್ತೀಕಮಾಸದಲ್ಲಿ ದೊಡ್ಡನವಾಬರಾಹೈದರಲ್ಲಿ ಸಾಹೇಬರು ಕೊಟ್ಟಿರುವ ಸನ್ನದು. ೧೭೯೪ನೇ ಜೂನ್ ೨೪ಕ್ಕೆ ಸರಿಯಾದ ಆನಂದಸಂವತ್ಸರದ ಜ್ಯೇಷ್ಠಮಾಸದಲ್ಲಿ ಸದರಿ ಜಾರ್ಜ್‌ಸಾಹೇಬರವರು ಕೊಟ್ಟಿರುವ ೨೪೨ನೇ ನಂಬರು ಹುಕ್ಕುಂ. ೧೭೯೫ನೇ ಇಸವಿ ಜುಲೈ ೧೯ಕ್ಕೆ ಸರಿಯಾದ ರಾಕ್ಷಸ ಸಂವತ್ಸರದ ಆಷಾಢಮಾಸದಲ್ಲಿ ಮೈಲಾಪುರಿಚನ್ನಪಟ್ಟಣದ ಗವರ್ನರ್ ಲಾರ್ಡ್‌ಹೋಬಾರ್ಟ್ ಸಾಹೇಬರು ಕೊಟ್ಟಿರುವ ೮೧೪ನೇ ನಂಬರು ಹುಕ್ಕುಂ. ೧೭೯೬ನೇ ಇಸವಿ ಫೆಬ್ರವರಿ ೧೫ರಲ್ಲೂ ಸದರಿ ಹೋಬಾರ್ಟ್‌ಸಾಹೇಬರು ಕೊಟ್ಟಿರುವ ೨೧೨ನೇ ನಂಬರು ಹುಕ್ಕುಂ. ೧೭೯೭ನೇ ಇಸವಿ ಆಗಸ್ಟ್ ೨೬ಕ್ಕೆ ಸರಿಯಾದ ಪಿಂಗಳ ಸಂವತ್ಸರದ ಶ್ರಾವಣಮಾಸದಲ್ಲಿ ಮೈಲಾಪುರಿಚನ್ನ ಪಟ್ಟಣದ ಗವರ್ನರ್ ಲಾರ್ಡ್ ಕ್ಲೈವ್‌ಸಾಹೇಬರು ಕೊಟ್ಟಿರುವ ೯೯೮ನೇ ನಂಬರು ಹುಕ್ಕುಂ. ೧೭೯೮ನೇ ಮಾರ್ಚಿ ೨೪ಕ್ಕೆ ಸರಿಯಾದ ಪಿಂಗಳ ಸಂವತ್ಸರದ ಫಾಲ್ಗುಣಮಾಸದಲ್ಲಿ ಸರ್ವ ಯಜಮಾನರಾದ ಬಂಗಾಳಾ ಗವರ್ನರ್‌ಜನರಲ್ ಲಾರ್ಡ್ ಮಾರ್ನಿಂಗ್ಟನ್ ಸಾಹೇಬರು ಕೊಟ್ಟಿರುವ ೩೨೬ನೇ ನಂಬರು ಹುಕ್ಕುಂ. ೧೭೯೮ನೇ ಮೆ ೧ಕ್ಕೆ ಸರಿಯಾದ ಕಾಳಾಯುಕ್ತಿ ಸಂವತ್ಸರದ ವೈಶಾಖಮಾಸದಲ್ಲಿ ಲಾರ್ಡ್‌ಕ್ಲೈವ್‌ಸಾಹೇಬರು, ಲಾರ್ಡ್ ಮಾರ್ನಿಂಗ್ಟನ್‌ಸಾಹೇಬರೂ ಸಹ ಕೊಟ್ಟಿರುವ ೧೮೪ನೇ ನಂ॥ ಹುಕ್ಕುಂ. ೧೭೯೯ನೇ ಜನವರಿ ೧೪ಕ್ಕೆ ಸರಿಯಾದ ಕಾಳಾಯುಕ್ತಿ ಸಂವತ್ಸರದ ಪುಷ್ಯಮಾಸದಲ್ಲಿ ಜನರಲ್ ಹಾರಿಸ್‌ಸಾಹೇಬರವರು ಕೊಟ್ಟಿರುವ ೧೧೦ನೇ ನಂಬರು ಹುಕ್ಕುಂ. ಇದೇ ಪುಷ್ಯ ಬ॥ ೧೪ರಲ್ಲೂ ವೆಬ್‌ಸಾಹೇಬರು ಕೊಟ್ಟಿರುವ ೩೪೮ನೇ ನಂಬರು ಹುಕ್ಕುಂ. ೧೭೯೯ನೇ ಎಪ್ರಿಲ್ ೧೬ಕ್ಕೆ ಸರಿಯಾದ ಸಿದ್ಧಾರ್ಥಿ ಸಂವತ್ಸರದ ಚೈತ್ರಮಾಸದಲ್ಲಿ ಲಾರ್ಡ್‌ಕ್ಲೈವ್‌ಸಾಹೇಬರ ಹುಕ್ಕುಂ ಮೇರಿಗೆ ವೆಬ್‌ಸಾಹೇಬರು ಕೊಟ್ಟಿರುವ ೮೧೬ನೇ ನಂಬರು ಹುಕ್ಕುಂ. ೧೭೯೯ನೇ ಮೇ ೧೪ಕ್ಕೆ ಸರಿಯಾದ ಸಿದ್ಧಾರ್ಥಿಸಂವತ್ಸರದ ವೈಶಾಖಮಾಸದಲ್ಲಿ ಜನರಲ್ ಹಾರಿಸ್‌ಸಾಹೇಬರು ಕೊಟ್ಟಿರುವ ೮೬ - ೩೩೬ನೇ ನಂಬರು ಹುಕ್ಕುಂ. ೧೭೯೯ನೇ ಜೂನ್ ೩೦ರಲ್ಲೂ ಸರ್ವ ಯಜಮಾನರಾದ ಬಂಗಾಳಾ ಗವರ್ನರ್‌ಜನರಲ್ ಲಾರ್ಡ್ ಮಾರ್ನಿಂಗ್ಟನ್‌ಸಾಹೇಬರವರು ಕೊಟ್ಟಿರುವ ೫೧೬ನೇ ನಂಬರು ಹುಕ್ಕುಂ. ಈ ಹುಕ್ಕುಂಗಳನ್ನು ಅನುಸರಿಸಿ ಪ್ರಭವಸಂವತ್ಸರದ ಆಶ್ವೀಜ ಶು॥ ೩ ಮುಕ್ಕಾಂನಲ್ಲೂ, ಸದರಿ ಪ್ರಭವಸಂವತ್ಸರದ ಮಾರ್ಗಶಿರ ಬ॥ ೧೩ ಭಾನುವಾರದ ಮುಕ್ಕಾಂನಲ್ಲೂ, ವಿಭವಸಂವತ್ಸರದ ಮಾರ್ಗಶಿರ ಶು॥ ೩ ಭಾನುವಾರದ ಮುಕ್ಕಾಂನಲ್ಲೂ ಸಹ ದಿವಾನ್ ಪೂರ್ಣಯ್ಯನವರು ಕೊಟ್ಟಿರುವ ಪರವಾನೆ ಮತ್ತು ರಹದಾರಿ. ೧೮೦೩ನೇ ಡಿಶಂಬರು ೨೩ರಲ್ಲೂ, ೧೮೦೮ನೇ ನವಂಬರು ೨೦ರಲ್ಲೂ ಸಹ ರಸಿಡೆಂಟರು ಕೋಲ್‌ಸಾಹೇಬರು ಕೊಟ್ಟಿರುವ ೯೪೨ - ೮೨೬ನೇ ನಂಬರು ಹುಕ್ಕುಂಗಳು, ೧೮೦೮ನೇ ನವಂಬರು ೨೧ರಲ್ಲೂ ಮೈಲಾಪುರಿಚನ್ನಪಟ್ಟಣದ ಗವರ್ನರ್ ಲಾರ್ಡ್ ಬಲ್ಲೂರ್‌ಸಾಹೇಬರು ಕೊಟ್ಟಿರುವ ೯೦೮ನೇ ನಂಬರು ಹುಕ್ಕುಂ. ಸನ್ ೧೮೨೦ನೇ ಇಸವಿ ಜೂನ್ ತಾರೀಖು ೨೬ರಲ್ಲೂ ಮತ್ತು ೧೮೨೬ನೇ ಇಸವಿ ಸೆಪ್ಟಂಬರು ತಾರೀಖು ೯ರಲ್ಲೂ ಸಹ ಮಹಾರಾಜರಾಜಾಸಾಹೇಬ್ ಬಹದ್ದರವರು ಕೊಟ್ಟಿರುವ ಸನ್ನದು, ಮತ್ತು ರಹದಾರಿ ಸಹ ಸಾದರಾಗಿ ಇರುವದನ್ನು ಶ್ರೀಮಠದ ಪಾರಪತ್ಯೇಗಾರ ಭಿಷ್ಟ್ಯಯ್ಯಶಾಸ್ತ್ರಿಗಳು ಹುಜೂರಲ್ಲಿ ಹಾಜರ್ಮಾಡಿ ಈ ಮೇರಿಗೆ ಅಪ್ಪಣೆ ಆಗಬೇಕೆಂದು ಅರ್ಜಿ ಮಾಡಿಕೊಂಡದ್ದರಿಂದ ಅಪ್ಪಣೆ ಕೊಡಿಸಿ ಇದ್ದೇತು. ಸದರಿ ಬರಹಿರುವ ಮೇರಿಗೂ ಬಿಲ್‌ಶೇಲ್‌ಸಾಬುಕಿನ ಹುಕ್ಕುಂಗಳು, ಪರವಾನೆ ಸನ್ನದು, ರಹದಾರಿ ಸಹ ಇರುವ ಮಾಮೂಲ್ಮೇರಿಗೆ ನಡೆಸುಕೊಳ್ಳುವದು.

ತಾರೀಖು ೫ನೇ ಮಾಹೆ ಸೆಪ್ಟಂಬರ್ ಸನ್ ೧೮೩೦ನೇ ಇಸವಿ ದರಖಾಗಾ ಬೆಂಗಳೂರು ಕ್ಯಾಷ್ ಮೇಜರ್ ಕಮಿಷನರ್ ಎಂದು ಸೈನಿಫೆ. ಸೂರಪ್ಪ, ಹೆಡ್ ದಿವಾನ್ ಎಂದು ಸೈನಿಫೆ.

ಶ್ರೀಮತ್ಪರಮಹಂಸ ಯಥೋಕ್ತಬಿರುದಾಂಕಿತರಾದಂಥ ಶ್ರೀ ಸಚ್ಚಿದಾನಂದಭಾರತಿಗಳಿಗೆ.

ಟೀಪುಸುಲ್ತಾನ್ ಪಾದಷಹರು ಮಾಡುವ ಸಲಾಂ. ನೀವು ಕಳುಹಿಸಿದ ಪತ್ರಿಕೆಯಿಂದ ಎಲ್ಲಾ ವಿವರವು ತಿಳಿಯಬಂತು. ನಮ್ಮ ಸರಕಾರದ ಶೀಮೆಯಲ್ಲಿ ಇರುವ ದೇವಸ್ಥಾನ ಪುಣ್ಯಕ್ಷೇತ್ರಗಳಲ್ಲೂ ದೇವತಾದರ್ಶನಮಾಡಿಕೊಂಡು ಬರತಕ್ಕಬಗ್ಗೆ ಅಪ್ಪಣೆಕೊಟ್ಟು ರಹದಾರಿ ಕಳುಹಿಸಿಕೊಟ್ಟಲ್ಲಿ ಹೋಗಿ ದೇವರ ಸನ್ನಿಧಿಗಳಲ್ಲಿ ಸರಕಾರದ ಶ್ರೇಯಸ್ಸು ಪ್ರಾರ್ಥಿಸಿಕೊಂಡು ಬರುವದಾಗಿ ಬರದು ಇರುವದು ಸರಿಯಷ್ಟೆ; ಅದೇಪ್ರಕಾರಕ್ಕೆ ರಹದಾರಿ ಕಳುಹಿಸಿ ಇದ್ದೇತು. ಸರಕಾರದ ಶೀಮೆಯಲ್ಲಿರುವ ದೇವತಾಸ್ಥಳ ಪುಣ್ಯಕ್ಷೇತ್ರಗಳಲ್ಲಿ ಸಹ ಹೋಗಿ ದೇವರ ಸನ್ನಿಧಾನಗಳಲ್ಲು ತಾವು ತ್ರಿಕಾಲ ಈಶ್ವರಪೂಜೆಯನ್ನೂ ಸಹ ಸರಕಾರದ ಶ್ರೇಯೋಭಿವೃದ್ಧಿಯಾಗುವಂತೆ ಈಶ್ವರಪ್ರಾರ್ಥನೆ ಮಾಡಿಕೊಂಡು ಬರುವಹಾಗೆ ಮಾಡಿಸುವದು. ತಾರೀಖು ೧೦ನೇ ಮಾಹೆ ಜಾಫರಿಸಾಲ್ ಇದಾರಸಕ್ ಸನ್ ೧೨೨೪ ಮಹಮ್ಮದು ನಳಸಂವತ್ಸರ ಎಂತ ಇಧೆ.

GENERAL NO. $\frac{2396}{101}$ OF 1868-69.

MYSORE COMMISSIONER'S OFFICE,

Bangalore, 27th July, 1868

TO

The Secretary to the Government of India,
Foreign Department

SIMLA.

SIR,

In reply to para 2 of your letter 1201, dated 16th instant, I have the honor to submit for the information of the Government of India the following explanation:—

2. The Sringeri Guru is the direct representative of the Sectarian Shunkar Acharya and is the acknowledged spiritual Director not only of the greater proportion of the Hindus of Southern India, but also of those of the leading Maharatta Houses, such as Holakr and the former Peshwas. It may be said that his influence is far greater than that of any Hindu spiritual guide in India and I presume it is for this reason that he is regarded with such unlimited respect He is the only Guru in the Province who is permitted to carry the Adda Palkee or Cross Palankeen, and he has in his possession Sunuds of great antiquity from the Nizam, the Peishwas, the Mysore Rajah, Holkar and others all enjoing the utmost respect to be paid to him.

3. Owing to the extraordinary veneration in which he has always been held, a biradari of Silledars has been attached to him from the earliest period and on the occasion of his visiting H. M. Territory an extra escort has always been given, to which purport the Guru holds several communications to and from the Madras Government.

4. The Guru enjoys Enam lands valued at more than half a lac in the Kadur District near the sources of the Toongabhadra river, and during his periodical tours in Mysore receives from his disciples large sums of money which he distributes in charity. The late Rajah used to pay him Rs. 1000 a month.

5 The Guru Narsing Bhartee is a venerable old man of 72, who has been a great traveller and has a considerable reputation for learning. He is deservedly respected, being very unassuming in manner and having a well established character for benevolence and wisdom.

6 I may observe that I do not think it expedient to curtail the Guru of his customary guard of honor, but I have endeavoured to dissuade him from proceeding to Her Majesty's Territory with any additional followers, although he can quote undoubted precedents for the practice.

I have, &,

(Signed) L. BOWRING,

Commissioner

No. 1360.

FROM

W. S. SETON KARR, ESQ.,

Secretary to the Government of India.

TO

THE COMMISSIONER OF MYSORE.

SIR,

I have the honor to acknowledge the receipt of your letter dated 27th ultimo, No. 2369/101, submitting an explanation in regard to the escort of Silledar Horse furnished to the Sringeri Guru.

2. In reply, I am directed to state that His Excellency the Viceroy and Governor General in Council accepts your explanation of the custom in force regarding the native gentleman and approves the views set forth in the 6th paragraph of the letter under acknowledgment.

I have the honor to be,
Sir.
Your most obedient Servant,
(Signed) W. S. SETON KARR,
Secretary to the Government of India,

SIMLA,
19th August, 1868.

Ti

ed) L. BOWRING.

PRINCIPAL

SEAL of NIZAM ALI KHAN NIZA-MUL MULK DATED 1175-H.

ROYAL ORDER

Addressed to the Goomastas of Jagirdars, Desa Mukies, Desa Pandayas, Monegars, Potels, Farmers, &c., &c., in the Subhas of Deckan, Hyderabad.

Whereas the Vakeel of the *Sri Swami Jagadguru*, *Sumsthan Sringeri*, represents that the Sri Swami is about to set out on tour in the Deckan with certain insignia on the strength of a *Sunud* formerly issued by this Government; that the usual honors specified in the said *Sunud* issued under the seal of thist kingdom should be continued that the practice of offering to the Mutt annual contributions and nuzars during the occasion of marriage, &c., should be continned; that the Enams, Jagirs, &c, bestowed on the *Mutt* should be continued as before; and that no other Guru be allowed to travel about with the above said honors and insignia.

Wherefore it is directed thus:——

In accordance with the above representation the orders formerly issued in regard to the Guru's progress in this kingdom with the usual insignia, the usual *Istakabole*, *Bichsha Kanicay* (offering) of the people to the said Mutt are hereby renewed. It is further ordered that the property of such disciples of the said *Mutt* as may die *Bewaris* (without heirs) shall vest in the said *Mutt* and that the *Swami* is the supreme in the matter of the performance on the part of his disciples of their respective religious duties. This order will have reference to the following matters:——

1. The said swami will have authority in the Mullikarjoona and other temples.
2. *The Enams*, *Jagirs*, &c., bestowed on the *Mutt* to continue as before.
3. The elephants and horses in the possession of *Jorsas* to be the property of the *Mutt*.
4. The property of *Sunyasis*, *Aradhutas* and such others who may die without heirs to vest in the *Mutt*.
5. During the occation of marriages, &c.. among the Mutt disciples, the first honors, *Nuzurs*, &c., to be offered to the *Mutt*.
6. That out of the temple founds a contribution of one anna in the Rupee to be paid in to the *Mutt*.
7. That a portion of the allowance made for the *Lunguikhana* and *Kyrat* for Mussulmen *Fakeers* to be paid in to the *Mutt*.

Dated 24th Rubei Sani 1196 Higiri corresponding with the year A. D. 1779 80.
Registerd in the Huzur Dufter 3rd Jamadilevel in the year 1196 Hijiri.
Registerd in the Dewan's Dufter 1st Jamadilevel in the year 1196 Hijiri
Copy registered in the Sultan's Dufter 1st Jamadi level in the year 1196 Hijiri corresponding to A. D. 1779—80

The above is a translation from Persian language

मोहर.

श्री.

॥ जगद्गुरुयाच ॥

हे संस्थान च विशिष्ट आमील व शिरस्तेदार यास लिहिवाबुन पाठविल संनद वैगों विला ऐसाजे आमिला न शिरस्तेदारा न हाल इस्तकवाल मोकदंमा निमुजारे या सरका दारुल रियासत मैहिसूर बिदानद ॥ ॥ श्री श्रिंगेरी ॥ ॥ श्रीमठाहून मटमु ब्राह्मण एउन तुमच तुमच तालूकेंत मामूलप्रकार स्याच शिष्यवर्गा च वर्णाश्रम च आचारविचार विचारणाकरुन घेउन श्रीमठासएणे च चरणकाणिका मूलानक्षत्रकाणिक अग्रतांबूल दीपराधनकाणिका प्रायश्चित्तकाणिका सुदा शिष्यवर्गलोका कडून एणे सारीि करुन घेणेच्या विषयांत हि कोणी तरी काणिका देइनाते मुद्रा अतिक्रमवाणि च ललतरि स्यास ताकीद करुन बंदोबस्त करवाउन देणेच्या सही सदरी शिष्या कडू वसूल जाहलेतें काणक्यास कोणि जकात वसूल करिना सारिखहि श्री श्रिंगेरं श्रीमठास पूर्वापासून मिळालते शिष्यमंडलींत वाइट जाहलेते बाइकास श्रीमटच हवाल करुन रशीद घेणे विशया सहि सदरी श्रीमठास मिळालते ब्राह्मण सुदा समस्त इतः वर्णाश्रमांत हि सुदा स्यास्या वर्णाश्रमप्रकार स्यास्या कालांत उपनयन विवाह प्रायश्चि वगैरे करुन घेणेच विपयांत ही सरकारवालेनि प्रवेश करितानये ह्मणुन हि श्री श्रिंगेरि ॥ ॥ याच सवारिहि कोणत कोणतग्रामास आलियाहि तुमचतुमच तालूक सरहदेंत स्यास्या स्थलांत असणेच शिवालय विष्णु आलय वगैरे देवस्थानांतहि असणेच सदरि देवार श्री श्रियानि पूजा करणेबदल सोडून देणेविषइ सुदा याप्रकार निरोपव्हाव ह्मणून हजूर शिर स्तेदार तिरमलपंडित व आणि ध्यावपैया व श्रीमठाधिकार पद्मनाभशास्त्रि आणि सुदा हजू रात अर्जकरून घेतलकारिता स्यास निरोपदेणेच काय ह्मणिजे सदरी प्रमाणे वरिलिहिले सारिख केव्हाहि चालून घेउन एणेच नव्हत हेसंनदच नकल प्रति तालूकेच शिरस्तेदाराच दफ्तरास दाखल करुन घेउन असल संनद सदरि तिरमलपंडित याच सुफर्देसहो पद्मना भशास्त्रीयाच सुफर्देसहो वापस देणेच आहे जाणिजे तारीख २५ विं माहे दिनिसालसाहो संन १२२१ने मरकुंम प्रमादीच संवत्सर कार्तीकमास खत लक्षीनारणैया मुनषी हजूर.

हेंजागि फारषींत टीपू सुलतानयाच दस्तखतआहे.

हे जागि चारि महाराष्ट्र दफ्तरदाराच दाखला आहे.

मोहर.

हे जागि फारषींत संनददाखला आहे.

ಮುಲ್ಕಿ ೮೫ ನಂಬರು.
೭೯

(ನರಸೀಪುರದ ತಾಲ್ಲೂಕ ಮೊಹರು)

ನರಶೀಪುರದ ತಾಲ್ಲೂಕು ಕಚೇರಿಯಿಂದ.

ಕಸಬಾ ಲಕ್ಷ್ಮೀನರಸಿಂಹಸ್ವಾಮಿಯವರ ದೇವಸ್ಥಾನದ ಪಾರುಪತ್ಯೆಗಾರ ಕೃಷ್ಣಪ್ಪನವರಿಗೆ

ಇಜಾರ್ಸ್ ಹುಕ್ಕುಂ.

ಶ್ರೀ ಶೃಂಗೇರಿ ಜಗದ್ಗುರುಗಳಾದ ನರಸಿಂಹಭಾರತೀಸ್ವಾಮಿಗಳವರು ನರಶೀಪುರಕ್ಕೆ ಚಿತ್ತೈಸಿದ್ದಾಗ್ಯೆ ದೇವರಪೂಜಾ ಮಂಗಳಾರತಿ ಪಾದಕಾಣಿಕೆ ಮುಂತಾದ್ದು ಮಾಡುವದಕ್ಕೆ ಮಾಮೂಲ್‌ಮೇರೆ ಸದರೀ ಲಕ್ಷ್ಮೀನರಸಿಂಹಸ್ವಾಮಿಯವರ ದೇವಸ್ಥಾನಕ್ಕೆ ದಯಮಾಡಿಸಿದ್ದವೇಳೆ ಅರ್ಚಕ ಕೃಷ್ಣಭಟ್ಟ ಬಾಗಿಲು ಹಾಕಿಕೊಂಡಿದ್ದನಿಮಿತ್ಯ ಸ್ವಲ್ಪಹೊತ್ತು ಸ್ವಾಮಿಗಳವರು ಬಾಗಿಲು ತಗೆಯತಕ್ಕದ್ದರ ನಿರೀಕ್ಷಣೆಮಾಡುವಂತೆ ಮಾಡಲ್ಪಟ್ಟ ಸದರಿ ಅರ್ಚಕನಿಗೆ ಬಂದೋಬಸ್ತು ಆಗತಕ್ಕ ವಿಷಯದಲ್ಲಿ ನೀನು ಹುಜೂರು ಫಿರ್ಯಾದ್‌ಮಾಡಿದ್ದಕ್ಕೆ ತಾಲ್ಲೂಕ್‌ನಿಂದ ಜಾಹಿರ್‍ಮಾಡಿದ್ದ ರಿಪೋರ್ಟಿನಮೇರೆ ಈ ದಫಾಕ್ಕೆ ನಿಮ್ಮ ಮುನಾಸಬ್ ಅರ್ಚಕನಿಗೆ ಜರ್ಮಾನೆವಿಧಿಸಿ ಫೈಸಲ್‌ಮಾಡುವಂತೆ ಕೊಟ್ಟಿರುವ ಹುಕ್ಕುಂ ಅಮಲ್‌ಜಾರಿ ಆಗಿರುವ ತಪ್ಸೀಲನ್ನು ಅರ್ಜೀದಾರಗೆ ತಿಳಿಸುವಂತೆ ಸರ್ ಮುಜಕೂರು ಮೆ ೧೨ನೇ ಮುಕಾಂ ಮುಜರಾಯಿ ೧ನೇ ನಂಬರು ಹುಕ್ಕುಂ ಸಾದರಾದಕಾರಣ ಈ ಮೊಕದ್ದಮಾ ಕಟ್ಟು ಮುಂತಾದ ಕಾಗದ ಪತ್ರಗಳ ನೋಡುವಾಗ್ಯೆ ಕೂಡ್ಲೆ ಅರ್ಚಕ ಬಾಗಿಲು ತೆಗದ್ದಾಗಿಯೂ ಶ್ರೀಸ್ವಾಮಿಗಳವರು ಕಟ್ಲೇಪ್ರಕಾರ ಪೂಜಾ, ಪಾದಕಾಣಿಕೆ, ಮಂಗಳಾರತಿ ಮುಂತಾಗಿ ನೆರವೇರಿಸಿದಬಳಿಕ ಮಾಮೂಲ್‌ಮೇರೆ ಮರಿಯಾದೆ ನಡೆಸಿರುವದಾಗಿ ಅರ್ಚಕ ಕೃಷ್ಣಭಟ್ಟನಕೈಫಿಯತಿನಿಂದ ತಿಳಿಯಬರುವದಲ್ಲದೆ ದೇವಸ್ಥಾನದ ಬಾಗಿಲು ಹಾಕಿದ ತಪ್ಸಿತಕ್ಕಾಗಿ ಸರ್ ೧೮೭೬ನೇ ಇಸವಿ ಏಪ್ರಿಲ್ ೧೬ನೇ ಮುಕಾಂ ಮುಜರಾಯಿ ೫ನೇ ನಂಬರು ಹುಕ್ಕುಂ ಪ್ರಕಾರ ಈ ದಫಾಕ್ಕೆ ಸದರಿ ಅರ್ಚಕ ಕೃಷ್ಣಭಟ್ಟನಿಗೆ ೨ರೂಪಾಯಿ ಜರ್ಮಾನೆ ಮೊಕರೂರ್‌ಮಾಡಿ ವಸೂಲ್ಮಾಡಿರುತ್ತೆ. ತಿಳಿಯುವದು. ತಾರೀಖು ೧೮ನೇ ಮಾಹೆ ಜೂನ್ ಸರ್ ೧೮೭೬ನೇ ಇಸವಿ ಮೊಕ್ಕಾಂ ಕಸಬಾ. ... ...

ಜೂನ್ ತಾರೀಖು ೨೦ರಲ್ಲು ದಾಖಲ್.

ರುಜು ನಾರಾಯಣರಾವ್ ಮಾಮಲೇದಾರ್,

[illegible]

2·11·95 [illegible]



2/10/95

Subd & Muzarai Secy 21/10/95

16

Reg No: 544

ಮೈಸೂರು ಸಂಸ್ಥಾನದ ಎಗ್ಸಿಕ್ಯೂಟಿವ್ ಕೌನ್ಸಿಲ್ ಪ್ರಸಿಡೆಂಟ್ ಮತ್ತು
ದಿವಾನ್ ಸರ್. ಕೆ. ಶೇಷಾದ್ರಿಯ್ಯನವರ
ಸನ್ನಿಧಾನಂಗಳಿಗೆ

——:o:——

ಮೈಸೂರು.

ರಾಜಧಾನಿ-ನಿವಾಸಿಗಳಾದ ಬ್ರಾಹ್ಮಣರು ಮೊದಲಾದ ಚತುರ್ವರ್ಣದ ಪ್ರಜೆಗಳು ಬರೆದುಕೊಂಡ ಅರ್ಜಿ—

ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳಸ್ವಾರಿಯು ಕಳೆದ ಜೂನ್ ಮಾಹೆಯಲ್ಲಿ ಮೈಸೂರಿಗೆ ಬಿಜಯಂಗೈಯ್ಯುತ್ತಿದ್ದ ಕಾಲದಲ್ಲಿ ಶಿಷ್ಯಜನರ ಪ್ರಾರ್ಥನಪೂರ್ವಕ ಶ್ರೀರಂಗಪಟ್ಟಣದ ಕೋಟೆವಳಕ್ಕೆ ದಯಮಾಡಿಸಿ ಅಲ್ಲಿ ರಂಗನಾಥಸ್ವಾಮಿದೇವರ ದರ್ಶನವಂ ಮಾಡಿದ್ದಕ್ಕಾಗಿ ದೇವರಿಗೆ ಸಂಪ್ರೋಕ್ಷಣೆ ಆಗಬೇಕೆಂದು ಶ್ರೀವೈಷ್ಣವರಲ್ಲಿ ಕೆಲವರು "ಅಖಿಲ ವೈಷ್ಣವ ಸಭಾ" ಎಂದು ದೊಡ್ಡ ಹೆಸರನ್ನಿಟ್ಟುಕೊಂಡು ಸರ್ಕಾರದಲ್ಲಿ ಫಿರ್ಯಾದುಮಾಡಿದ್ದರಮೇಲೆ ಸ್ಮಾರ್ತಜನಗಳು ಸಂಪ್ರೋಕ್ಷಣೆ ಮಾಡಕೂಡದೆಂದು ತಕರಾರುಮಾಡಿದ್ದಕ್ಕಾಗಿ ೧೮೯೫ನೇ ಇಸವಿ ಜೂನ್ ೨೩ನೇ ತಾರೀಖಿನಲ್ಲಿ ಮುಜರಾಯಿ ಸೂಪರಿಂಟೆಂಡೆಂಟರವರು ಖುದ್ದು ವಿಚಾರಣೆ ಮಾಡಿ ಗೌರ್ನಮೆಂಟಿಗೆ ಮಾಡಿದ ರಿಪೋರ್ಟನ್ನು ಪರಾಂಬರಿಸಿ ಗೌರ್ನಮೆಂಟಿನವರಿಂದ ತೀರ್ಮಾನದ ಹುಕುಂ ಕೊಡೋಣವಾಗಿರುತ್ತೆ. ಈ ತೀರ್ಮಾನವು ದ್ವೇಷಾಸೂಯಾಪರರಾದ ಕೆಲವರಿಗೆ ತೃಪ್ತಿಕರವಾಗದೆ ಅವರು ವರ್ತಮಾನಪತ್ರಿಕೆಗಳಿಂದ ಮನಸ್ವಿಚರ್ಚೆಯನ್ನು ಮಾಡುತ್ತಾ ಇರುವದಲ್ಲದೆ ತಮ್ಮ ಅಭಿಪ್ರಾಯದಂತೆ ಸಂಪ್ರೋಕ್ಷಣೆಗೆ ಹುಕುಂ ಕೊಡದೇಹೋದಲ್ಲಿ ಮತಸಂಬಂಧವಾದ್ದ ಮರಣವನ್ನು ಹೊಂದುತ್ತೇವೆಂಬದಾಗಿ ಬರಿಯೋಣವೇ ಮುಂತಾದ್ದರಿಂದ ಗೌರ್ನಮೆಂಟಿನವರಿಗೆ ಘಾಬರಿಯನ್ನುಂಟುಮಾಡಿ ತನ್ಮೂಲಕ ನ್ಯಾಯಕ್ಕೆ ವಿರುದ್ಧವಾಗಿರತಕ್ಕ ತಮ್ಮ ಇಷ್ಟಾರ್ಥಗಳನ್ನು ಪಡೆಯಬೇಕೆಂದು ಪುನಃಪುನಃ ಶ್ರೀಮನ್ಮಹಾರಾಜ್ಞೀ ರೀಜಂಟರವರಿಗೂ ರಸಿಡೆಂಟು ಸಾಹೇಬರಿಗೂ ಅರ್ಜಿಯನ್ನು ಕೊಡುವದೇ ಮುಂತಾದ ಪ್ರಸ್ತಾಪನಾಪ್ರಯತ್ನದಲ್ಲಿರುತ್ತಾರೆ.

ಈ ವಿಚಾರವನ್ನು ಕುರಿತು ನಾವು ಗೌರ್ನಮೆಂಟಿಗೆ ಶ್ರುತಪಡಿಸತಕ್ಕದ್ದೇನೂ ಇಲ್ಲದೇ ಇದ್ದಾಗ್ಯೂ ಪ್ರೊಸೀಡಿಂಗ್ಸಿನ ೪ನೇ ಪ್ಯಾರಾದಲ್ಲಿ ನಮೂದಿಸಿರುವ ಸಂದರ್ಭದಲ್ಲಿಯೂ ಶ್ರೀವೈಷ್ಣವರಿಗೆ ಶ್ರೀ ರಂಗನಾಥಸ್ವಾಮಿದೇವರಮೇಲೆ ಇರತಕ್ಕ ಹಕ್ಕುದಾರಿ ವಿಚಾರದಲ್ಲೂ ಅರಿಕೆಮಾಡಿಕೊಳ್ಳುವದನ್ನು ಘನತೆಯನ್ನು ಹೊಂದಿದ ಕೌನ್ಸಿಲ್ ಸಭೆಯವರು ಸಾವಧಾನವಾಗಿ ಪರ್ಯಾಲೋಚಿಸಬೇಕೆಂದು ಬೇಡುತ್ತೇವೆ.

೧ ನೋಡು ಮೇಲ್ಕಂಡ ಪ್ರೊಸಿಡಿಂಗ್ಸಿನ ನಾಲ್ಕನೇ ಪ್ಯಾರಾ. * * * * * * * *

* ವೇದೋಕ್ತ ಕರ್ಮಾನುಷ್ಠಾಯಿಗಳಾದ ಬ್ರಾಹ್ಮಣರಿಗೆ ವಿಧಿರೂಪವಾಗಿರುವ ಆಗಮಗಳ ಪ್ರಕಾರ ಪೂಜೆಗಳಂ ನಡೆಸಲ್ಪಡುವ ಒಂದು ದೇವಾಲಯದಲ್ಲಿ ಒಬ್ಬ ಮಠಾಧಿಪತಿಯಾದವರು ಪೂಜೆಮಾಡಬಹುದೆಂಬ ಸಾಮಾನ್ಯ ಜಿಜ್ಞಾಸೆಯನ್ನಾಗಲೀ ಅಥವಾ ಮಾಮೂಲ್ ಅನುಸರಿಸಿ ಶೃಂಗೇರಿಸ್ವಾಮಿಗಳವರಿಗೆ ಇಂಥಾ ವಿಷಯಗಳಲ್ಲಿ ಯಾವದಾದರೂ ವಿಶೇಷ ಬಾಧ್ಯತೆ ಉಂಟೆ ಎಂಬ ಮುಖ್ಯವಾದ ಜಿಜ್ಞಾಸೆಯನ್ನಾಗಲಿ, ಪ್ರಕೃತ ಮೊಕದ್ದಮೆಯನ್ನು ಫೈಸಲ್ ಮಾಡುವದರಲ್ಲಿ ಆಲೋಚಿಸಬೇಕಾದ್ದು ದೈವಾತ್ ಅನಾವಶ್ಯಕವಾಗಿದೆ. ಕಳೆದ ಜೂನ್ ತಿಂಗಳು ೧೧ನೇ ತಾರೀಖಿನಲ್ಲಿ ಶೃಂಗೇರಿಸ್ವಾಮಿಗಳವರು ದೇವರಿಗೆ ಪೂಜೆಮಾಡಬೇಕೆಂಬ ಉದ್ದೇಶ್ಯದೊಡನೆ ದೇವಾಲಯಕ್ಕೆ ದಯಮಾಡಿಸಿದವರಲ್ಲವೆಂದು ಹೇಳುವದು ಪ್ರಕೃತ ಮೊಕದ್ದಮೆಯ ವ್ಯವಸ್ಥೆಗೆ ಸಾಕಾದ್ದಾಗಿದೆ. * *
* *

ವಿಷ್ಣುದೇವಾಲಯಗಳಲ್ಲಿ ಶೃಂಗೇರಿ ಜಗದ್ಗುರುಗಳವರು ಪೂಜೆಮಾಡತಕ್ಕದ್ದಕ್ಕೆ ಅವರಿಗೆ ವಿಶೇಷ ಬಾಧ್ಯತೆ ಇರತಕ್ಕದ್ದನ್ನು ವಿಚಾರಮಾಡತಕ್ಕದ್ದು ಈ ಮೊಕದ್ದಮಾ ತೀರ್ಮಾನಕ್ಕೆ ಮುಖ್ಯವಾದ ಅಂಶವಾಗಿತ್ತು.

ಹಾಗೆ ಮಾಡಿಸಿ ತೀರ್ಮಾನವನ್ನ ಅಪ್ಪಣೇಕೊಡಿಸಿದ್ದಪಕ್ಷದಲ್ಲಿ ಶ್ರೀವೈಷ್ಣವರು ಪುನಃಪುನಃ ಚರ್ಚಿಸುವದಕ್ಕೂ ಶ್ರಿಂಗೇರಿಮಠದ ಶಿಷ್ಯರಾದ ನಾಲ್ಕು ವರ್ಣದವರೂ ಈ ವಿಚಾರವಾಗಿ ಗೌರ್ನಮೆಂಟನವರಿಗೆ ತೊಂದರೆ ಕೊಡುವದಕ್ಕೂ ಅವಕಾಶವಾಗುತ್ತಿರಲಿಲ್ಲ. ಎಂಬುವದನ್ನ ಭಯಭಕ್ತಿಗಳೊಡನೆ ಅರಿಕೆ ಮಾಡಿಕೊಳ್ಳುತ್ತೇವೆಯೇ ಹೊರ್ತು ಗೌರ್ನಮೆಂಟನವರ ನಡವಳಿಕೆಮೇಲೆ ಆಕ್ಷೇಪರೂಪವನ್ನಾಗಿ ಅರಿಕೆಮಾಡುವದಿಲ್ಲ ಎಂಬುವದನ್ನ ಘನವಾದ ಚಿತ್ತದಲ್ಲಿ ಲಾಲಿಸಬೇಕು.

೨ ಬ್ರಾಹ್ಮಣ್ಯವು ಕೆಲವು ಶತಮಾನಗಳ ಕೆಳಗೆ ಬೌದ್ಧರ ಪ್ರಾಬಲ್ಯದಲ್ಲಿ ಕ್ಷೀಣಗತಿಗೆ ಬಂದದ್ದರಿಂದ ದೇವಾಲಯ ಮೊದಲಾದವುಗಳೆಲ್ಲಾ ಬೌದ್ಧಾಕ್ರಾಂತಗಳಾಗಿರಲು ಶ್ರೀಮಚ್ಛಂಕರಭಗವತ್ಪಾದರವರು ಅವತಾರವಂಮಾಡಿ ಈ ದುರ್ಮತಗಳನ್ನೆಲ್ಲಾ ಖಂಡಿಸಿ ಬ್ರಾಹ್ಮಣ್ಯವನ್ನ ಜೀರ್ಣೋದ್ಧಾರಮಾಡಿ ಷಣ್ಮತಗಳನ್ನೂ ಸನ್ಯಾಸಾಶ್ರಮವನ್ನೂ ಶಿವವಿಷ್ಣ್ವಾದಿ ಪಂಚಾಯತನಾರಾಧನ ಕ್ರಮವನ್ನೂ ಸಹಾ ಶಾಸ್ತ್ರೀಯ್ಯವಾದದ್ದೆಂದು ಸ್ಥಾಪಿಸಿದಂಥಾವರಾಗಿ ಅದರಂತೆ ತಾವು ಆಚರಣೆಮಾಡುತ್ತಾ ತಮ್ಮ ಶಿಷ್ಯಮಂಡಲಿಯಿಂದ ನಡೆಸುತ್ತಲೂ ಬಂದರು. ಅನ್ಯಮತಾಕ್ರಾಂತವಾಗಿ ನಾಮಾವಶಿಷ್ಟವಾಗಿದ್ದ ಆಸೇತು ಹಿಮಾಚಲಪರ್ಯಂತ ಇರತಕ್ಕ ದೇವಾಲಯಗಳಿಗೆಲ್ಲಾ ಪ್ರೋಕ್ಷ್ಯ ಅವುಗಳನ್ನ ವಿಧ್ಯುಕ್ತವಾಗಿ ಶುದ್ಧಿಮಾಡಿ ಶಿವವಿಷ್ಣುದೇವರುಗಳಿಗೆಲ್ಲಾ ಯಂತ್ರೋದ್ಧಾರ ಕುಂಭಾಭಿಷೇಕ ಮುಂತಾದ್ದನ್ನ ಶಾಸ್ತ್ರೋಕ್ತವಾದ ವಿಧಿಗಳಿಂದ ನಡಿಸಿ, ದೇವತಾಸಾನ್ನಿಧ್ಯ ಉಂಟಾಗುವಂತೆಮಾಡಿ ತಾವು ಸ್ವತಃ ಆ ದೇವರುಗಳನ್ನ ಪೂಜೆಮಾಡಿ ನಂತರ ಆಯಾಯ ಸ್ಥಳದಲ್ಲಿರತಕ್ಕ ಬ್ರಾಹ್ಮಣರಿಗೆ ಪೂಜೆಮಾಡುವದಕ್ಕೆ ಅಪ್ಪಣೇಕೊಡಿಸಿದರೆಂಬುವದು ಶಂಕರವಿಜಯ ಮೊದಲಾದ ಅನೇಕ ಗ್ರಂಥಗಳಿಂದ ತಿಳಿಯಬರುತ್ತೆ.

೩ ಶ್ರೀಶಂಕರ ಭಗವತ್ಪಾದರವರ ತರುವಾಯ ಆ ಪೀಠವನ್ನಲಂಕರಿಸಿದ ಗುರುಪರಂಪರೆಯವರೆಲ್ಲಾ ಮೇಲೆಹೇಳಿದ ಕ್ರಮದಲ್ಲೆ ಆಚಾರ ವಿಚಾರಗಳನ್ನ ಪರಾಮರ್ಶಿಸುವದಕ್ಕಾಗಿ ಸಂಚಾರ ಹೊರಟಕಾಲಗಳಲ್ಲಿ ಸಿಕ್ಕುವ ಶಿವವಿಷ್ಣು ದೇವಾಲಯಗಳಿಗೆ ದಯಮಾಡಿಸಿ ದೇವತಾರಾಧನೆಯನ್ನ ನಡೆಸುತ್ತಾ ಇದಾರೆ.

೪ ಏತನ್ಮಧ್ಯೆ ಅಂದರೆ ಶ್ರೀಶಂಕರಭಗತ್ಪಾದರವರು ಅವತಾರಮಾಡಿ ಮತಾಚಾರ ನಿಬಂಧನೆಗಳನ್ನ ಸ್ಥಿರಪಡಿಸಿದನಂತರ ಸುಮಾರು ಸಾವಿರಾರು ವರುಷಗಳವರಿಗೂ ಸ್ಮಾರ್ತರೇ ವಿಷ್ಣುದೇವಾಲಯಗಳಲ್ಲಿ ವೈದಿಕಾಗಮೋಕ್ತವಾದ ಪೂಜಾದಿಗಳನ್ನ ನಡೆಸುತ್ತಾಬಂದರು. ನಂತರ ಶ್ರೀ ರಾಮಾನುಜಾಚಾರ್ಯರವರು ಅವತಾರಮಾಡಿ ತಮ್ಮ ಮತಕ್ಕೆ ಸೇರಿಸಿಕೊಂಡವರಪೈಕಿ ಕೆಲವು ಸ್ಮಾರ್ತರು ವಿಷ್ಣುದೇವಾಲಯಗಳಲ್ಲಿ ಪೂಜಕರಾಗಿಯೂ, ಸ್ಥಾನೀಕ ಮುಂತಾದ ನೌಕರಿಯಲ್ಲಿಯೂ ಸೇರಿಕೊಂಡಿದ್ದರು. ಈ ನೌಕರಿಯಿಂದಲೇ ಅವರು ಜೀವಿಸುತ್ತಿದ್ದದ್ದರಿಂದ ಇವರಿಗೆ ಸಂಬಂಧಿಗಳಾಗಿಯೂ ಮಿತ್ರವರ್ಗದವರಾಗಿಯೂ ಇದ್ದ ಇತರ ಸ್ಮಾರ್ತಬ್ರಾಹ್ಮಣರು ಇವರ ಜೀವನಕ್ಕೆ ಉಪದ್ರಮಾಡುವದಕ್ಕೆ ಸಮ್ಮತವಿಲ್ಲದೆ ಇದ್ದದ್ದರಿಂದಲೂ ಇಂಥಾವರ ಪೂಜೆಯಿಂದ ದೇವರಸಾನ್ನಿಧ್ಯವು ಒಂದುವ್ಯಾಳೆ ಕಡಮೆಯಾದಾಗ್ಯೂ ಶ್ರೀ ಜಗದ್ಗುರುಗಳವರು ಆಗಾಗ್ಯೆ ದಯಮಾಡಿ ದೇವರನ್ನ ಪೂಜಿಸೋಣದರಿಂದ ಕಳಾಸಾನ್ನಿಧ್ಯವೃದ್ಧಿಯಾಗುತ್ತೆಂತಲೂ ಇದರಿಂದ ತಾವು ದೇವತಾಪ್ರಸಾದವನ್ನ ಪರಿಗ್ರಹಿಸಬಹುದೆಂದು ಯೋಚಿಸಿ ತಟಸ್ಥರಾಗಿದ್ದರು. ಇದರನ್ನ ಕುರಿತು ಆಕ್ಷೇಪಿಸದೆ ಅವರುಗಳು ದೇವತಾರಾಧನೆ ಮಾಡಿಕೊಂಡು ಬರುವದಕ್ಕೆ ಅವಕಾಶಕೊಟ್ಟದ್ದರಿಂದಲೇ ಶ್ರೀ ಜಗದ್ಗುರುಗಳವರಿಗೆ ಸಮಸ್ತ ಪ್ರಾಣಿಗಳಲ್ಲಿಯೂ ಇರತಕ್ಕ ದಯಾಳುತ್ವವೂ ಬ್ರಾಹ್ಮಣವರ್ಣಕ್ಕೆ ಸೇರಿದ ಮತಾಂತರಸ್ಥರಲ್ಲಿಯೂಕೂಡ ಇರತಕ್ಕ ಅನುರಾಗವು ಜಗದ್ವಿಖ್ಯಾತವಾಗಿದ್ದಾಗ್ಯೂ ಇಂಥಾ ಮಹಾನುಭಾವರು ರಾಜರು ಮತ್ತು ರಾಷ್ಟ್ರದ ಕ್ಷೇಮಾರ್ಥವಾಗಿ ಶಿವವಿಷ್ಣು ದೇವಾಯಗಳಲ್ಲಿರತಕ್ಕ ದೇವರುಗಳಿಗೆ ಮಾಡತಕ್ಕ ಪೂಜೆಯು ಬಹುಕಾಲದಾರಭ್ಯ ಆಚಾರವಾಗಿ ನಡೆದುಬರುವಂಥಾದ್ದಾದ್ದಾಗ್ಯೂ ಇದರನ್ನ ಈ ಪೂಜಕರಾದ ಶ್ರೀವೈಷ್ಣವರು ದ್ವೇಷಾಸೂಯದಿಂದ ಈಚೀಚೆಗೆ ಅಡ್ಡಿಮಾಡುವದಕ್ಕೆ ಉಪಕ್ರಮಿಸಿದರು. ಅಂಥಾಸಂದರ್ಭಗಳಲ್ಲೆಲ್ಲಾ ಆಯಾಯ ಕಾಲದಲ್ಲಿದ್ದ ರಾಜರು ಈ ಪೂಜಕರಿಗೆ ನಿರ್ಬಂಧಪಡಿಸಿ, ಶ್ರೀಜಗದ್ಗುರುಗಳವರು ಪೂಜೆಮಾಡುವದಕ್ಕೆ ಅವಕಾಶಗೊಳಿಸಿದ್ದಲ್ಲದೆ ಕೆಲವು ಸಂದರ್ಭಗಳಲ್ಲಿ ನೌಕರಿಯಿಂದ ಇವರನ್ನ ಬರತರ್ಫಮಾಡೋಣದರಮೂಲಕ ಶಿಕ್ಷೆಯನ್ನ ಕೊಟ್ಟಿರುತ್ತಾರೆ. ಈಗ್ಯೆ ೫೮ ವರ್ಷಗಳಮುಂಚೆ ಅಂದರೆ ವಿಳಂಬಿಸಂವತ್ಸರದಲ್ಲಿ ಶ್ರೀಜಗದ್ಗುರುನರಸಿಂಹ್ಮಭಾರತೀಸ್ವಾಮಿಗಳವರು ತಿರಮಕೂಡ್ಲು ನರಸೀಪುರದ ಶ್ರೀ ಗುಂಜಾನರಸಿಹ್ಮಸ್ವಾಮಿಗೆ ಪೂಜೆಮಾಡುವಕಾಲದಲ್ಲಿ ಅಡ್ಡಿಪಡಿಸುವದಕ್ಕೆಬಂದ ದೇವಸ್ಥಾನದ ನೌಕರರಿಗೆ ನಿರ್ಬಂಧಪಡಿಸಿ ಶ್ರೀಗಳವರು ಕ್ರಮವಾಗಿ ಪೂಜೆಮಾಡುವದಕ್ಕೆ ಅವಕಾಶ

ವಂಕೊಡಿಸಿದ್ದಲ್ಲದೆ ಅಡ್ಡಿಮಾಡಿದ ಶ್ರೀವೈಷ್ಣವರನ್ನು ನೌಕರಿಯಿಂದ ವಜಾಮಾಡಿ ಅವರು ಮಾಡುತ್ತಿದ್ದ ನೌಕರಿಯನ್ನು ಸ್ಮಾರ್ತರಿಂದ ನಡಿಸುತ್ತಾಬಂದರು. ಆ ಕಾಲದಲ್ಲಿ ಸಂಭವಿಸಿದ ಆಗಮೋಕ್ತವಾದ ರಥೋತ್ಸವಾದಿಗಳನ್ನೂ ಸಹ ಸ್ಮಾರ್ತರೇನಡೆಯಿಸಿರುತ್ತಾರೆ. ಎಂಬುವದು ತಿರುಮಕೂಡಲುನರಸೀಪುರ ತಾಲ್ಲೂಕ್ ಮತ್ತು ಕಮಿಷನರ ಹುಜೂರು ರಿಕಾರ್ಡಿನಲ್ಲಿಯೂ ದಾಖಲೆ ಇರುತ್ತೆಂದು ತಿಳಿಯಬರುವದರಿಂದ ಅದರನ್ನು ಪರಾಮರಿಸಿದಲ್ಲಿ ವ್ಯಕ್ತವಾಗುತ್ತೆ.

೫ ಶ್ರೀಜಗದ್ಗುರುಗಳವರು ಮೈಸೂರು ಸೀಮೆಯಲ್ಲಿರತಕ್ಕ ಪ್ರಸಿದ್ಧವಾದ ದೇವಾಲಯಗಳಲ್ಲಿರುವ ದೇವರುಗಳನ್ನ ಆರಾಧನೆ ಮಾಡುವದು ಮಾತ್ರವಲ್ಲದೆ ಮದ್ರಾಸು, ಬೊಂಬಾಯಿ, ಮುಂತಾದ ಪ್ರಸಿಡೆನ್ಸಿಯಲ್ಲಿರತಕ್ಕ ಆಗಮೋಕ್ತಾರಾಧನೆಗೆ ಒಳಪಟ್ಟಿರುವ ಪ್ರಸಿದ್ಧ ಶಿವ ವಿಷ್ಣುದೇವಾಲಯಗಳಲ್ಲಿಯೂ ದೇವತಾರಾಧನೆ ಮಾಡಿರುತ್ತಾರೆಂಬುವದು ಲೋಕಪ್ರಸಿದ್ಧವಾಗಿರುತ್ತೆ. ಅಂದರೆ ದಕ್ಷಿಣದೇಶದಲ್ಲಿ ಪ್ರಸಿದ್ಧವಾದ ದೇವಾಲಯಗಳು ತಿರುಪತಿ, ಶ್ರೀರಂಗ, ಕಾಂಚಿ, ಅನಂತಶಯನ, ದರ್ಭಶಯನ ಮುಂತಾದ ಸ್ಥಳಗಳಲ್ಲಿ ಅನೇಕಾವರ್ತಿ ಪೂಜೆ ಮಾಡಿರತಕ್ಕ ದಾಖಲೆಗಳಪೈಕಿ ಪ್ರಕೃತ ದೊರತಿರುವಷ್ಟರನ್ನೂ ಪರಾಂಬರಿಕೆ ಬಗ್ಯೆ ಹಾಜರ್ಮಾಡಿರುತ್ತೇವೆ. ಇದರಂತೆಯೆ ಈ ದೇಶದ ದೇವಾಲಯಗಳಲ್ಲಿ ಶ್ರೀಗಳವರು ದೇವತಾರಾಧನೆ ಮಾಡುವದಕ್ಕಾಗಿ ಅನೇಕ ರಾಜರು ಮತ್ತು ಅಧಿಕಾರಿಗಳು ಕೊಟ್ಟಿರತಕ್ಕ ಲಿಖಾವಟ್ಟುಗಳು ಸರಕಾರದಲ್ಲೂ, ಮತ್ತು ಶ್ರೀಮಠದಲ್ಲೂ, ಅನೇಕವಾಗಿರುತ್ತೆ. ಇವುಗಳಲ್ಲಿ ಪ್ರಕೃತ ನಮಗೆ ದೊರತಿರತಕ್ಕ ದಾಖಲೆಗಳು ಅಂದರೆ ಟೀಪ್ರೂಸುಲ್ತಾನರು ಕೊಟ್ಟಿರತಕ್ಕ ಒಂದೆರಡು ಸನ್ನದಿನ ನಕಲು, ಈ ಸಂಸ್ಥಾನದ ರಾಜ್ಯಭಾರ ಬ್ರಿಟೀಷ್ ಆಫೀಸರ ಅಧ್ಯಕ್ಷಕ್ಕೆ ಒಳಪಟ್ಟಿದ್ದಕಾಲ ಅಂದರೆ ೧೮೩೨ನೇ ಇಸವಿ ನಂದನಸಂವತ್ಸರದಲ್ಲಿ ಕಮಿಷನರ್ ಕ್ಯಾಷ್ ಮೇಜರ್ ಸಾಹೇಬರು ಕೊಟ್ಟಿರುವ ಒಟ್ಟು ಪರವಾನೆ ನಕಲನ್ನೂ, ಚೀಫ್ ಕಮಿಷನರ್ ಬೌರಿಂಗಸಾಹೇಬರವರು ಇಂಡಿಯಾ ಗೌರ್ನಮೆಂಟಿಗೆ ಬರದ ಲೆಟರು, ಅದರ ಜವಾಬಿನ ನಕಲನ್ನೂ, ಹೈದರಾಬಾದ್ ಸರಕಾರದವರು ಕೊಟ್ಟಿರುವ ಸನ್ನದಿನ ತರ್ಜುಮಾನಕಲನ್ನೂ ಸಹ ಇದರ ಸಂಗಡ ಹಾಜರ್ಮಾಡಿರುತ್ತೇವೆ. ಈ ಪೈಕಿ ನಂದನ ಸಂವತ್ಸರದ ಒಟ್ಟು ಪರವಾನೆಯಲ್ಲಿ ನಮೂದಿಸಿರುವ ಮದ್ರಾಸ್ ಬಂಗಾಳಾ ಗೌರ್ನರವರು ಕೊಟ್ಟಿರತಕ್ಕ ಲೆಟರುಗಳು ಮತ್ತು ದಿವಾನ್ ಪೂರ್ಣಯ್ಯನವರು ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರವರು ಕೊಟ್ಟಿರತಕ್ಕ ಸನ್ನದು ವಗೈರೆ ಕಾಗದಪತ್ರಗಳ ಸಂಖ್ಯೆ (೪೫) ಆಗುತ್ತೆ. ಇವುಗಳೆಲ್ಲಾ ಕಮಿಷನರ ಬಳಿಗೆ ಹಾಜರಾಗಿರುತ್ತೆಂಬುವದು ಸದರಿ ಒಟ್ಟು ಪರವಾನೆಯಿಂದಲೇ ಗೊತ್ತಾಗುತ್ತೆ. ಇವುಗಳು ವಾಪಸ್ ಆಗದೆ ಚೀಫ್‌ಕಮಿಷನರ ಆಫೀಸ್ ರಿಕಾರ್ಡಿನಲ್ಲಿರುತ್ತೆಂಬದಾಗಿ ಕೇಳುತ್ತೇವೆ. ಅವುಗಳನ್ನ ಪರಾಂಬರಿಸಬೇಕೆಂದು ಬೇಡುತ್ತೇವೆ.

೬ ಮೇಲೆ ನಮೂದಿಸಿರತಕ್ಕ ರಿಕಾರ್ಡುಗಳಿಂದ ಶ್ರೀ ಶೃಂಗೇರಿ ಜಗದ್ಗುರುಗಳವರಿಗೆ ಪ್ರಕೃತದಲ್ಲಿ ಪಾಂಚರಾತ್ರವೈಖಾನಸಾದಿ ಆಗಮೋಕ್ತವಾಗಿ ಆರಾಧಿಸಲ್ಪಡುತ್ತಿರುವ ಶಿವವಿಷ್ಣು ದೇವಾಲಯಗಳಲ್ಲಿರುವ ದೇವರುಗಳಿಗೆ ಸ್ವತಃ ಪೂಜೆಮಾಡತಕ್ಕ ವಿಶೇಷಬಾಧ್ಯತೆಯು ಮತ್ತು ಹಕ್ಕು ಉಂಟೆಂಬುವದು ರುಜುವಾತು ಆಗುವದು ಸರಿಯಷ್ಟೆ; ಪ್ರಕೃತ ಚರ್ಚೆಗೆ ಸಮ್ಮಂಧಪಟ್ಟ ಶ್ರೀರಂಗಪಟ್ಟಣದ ರಂಗನಾಥಸ್ವಾಮಿಯವರಿಗೆ ಶ್ರೀರುಗಳವರು ಸ್ವತಃ ಪೂಜೆಮಾಡುವ ಹಕ್ಕು ಉಂಟೆಂಬುವದಕ್ಕೆ ಮೇಲೆ ಹೇಳಲ್ಪಟ್ಟ ಟೀಪ್ರೂಸುಲ್ತಾನರವರ ಸನ್ನದೇ ಸಾಕ್ಷಿಯಾಗಿರುವದಲ್ಲದೆ, ಇದಕ್ಕೆ ಅನುಸಾರವಾಗಿ ಪೂಜೆ ಮಾಡುತ್ತಿದ್ದರೆಂಬ ಸಂಗತಿಯನ್ನು ಹೇಳತಕ್ಕಂಥಾ ದೊಡ್ಡವಂಶೀಯರಾದ ಮಹಮ್ಮದೀಯರ್ ದೊಡ್ಡಮನುಷ್ಯರು ಅನೇಕರಿರುತ್ತಾರೆ. ಅವರುನ್ನೂ ಸಾಕ್ಷ್ಯ ಕೊಡುವದರಲ್ಲಿ ಅಭ್ಯಂತರವಿರುವದಿಲ್ಲ. ಇದು ಅವಶ್ಯಕವಾದ್ದೆಂದು ತೋರುವಪಕ್ಷದಲ್ಲಿ ಗೌರ್ನಮೆಂಟಿನವರು ಅವರಿಂದಲೂ ತಿಳುಕೊಳ್ಳಬಹುದು.

೭ ಶ್ರೀರಂಗಪಟ್ಟಣದ ಶ್ರೀ ರಂಗನಾಥದೇವರನ್ನ ಇಂಥಾವರು ಇಂಥಾಕಾಲದಲ್ಲಿ ಈ ರೀತಿಯಾಗಿ ಪ್ರತಿಷ್ಠೆ ಮಾಡಿದ ಸಂಗತಿ ನಿಸ್ಸಂದೇಹವಾಗಿ ಗೊತ್ತಾಗದೇ ಇದ್ದಾಗ್ಯೂ, ಇದು ಬಹಳ ಪುರಾತನವಾದದ್ದು. ಕೆಲವು ಶತಮಾನಗಳಕೆಳಗೆ ಗೌತಮಮಹರ್ಷಿಗಳು ಪೂಜಿಸುತ್ತಿದ್ದರೆಂಬುವದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರಷ್ಟೆ; ಮಹರ್ಷಿಗಳು ತಾಂತ್ರಿಕಾಗಮದೀಕ್ಷಾಬದ್ಧರಾದವರಲ್ಲ; ಪಾಷಂಡಿಗಳೂ ಅಲ್ಲ. ಇವರುಗಳು ವೈದಿಕಾಗಮದಲ್ಲಿ ಅರ್ಚನೆ ಮಾಡುತ್ತಿದ್ದರೆಂಬುವದು ಶಾಸ್ತ್ರಸಿದ್ಧವಾಗಿರುತ್ತೆ. ಅದನ್ನ ಅನುಸರಿಸಿಯೇ ಶ್ರೀಮಚ್ಛಂಕರಭಗವತ್ಪಾದರವರು ಈದೇವರನ್ನ ಅರ್ಚಿಸಿದರು. ಅದರಂತೆ ಅವರ ಪೀಠವನ್ನಲಂಕರಿಸಿದ ಗುರುಪರಂಪರೆಯವರೆಲ್ಲಾ ಪೂಜಿಸುತ್ತಾಬಂದರು. ಈ ಗೌತಮ ಮಹರ್ಷಿಗಳಿಗೆ ಗೋಹತ್ಯಾಪವಾದ ಸಂಘಟನೆ ಮಾಡಬೇಕೆಂದು ಕೆಲವು ದುಷ್ಟರಾದ ಬ್ರಾಹ್ಮಣರು ನಡೆಸಿದ ತಂತ್ರ ಅವರಿಗೆ ತಿಳಿದು ಇಂಥಾ ದುಷ್ಟಕೃತ್ಯ

ವನ್ನು ಮಾಡಿದ ಬ್ರಾಹ್ಮಣರು ಇವರ ವಂಶೀಯರು ತಪ್ತಮುದ್ರಾಂಕಿತರಾಗಿ ಪಾಂಚರಾತ್ರ ಶೈವಾದ್ಯಾಗಮದೀಕ್ಷಾಬದ್ಧರಾಗಿ ಕೆಟ್ಟು ಹೋಗಲಿ, ಎಂದು ಶಾಪಕೊಟ್ಟರೆಂತ ಗ್ರಂಥಗಳು ಇರೋಣದರಿಂದ ಗೌತಮಋಷಿಗಳ ಪಾಂಚರಾತ್ರಾಗಮ ದೀಕ್ಷಾಬದ್ಧರಲ್ಲವೆಂಬುವದು ಸ್ಪಷ್ಟವಾಗುತ್ತೆ.

೮ ಶ್ರೀರಂಗಪಟ್ಟಣದ ಶ್ರೀರಂಗನಾಥದೇವರಿಗೆ ಹಿಂದೂಮತಕ್ಕೆ ಸೇರಿದ ನಾಲ್ಕು ವರ್ಣದವರೂ ಭಕ್ತರು ಈಗ ಚರ್ಚೆಮಾಡುತ್ತಿರುವ ಶ್ರೀವೈಷ್ಣವರು ಈ ಭಕ್ತಸಮುದಾಯವೆಂಬ ಸಮುದ್ರದಲ್ಲಿ ಕೆಲವು ತುಂತುರೆಳಾಗಿರುತ್ತಾರೆ. ಆದಾಗ್ಯೂ ತಮ್ಮ ಮತಸ್ಥರು ಪ್ರಕೃತದಲ್ಲಿ ಪೂಜಕರಾಗಿರುತ್ತಾರಷ್ಟೆ ಆದ್ದರಿಂದ ದೇವರ ತಮ್ಮ ಸ್ವಂತ ಪದಾರ್ಥವೆಂದು ಭಾವಿಸುವ ದುರಭಿಮಾನ ವಿನಹ ಇತರ ಭಕ್ತರಿಗೆ ಇರತಕ್ಕದ್ದಕ್ಕಿಂತಲೂ ಬ್ಯಾರೆ ಯಾವ ವಿಧವಾದ ವಿಶೇಷ ಬಾಧ್ಯತೆಯೂ ದೇವರಲ್ಲಿ ಇವರಿಗೆ ಇರುವಹಾಗೆ ತೋರುವದಿಲ್ಲ. ಈ ದೇವಾಲಯವು ಸಂಸ್ಥಾನಕ್ಕೆ ಸೇರಿದ್ದು, ಸರ್ಕಾರದ ಜನರಲ್ ರೆವಿನ್ಯೂಯಿಂದ ಈ ದೇವರ ಆರಾಧನೇಖರ್ಚು ಸಲ್ಲುತ್ತಾಯಿಥೆ. ದೇವರಿಗೆ ಧರಿಸತಕ್ಕ ವಸ್ತ್ರಾಭರಣಗಳಲ್ಲಿ ಪ್ರಾಯಶಃ ಮೈಸೂರು ಸಂಸ್ಥಾನದ ಮಹಾರಾಜರವರ ಸಂತತಿಯಿಂದಲೇ ಕೊಡಲ್ಪಟ್ಟಿದ್ದಾಗಿರುತ್ತೆ. ಭಕ್ತರಿಂದ ಕೊಡಲ್ಪಟ್ಟಿದ್ದು ಅತ್ಯಲ್ಪವಾದ್ದಾಗ್ಯೂ ಅದೂ ಸರ್ಕಾರಕ್ಕೆ ಸೇರಿದ್ದಾಗಿರುತ್ತೆ ಹೀಗೆ ಸಂಸ್ಥಾನಕ್ಕೆ ಒಳಪಟ್ಟ ಬಾಧ್ಯತೆಯನ್ನು ಶ್ರೀವೈಷ್ಣವರಲ್ಲಿ ಕೆಲವರು ಮಾತ್ರ ತವಿಗೇನೇ ಇರುವಂತ ಎಣಿಸಿ ಗದ್ದಲ ಮಾಡುವದು ಎಷ್ಟರಮಟ್ಟಿಗೆ ಊರ್ಜಿತವಾದತಕ್ಕದ್ದೋ ಅದರನ್ನ ಗೌರ್ನಮೆಂಟಿನವರೇ ಆಲೋಚಿಸಬೇಕು. ಈ ಕಾರಣದಿಂದ ಇವರಿಗೆ ವಿಶೇಷ ಬಾಧ್ಯತೆ ಏನೂ ಇಲ್ಲದೇ ಇದ್ದಾಗ್ಯೂ ಜಿಪ್ಸಸಾಧಾರಣ ಎಮೆಯಂದು ಇಟ್ಟುಕೊಳ್ಳುವ ಸಂದರ್ಭದಲ್ಲಿಯೂ ಇವರ ಮತಸ್ಥಾಪಕರಾದ ಶ್ರೀರಾಮಾನುಜಾಚಾರ್ಯರವರ ಅವತಾರಕ್ಕಿಂತ ಸಾವಿರಾರು ವರುಷಗಳ ಹಿಂದ ಶ್ರೀಮಚ್ಛಂಕರ ಭಗವತ್ಪಾದರವರು ಅವರ ಸ್ಥಾಪಿಸಿದಂಬ ಅಂಶವನ್ನ ಶ್ರೀವೈಷ್ಣವರು ಒಪ್ಪಿಕೊಳ್ಳದೇ ಇದ್ದರೆ ವಿಧಿ ಇಲ್ಲವಷ್ಟೆ ಅದರಿಂದ ಶ್ರೀಜಗದ್ಗುರುಗಳವರಿಗೆ ಇರತಕ್ಕ ಬಾಧ್ಯತೆಯು ಇವರಿಗಿಂತ ಸಾವಿರಾರು ವರುಷಗಳಷ್ಟುಗೂ ಪ್ರಾಚೀನವಾಗಿರುತ್ತೆಂಬುವದು ಸಾಮಾನ್ಯವಾಗಿ ಸರ್ವರಿಗೂ ತಿಳಿಯಬರುವಂಥಾ ಅಂಶವು ಇವರಿಗೆ ತಿಳಿಯದೇ ಹೋದದ್ದು ಮಾತ್ರವಲ್ಲದೆ, ಶ್ರೀ ಜಗದ್ಗುರುಗಳವರಿಗೆ ಹಕ್ಕೇ ಇಲ್ಲವೆಂದು ಹೇಳುವದು ಪರ್ಯಾಲೋಚನೆಯಿಲ್ಲದವರಾಗಿ ತೋರುತ್ತೆ ಈ ಪ್ರಕೃತ ಸಂದರ್ಭದಲ್ಲಿ ಇವರು ಮಾಡತಕ್ಕ ವ್ಯಾಜ್ಯವು ಊರ್ಜಿತವಾಗದೇ ಇದ್ದಾಗ್ಯೂ ಮುಂದೆ ಮಾಡಬೇಕಾಗುವ ಇಂಥಾ ವ್ಯಾಜ್ಯಗಳಿಗೆ ತಾವು ಫಿರ್ಯಾದಿಗಳಾಗಿ ನಿಲ್ಲುವದಕ್ಕೆ ಇದು ಬಾಧ್ಯತೆಯನ್ನ ಕೊಡತಕ್ಕ ಪ್ರಸೀಡೆಂಟಾಗುವ ಹಾಗೆ ಮಾಡಬೇಕಾಗಿರುತ್ತೆಂದು ಭಾವಿಸಿರಬಹುದಾಗಿ ತೋರುತ್ತೆ.

೯ ಶ್ರೀರಂಗನಾಥದೇವರಿಗೆ ಸುಪ್ರೀಂ ಕೋರ್ಟು ಆಗಬೇಕೆಂದು ವ್ಯಾಜ್ಯವಾಡುವವರ ಸಂಖ್ಯೆಯು ಈ ದೇವರಲ್ಲಿ ಅಭಿಮಾನವಿರತಕ್ಕ ಮತ್ತು ಅವರಿಗೆ ಸಮಾನವಾಗಿ ಹಕ್ಕು, ಬಾಧ್ಯತೆವುಳ್ಳ ಇತರ ಭಕ್ತರ ಸಮುದಾಯ ಸಂಖ್ಯೆಗೂ ಮೊಕಾಬಿಲೆ ನೋಡಿದರೆ ಒಟ್ಟು ಸಮುದಾಯದಲ್ಲಿ ಲಕ್ಷ ಪ್ರಜೆಗ ವ್ಯಾಜ್ಯಮಾಡುವರು ಒಬ್ಬರೆಂದೂ ಕೂಡ ಗಣಿಸುವದಕ್ಕ ಸಾಲದ್ದಾಗಿರುತ್ತೆ. ಆದ್ದರಿಂದ ಶ್ರೀಜಗದ್ಗುರುಗಳವರು ಆಗಾಗ್ಯೆ ಶ್ರೀರಂಗನಾಥದೇವರ ಆರಾಧನೆಮಾಡತಕ್ಕದ್ದು ಸರ್ವಜನ ಸಮ್ಮತವಾದದೆಂದು ಸರ್ಕಾರದವರು ಉದಾರಾಳವಾಗಿ ನಂಬತಕ್ಕದ್ದಾಗಿರುತ್ತೆ.

೧೦ ಮೇಲೆ ಹೇಳಲ್ಪಟ್ಟಿರುವ ಸಂಗತಿಗಳೆಲ್ಲಾ ಸರ್ಕಾರೀ ವ್ಯಾವಹಾರಿಕರೀತ್ಯಾ ಶ್ರೀಜಗದ್ಗುರುಗಳವರಿಗೆ ಶ್ರೀ ರಂಗನಾಥದೇವರನ್ನ ಆರಾಧಿಸತಕ್ಕ ವಿಷಯದಲ್ಲಿರತಕ್ಕ ವಿಶೇಷ ಬಾಧ್ಯತೆಯನ್ನ ತೋರಿಸತಕ್ಕವುಗಳಾಗಿ ಇರುತ್ತವೆ. ಈ ಸಂಬಂಧವಾದ ಶಾಸ್ತ್ರಾಧಾರ ಅಪ್ರತಿಹತವಾದ ಸದಾಚಾರ ಮುಂದಿದ್ದರನ್ನ ಕೆಳಗಡೆಯಲ್ಲಿ ಶೃತಪಡಿಸಿರುತ್ತೇವೆ ಏನಂದರೆ --

೧೧ ಶ್ರೀಜಗದ್ಗುರುಗಳವರು ಶ್ರೀ ರಂಗನಾಥದೇವರಿಗೆ ಅರ್ಚನೆ ಮಾಡತಕ್ಕದ್ದು ಪಾಂಚರಾತ್ರಾಗಮಕ್ಕೆ ವಿರುದ್ಧವಾಗಿರುತ್ತೆಂದು ಫಿರ್ಯಾದಿಗಳು ಹೇಳುವ ಅಂಶವನ್ನ ಖಂಡನೆಮಾಡತಕ್ಕ ಶಾಸ್ತ್ರ ಮತ್ತು ಆಚಾರವು ಹೇರಳವಾಗಿರುತ್ತೆ. ಆ ವಿಚಾರವನ್ನ ಪೂರ್ವಪಕ್ಷ ಸಮಾಧಾನ ಸಿದ್ಧಾಂತರೂಪವಾಗಿ ಶೃತಪಡಿಸಲು ಬಹಳ ವಿಳಂಬವಾಗುತ್ತಾದ್ದರಿಂದ ಸೂಕ್ಷ್ಮವಾಗಿ ಸಾಮಾನ್ಯಾಂಶಗಳನ್ನ ತಿಳಸದೆ ಇದ್ದರೆ ವಿಧಿಯಿಲ್ಲವಾಗಿ ತಿಳಿಸುವದೇನಂದರೆ:-- ಶೃತಿಸ್ಮೃತಿಗಳಲ್ಲಿ ಪರಸ್ಪರ ಭಿನ್ನಾಭಿಪ್ರಾಯಬಂದಾಗ್ಯೆ ಶೃತಿಯೇ ಪ್ರಬಲವಾದದ್ದೆಂತಲೂ, ತದ್ವತ್ ಸ್ಮೃತಿ ಪುರಾಣಗಳಲ್ಲಿ ಸ್ಮೃತಿಬಲವಾದ್ದೆಂತಲೂ ಪುರಾಣ ಇತಿಹಾಸಾದಿಗಳಲ್ಲಿ ಪುರಾಣಬಲವಾದ್ದೆಂತಲೂ ಹೀಗೆ ಎಲ್ಲಾದ್ದರಲ್ಲಿಯೂ ಭಿನ್ನಾಭಿಪ್ರಾಯಗಳು ಬಂದಕಾಲದಲ್ಲಿ ಮಹಾಜನಗಳು ಅನುಸರಿಸಿ ನಡೆಸಿಕೊಂಡು

ಬರುವ ಆಚಾರವೇ ಒಲಿಷ್ಠವಾದದ್ದೆಂತಲೂ ಈ ಆಚಾರದಲ್ಲಿ ನವೀನಗಳು ಪ್ರಾಚೀನಗಳು ಇರುವ್ಪಟ್ಟ ಇವುಗಳಲ್ಲಿ ಪುರಾತನಕ್ಕೆ ಪ್ರಾಶಸ್ತ್ಯವಿರುತ್ತೆಂಬುವದು ಸಾಮಾನ್ಯವಾಗಿ ಸರ್ವರಿಗೂ ತಿಳಿದಿರುತ್ತೆ. ಶ್ರೀವೈಷ್ಣವರು ಶ್ರೀರಂಗನಾಥದೇವರಿಗೆ ತಾವು ನಡಿಸತಕ್ಕ ಆರಾಧನೆಯು ಪಾಂಚರಾತ್ರಾಗಮಕ್ಕೆ ಒಳಪಟ್ಟಿರುತ್ತೆಂದುನ್ನೂ ಇದು ಶ್ರೀವೈಷ್ಣವರು ದೇವಾಲಯಕ್ಕೆ ಸೇರಿದಾರಭ್ಯ ಆಚರಣೆಗೆ ತಂದಿರುತ್ತಾರೆಂತಲೂ ಗೊತ್ತಾಗಿರೋಣದರಿಂದ ಇವರ ಮತವೇ ನೂತನವಾಗಿರುವಲ್ಲಿ ಇವರ ಆಚಾರ ಪುರಾತನವಾಗಲಾರದಷ್ಟೆ; ಅದ್ದರಿಂದ ಇವರ ಆಚಾರವು ನವೀನಾಚಾರವೇ ಸರಿಯೆಂದು ಧಾರಾಳವಾಗಿ ಹೇಳಬಹುದು. ಶ್ರೀಜಗದ್ಗುರುಗಳವರು ಮಾಡತಕ್ಕ ಆರಾಧನೆಯು ಶ್ರೀರಾಮಾನುಜ ಮತಕ್ಕಿಂತ ಸಾವಿರಾರು ವರ್ಷಗಳ ಹಿಂದಿನಿಂದಾ ಆಚರಣೆಯಲ್ಲಿ ಇರುತ್ತಾಗಿ ಇದು ಪ್ರಾಚೀನವಾದ ಆಚಾರವೆಂಬುವದು ಸ್ಪಷ್ಟವಾಗಿರುತ್ತೆ. ಮತ್ತು ಶ್ರೀಜಗದ್ಗುರುಗಳವರು ಪರಮಹಂಸಾಶ್ರಮದಲ್ಲಿ ಮಹರ್ಷಿಗಳಂತೆ ಇರತಕ್ಕವರುಗಳಾದ್ದರಿಂದ ಇತರ ಗೃಹಸ್ಥಾಶ್ರಮಗಳಂತೆ ದೀಕ್ಷಾವಿಧಿಗಳಿಗೆ ಬದ್ಧರಾಗುವದಿಲ್ಲ. ಇವರು ಎಲ್ಲಾ ದೀಕ್ಷಿತರಿಗಿಂತಲೂ ಶ್ರೇಷ್ಠವಾದವರು. ಮತ್ತು ಪಾಂಚರಾತ್ರಾಗಮದೀಕ್ಷೆಗೆ ಬದ್ಧರಲ್ಲದ ಗೌತಮಮಹರ್ಷಿಗಳು ಈ ದೇವರನ್ನ ಆರಾಧಿಸುತ್ತಾ ಇದ್ದರೆಂಬುವದು ಗ್ರಂಥಗಳಲ್ಲಿ ಹೇಳಲ್ಪಟ್ಟಿರುವವಲ್ಲದೆ ಇದರನ್ನ ಶ್ರೀವೈಷ್ಣವರೇ ಒಪ್ಪಿಕೊಳ್ಳುತ್ತಾರೆ. ಆಗ್ಯೆ ಇವರದೆಂದು ಹೇಳಿಕೊಳ್ಳುವ ಶ್ರೀರಂಗನಾಥದೇವರು ಹ್ಯಾಗೆ ಅಶುಚಿ ಆಗಲಿಲ್ಲವೋ ಅದರಂತೆಯೆ ಗೌತಮಮಹರ್ಷಿಗಳು ಮಾಡುತ್ತಿದ್ದ ವಿಧಿಯನ್ನ ಅನುಸರಿಸಿ ಶ್ರೀಜಗದ್ಗುರುಗಳವರ ಪರಂಪರೆಯವರೆಲ್ಲಾ ಆರಾಧಿಸತಕ್ಕದ್ದು ಅಶುಚಿತ್ವವನ್ನುಂಟುಮಾಡತಕ್ಕದ್ದಲ್ಲವೆಂಬುವದು ಮತ್ತು ಆದಿಸನಕರಿಂದ ಪ್ರತಿಷ್ಠಿತವಾದ ಬಿಂಬಕ್ಕೆ ಮಾಡತಕ್ಕ ಆರಾಧನೆಯಂತೆ ಶ್ರೀವೈಷ್ಣವರು ಈ ಅನಾದಿ ದೇವರಿಗೆ ಮಾಡುವ ಆರಾಧನೆಯಿಂದ ಉಂಟಾದ ದೋಷಗಳನ್ನ ಪರಿಹಾರ ಮಾಡತಕ್ಕ ಶ್ರೀಜಗದ್ಗುರುಗಳವರು ಮಾಡತಕ್ಕ ಆರಾಧನಾಕ್ರಮವು ಸದಾಚಾರವಾದ್ದೆಂತಲೂ ಅಲೋಚನಾಪರರಾದವರು ತೀರ್ಮಾನಿಸದೆ ಇರಲಾರರು. ಈ ಮೇರೆ ಲೌಕಿಕಪಾರಮಾರ್ಥಿಕ ಎರಡುವಿಧವಾದ ನ್ಯಾಯಗಳು ಅಪೇಕ್ಷಿಸುವ ಸಮಾಧಾನರೂಪವಾದ ಸಂಗತಿಗಳನ್ನೆಲ್ಲಾ ಶೃತಪಡಿಸಿರುತ್ತೇವೆ.

೧೨. ಮೇಲೆ ವಿವರಿಸಲ್ಪಟ್ಟ ಗ್ರಂಥಗಳು, ರಾಜರು ಮುಂತಾದವರು ಕೊಟ್ಟಿರತಕ್ಕ ಸನ್ನದಿನ ದಾಖಲೆಗಳು ದೃಷ್ಟಾಂತಗಳು, ಚಿರಕಾಲಾರಭ್ಯ ನಡೆದುಬರುವ ಮಾಮೂಲು ಶಾಸ್ತ್ರಸಮ್ಮತವಾದ ಆಚಾರವು, ಸರ್ವಜನ ಸಮ್ಮತಿಯೂ, ಇವುಗಳೆಲ್ಲಾ ಶ್ರೀರಂಗನಾಥದೇವರನ್ನ ಆರಾಧಿಸತಕ್ಕದ್ದಕ್ಕೆ ಶ್ರೀಜಗದ್ಗುರುಗಳವರಿಗೆ ಇರತಕ್ಕ ವಿಶೇಷ ಹಕ್ಕುಬಾಧ್ಯತೆಗಳನ್ನ ಸ್ಥಿರಪಡಿಸುತ್ತವೆ. ಇವುಗಳನ್ನೆಲ್ಲಾ ಘನವನ್ನ ಹೊಂದಿದ ಕೌನ್ಸಿಲ್ ಸಭೆಯವರು ಪರ್ಯಾಲೋಚಿಸತಕ್ಕ ಸಮಯದಲ್ಲಿ ಶ್ರೀಜಗದ್ಗುರುಗಳವರು ಈ ಮೇರೆ ದೇವತಾರಾಧನೆ ಮಾಡತಕ್ಕದ್ದು ಆ ಮಹಾನುಭಾವರ ಸ್ವಪ್ರಯೋಜನಕ್ಕಾಗಿ ಅಲ್ಲ. ರಾಜರು ಮತ್ತು ರಾಷ್ಟ್ರದ ಕ್ಷೇಮಾರ್ಥವಾಗಿ ಅವರುಗಳ ಅಪೇಕ್ಷೆಯನ್ನು ನೆರವೇರಿಸುವದಕ್ಕಾಗಿ ಮಾಡುತ್ತಾರೆ ಎಂಬುವದರನ್ನು ಮನಸ್ಸಿನಲ್ಲಿಟ್ಟುಕೊಂಡು ಭಾರಿಭಾರಿಗೂ ದುಷ್ಟರು ತೊಂದರೆ ಕೊಡುವದಕ್ಕೆ ಆಸ್ಪದವಿಲ್ಲದಂತೆ ನ್ಯಾಯವಾಗಿಯೂ, ಖಂಡಿತವಾಗಿಯೂ, ಇರುವ ತೀರ್ಮಾನವನ್ನ ಅಪ್ಪಣೆ ಕೊಡಿಸಬೇಕೆಂದು ವಿನಯಪೂರ್ವಕವಾಗಿ ಬರಮಾಡಿಕೊಂಡ ಅರ್ಜಿ.

1 [illegible]

2 [illegible]

3 [illegible]

4 [illegible]

5 [illegible]

6 [illegible]

7 [illegible]

ಜಯಲಕ್ಷ್ಮೀವಿಲಾಸಮುದ್ರಾಕ್ಷರಶಾಲಾ ದೊಡ್ಡಪೇಟೆ ಮೈಸೂರು.

[illegible]

12. [illegible]

13 [illegible]

14 [illegible]

15 [illegible]

16 [illegible]

17 [illegible]

18 [illegible]

19 [illegible]

20 [illegible]

21 Venkatagiriyappa

22 [illegible]

23 [illegible]

24 [illegible]

ಲಾರ್ಡ್ ವೆಲ್ಲೆಸ್ಲಿಸಾಹೇಬರವರು ಕೊಟ್ಟಿರುವ ೩೧೧ನೇ ನಂಬರು ಹುಕ್ಕುಂ. ೧೭೯೩ನೇ ಪ್ರಮಾದೀಚ ಸಂವತ್ಸರದ ವೈಶಾಖ ಶು॥ ೪ ಯಲ್ಲೂ ಮೈಲಾಪುರಿಚನ್ನಪಟ್ಟಣದ ಗವರ್ನರ್ ಲಾರ್ಡ್ ಹೋಬಾರ್ಟ್ ಸಾಹೇಬರವರು ಕೊಟ್ಟಿರುವ ೯೯೬ನೇ ನಂಬರು ಹುಕ್ಕುಂ. ಸದರಿ ವೈಶಾಖ ಬ॥ ೫ ಯಲ್ಲೂ ವೆಬ್ ಸಾಹೇಬರು ಕೊಟ್ಟಿರುವ ೯೯೪ನೇ ನಂಬರು ಹುಕ್ಕುಂ. ಸದರಿ ಜ್ಯೇಷ್ಠ ಶು॥ ೭ ಯಲ್ಲೂ ಜಾರ್ಜ್‌ಸಾಹೇಬರು ಕೊಟ್ಟಿರುವ ೨೧೪ನೇ ನಂಬರು ಹುಕ್ಕುಂ. ಸದರಿ ಪ್ರಮಾದೀಚ ಸಂವತ್ಸರದ ಕಾರ್ತೀಕಮಾಸದಲ್ಲಿ ದೊಡ್ಡನವಾಬರಾದ ಹೈದರಲ್ಲಿ ಸಾಹೇಬರು ಕೊಟ್ಟಿರುವ ಸನ್ನದು. ೧೭೯೪ನೇ ಜೂನ್ ೨೪ಕ್ಕೆ ಸರಿಯಾದ ಆನಂದಸಂವತ್ಸರದ ಜ್ಯೇಷ್ಠಮಾಸದಲ್ಲಿ ಸದರಿ ಜಾರ್ಜ್‌ಸಾಹೇಬರವರು ಕೊಟ್ಟಿರುವ ೨೪೨ನೇ ನಂಬರು ಹುಕ್ಕುಂ. ೧೭೯೫ನೇ ಇಸವಿ ಜುಲೈ ೧೯ಕ್ಕೆ ಸರಿಯಾದ ರಾಕ್ಷಸ ಸಂವತ್ಸರದ ಆಷಾಢಮಾಸದಲ್ಲಿ ಮೈಲಾಪುರಿಚನ್ನಪಟ್ಟಣದ ಗವರ್ನರ್ ಲಾರ್ಡ್ ಹೋಬಾರ್ಟ್ ಸಾಹೇಬರು ಕೊಟ್ಟಿರುವ ೮೧೪ನೇ ನಂಬರು ಹುಕ್ಕುಂ. ೧೭೯೬ನೇ ಇಸವಿ ಫೆಬ್ರವರಿ ೧೫ರಲ್ಲೂ ಸದರಿ ಹೋಬಾರ್ಟ್‌ಸಾಹೇಬರು ಕೊಟ್ಟಿರುವ ೨೨ನೇ ನಂಬರು ಹುಕ್ಕುಂ. ೧೭೯೭ನೇ ಇಸವಿ ಆಗಸ್ಟ್ ೨೬ಕ್ಕೆ ಸರಿಯಾದ ಪಿಂಗಳ ಸಂವತ್ಸರದ ಶ್ರಾವಣಮಾಸದಲ್ಲಿ ಮೈಲಾಪುರಿಚನ್ನಪಟ್ಟಣದ ಗವರ್ನರ್ ಲಾರ್ಡ್ ಕ್ಲೈವ್‌ಸಾಹೇಬರು ಕೊಟ್ಟಿರುವ ೯೯೮ನೇ ನಂಬರು ಹುಕ್ಕುಂ. ೧೭೯೮ನೇ ಮಾರ್ಚ್ ೨೪ಕ್ಕೆ ಸರಿಯಾದ ಪಿಂಗಳ ಸಂವತ್ಸರದ ಫಾಲ್ಗುಣಮಾಸದಲ್ಲಿ ಸರ್ವ ಯಜಮಾನರಾದ ಬಂಗಾಳಾ ಗವರ್ನರ್‌ಜನರಲ್ ಲಾರ್ಡ್ ಮಾರ್ನಿಂಗ್ಟನ್ ಸಾಹೇಬರು ಕೊಟ್ಟಿರುವ ೩೨೬ನೇ ನಂಬರು ಹುಕ್ಕುಂ. ೧೭೯೮ನೇ ಮೆ ೧೬ಕ್ಕೆ ಸರಿಯಾದ ಕಾಳಾಯುಕ್ತಿ ಸಂವತ್ಸರದ ವೈಶಾಖಮಾಸದಲ್ಲಿ ಲಾರ್ಡ್‌ಕ್ಲೈವ್‌ಸಾಹೇಬರು, ಲಾರ್ಡ್ ಮಾರ್ನಿಂಗ್ಟನ್‌ಸಾಹೇಬರೂ ಸಹ ಕೊಟ್ಟಿರುವ ೧೮೪ನೇ ನಂ॥ ಹುಕ್ಕುಂ. ೧೭೯೯ನೇ ಜನವರಿ ೧೪ಕ್ಕೆ ಸರಿಯಾದ ಕಾಳಾಯುಕ್ತಿ ಸಂವತ್ಸರದ ಪುಷ್ಯಮಾಸದಲ್ಲಿ ಜನರಲ್ ಹಾರಿಸ್‌ಸಾಹೇಬರವರು ಕೊಟ್ಟಿರುವ ೧೧೧ನೇ ನಂಬರು ಹುಕ್ಕುಂ. ಇದೇ ಪುಷ್ಯ ಬ॥ ೧೪ರಲ್ಲೂ ವೆಬ್‌ಸಾಹೇಬರು ಕೊಟ್ಟಿರುವ ೩೪೮ನೇ ನಂಬರು ಹುಕ್ಕುಂ. ೧೭೯೯ನೇ ಏಪ್ರಿಲ್ ೧೬ಕ್ಕೆ ಸರಿಯಾದ ಸಿದ್ಧಾರ್ಥಿ ಸಂವತ್ಸರದ ಚೈತ್ರಮಾಸದಲ್ಲಿ ಲಾರ್ಡ್‌ಕ್ಲೈವ್‌ಸಾಹೇಬರ ಹುಕ್ಕುಂ ಮೇರಿಗೆ ವೆಬ್‌ಸಾಹೇಬರು ಕೊಟ್ಟಿರುವ ೮೧೬ನೇ ನಂಬರು ಹುಕ್ಕುಂ. ೧೭೯೯ನೇ ಮೇ ೧೪ಕ್ಕೆ ಸರಿಯಾದ ಸಿದ್ಧಾರ್ಥಿಸಂವತ್ಸರದ ವೈಶಾಖಮಾಸದಲ್ಲಿ ಜನರಲ್ ಹಾರಿಸ್‌ಸಾಹೇಬರು ಕೊಟ್ಟಿರುವ ೮೬ - ೩೩ನೇ ನಂಬರು ಹುಕ್ಕುಂ. ೧೭೯೯ನೇ ಜೂನ್ ೩೦ರಲ್ಲೂ ಸರ್ವ ಯಜಮಾನರಾದ ಬಂಗಾಳಾ ಗವರ್ನರ್‌ಜನರಲ್ ಲಾರ್ಡ್ ಮಾರ್ನಿಂಗ್ಟನ್‌ಸಾಹೇಬರವರು ಕೊಟ್ಟಿರುವ ೫೧೬ನೇ ನಂಬರು ಹುಕ್ಕುಂ. ಈ ಹುಕ್ಕುಂಗಳನ್ನು ಅನುಸರಿಸಿ ಪ್ರಭವಸಂವತ್ಸರದ ಆಶ್ವೀಜ ಶು॥ ೩ ಮುಕ್ಕಾಂನಲ್ಲೂ, ಸದರಿ ಪ್ರಭವಸಂವತ್ಸರದ ಮಾರ್ಗಶಿರ ಬ॥ ೧೩ ಭಾನುವಾರದ ಮುಕ್ಕಾಂನಲ್ಲೂ, ವಿಭವಸಂವತ್ಸರದ ಮಾರ್ಗಶಿರ ಶು॥ ೩ ಭಾನುವಾರದ ಮುಕ್ಕಾಂನಲ್ಲೂ ಸಹ ದಿವಾನ್ ಪೂರ್ಣಯ್ಯನವರು ಕೊಟ್ಟಿರುವ ಪರವಾನೆ ಮತ್ತು ರಹದಾರಿ. ೧೮೧೩ನೇ ಡಿಶಂಬರು ೨೩ರಲ್ಲೂ, ೧೮೧೮ನೇ ನವಂಬರು ೨೦ರಲ್ಲೂ ಸಹ ರಸಿಡೆಂಟರು ಕೋಲ್‌ಸಾಹೇಬರು ಕೊಟ್ಟಿರುವ ೯೪೨ - ೮೨ನೇ ನಂಬರು ಹುಕ್ಕುಂಗಳು, ೧೮೧೮ನೇ ನವಂಬರು ೨೦ರಲ್ಲೂ ಮೈಲಾಪುರಿಚನ್ನಪಟ್ಟಣದ ಗವರ್ನರ್ ಲಾರ್ಡ್ ಬಲೂರ್‌ಸಾಹೇಬರು ಕೊಟ್ಟಿರುವ ೯೧೮ನೇ ನಂಬರು ಹುಕ್ಕುಂ. ಸನ್ ೧೮೨೨ನೇ ಇಸವಿ ಜೂನ್ ತಾರೀಖು ೨೬ರಲ್ಲೂ ಮತ್ತು ೧೮೨೬ನೇ ಇಸವಿ ಸೆಪ್ಟಂಬರು ತಾರೀಖು ೯ರಲ್ಲೂ ಸಹ ಮಹಾರಾಜರಾಜಾಸಾಹೇಬ್ ಬಹದ್ದೂರವರು ಕೊಟ್ಟಿರುವ ಸನ್ನದು, ಮತ್ತು ರಹದಾರಿ ಸಹ ಸಾದರಾಗಿ ಇರುವವನ್ನು ಶ್ರೀಮಠದ ಪಾರುಪತ್ಯಗಾರ ಭಿಷ್ಟ್ರಯ್ಯಶಾಸ್ತ್ರಿಗಳು ಹುಜೂರಲ್ಲಿ ಹಾಜರ್ಮಾಡಿ ಈ ಮೇರಿಗೆ ಅಪ್ಪಣೆ ಆಗಬೇಕೆಂದು ಅರ್ಜಿ ಮಾಡಿಕೊಂಡದ್ದರಿಂದ ಅಪ್ಪಣೆ ಕೊಡಿಸಿ ಇದ್ದೇತು. ಸದರಿ ಬರಹಿರುವ ಮೇರಿಗೂ ಬಿಲ್‌ಷೇಲ್‌ಸಾಬುಕಿನ ಹುಕ್ಕುಂಗಳು, ಪರವಾನೆ ಸನ್ನದು, ರಹದಾರಿ ಸಹ ಇರುವ ಮಾಮೂಲ್ಮೇರಿಗೆ ನಡೆಸಿಕೊಳ್ಳುವದು.

ತಾರೀಖು ೫ನೇ ಮಾಹೆ ಸೆಪ್ಟಂಬರ್ ಸನ್ ೧೮೩೨ನೇ ಇಸವಿ ದರಜಾಗಾ ಬೆಂಗಳೂರು ಕ್ಯಾಂಪ್ ಮೇಜರ್ ಕಮಿಶನರ್ ಎಂದು ಸೈನಿಫೆ. ಸೂರಪ್ಪ, ಹೆಡ್ ದಿವಾನ್ ಎಂದು ಸೈನಿಫೆ.

ಶ್ರೀಮತ್ಪರಮಹಂಸ ಯಥೋಕ್ತಬಿರುದಾಂಕಿತರಾದಂಥ ಶ್ರೀ ಸಚ್ಚಿದಾನಂದಭಾರತಿಗಳಿಗೆ.

ಟೀಪುಸುಲತಾನ್ ಪಾದಷಹರು ಮಾಡುವ ಸಲಾಂ. ನೀವು ಕಳುಹಿಸಿದ ಪತ್ರಿಕೆಯಿಂದ ಎಲ್ಲಾ ವಿವರವು ತಿಳಿಯಬಂತು. ನಮ್ಮ ಸರಕಾರದ ಶೀಮೆಯಲ್ಲಿ ಇರುವ ದೇವಸ್ಥಾನ ಪುಣ್ಯಕ್ಷೇತ್ರಗಳಲ್ಲೂ ದೇವತಾದರ್ಶನಮಾಡಿಕೊಂಡು ಬರತಕ್ಕಬಗ್ಯೆ ಅಪ್ಪಣೆಕೊಟ್ಟು ರಹದಾರಿ ಕಳುಹಿಸಿಕೊಟ್ಟಲ್ಲಿ ಹೋಗಿ ದೇವರ ಸನ್ನಿಧಿಗಳಲ್ಲಿ ಸರಕಾರದ ಶ್ರೇಯಸ್ಸು ಪ್ರಾರ್ಥಿಸಿಕೊಂಡು ಬರುವದಾಗಿ ಬರದು ಇರುವದು ಸರಿಯಷ್ಟೆ; ಅದೇಪ್ರಕಾರಕ್ಕೆ ರಹದಾರಿ ಕಳುಹಿಸಿ ಇದ್ದೇತು. ಸರಕಾರದ ಶೀಮೆಯಲ್ಲಿರುವ ದೇವತಾಸ್ಥಳ ಪುಣ್ಯಕ್ಷೇತ್ರಗಳಲ್ಲಿ ಸಹ ಹೋಗಿ ದೇವರ ಸನ್ನಿಧಾನಗಳಲ್ಲು ತಾವು ತ್ರಿಕಾಲ ಈಶ್ವರಪೂಜೆಯನ್ನೂ ಸಹ ಸರಕಾರದ ಶ್ರೇಯೋಭಿವೃದ್ಧಿಯಾಗುವಂತೆ ಈಶ್ವರಪ್ರಾರ್ಥನೆ ಮಾಡಿಕೊಂಡು ಬರುವಹಾಗೆ ಮಾಡಿಸುವದು. ತಾರೀಖು ೧೧ನೇ ಮಾಹೆ ಜಾಫರಿಸಾಲ್ ಇದಾರಸಕ್ ಸನ್ ೧೨೨೪ ಮಹಮ್ಮದು ನಳಸಂವತ್ಸರ ಎಂತ ಇದೆ.

ಜಯಲಕ್ಷ್ಮೀವಿಲಾಸಮುದ್ರಾಕ್ಷರಶಾಲಾ ದೊಡ್ಡಪೇಟೆ ಮೈಸೂರು.

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಮೈಸೂರು ಸಂಸ್ಥಾನದ ಎಗ್ಜಿಕ್ಯೂಟಿವ್ ಕೌನ್ಸಿಲ್ ಪ್ರಸಿಡೆಂಟ್ ಮತ್ತು

ದಿವಾನ್ ಸರ್. ಕೆ. ಶೇಷಾದ್ರಯ್ಯನವರ

ಸನ್ನಿಧಾನಂಗಳಿಗೆ.

ನಿವಾಸಿಗಳಾದ ಬ್ರಾಹ್ಮಣರು ಮೊದಲಾದ ಚತುರ್ವರ್ಣದ ಪ್ರಜೆಗಳು ಬರೆದುಕೊಂಡ ಅರ್ಜಿ—

ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳಸ್ವಾರಿಯು ಕಳೆದ ಜೂನ್‌ಮಾಹೆಯಲ್ಲಿ ಮೈಸೂರಿಗೆ ಬಿಜಯಂಗೈಯ್ಯುತ್ತಿದ್ದಕಾಲದಲ್ಲಿ ಶಿಷ್ಯಜನರ ಪ್ರಾರ್ಥನಪೂರ್ವಕ ಶ್ರೀರಂಗಪಟ್ಣದ ಕೋಟೆವಳಕ್ಕೆ ದಯಮಾಡಿಸಿ ಅಲ್ಲಿ ರಂಗನಾಥಸ್ವಾಮಿದೇವರ ದರ್ಶನವಂ ಮಾಡಿದ್ದಕ್ಕಾಗಿ ದೇವರಿಗೆ ಸಂಪ್ರೋಕ್ಷಣೆ ಆಗಬೇಕೆಂದು ಶ್ರೀವೈಷ್ಣವರಲ್ಲಿ ಕೆಲವರು "ಅ ಖಿ ಲ ವೈ ಷ್ಣ ವ ಸ ಭಾ" ಎಂದು ದೊಡ್ಡ ಹೆಸರನ್ನಿಟ್ಟುಕೊಂಡು ಸರ್ಕಾರದಲ್ಲಿ ಫಿರ್ಯಾದುಮಾಡಿದ್ದರಮೇಲೆ ಸ್ಮಾರ್ತಜನಗಳು ಸಂಪ್ರೋಕ್ಷಣೆ ಮಾಡಕೂಡದೆಂದು ತಕರಾರುಮಾಡಿದ್ದಕ್ಕಾಗಿ ೧೮೯೪ನೇ ಇಸವಿ ಜೂನ್ ೨೩ನೇ ತಾರೀಖಿನಲ್ಲಿ ಮುಜರಾಯಿ ಸೂಪರಿಂಟೆಂಡೆಂಟರವರು ಖುದ್ದು ವಿಚಾರಣೆ ಮಾಡಿ ಗೌರ್ನಮೆಂಟಿಗೆ ಮಾಡಿದ ರಿಪೋರ್ಟನ್ನು ಪರಾಂಬರಿಸಿ ಗೌರ್ನಮೆಂಟಿನವರಿಂದ ತೀರ್ಮಾನದ ಹುಕುಂ ಕೊಡೋಣವಾಗಿರುತ್ತೆ. ಈತೀರ್ಮಾನವು ದ್ವೇಷಾಸೂಯಾಪರರಾದ ಕೆಲವರಿಗೆ ತೃಪ್ತಿಕರವಾಗದೆ ಅವರು ವರ್ತಮಾನಪತ್ರಿಕೆಗಳಿಂದ ಮನಸ್ವಿಚರ್ಚೆಯನ್ನು ಮಾಡುತ್ತಾ ಇರುವದಲ್ಲದೆ ತಮ್ಮ ಅಭಿಪ್ರಾಯದಂತೆ ಸಂಪ್ರೋಕ್ಷಣೆಗೆ ಹುಕುಂ ಕೊಡದೇಹೋದಲ್ಲಿ ಮತಸಮ್ಮಂಧವಾದ ಮರಣವನ್ನ ಹೊಂದುತ್ತೇವೆಂಬದಾಗಿ ಬರಿಯೋಣವೇ ಮುಂತಾದ್ದರಿಂದ ಗೌರ್ನಮೆಂಟಿನವರಿಗೆ ಘಾಬರಿಯನ್ನುಂಟುಮಾಡಿ ತನ್ಮೂಲಕ ನ್ಯಾಯಕ್ಕೆ ವಿರುದ್ಧವಾಗಿರತಕ್ಕ ತಮ್ಮ ಇಷ್ಟಾರ್ಥಗಳನ್ನ ಪಡೆಯಬೇಕೆಂದು ಪುನಃಪುನಃ ಶ್ರೀಮನ್ಮಹಾರಾಜ್ಞೀ ರೀಜಂಟರವರಿಗೂ ರಸಿಡೆಂಟ್ ಸಾಹೇಬರಿಗೂ ಅರ್ಜಿಯನ್ನು ಕೊಡುವದೇ ಮುಂತಾದ ಹಠಸಾಧನಾಪ್ರಯತ್ನದಲ್ಲಿರುತ್ತಾರೆ.

ಈ ವಿಚಾರವನ್ನ ಕುರಿತು ನಾವು ಗಾರ್ನಮೆಂಟಿಗೆ ಶೃತಪಡಿಸತಕ್ಕದ್ದೇನೂ ಇಲ್ಲದೇ ಇದ್ದಾಗ್ಯೂ ಪ್ರೊಸೀಡಿಂಗ್ಸಿನ ೪ನೇ ಪ್ಯಾರಾದಲ್ಲಿ ನಮೂದಿಸಿರುವ ಸಂದರ್ಭದಲ್ಲಿಯೂ ಶ್ರೀವೈಷ್ಣವರಿಗೆ ಶ್ರೀ ರಂಗನಾಥಸ್ವಾಮಿದೇವರಮೇಲೆ ಇರತಕ್ಕ ಹಕ್ಕುದಾರಿ ವಿಚಾರದಲ್ಲೂ ಅರಿಕೆಮಾಡಿಕೊಳ್ಳುವದನ್ನ ಘನತೆಯನ್ನ ಹೊಂದಿದ ಕೌನ್ಸಿಲ್ ಸಭೆಯವರು ಸಾವಧಾನವಾಗಿ ಪರ್ಯಾಲೋಚಿಸಬೇಕೆಂದು ಬೇಡುತ್ತೇವೆ.

೧ ನೇದು ಮೇಲ್ಕಂಡ ಪ್ರೊಸಿಡಿಂಗ್ಸಿನ ನಾಲ್ಕನೇ ಪ್ಯಾರಾ. * * * * * * * *

* ವೇದೋಕ್ತ ಕರ್ಮಾನುಷ್ಠಾಯಿಗಳಾದ ಬ್ರಾಹ್ಮಣರಿಗೆ ವಿಧಿರೂಪವಾಗಿರುವ ಆಗಮಗಳಪ್ರಕಾರ ಪೂಜೆಗಳಂ ನಡೆಸಲ್ಪಡುವ ಒಂದು ದೇವಾಲಯದಲ್ಲಿ ಒಬ್ಬ ಮಠಾಧಿಪತಿಯಾದವರು ಪೂಜೆಮಾಡಬಹುದೆಂಬ ಸಾಮಾನ್ಯ ಜಿಜ್ಞಾಸೆಯನ್ನಾಗಲೀ ಅಥವಾ ಮಾಮೂಲ್ ಅನುಸರಿಸಿ ಶೃಂಗೇರಿಸ್ವಾಮಿಗಳವರಿಗೆ ಇಂಥಾ ವಿಷಯಗಳಲ್ಲಿ ಯಾವದಾದರೂ ವಿಶೇಷ ಬಾಧ್ಯತೆ ಉಂಟೆ ಎಂಬ ಮುಖ್ಯವಾದಜಿಜ್ಞಾಸೆಯನ್ನಾಗಲಿ, ಪ್ರಕೃತ ಮೊಕದ್ದಮೆಯನ್ನು ಫೈಸಲ್ ಮಾಡುವದರಲ್ಲಿ ಆಲೋಚಿಸಬೇಕಾದ್ದು ದೈವಾತ್ ಅನಾವಶ್ಯಕವಾಗಿದೆ. ಕಳೆದ ಜೂನ್ ತಿಂಗಳು ೧೦ನೇ ತಾರೀಖಿನಲ್ಲಿ ಶೃಂಗೇರಿಸ್ವಾಮಿಗಳವರು ದೇವರಿಗೆ ಪೂಜೆಮಾಡಬೇಕೆಂಬ ಉದ್ದೇಶ್ಯದೊಡನೆ ದೇವಾಲಯಕ್ಕೆ ದಯಮಾಡಿಸಿದವರಲ್ಲವೆಂದು ಹೇಳುವದು ಪ್ರಕೃತ ಮೊಕದ್ದಮೆಯ್ವ್ಯವಸ್ಥೆಗೆ ಸಾಕಾದ್ದಾಗಿದೆ. * *
* *

ವಿಷ್ಣುದೇವಾಲಯಗಳಲ್ಲಿ ಶೃಂಗೇರಿ ಜಗದ್ಗುರುಗಳವರು ಪೂಜೆಮಾಡತಕ್ಕದ್ದಕ್ಕೆ ಅವರಿಗೆ ವಿಶೇಷ ಬಾಧ್ಯತೆ ಇರತಕ್ಕದ್ದನ್ನ ವಿಚಾರಿಮಾಡತಕ್ಕದ್ದು ಈ ಮೊಕದ್ದಮಾ ತೀರ್ಮಾನಕ್ಕೆ ಮುಖ್ಯವಾದ ಅಂಶವಾಗಿತ್ತು.

ಹಾಗೆ ಮಾಡಿಸಿ ತೀರ್ಮಾನವನ್ನ ಅಪ್ಪಣೀಕೊಡಿಸಿದ್ದ ಪಕ್ಷದಲ್ಲಿ ಶ್ರೀವೈಷ್ಣವರು ಪುನಃ ಪುನಃ ಚರ್ಚಿಸುವದಕ್ಕೂ ಶ್ರಿಂಗೇರಿಮಠದ ಶಿಷ್ಯರಾದ ನಾಲ್ಕು ವರ್ಣದವರೂ ಈ ವಿಚಾರವಾಗಿ ಗೌರ್ನಮೆಂಟಿನವರಿಗೆ ತೊಂದರೆ ಕೊಡುವದಕ್ಕೂ ಅವಕಾಶವಾಗುತ್ತಿರಲಿಲ್ಲ. ಎಂಬುವದನ್ನ ಭಯಭಕ್ತಿಗಳೊಡನೆ ಅರಿಕೆ ಮಾಡಿಕೊಳ್ಳುತ್ತೇವೆಯೇ ಹೊರ್ತು ಗೌರ್ನಮೆಂಟಿನವರ ನಡವಳಿಕೆಮೇಲೆ ಆಕ್ಷೇಪರೂಪವನ್ನಾಗಿ ಅರಿಕೆಮಾಡುವದಿಲ್ಲ ಎಂಬುವದನ್ನ ಘನವಾದ ಚಿತ್ತದಲ್ಲಿ ಲಾರಿಸಬೇಕು.

೨ ಬ್ರಾಹ್ಮಣ್ಯವು ಕೆಲವು ಶತಮಾನಗಳ ಕೆಳಗೆ ಬೌದ್ಧರ ಪ್ರಾಬಲ್ಯದಲ್ಲಿ ಕ್ಷೀಣಗತಿಗೆ ಬಂದದ್ದರಿಂದ ದೇವಾಲಯ ಮೊದಲಾದವುಗಳೆಲ್ಲಾ ಬೌದ್ಧಾಕ್ರಾಂತಗಳಾಗಿರಲು ಶ್ರೀಮಚ್ಛಂಕರಭಗವತ್ಪಾದರವರು ಅವತಾರವಮಾಡಿ ಈ ದುರ್ಮತಗಳನ್ನೆಲ್ಲಾ ಖಂಡಿಸಿ ಬ್ರಾಹ್ಮಣ್ಯವನ್ನ ಜೀರ್ಣೋದ್ಧಾರಮಾಡಿ ಷಣ್ಮತಗಳನ್ನೂ ಸನ್ಯಾಸಾಶ್ರಮವನ್ನೂ ಶಿವವಿಷ್ಣ್ವಾದಿ ಪಂಚಾಯತನಾರಾಧನ ಕ್ರಮವನ್ನೂ ಸಹಾ ಶಾಸ್ತ್ರೀಯವಾದದ್ದೆಂದು ಸ್ಥಾಪಿಸಿದಂಥಾವರಾಗಿ ಅದರಂತೆ ತಾವು ಆಚರಣೆಮಾಡುತ್ತಾ ತಮ್ಮ ಶಿಷ್ಯಮಂಡಲಿಯಿಂದ ನಡೆಸುತ್ತಲೂ ಬಂದರು. ಅನ್ಯಮತಾಕ್ರಾಂತವಾಗಿ ನಾಮಾವಶಿಷ್ಟವಾಗಿದ್ದ ಆಸೇತು ಹಿಮಾಚಲಪರ್ಯಂತ ಇರತಕ್ಕ ದೇವಾಲಯಗಳಿಗೆಲ್ಲಾ ಪ್ರೋಕ್ಷ್ಮ ಅವುಗಳನ್ನ ವಿಧ್ಯುಕ್ತವಾಗಿ ಶುದ್ಧಿಮಾಡಿ ಶಿವವಿಷ್ಣುದೇವರುಗಳಿಗೆಲ್ಲಾ ಯಂತ್ರೋದ್ಧಾರ ಕುಂಭಾಭಿಷೇಕ ಮುಂತಾದ್ದನ್ನ ಶಾಸ್ತ್ರೋಕ್ತವಾದ ವಿಧಗಳಿಂದ ನಡಿಸಿ, ದೇವತಾಸಾನ್ನಿಧ್ಯ ಉಂಟಾಗುವಂತೆಮಾಡಿ ತಾವು ಸ್ವತಃ ಆ ದೇವರುಗಳನ್ನ ಪೂಜೆಮಾಡಿ ನಂತರ ಆಯಾಯ ಸ್ಥಳದಲ್ಲಿರತಕ್ಕ ಬ್ರಾಹ್ಮಣರಿಗೆ ಪೂಜೆಮಾಡುವದಕ್ಕೆ ಅಪ್ಪಣೀಕೊಟ್ಟವರೆಂಬುವದು ಶಂಕರವಿಜಯ ಮೊದಲಾದ ಅನೇಕ ಗ್ರಂಥಗಳಿಂದ ತಿಳಿಯಬರುತ್ತೆ.

೩ ಶ್ರೀಶಂಕರ ಭಗವತ್ಪಾದರವರ ತರುವಾಯ ಆ ಪೀಠವನ್ನಲಂಕರಿಸಿದ ಗುರುಪರಂಪರೆಯವರೆಲ್ಲಾ ಮೇಲೆಹೇಳಿದ ಕ್ರಮದಲ್ಲಿ ಆಚಾರ ವಿಚಾರಗಳನ್ನ ಪರಾಮರ್ಶಿಸುವದಕ್ಕಾಗಿ ಸಂಚಾರ ಹೊರಟಕಾಲಗಳಲ್ಲಿ ಸಿಕ್ಕುವ ಶಿವವಿಷ್ಣು ದೇವಾಲಯಗಳಿಗೆ ದಯಮಾಡಿಸಿ ದೇವತಾರಾಧನೆಯನ್ನ ನಡೆಸುತ್ತಾ ಇದ್ದಾರೆ.

೪ ಏತನ್ಮಧ್ಯೆ ಅಂದರೆ ಶ್ರೀಶಂಕರಭಗವತ್ಪಾದರವರು ಅವತಾರಮಾಡಿ ಮತಾಚಾರ ನಿಬಂಧನೆಗಳನ್ನ ಸ್ಥಿರಪಡಿಸಿದನಂತರ ಸುಮಾರು ಸಾವಿರಾರು ವರುಷಗಳವರಿಗೂ ಸ್ಮಾರ್ತರೇ ವಿಷ್ಣುದೇವಾಲಯಗಳಲ್ಲಿ ವೈದಿಕಾಗಮೋಕ್ತವಾದ ಪೂಜಾವಿಧಿಗಳನ್ನ ನಡೆಸುತ್ತಾ ಬಂದರು. ನಂತರ ಶ್ರೀ ರಾಮಾನುಜಾಚಾರ್ಯರವರು ಅವತಾರಮಾಡಿ ತಮ್ಮ ಮತಕ್ಕೆ ಶೇರಿಸಿಕೊಂಡವರಲ್ಲದೆ ಕೆಲವು ಸ್ಮಾರ್ತರು ವಿಷ್ಣುದೇವಾಲಯಗಳಲ್ಲಿ ಪೂಜಕರಾಗಿಯೂ, ಸ್ಥಾನಿಕ ಮುಂತಾದ ನೌಕರಿಯಲ್ಲಿಯೂ ಸೇರಿಕೊಂಡಿದ್ದರು. ಈ ನೌಕರಿಯಿಂದಲೇ ಅವರು ಜೀವಿಸುತ್ತಿದ್ದದ್ದರಿಂದ ಇವರಿಗೆ ಸಂಬಂಧಿಗಳಾಗಿಯೂ ಮಿತ್ರವರ್ಗದವರಾಗಿಯೂ ಇದ್ದ ಇತರ ಸ್ಮಾರ್ತಬ್ರಾಹ್ಮಣರು ಇವರ ಜೀವನಕ್ಕೆ ಉಪಹತಿಮಾಡುವದಕ್ಕೆ ಸಮ್ಮತವಿಲ್ಲದೆ ಇದ್ದದ್ದರಿಂದಲೂ ಇಂಥಾವರ ಪೂಜೆಯಿಂದ ದೇವರಸಾನ್ನಿಧ್ಯವು ಒಂದುವೇಳೆ ಕಡಮೆಯಾದಾಗ್ಯೂ ಶ್ರೀ ಜಗದ್ಗುರುಗಳವರು ಆಗಾಗ್ಯೆ ದಯಮಾಡಿ ದೇವರನ್ನ ಪೂಜಿಸೋಣದರಿಂದ ಕಳಾಸಾನ್ನಿಧ್ಯವೃದ್ಧಿಯಾಗುತ್ತಂತಲೂ ಇದರಿಂದ ತಾವು ದೇವತಾಪ್ರಸಾದವನ್ನ ಪರಿಗ್ರಹಿಸಬಹುದೆಂದು ಯೋಚಿಸಿ ತಟಸ್ಥರಾಗಿದ್ದರು. ಇದರನ್ನ ಕುರಿತು ಆಕ್ಷೇಪಿಸದೆ ಅವರುಗಳು ದೇವತಾರಾಧನೆ ಮಾಡಿಕೊಂಡು ಬರುವದಕ್ಕೆ ಅವಕಾಶಕೊಟ್ಟದ್ದರಿಂದಲೇ ಶ್ರೀ ಜಗದ್ಗುರುಗಳವರಿಗೆ ಸಮಸ್ತ ಪ್ರಾಣಿಗಳಲ್ಲಿಯೂ ಇರತಕ್ಕ ದಯಾಳುತ್ವವೂ ಬ್ರಾಹ್ಮಣವರ್ಣಕ್ಕೆ ಸೇರಿದ ಮತಾಂತರಸ್ಥರಲ್ಲಿಯೂಕೂಡ ಇರತಕ್ಕ ಅನುರಾಗವು ಜಗದ್ವಿಖ್ಯಾತವಾಗಿದ್ದಾಗ್ಯೂ ಇಂಥಾ ಮಹಾನುಭಾವರು ರಾಜರು ಮತ್ತು ರಾಷ್ಟ್ರದ ಕ್ಷೇಮಾರ್ಥವಾಗಿ ಶಿವವಿಷ್ಣು ದೇವಾಯಗಳಲ್ಲಿರತಕ್ಕ ದೇವರುಗಳಿಗೆ ಮಾಡತಕ್ಕ ಪೂಜೆಯು ಬಹುಕಾಲದಾರಭ್ಯ ಆಚಾರವಾಗಿ ನಡೆದುಬರುವಂಥಾದ್ದಾದ್ದಾಗ್ಯೂ ಇವರನ್ನ ಈ ಪೂಜಕರಾದ ಶ್ರೀವೈಷ್ಣವರು ದ್ವೇಷಾಸೂಯದಿಂದ ಈಚೀಚೆಗೆ ಅಡ್ಡಿಮಾಡುವದಕ್ಕೆ ಉಪಕ್ರಮಿಸಿದರು. ಅಂಥಾಸಂದರ್ಭಗಳಲ್ಲೆಲ್ಲಾ ಆಯಾಯ ಕಾಲದಲ್ಲಿದ್ದ ರಾಜರು ಈ ಪೂಜಕರಿಗೆ ನಿರ್ಬಂಧಪಡಿಸಿ, ಶ್ರೀಜಗದ್ಗುರುಗಳವರು ಪೂಜೆಮಾಡುವದಕ್ಕೆ ಅವಕಾಶಗೊಳಿಸಿದ್ದಲ್ಲದೆ ಕೆಲವು ಸಂದರ್ಭಗಳಲ್ಲಿ ನೌಕರಿಯಿಂದ ಇವರನ್ನ ಬರತರಫ್‌ಮಾಡೋಣದರಮೂಲಕ ಶಿಕ್ಷೆಯನ್ನ ಕೊಟ್ಟಿರುತ್ತಾರೆ. ಥೂಲ್ಯ ೫೦ ವರ್ಷಗಳಮುಂಚೆ ಅಂದರೆ ವಿಳಂಬಿಸಂವತ್ಸರದಲ್ಲಿ ಶ್ರೀಜಗದ್ಗುರುನರಸಿಂಹಭಾರತೀಸ್ವಾಮಿಗಳವರು ತಿರುಮಕೂಡ್ಲು ನರಸೀಪುರದ ಶ್ರೀ ಗುಂಜಾನರಸಿಂಹಸ್ವಾಮಿಗೆ ಪೂಜೆಮಾಡುವಕಾಲದಲ್ಲಿ ಅಡ್ಡಿಪಡಿಸುವದಕ್ಕೆ ಬಂದ ದೇವಸ್ಥಾನದ ನೌಕರರಿಗೆ ನಿರ್ಬಂಧಪಡಿಸಿ ಶ್ರೀಗಳವರು ಕ್ರಮವಾಗಿ ಪೂಜೆಮಾಡುವದಕ್ಕೆ ಅವಕಾಶ

ವಂಕೊಡಿಸಿದ್ದಲ್ಲದೆ ಅಡ್ಡಿಮಾಡಿದ ಶ್ರೀವೈಷ್ಣವರನ್ನು ನೌಕರಿಯಿಂದ ವಜಾಮಾಡಿ ಇವರು ಮಾಡುತ್ತಿದ್ದ ನೌಕರಿಯನ್ನು ಸ್ಮಾರ್ತರಿಂದ ನಡಿಸುತ್ತಾಬಂದರು. ಆ ಕಾಲದಲ್ಲಿ ಸಂಭನಿಸಿದ ಆಗಮೋಕ್ತವಾದ ರಥೋತ್ಸವಾದಿಗಳನ್ನೂ ಸಹ ಸ್ಮಾರ್ತರೇನಡೆಯಿಸಿರುತ್ತಾರೆ ಎಂಬುವದು ತಿರುಮಕೂಡಲುನರಶೀಪುರ ತಾಲ್ಲೂಕ್ ಮತ್ತು ಕಮಿಷನರ ಹುಜೂರು ರಿಕಾರ್ಡಿನಲ್ಲಿಯೂ ದಾಖಲೆ ಇರುತ್ತೆಂದು ತಿಳಿಯಬರುವದರಿಂದ ಅದರನ್ನು ಪರಾಮರಿಸಿದಲ್ಲಿ ವ್ಯಕ್ತಪಡುತ್ತೆ.

೫ ಶ್ರೀಜಗದ್ಗುರುಗಳವರು ಮೈಸೂರು ಶೀಮೆಯಲ್ಲಿರತಕ್ಕ ಪ್ರಸಿದ್ಧವಾದ ದೇವಾಲಯಗಳಲ್ಲಿರುವ ದೇವರುಗಳನ್ನ ಆರಾಧನೆ ಮಾಡುವದು ಮಾತ್ರವಲ್ಲದೆ ಮದ್ರಾಸು, ಬೊಂಬಾಯಿ, ಮುಂತಾದ ಪ್ರಸಿಡೆನ್ಸಿಯಲ್ಲಿರತಕ್ಕ ಆಗಮೋಕ್ತಾರಾಧನೆಗೆ ಒಳಪಟ್ಟಿರುವ ಪ್ರಸಿದ್ಧ ಶಿವ ವಿಷ್ಣುದೇವಾಲಯಗಳಲ್ಲಿಯೂ ದೇವತಾರಾಧನೆ ಮಾಡಿರುತ್ತಾರೆಂಬುವದು ಲೋಕಪ್ರಸಿದ್ಧವಾಗಿರುತ್ತೆ. ಅಂದರೆ ದಕ್ಷಿಣದೇಶದಲ್ಲಿ ಪ್ರಸಿದ್ಧವಾದ ದೇವಾಲಯಗಳು ತಿರುಪತಿ, ಶ್ರೀರಂಗ, ಕಾಂಚಿ, ಅನಂತಶಯನ, ವರ್ಣಶಯನ ಮುಂತಾದ ಸ್ಥಳಗಳಲ್ಲಿ ಅನೇಕಾವರ್ತಿ ಪೂಜೆ ಮಾಡಿರತಕ್ಕ ದಾಖಲೆಗಳಪೈಕಿ ಪ್ರಕೃತ ದೊರತಿರುವಷ್ಟರನ್ನೂ ಪರಾಂಬರಿಕೆ ಒಗ್ಯೆ ಹಾಜರ್ಮಾಡಿರುತ್ತೇವೆ. ಇದರಂತೆಯೆ ಈ ದೇಶದ ದೇವಾಲಯಗಳಲ್ಲಿ ಶ್ರೀಗಳವರು ದೇವತಾರಾಧನೆ ಮಾಡುವದಕ್ಕಾಗಿ ಅನೇಕ ರಾಜರು ಮತ್ತು ಅಧಿಕಾರಿಗಳು ಕೊಟ್ಟಿರತಕ್ಕ ಲಿಖಿತಗಳು ಸರಕಾರದಲ್ಲೂ, ಮತ್ತು ಶ್ರೀಮಠದಲ್ಲೂ, ಅನೇಕವಾಗಿರುತ್ತೆ. ಇವುಗಳಲ್ಲ ಪ್ರಕೃತ ನಮಿಗೆ ದೊರತಿರತಕ್ಕ ದಾಖಲೆಗಳು ಅಂದರೆ ಟೀಪ್ಪೂಸುಲ್ತಾನರು ಕೊಟ್ಟಿರತಕ್ಕ ಒಂದೆರಡು ಸನ್ನದಿನ ನಕಲು, ಈ ಸಂಸ್ಥಾನದ ರಾಜ್ಯಭಾರ ಬ್ರಿಟೀಷ್ ಅಧೀನರ ಅಧ್ಯಕ್ಷಕೆ ಒಳಪಟ್ಟಿದ್ದಕಾಲ ಅಂದರೆ ೧೮೩೧ನೇ ಇಸವಿ ನಂದನಸಂವತ್ಸರದಲ್ಲಿ ಕಮಿಷನರ್ ಕ್ಯಾಷ್ ಮೆಜರ್ ಸಾಹೇಬರು ಕೊಟ್ಟಿರುವ ಒಟ್ಟು ಪರವಾನೆ ನಕಲನ್ನೂ, ಚೀಪ್ ಕಮಿಷನರ್ ಬೌರಿಂಗಸಾಹೇಬರವರು ಇಂಡಿಯಾ ಗೌರ್ನಮೆಂಟಗೆ ಬರದ ಲೆಟರು, ಅದರ ಜವಾಬಿನ ನಕಲನ್ನೂ, ಹೈದರಾಬಾದ್ ಸರಕಾರದವರು ಕೊಟ್ಟಿರುವ ಸನ್ನದಿನ ತರ್ಜುಮಾನಕಲನ್ನೂ ಸಹ ಇದರ ಸಂಗಡ ಹಾಜರ್ಮಾಡಿರುತ್ತೇವೆ. ಈ ಪೈಕಿ ನಂದನ ಸಂವತ್ಸರದ ಒಟ್ಟು ಪರವಾನೆಯಲ್ಲಿ ನಮೂದಿಸಿರುವ ಮದ್ರಾಸ್ ಬಂಗಾಳಾ ಗೌನರವರು ಕೊಟ್ಟಿರತಕ್ಕ ಲೆಟರುಗಳು ಮತ್ತು ದಿವಾನ್ ಪೂರ್ಣಯ್ಯನವರು ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರವರು ಕೊಟ್ಟಿರತಕ್ಕ ಸನ್ನದು ವಗೈರೆ ಕಾಗದಪತ್ರಗಳ ಸಂಖ್ಯೆ ೪೫) ಆಗುತ್ತೆ. ಇವುಗಳೆಲ್ಲಾ ಕಮಿಷನರ ಬಳಿಗೆ ಹಾಜರಾಗಿರುತ್ತೆಂಬುವದು ಸದರಿ ಒಟ್ಟುಪರವಾನೆಯಿಂದಲೇ ಗೊತ್ತಾಗುತ್ತೆ. ಇವುಗಳು ವಾಪಸ್ ಆಗದೆ ಚೀಫ್‌ಕಮಿಷನರ ಆಫೀಸ್ ರಿಕಾರ್ಡಿನಲ್ಲಿರುತ್ತೆಂಬದಾಗಿ ಕೇಳುತ್ತೇವೆ. ಅವುಗಳನ್ನ ಪರಾಂಬರಿಸಬೇಕೆಂದು ಬೇಡುತ್ತೇವೆ

೬ ಮೇಲೆ ನಮೂದಿಸಿರತಕ್ಕ ರಿಕಾರ್ಡುಗಳಿಂದ ಶ್ರೀ ಶೃಂಗೇರಿ ಜಗದ್ಗುರುಗಳವರಿಗೆ ಪ್ರಕೃತದಲ್ಲಿ ಪಾಂಚರಾತ್ರವೈಖಾನಸಾದಿ ಆಗಮೋಕ್ತವಾಗಿ ಆರಾಧಿಸಲ್ಪಡುತ್ತಿರುವ ಶಿವವಿಷ್ಣು ದೇವಾಲಯಗಳಲ್ಲಿರುವ ದೇವರುಗಳಿಗೆ ಸ್ವತಃ ಪೂಜೆಮಾಡತಕ್ಕ ವಿಶೇಷಬಾಧ್ಯತೆಯು ಮತ್ತು ಹಕ್ಕು ಉಂಟೆಂಬುವದು ರುಜುವಾತು ಆಗುವದು ಸರಿಯಷ್ಟೆ; ಪ್ರಕೃತ ಚರ್ಚೆಗೆ ಸಮ್ಮಂಧಪಟ್ಟ ಶ್ರೀರಂಗಪಟ್ಟಣದ ರಂಗನಾಥಸ್ವಾಮಿಯವರಿಗೆ ಶ್ರೀಗುರುಗಳವರು ಸ್ವತಃ ಪೂಜೆಮಾಡುವ ಹಕ್ಕು ಉಂಟೆಂಬುವದಕ್ಕೆ ಮೇಲೆ ಹೇಳಲ್ಪಟ್ಟ ಟೀಪ್ಪೂಸುಲ್ತಾನರವರ ಸನ್ನದೇ ಸಾಕ್ಷಿಯಾಗಿರುವದಲ್ಲದೆ, ಇದಕ್ಕೆ ಅನುಸಾರವಾಗಿ ಪೂಜೆ ಮಾಡುತ್ತಿದ್ದರೆಂಬ ಸಂಗತಿಯನ್ನು ಹೇಳತಕ್ಕಂಥಾ ದೊಡ್ಡವಂಶೀಯರಾದ ಮುಹಮ್ಮದೀಯರ್ ದೊಡ್ಡಮನುಷ್ಯರು ಅನೇಕರಿರುತ್ತಾರೆ. ಅವರುನ್ನೂ ಸಾಕ್ಷ್ಯ ಕೊಡುವದರಲ್ಲಿ ಅಭ್ಯಂತರವಿರುವದಿಲ್ಲ. ಇದು ಅವಶ್ಯಕವಾದ್ದೆಂದು ತೋರುವಪಕ್ಷದಲ್ಲಿ ಗೌರ್ನಮೆಂಟಿನವರು ಅವರಿಂದಲೂ ತಿಳಿದುಕೊಳ್ಳಬಹುದು.

೭ ಶ್ರೀರಂಗಪಟ್ಟಣದ ಶ್ರೀ ರಂಗನಾಥದೇವರನ್ನ ಇಂಥಾವರು ಇಂಥಾಕಾಲದಲ್ಲಿ ಈ ರೀತಿಯಾಗಿ ಪ್ರತಿಷ್ಠೆ ಮಾಡಿದ ಸಂಗತಿ ನಿಸ್ಸಂದೇಹವಾಗಿ ಗೊತ್ತಾಗದೇ ಇದ್ದಾಗ್ಯೂ, ಇದು ಬಹಳ ಪುರಾತನವಾದದ್ದು. ಕೆಲವು ಶತಮಾನಗಳಕೆಳಗೆ ಗೌತಮಮಹರ್ಷಿಗಳು ಪೂಜಿಸುತ್ತಿದ್ದರೆಂಬುವದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರಷ್ಟೆ; ಮಹರ್ಷಿಗಳು ತಾಂತ್ರಿಕಾಗಮಾಪೇಕ್ಷಾಬದ್ಧರಾದವರಲ್ಲ; ಪಾಷಂಡಿಗಳೂ ಅಲ್ಲ. ಇವರುಗಳು ವೈದಿಕಾಗಮದಲ್ಲಿ ಅರ್ಚನೆ ಮಾಡುತ್ತಿದ್ದರೆಂಬುವದು ಶಾಸ್ತ್ರಸಿದ್ಧವಾಗಿರುತ್ತೆ. ಅದನ್ನ ಅನುಸರಿಸಿಯೇ ಶ್ರೀಮಚ್ಛಂಕರಭಗವತ್ಪಾದರವರು ಈದೇವರನ್ನ ಅರ್ಚಿಸಿದರು. ಅದರಂತ ಅವರ ಪೀಠವನ್ನಲಂಕರಿಸಿಧ ಗುರುಪರಂಪರೆಯುವರೆಲ್ಲಾ ಪೂಜಿಸುತ್ತಾಬಂದರು. ಈ ಗೌತಮ ಮಹರ್ಷಿಗಳಿಗೆ ಗೋಹತ್ಯಾಪವಾದ ಸಂಘಟನೆ ಮಾಡಬೇಕೆಂದು ಕೆಲವು ದುಷ್ಟರಾದ ಬ್ರಾಹ್ಮಣರು ನಡೆಸಿದ ತಂತ್ರ ಅವರಿಗೆ ತಿಳದು ಇಂಥಾ ದುಷ್ಕೃತ್ಯ

ವನ್ನು ಮಾಡಿದ ಬ್ರಾಹ್ಮಣರು ಇವರ ವಂಶೀಯರು ತಪ್ತಮುದ್ರಾಂಕಿತರಾಗಿ ಪಾಂಚರಾತ್ರ ಶೈವಾದ್ಯಾಗಮವಿಷ್ಠಾಬದ್ಧರಾಗಿ ಕೆಟ್ಟುಹೋಗಲಿ, ಎಂದು ಶಾಪಕೊಟ್ಟರೆಂತ ಗ್ರಂಥಗಳು ಇರೋಣದರಿಂದ ಗೌತಮಋಷಿಗಳ ಪಾಂಚರಾತ್ರಾಗಮ ದೀಕ್ಷಾಬದ್ಧರಲ್ಲವೆಂಬುವದು ಸ್ಪಷ್ಟವಾಗುತ್ತೆ.

೮ ಶ್ರೀರಂಗಪಟ್ಟಣದ ಶ್ರೀರಂಗನಾಥದೇವರಿಗೆ ಹಿಂದೂಮತಕ್ಕೆ ಸೇರಿದ ನಾಲ್ಕು ವರ್ಣದವರೂ ಭಕ್ತರು ಈಗ ಚರ್ಚೆಮಾಡುತ್ತಿರುವ ಶ್ರೀವೈಷ್ಣವರು ಈ ಭಕ್ತಸಮುದಾಯವೆಂಬ ಸಮುದ್ರದಲ್ಲಿ ಕೆಲವು ತುಂತುರುಗಳಾಗಿರುತ್ತಾರೆ. ಆದಾಗ್ಯೂ ತಮ್ಮ ಮತಸ್ಥರು ಪ್ರಕೃತದಲ್ಲಿ ಪೂಜಕರಾಗಿರುತ್ತಾರಷ್ಟೆ ಆದ್ದರಿಂದ ದೇವರು ತಮ್ಮ ಸ್ವಂತ ಪದಾರ್ಥವೆಂದು ಭಾವಿಸುವ ದುರಭಿಮಾನ ವಿನಹ ಇತರ ಭಕ್ತರಿಗೆ ಇರತಕ್ಕದ್ದಕ್ಕಿಂತಲೂ ಬ್ಯಾರೆ ಯಾವ ವಿಧವಾದ ವಿಶೇಷ ಬಾಧ್ಯತೆಯೂ ದೇವರಲ್ಲಿ ಇವರಿಗೆ ಇರುವಹಾಗೆ ತೋರುವದಿಲ್ಲ. ಈ ದೇವಾಲಯವು ಸಂಸ್ಥಾನಕ್ಕೆ ಸೇರಿದ್ದು, ಸರ್ಕಾರದ ಜನರಲ್ ರೆವಿನ್ಯೂಯಿಂದ ಈ ದೇವರ ಆರಾಧನೇ ಖರ್ಚು ಸಲ್ಲುತ್ತಾಯಿಥೆ. ದೇವರಿಗೆ ಧರಿಸತಕ್ಕ ವಸ್ತ್ರಾಭರಣಗಳಲ್ಲಿ ಪ್ರಾಯಶಃ ಮೈಸೂರು ಸಂಸ್ಥಾನದ ಮಹಾರಾಜರವರ ಸಂತತಿಯಿಂದಲೇ ಕೊಡಲ್ಪಟ್ಟದ್ದಾಗಿರುತ್ತೆ. ಭಕ್ತರಿಂದ ಕೊಡಲ್ಪಟ್ಟದ್ದು ಅತ್ಯಲ್ಪವಾಗಿದ್ದಾಗ್ಯೂ ಅದೂ ಸರ್ಕಾರಕ್ಕೆ ಸೇರಿದ್ದಾಗಿರುತ್ತೆ. ಹೀಗೆ ಸಂಸ್ಥಾನಕ್ಕೆ ಒಳಪಟ್ಟ ಬಾಧ್ಯತೆಯನ್ನು ಶ್ರೀವೈಷ್ಣವರಲ್ಲಿ ಕೆಲವರು ಮಾತ್ರ ತಮಗೇನೇ ಇರುವಂತೆ ಎಣಿಸಿ ಗದ್ದಲ ಮಾಡುವದು ಎಷ್ಟರಮಟ್ಟಿಗೆ ಊರ್ಜಿತವಾಗತಕ್ಕದ್ದೋ ಅದರನ್ನು ಗೌರ್ನಮೆಂಟಿನವರೇ ಆಲೋಚಿಸಬೇಕು. ಈ ಕಾರಣದಿಂದ ಇವರಿಗೆ ವಿಶೇಷ ಬಾಧ್ಯತೆ ಏನೂ ಇಲ್ಲದೇ ಇದ್ದಾಗ್ಯೂ ಚಿಜ್ಞಾನಸಾರ್ಥವಾಗಿ ಇಥೆಯೆಂದು ಇಟ್ಟುಕೊಳ್ಳುವ ಸಂದರ್ಭದಲ್ಲಿಯೂ ಇವರ ಮತಸ್ಥಾಪಕರಾದ ಶ್ರೀರಾಮಾನುಜಾಚಾರ್ಯರವರ ಅವತಾರಕ್ಕಿಂತ ಸಾವಿರಾರು ವರುಷಗಳ ಹಿಂದೆ ಶ್ರೀಮಚ್ಛಂಕರ ಭಗವತ್ಪಾದರವರು ಅವತಾರಮಾಡಿದರೆಂಬ ಅಂಶವನ್ನು ಶ್ರೀವೈಷ್ಣವರು ಒಪ್ಪಿಕೊಳ್ಳದೇ ಇದ್ದರೆ ವಿಧಿ ಇಲ್ಲವಷ್ಟೆ. ಇದರಿಂದ ಶ್ರೀಜಗದ್ಗುರುಗಳವರಿಗೆ ಇರತಕ್ಕ ಬಾಧ್ಯತೆಯು ಇವರಿಗಿಂತ ಸಾವಿರಾರು ವರುಷಗಳಮಟ್ಟಿಗೂ ಪ್ರಾಚೀನವಾಗಿರುತ್ತೆಎಂಬುವದು ಸಾಮಾನ್ಯವಾಗಿ ಸಕಲರಿಗೂ ತಿಳಿಯಬರುವಂಥಾ ಅಂಶವು ಇವರಿಗೆ ತಿಳಿಯದೇ ಹೋದದ್ದು ಮಾತ್ರವಲ್ಲದೆ, ಶ್ರೀ ಜಗದ್ಗುರುಗಳವರಿಗೆ ಹಕ್ಕೇ ಇಲ್ಲವೆಂದು ಹೇಳುವದು ಪರ್ಯಾಲೋಚನೆ ಯಿಲ್ಲದಮಾತಾಗಿ ತೋರುತ್ತೆ ಅಥವಾ ಪ್ರಕೃತ ಸಂದರ್ಭದಲ್ಲಿ ಇವರು ಮಾಡತಕ್ಕ ವ್ಯಾಜ್ಯವು ಊರ್ಜಿತವಾಗದೇ ಇದ್ದಾಗ್ಯೂ ಮುಂದೆ ಮಾಡಬೇಕಾಗುವ ಇಂಥಾ ವ್ಯಾಜ್ಯಗಳಿಗೆ ತಾವು ಫಿರ್ಯಾದಿಗಳಾಗಿ ನಿಲ್ಲುವದಕ್ಕೆ ಇದು ಬಾಧ್ಯತೆಯನ್ನು ಕೊಡತಕ್ಕ ಪ್ರಿಸೀಡೆಂಟೆಯಾನೆ ಪೀಠಿಕಾ ರಚನೆಯಾಗಿರುತ್ತೆಂದು ಭಾವಿಸಿರಬಹುದಾಗಿ ತೋರುತ್ತೆ.

೯ ಶ್ರೀರಂಗನಾಥದೇವರಿಗೆ ಸಂಪ್ರೋಕ್ಷಣೆ ಆಗಬೇಕೆಂದು ವ್ಯಾಜ್ಯಮಾಡುವರ ಸಂಖ್ಯೆಯು ಈ ದೇವರಲ್ಲಿ ಅಭಿಮಾನವಿರತಕ್ಕ ಮತ್ತು ಇವರಿಗೆ ಸಮಾನವಾಗಿ ಹಕ್ಕು, ಬಾಧ್ಯತೆವುಳ್ಳ ಇತರ ಭಕ್ತರ ಸಮುದಾಯ ಸಂಖ್ಯೆಗೂ ಮೊಕಾಬಿಲೆ ನೋಡಿದರೆ ಒಟ್ಟು ಸಮುದಾಯದಲ್ಲಿ ಲಕ್ಷ ಪ್ರಜೆಗೆ ವ್ಯಾಜ್ಯಮಾಡುವರು ಒಬ್ಬರೆಂದೂ ಕೂಡ ಗಣಿಸುವದಕ್ಕೆ ಸಾಲದ್ದಾಗಿರುತ್ತೆ. ಆದ್ದರಿಂದ ಶ್ರೀಜಗದ್ಗುರುಗಳವರು ಆಗಾಗ್ಯೆ ಶ್ರೀರಂಗನಾಥದೇವರ ಆರಾಧನೆಮಾಡತಕ್ಕದ್ದು ಸರ್ವಜನ ಸಮ್ಮತವಾದದ್ದೆಂದು ಸರ್ಕಾರದವರು ಧಾರಾಳವಾಗಿ ನಂಬತಕ್ಕದ್ದಾಗಿರುತ್ತೆ.

೧೦ ಮೇಲೆ ಹೇಳಲ್ಪಟ್ಟಿರುವ ಸಂಗತಿಗಳೆಲ್ಲಾ ಸರ್ಕಾರೀ ವ್ಯಾವಹಾರಿಕರೀತ್ಯಾ ಶ್ರೀಜಗದ್ಗುರುಗಳವರಿಗೆ ಶ್ರೀ ರಂಗನಾಥದೇವರನ್ನು ಆರಾಧಿಸತಕ್ಕ ವಿಷಯದಲ್ಲಿರತಕ್ಕ ವಿಶೇಷ ಬಾಧ್ಯತೆಯನ್ನು ತೋರಿಸತಕ್ಕವುಗಳಾಗಿ ಇರುತ್ತವೆ. ಈ ಸಂಬಂಧವಾದ ಶಾಸ್ತ್ರಾಧಾರ ಅಪ್ರತಿಹತವಾದ ಸದಾಚಾರ ಮುಂತಾದ್ದರನ್ನು ಇದರಡಿಯಲ್ಲಿ ಕೃತಪಡಿಸಿರುತ್ತೇವೆ ಏನಂದರೆ.--

೧೧ ಶ್ರೀಜಗದ್ಗುರುಗಳವರು ಶ್ರೀ ರಂಗನಾಥದೇವರಿಗೆ ಅರ್ಚನೆ ಮಾಡತಕ್ಕದ್ದು ಪಾಂಚರಾತ್ರಾಗಮಕ್ಕೆ ವಿರುದ್ಧವಾಗಿರುತ್ತೆಂದು ಫಿರ್ಯಾದಿಗಳು ಹೇಳುವ ಅಂಶವನ್ನು ಖಂಡನೆಮಾಡತಕ್ಕ ಶಾಸ್ತ್ರ ಮತ್ತು ಆಚಾರವು ಹೇರಳವಾಗಿರುತ್ತೆ. ಆ ವಿಚಾರವನ್ನು ಪೂರ್ವಪಕ್ಷ ಸಮಾಧಾನ ಸಿದ್ಧಾಂತರೂಪವಾಗಿ ಕೃತಪಡಿಸಲು ಬಹಳ ವಿಳಂಬವಾಗುತ್ತಾದ್ದರಿಂದ ಸೂಕ್ಷ್ಮವಾಗಿ ಸಾಮಾನ್ಯಾಂಶಗಳನ್ನು ತಿಳಿಸದೆ ಇದ್ದರೆ ವಿಧಿಯಿಲ್ಲವಾಗಿ ತಿಳಿಸುವದೇನಂದರೆ:-- ಶ್ರುತಿಸ್ಮೃತಿಗಳಲ್ಲಿ ಪರಸ್ಪರ ಭಿನ್ನಾಭಿಪ್ರಾಯಬಂದಾಗ್ಯೆ ಶ್ರುತಿಯೇ ಪ್ರಬಲವಾದದ್ದೆಂತಲೂ, ತದ್ವತ್ ಸ್ಮೃತಿ ಪುರಾಣಗಳಲ್ಲಿ ಸ್ಮೃತಿಬಲವಾದ್ದೆಂತಲೂ ಪುರಾಣ ಇತಿಹಾಸಾದಿಗಳಲ್ಲಿ ಪುರಾಣಬಲವಾದ್ದೆಂತಲೂ ಹೀಗೆ ಎಲ್ಲಾದ್ದರಲ್ಲಿಯೂ ಭಿನ್ನಾಭಿಪ್ರಾಯಗಳು ಬಂದಕಾಲದಲ್ಲಿ ಮಹಾಜನಗಳು ಅನುಸರಿಸಿ ನಡೆಸಿಕೊಂಡು

ಬರುವ ಆಚಾರವೇ ಬಲಿಷ್ಠವಾದದ್ದೆಂತಲೂ ಈ ಆಚಾರದಲ್ಲಿ ನವೀನಗಳು ಪ್ರಾಚೀನಗಳು ಇರುತ್ತವೆ. ಇವುಗಳಲ್ಲಿ ಪುರಾತನಕ್ಕೆ ಪ್ರಾಶಸ್ತ್ಯವಿರುತ್ತೆಂಬುವದು ಸಾಮಾನ್ಯವಾಗಿ ಸರ್ವರಿಗೂ ತಿಳಿದಿರುತ್ತೆ. ಶ್ರೀವೈಷ್ಣವರು ಶ್ರೀರಂಗನಾಥದೇವರಿಗೆ ತಾವು ನಡಿಸತಕ್ಕ ಆರಾಧನೆಯು ಪಾಂಚರಾತ್ರಾಗಮಕ್ಕೆ ಒಳಪಟ್ಟಿರುತ್ತೆಂದೂ ಇದು ಶ್ರೀವೈಷ್ಣವರು ದೇವಾಲಯಕ್ಕೆ ಸೇರಿದಾರಭ್ಯ ಆಚರಣೆಗೆ ತಂದಿರುತ್ತಾರೆಂತಲೂ ಗೊತ್ತಾಗಿರೋಣದರಿಂದ ಇವರ ಮತವೇ ನೂತನವಾಗಿರುವಲ್ಲಿ ಇವರ ಆಚಾರ ಪುರಾತನವಾಗಲಾರದಾದ್ದರಿಂದ ಇವರ ಆಚಾರವು ನವೀನಾಚಾರವೇ ಸರಿಯೆಂದು ದಾರಾಳವಾಗಿ ಹೇಳಬಹುದು. ಶ್ರೀಜಗದ್ಗುರುಗಳವರು ಮಾಡತಕ್ಕ ಆರಾಧನೆಯು ರಾಮಾನುಜ ಮತಕ್ಕಿಂತ ಸಾವಿರಾರು ವರ್ಷಗಳ ಹಿಂದಿನಿಂದಾ ಆಚರಣೆಯಲ್ಲಿ ಇರುತ್ತಾಗಿ ಇದು ಪ್ರಾಚೀನವಾದ ಆಚಾರವೆಂಬುವದು ಸ್ಪಷ್ಟವಾಗಿರುತ್ತೆ. ಮತ್ತು ಶ್ರೀಜಗದ್ಗುರುಗಳವರು ಪರಮಹಂಸಾಶ್ರಮದಲ್ಲಿ ಮಹರ್ಷಿಗಳಂತೆ ಇರತಕ್ಕವರುಗಳಾದ್ದರಿಂದ ಇತರ ಗೃಹಸ್ಥಾಶ್ರಮಗಳಂತೆ ದೀಕ್ಷಾ ವಿಧಿಗಳಿಗೆ ಬದ್ಧರಾಗುವದಿಲ್ಲ. ಇವರು ಎಲ್ಲಾ ದೀಕ್ಷಿತರಿಗಿಂತಲೂ ಶ್ರೇಷ್ಠವಾದವರು. ಮತ್ತು ಪಾಂಚರಾತ್ರಾಗಮದೀಕ್ಷೆಗೆ ಬದ್ಧರಲ್ಲದ ಗೌತಮಮಹರ್ಷಿಗಳು ಈ ದೇವರನ್ನ ಆರಾಧಿಸುತ್ತಾ ಇದ್ದರೆಂಬುವದು ಗ್ರಂಥಗಳಲ್ಲಿ ಹೇಳಲ್ಪಟ್ಟಿರುವದಲ್ಲದೆ ಇದರನ್ನ ಶ್ರೀವೈಷ್ಣವರೇ ಒಪ್ಪಿಕೊಳ್ಳುತ್ತಾರೆ. ಆಗ್ಯೆ ಇವರವೆಂದು ಹೇಳಿಕೊಳ್ಳುವ ಶ್ರೀರಂಗನಾಥದೇವರು ಹ್ಯಾಗೆ ಅಶುಚಿ ಆಗಲಿಲ್ಲವೋ ಅದರಂತೆಯೆ ಗೌತಮಮಹರ್ಷಿಗಳು ಮಾಡುತ್ತಿದ್ದ ವಿಧಿಯನ್ನ ಅನುಸರಿಸಿ ಶ್ರೀಜಗದ್ಗುರುಗಳವರ ಪರಂಪರೆಯವರೆಲ್ಲಾ ಆರಾಧಿಸತಕ್ಕದ್ದು ಅಶುಚಿತ್ವವನ್ನುಂಟುಮಾಡತಕ್ಕದ್ದಲ್ಲವೆಂಬುವದು ಮತ್ತು ಆದುನಿಕರಿಂದ ಪ್ರತಿಷ್ಠಿತವಾದ ಬಿಂಬಕ್ಕೆ ಮಾಡತಕ್ಕ ಆರಾಧನೆಯಂತೆ ಶ್ರೀವೈಷ್ಣವರು ಈ ಅನಾದಿ ದೇವರಿಗೆ ಮಾಡುವ ಆರಾಧನೆಯಿಂದ ಉಂಟಾದ ದೋಷಗಳನ್ನ ಪರಿಹಾರ ಮಾಡತಕ್ಕ ಶ್ರೀಜಗದ್ಗುರುಗಳವರು ಮಾಡತಕ್ಕ ಆರಾಧನಾ ಕ್ರಮವು ಸದಾಚಾರವಾದ್ದೆಂತಲೂ ಆಲೋಚನಾಪರರಾದವರು ತೀರ್ಮಾನಿಸದೆ ಇರಲಾರರು. ಈ ಮೇರೆ ಲೌಕಿಕಪಾರಮಾರ್ಥಿಕ ಎರಡುವಿಧವಾದ ನ್ಯಾಯಗಳು ಅಪೇಕ್ಷಿಸುವ ಸಮಾಧಾನರೂಪವಾದ ಸಂಗತಿಗಳನ್ನೆಲ್ಲಾ ಕೃತಪಡಿಸಿರುತ್ತೇವೆ

೧೦. ಮೇಲೆ ವಿವರಿಸಲ್ಪಟ್ಟ ಗ್ರಂಥಗಳು, ರಾಜರು ಮುಂತಾದವರು ಕೊಟ್ಟಿರತಕ್ಕ ಸನ್ನದಿನ ದಾಖಲೆಗಳು ದೃಷ್ಟಾಂತಗಳು, ಚಿರಕಾಲಾರಭ್ಯ ನಡೆದುಬರುವ ಮಾಮೂಲು ಶಾಸ್ತ್ರಸಮ್ಮತವಾದ ಆಚಾರವು, ಸರ್ವಜನ ಸಮ್ಮತಿಯೂ, ಇವುಗಳೆಲ್ಲಾ ಶ್ರೀರಂಗನಾಥದೇವರನ್ನ ಆರಾಧಿಸತಕ್ಕದ್ದಕ್ಕೆ ಶ್ರೀಜಗದ್ಗುರುಗಳವರಿಗೆ ಇರತಕ್ಕ ವಿಶೇಷ ಹಕ್ಕುಬಾಧ್ಯತೆಗಳನ್ನ ಸ್ಥಿರಪಡಿಸುತ್ತವೆ. ಅವುಗಳನ್ನೆಲ್ಲಾ ಘನವನ್ನ ಹೊಂದಿದ ಕೌನ್ಸಲ್ ಸಭೆಯವರು ಪರ್ಯಾಲೋಚಿಸತಕ್ಕ ಸಮಯದಲ್ಲಿ ಶ್ರೀಜಗದ್ಗುರುಗಳವರು ಈ ಮೇರೆ ದೇವತಾರಾಧನೆ ಮಾಡತಕ್ಕದ್ದು ಆ ಮಹಾನುಭಾವರ ಸ್ವಪ್ರಯೋಜನಕ್ಕಾಗಿ ಅಲ್ಲ. ರಾಜರು ಮತ್ತು ರಾಷ್ಟ್ರದ ಕ್ಷೇಮಾರ್ಥವಾಗಿ ಇವರುಗಳ ಅಪೇಕ್ಷೆಯನ್ನು ನೆರವೇರಿಸುವದಕ್ಕಾಗಿ ಮಾಡುತ್ತಾರೆ ಎಂಬುವದನ್ನು ಮನಸ್ಸಿನಲ್ಲಿಟ್ಟುಕೊಂಡು ಭಾರಿಭಾರಿಗೂ ದುಷ್ಟರು ತೊಂದರೆ ಕೊಡುವದಕ್ಕೆ ಆಸ್ಪದವಿಲ್ಲದಂತೆ ನ್ಯಾಯವಾಗಿಯೂ, ಖಂಡಿತವಾಗಿಯೂ, ಇರುವ ತೀರ್ಮಾನವನ್ನ ಅಪ್ಪಣೆ ಕೊಡಿಸಬೇಕೆಂದು ವಿನಯಪೂರ್ವಕವಾಗಿ ಬರದುಕೊಂಡ ಅರ್ಜಿ.

16/10/95 [illegible]

[illegible]

N. [illegible], Head master Govt. school [illegible]

[illegible]

ಶ್ರೀ ಜಯಲಕ್ಷ್ಮೀ ವಿಲಾಸ ಮುದ್ರಾಕ್ಷರಶಾಲಾ ದೊಡ್ಡಪೇಟೆ ಮೈಸೂರು. [illegible]

[illegible]

[illegible]

R. Ramachandrudu

[illegible]

40

R. Narayanaswamy

Sub Post Master Nelamangala

[illegible]

ಕಮಿಷನರಯಾನೆ ಇಲಾಖಾ ಸರಕಾರ ಕುಂಫನಿ ಬಹದ್ದರವರ ಪ್ರಾಂತ್ಯ,

ಮೈ ಸೂ ರು .

ನಂದನಸಂವತ್ಸರದ ಭಾದ್ರಪದ ಶುದ್ಧ ೧೧ ಯಲ್ಲೂ ಅರಮನೆಶೀಮೊಗಡಿಗಳ ಅವಿಸಾಲರವರಿಗೆ ಬರೆಸಿ ಕಳುಹಿಸಿದ ನಿರೂಪ ಅದಾಗಿ:---

ಶ್ರೀ ಶೃಂಗೇರೀಜಗದ್ಗುರುಗಳವರ ಶ್ರೀ ಮಠದಿಂದ ಮಠಮುದ್ರೆ ಬ್ರಾಹ್ಮಣರುಗಳು ನಿಮ್ಮ ನಿಮ್ಮ ತಾಲ್ಲೂಕಿನಲ್ಲಿ ಮಾಮೂಲ್‌ಮೇರಿಗೆ ಅವರ ಶಿಷ್ಯವರ್ಗಗಳ ಶ್ರೀ ಮಠದ ಆಚಾರವಿಚಾರ ವಿಚಾರಿಸಿಕೊಂಡು ಶ್ರೀ ಮಠಕ್ಕೆ ಬರತಕ್ಕ ಚರಣಕಾಣಿಕೆ, ಮೂಲಾನಕ್ಷತ್ರಕಾಣಿಕೆ, ಅಗ್ರತಾಂಬೂಲ, ದೀಪಾರಾಧನೆಕಾಣಿಕೆ, ಪ್ರಾಯಶ್ಚಿತ್ತಕಾಣಿಕೆ ಮುಂತಾಗಿ ಶಿಷ್ಯವರ್ಗ ಜನರಿಂದ ಬರಮಾಡಿಕೊಳ್ಳುವಲ್ಲ ಯಾರಾದರೂ ಕಾಣಿಕೆ ಕೊಡದೆ ಮುದ್ರಾತಿಕ್ರಮವಾಗಿ ನಡೆದುಕೊಂಡವರಿಗೆ ತಾಕೀತ್‌ಮಾಡಿ ಬಂದೋಬಸ್ತು ಮಾಡಿಸಿಕೊಡುವಬಗ್ಗೆಯೂ ಸದರೀ ಶಿಷ್ಯರಿಂದ ವಸೂಲಾದ ಕಾಣಿಕೆಗಳಿಗೆ ಯಾವ ಸರ್ಕಾರದವರೂ ಸುಂಕ ವಸೂಲ್‌ಮಾಡದಿರುವಬಗ್ಗೆಯೂ ಶ್ರೀ ಶೃಂಗೇರಿ ಶ್ರೀಮಠಕ್ಕೆ ಪೂರ್ವದಾರಭ್ಯದಿಂದ ಸೇರಿದ ಶಿಷ್ಯಜನರಲ್ಲಿ ಕೆಟ್ಟ ಹೆಣ್ಣುಗಳನ್ನೂ ಶ್ರೀಮಠದವರ ಹವಾಲಿಗೆ ಕೊಟ್ಟು ರಶೀತಿ ತಗದುಕೊಳ್ಳುವಬಗ್ಗೆಯೂ ಸದರೀ ಶ್ರೀಮಠಕ್ಕೆ ಪೂರ್ವದಾರಭ್ಯದಿಂದ ಸೇರಿದ ಬ್ರಾಹ್ಮಣರು ಮತ್ತು ಸಮಸ್ತ ಇತರ ಜಾತಿಯವರುಗಳಲ್ಲಿಯೂ ಸಹ ಆಯಾಯ ವರ್ಣಾಶ್ರಮರೀತ್ಯಾ ಆಯಾಯ ಕಾಲಗಳಲ್ಲಿ ಮುಂಜಿ, ಮದುವೆ, ಪ್ರಾಯಶ್ಚಿತ್ತ, ವಗೈರೆ ಮಾಡಿಕೊಳ್ಳತಕ್ಕಭಾಗದಲ್ಲಿ ಮಠವಿಚಾರಗಳಿಗೆ ಯಾವ ಸರಕಾರದವರೂ ಪ್ರವೇಶ ಮಾಡಕೂಡದೆಂಬುವಬಗ್ಗೆಯೂ ಶ್ರೀ ಜಗದ್ಗುರುಗಳವರ ಸವಾರಿಯು ಯಾವ ಗ್ರಾಮಗಳಿಗೆ ಬಂದಾಗ್ಯೂ ಆ ಸ್ಥಳದಲ್ಲಿರುವ ಶಿವ, ವಿಷ್ಣು, ವಗೈರೆ ವಿಶಿಷ್ಟ ದೇವಸ್ಥಾನಗಳನ್ನೂ ಶ್ರೀಗಳವರು ಪೂಜೆಮಾಡತಕ್ಕಬಗ್ಗೆ ಬಿಟ್ಟುಕೊಡತಕ್ಕಬಗ್ಗೆಯೂಸಹಾ.

೧೭೭೬ನೇ ಇಸವಿ ಏಪ್ರಿಲ್ ೨೦ಕ್ಕೆ ಸರಿಯಾದ ದುರ್ಮುಖಿಸಂ॥ ಚೈತ್ರಮಾಸದಲ್ಲಿ ಮೈಲಾಪುರಿ ಚನ್ನಪಟ್ಟಣದ ಗವರ್ನರ್ ಲಾರ್ಡ್‌ಪಿಕ್ಟಯಿ ಸಾಹೇಬರು ಕೊಟ್ಟಿರುವ ೩೬-೪೫ನೇ ನಂಬರ್ ಹುಕ್ಕುಂ. ಸದರಿ ದುರ್ಮುಖಿ ಸಂ॥ ಶ್ರಾವಣಶುದ್ಧ ೩ ಯಲ್ಲೂ ಬಂಗಾಳಾ ಗೌವರ್ನರ್‌ಜನರಲ್ ಸಾಹೇಬರು ಕೊಟ್ಟಿರುವ ೧೩೮ನೇ ನಂಬರು ಹುಕ್ಕುಂ. ೧೭೭೭ನೇ ಜನವರಿ ೨೦ಕ್ಕೆ ಸರಿಯಾದ ದುರ್ಮುಖಿಸಂ॥ ಪುಷ್ಯಮಾಸದಲ್ಲಿ ಮೈಲಾಪುರಿ ಚನ್ನಪಟ್ಟಣದ ಗವರ್ನರ್ ಲಾರ್ಡ್‌ಪಿಕ್‌ಯಿಸಾಹೇಬರು ಕೊಟ್ಟಿರುವ ೮೮ನೇ ನಂಬರುಹುಕ್ಕುಂ. ೧೭೮೨ನೇ ಅಕ್ಟೋಬರ್ ೨೮ಕ್ಕೆ ಸರಿಯಾದ ಶುಭಕೃತು ಸಂ॥ ಆಶ್ವೀಜಮಾಸದಲ್ಲಿ ತಂಜಾವೂರು ರೆಸಿಡೆಂಟರು ಜಾರ್ಜಸಲಿವಾನ್ ಸಾಹೇಬರವರು ಕೊಟ್ಟಿರುವ ೧೮ - ೨೮ನೇ ನಂಬರ್ ಹುಕ್ಕುಂ. ೧೭೮೨ನೇ ನವಂಬರ್ ೨೩ರಲ್ಲಿ ಮೈಲಾಪುರಿ ಚನ್ನಪಟ್ಟಣದ ಗವರ್ನರ್ ಲಾರ್ಡ್‌ಮೆಕಾರ್ಟ್ನಿಯವರು ಕೊಟ್ಟಿರುವ ೬೫ - ೩೪ನೇ ನಂಬರ್ ಹುಕ್ಕುಂ. ಸದರಿ ಡಿಶಂಬರ್ ೮ನೇ ತಾರೀಖಿನಲ್ಲಿ ಪ್ರಾಪ್ರಿಷಾಟ್ಸಾಹೇಬರವರು ತಂಜಾವೂರು ಮೊಕ್ಕಾಂನಿಂದ ಕೊಟ್ಟಿರುವ ೩೯ - ೮೬ ನೇ ನಂಬರ್ ಹುಕ್ಕುಂ. ೧೭೮೩ನೇ ಏಪ್ರಿಲ್ ೨೮ಕ್ಕೆಸರಿಯಾದ ಶೋಭಕೃತುಸಂ॥ ಚೈತ್ರಮಾಸದಲ್ಲಿ ಕರ್ನಲ್ ಲ್ಯಾಂಗ್ಸಸಾಹೇಬರು ತಂಜಾವೂರು ಮೊಕ್ಕಾಂನಿಂದ ಕೊಟ್ಟಿರುವ ೮೫ - ೯೬ನೇ ನಂಬರ್ ಹುಕ್ಕುಂ. ೧೭೮೩ನೇ ಮೇ ತಾರೀಖು ೪ ರಲ್ಲೂ ಜನರಲ್‌ಕೂಟೆಸಾಹೇಬರು ಕೊಟ್ಟಿರುವ ೪೫ - ೯೯ ನೇ ನಂಬರು ಹುಕ್ಕುಂ. ೧೭೮೩ನೇ ಮೇ ತಾರೀಖು ೧೬ರಲ್ಲು ಕರ್ನಲ್ ಫ್ಲೋಲಾರ್ಟನ್ ಸಾಹೇಬರವರು ಕೊಟ್ಟಿರುವ ೧೧೫ - ೧೫೦ನೇ ನಂಬರ್ ಹುಕ್ಕುಂ. ೧೭೮೫ನೇ ಇಸವಿ ಮಾರ್ಚಿ ೧೬ಕ್ಕೆ ಸರಿಯಾದ ಕ್ರೋಧಿಸಂ॥ ಫಾಲ್ಗುಣಮಾಸದಲ್ಲಿ ತಂಜಾವೂರು ರೆಸಿಡೆಂಟ್ ಹಡ್ಲಸ್ಟನ್‌ಸಾಹೇಬರುಕೊಟ್ಟಿರುವ ೧೬೬ - ೧೭೬ನೇ ನಂಬರ್ ಹುಕ್ಕುಂ. ಸದರಿ ೧೭೮೫ನೇ ಏಪ್ರಿಲ್ ೧೮ಕ್ಕೆ ಸರಿಯಾದ ವಿಶ್ವಾವಸು ಸಂ॥ ಚೈತ್ರಮಾಸದಲ್ಲಿ ಮೈಲಾಪುರಿ ಚನ್ನಪಟ್ಟಣದ ಗವರ್ನರ್ ಲಾರ್ಡ್‌ಜನರಲ್ ಮೆಡೋಸಾಹೇಬರವರು ಕೊಟ್ಟಿರುವ ೧೮೮ - ೧೯೮ನೇ ನಂಬರ್ ಹುಕ್ಕುಂ. ೧೭೮೬ನೇ ಜನವರಿ ೧೬ಕ್ಕೆ ಸರಿಯಾದ ವಿಶ್ವಾವಸು ಸಂ॥ ಪುಷ್ಯಮಾಸದಲ್ಲಿ ಲಾರ್ಡ್‌ವಾಲಿಸ ಸಾಹೇಬರವರು ಕೊಟ್ಟಿರುವ ೮೮ನೇ ನಂಬರು ಹುಕ್ಕುಂ. ೧೭೮೫ನೇ ಮಾರ್ಚಿ ೧೪ರಲ್ಲೂ ವೆಬ್ಬಸಾಹೇಬರವರು ಕೊಟ್ಟಿರುವ ೧೨೫ನೇ ನಂಬರು ಹುಕ್ಕುಂ. ೧೭೯೦ನೇ ಸಾಧಾರಣ ಸಂ॥ ವೈಶಾಖಶುದ್ಧ ೧೧ ಯಲ್ಲು ಫ್ಲಾಯಡ್‌ಸಾಹೇಬರು ಸತ್ಯಮಂಗಲದ ಮೊಕ್ಕಾಂನಿದ ಕೊಟ್ಟಿರುವ ೨೦೦-೩೦೫ನೇ ನಂಬರುಹುಕ್ಕುಂ. ಸದರಿ ವೈಶಾಖ ಬಹುಳ ೧೧ ಯಲ್ಲೂ ಕಾರ್ಜೆಟ್‌ಸಾಹೇಬರು ಕೊಯಮುತ್ತೂರು ಮೊಕ್ಕಾಮಿನಿಂದ ಕೊಟ್ಟಿರುವ ೩೪೫ - ೪೦೫ನೇ ನಂ॥ ಹುಕ್ಕುಂ. ಸದರೀ ಜ್ಯೇಷ್ಠಶುದ್ಧ ೮ ಯಲ್ಲೂ ಸರ್ವಯಜಮಾನರಾದ ಲಾರ್ಡ್‌ಕಾರ್ನ್‌ವಾಲೀಸ್‌ಸಾಹೇಬರು ಕೊಟ್ಟಿರುವ ೪೨೮ - ೪೫೪ನೇ ನಂ॥ ಹುಕ್ಕುಂ. ಸದರೀ ಶ್ರಾವಣ ಶುದ್ಧ ೧೩ ಯಲ್ಲು ಮೇಜರ್‌ಕ್ಲೋಸ್‌ಸಾಹೇಬರವರು ಕೊಟ್ಟಿರುವ ೪೬೮ - ೫೩೬ನೇ ನಂ॥ ಹುಕ್ಕುಂ. ಸದರಿ ಶ್ರಾವಣ ಬಹುಳ ೫ ಯಲ್ಲೂ ದಂಡಿನ ಯಜಮಾನರಾದ ಚಾಲ್ಮರ್ಸ್‌ಸಾಹೇಬರು ಕೊಯಮುತ್ತೂರು ಮೊಕ್ಕಾಂನಿಂದ ಕೊಟ್ಟಿರುವ ೫೪೫ - ೫೬೮ನೇ ಹುಕ್ಕುಂ. ೧೭೯೧ನೇ ಮೇ ೧ಕ್ಕೆ ಸರಿಯಾದ ವಿರೋಧಿಕೃತು ಸಂ॥ ವೈಶಾಖಮಾಸದಲ್ಲಿ ಜನರಲ್‌ಹಾರಿಸ್ ಸಾಹೇಬರು ಕೊಟ್ಟಿರುವ ೬೬೮ - ೭೮೨ನೇ ನಂ॥ ಹುಕ್ಕುಂ. ಸದರೀ ೧೭೯೧ನೇ ಮೇ ೫ ರಲ್ಲೂ ಲಾರ್ಡ್‌ವೆಲ್ಲೆಸ್ಲಿಸಾಹೇಬರವರು ಕೋರ್ಟಾಫ್ ಡೈರೆಕ್ಟರುಗಳಿಗೆ ಡಿಸ್ಪ್ಯಾಚನ್ನು ಬರಿಯುವದಕ್ಕೆ ಇಂಡಿಯಾ ಕಂಪೆನಿಯವರು ಕೊಟ್ಟಿರುವ ೧೪೧ನೇ ನಂ॥ ಹುಕ್ಕುಂ. ಸದರಿ ಮೇ ೧೫ರಲ್ಲೂ ಕೋರ್ಟಾಫ್ ಡೈರೆಕ್ಟರುಗಳು ಕೊಟ್ಟಿರುವ ೧೭೨ನೇ ನಂಬರು ಹುಕುಂ. ೧೭೯೨ನೇ ಮಾರ್ಚಿ ೩ಕ್ಕೆ ಸರಿಯಾದ ವಿರೋಧಿಕೃತು ಸಂವತ್ಸರದ ಫಾಲ್ಗುಣಮಾಸದಲ್ಲಿ ಲಾರ್ಡ್ ಕಾರ್ನ್‌ವಾಲೀಸ್‌ಸಾಹೇಬರು ಕೊಟ್ಟಿರುವ ೯೨೪ - ೯೪೮ನೇ ನಂಬರು ಹುಕ್ಕುಂ. ೧೭೯೨ನೇ ಮೇ ೧೪ಕ್ಕೆ ಸರಿಯಾದ ಪರೀಧಾವಿ ಸಂವತ್ಸರದ ವೈಶಾಖಮಾಸದಲ್ಲಿ

ಲಾರ್ಡ್ ವೆಲ್ಲೆಸ್ಲಿಸಾಹೇಬರವರು ಕೊಟ್ಟಿರುವ ೩೧೧ನೇ ನಂಬರು ಹುಕ್ಕುಂ. ೧೭೯೩ನೇ ಪ್ರಮಾದೀಚ ಸಂವತ್ಸರದ ವೈಶಾಖ ಶು॥ ೪ ಯಲ್ಲೂ ಮೈಲಾಪುರಿಚನ್ನಪಟ್ಟಣದ ಗವರ್ನರ್ ಲಾರ್ಡ್‌ಹೋಬಾರ್ಟ್ ಸಾಹೇಬರವರು ಕೊಟ್ಟಿರುವ ೯೯೬ನೇ ನಂಬರು ಹುಕ್ಕುಂ. ಸದರಿ ವೈಶಾಖ ಬ॥ ೫ ಯಲ್ಲೂ ವೆಬ್ ಸಾಹೇಬರು ಕೊಟ್ಟಿರುವ ೯೯೪ನೇ ನಂಬರು ಹುಕ್ಕುಂ. ಸದರಿ ಜ್ಯೇಷ್ಠ ಶು॥ ೭ ಯಲ್ಲೂ ಜಾರ್ಜ್‌ಸಾಹೇಬರು ಕೊಟ್ಟಿರುವ ೨೧೪ನೇ ನಂಬರು ಹುಕ್ಕುಂ. ಸದರಿ ಪ್ರಮಾದೀಚ ಸಂವತ್ಸರದ ಕಾರ್ತೀಕಮಾಸದಲ್ಲಿ ದೊಡ್ಡನವಾಬರಾದ ಹೈದರಲ್ಲಿ ಸಾಹೇಬರು ಕೊಟ್ಟಿರುವ ಸನ್ನದು. ೧೭೯೪ನೇ ಜೂನ್ ೨೪ಕ್ಕೆ ಸರಿಯಾದ ಆನಂದಸಂವತ್ಸರದ ಜ್ಯೇಷ್ಠಮಾಸದಲ್ಲಿ ಸದರಿ ಜಾರ್ಜ್‌ಸಾಹೇಬರರವರು ಕೊಟ್ಟಿರುವ ೨೪೨ನೇ ನಂಬರು ಹುಕ್ಕುಂ. ೧೭೯೫ನೇ ಇಸವಿ ಜುಲೈ ೧೯ಕ್ಕೆ ಸರಿಯಾದ ರಾಕ್ಷಸ ಸಂವತ್ಸರದ ಆಷಾಢಮಾಸದಲ್ಲಿ ಮೈಲಾಪುರಿಚನ್ನಪಟ್ಟಣದ ಗವರ್ನರ್ ಲಾರ್ಡ್‌ಹೋಬಾರ್ಟ್ ಸಾಹೇಬರು ಕೊಟ್ಟಿರುವ ೮೧೪ನೇ ನಂಬರು ಹುಕ್ಕುಂ. ೧೭೯೬ನೇ ಇಸವಿ ಫೆಬ್ರವರಿ ೧೫ರಲ್ಲೂ ಸದರಿ ಹೋಬಾರ್ಟ್‌ಸಾಹೇಬರು ಕೊಟ್ಟಿರುವ ೨೧೨ನೇ ನಂಬರು ಹುಕ್ಕುಂ. ೧೭೯೭ನೇ ಇಸವಿ ಆಗಸ್ಟ ೨೬ಕ್ಕೆ ಸರಿಯಾದ ಪಿಂಗಳ ಸಂವತ್ಸರದ ಶ್ರಾವಣಮಾಸದಲ್ಲಿ ಮೈಲಾಪುರಿಚನ್ನ ಪಟ್ಟಣದ ಗವರ್ನರ್ ಲಾರ್ಡ್ ಕ್ಲೈವ್‌ಸಾಹೇಬರು ಕೊಟ್ಟಿರುವ ೯೯೮ನೇ ನಂಬರು ಹುಕ್ಕುಂ. ೧೭೯೮ನೇ ಮಾರ್ಚಿ ೨೪ಕ್ಕೆ ಸರಿಯಾದ ಪಿಂಗಳ ಸಂವತ್ಸರದ ಫಾಲ್ಗುಣಮಾಸದಲ್ಲಿ ಸರ್ವ ಯಜಮಾನರಾದ ಬಂಗಾಳಾ ಗವರ್ನರ್‌ಜನರಲ್ ಲಾರ್ಡ್ ಮಾರ್ನಿಂಗ್ಟನ್ ಸಾಹೇಬರು ಕೊಟ್ಟಿರುವ ೩೨೬ನೇ ನಂಬರು ಹುಕ್ಕುಂ. ೧೭೯೮ನೇ ಮೆ ೧೦ಕ್ಕೆ ಸರಿಯಾದ ಕಾಳಾಯುಕ್ತಿ ಸಂವತ್ಸರದ ವೈಶಾಖಮಾಸದಲ್ಲಿ ಲಾರ್ಡ್‌ಕ್ಲೈವ್‌ಸಾಹೇಬರು, ಲಾರ್ಡ್ ಮಾರ್ನಿಂಗ್ಟನ್‌ಸಾಹೇಬರೂ ಸಹ ಕೊಟ್ಟಿರುವ ೧೮೪ನೇ ನಂ॥ ಹುಕ್ಕುಂ. ೧೭೯೯ನೇ ಜನವರಿ ೧೪ಕ್ಕೆ ಸರಿಯಾದ ಕಾಳಾಯುಕ್ತಿ ಸಂವತ್ಸರದ ಪುಷ್ಯಮಾಸದಲ್ಲಿ ಜನರಲ್ ಹಾರಿಸ್‌ಸಾಹೇಬರವರು ಕೊಟ್ಟಿರುವ ೧೧೦ನೇ ನಂಬರು ಹುಕ್ಕುಂ. ಇದೇ ಪುಷ್ಯ ಬ॥ ೧೪ರಲ್ಲೂ ವೆಬ್‌ಸಾಹೇಬರು ಕೊಟ್ಟಿರುವ ೩೪೮ನೇ ನಂಬರು ಹುಕ್ಕುಂ. ೧೭೯೯ನೇ ಎಪ್ರಿಲ್ ೧೬ಕ್ಕೆ ಸರಿಯಾದ ಸಿದ್ಧಾರ್ಥಿ ಸಂವತ್ಸರದ ಚೈತ್ರಮಾಸದಲ್ಲಿ ಲಾರ್ಡ್‌ಕ್ಲೈವ್‌ಸಾಹೇಬರ ಹುಕ್ಕುಂ ಮೇರಿಗೆ ವೆಬ್‌ಸಾಹೇಬರು ಕೊಟ್ಟಿರುವ ೮೧೬ನೇ ನಂಬರು ಹುಕ್ಕುಂ. ೧೭೯೯ನೇ ಮೇ ೧೪ಕ್ಕೆ ಸರಿಯಾದ ಸಿದ್ಧಾರ್ಥಿಸಂವತ್ಸರದ ವೈಶಾಖಮಾಸದಲ್ಲಿ ಜನರಲ್ ಹಾರಿಸ್‌ಸಾಹೇಬರು ಕೊಟ್ಟಿರುವ ೮೬ - ೩೩೨ನೇ ನಂಬರು ಹುಕ್ಕುಂ. ೧೭೯೯ನೇ ಜೂನ್ ೩೦ರಲ್ಲೂ ಸರ್ವ ಯಜಮಾನರಾದ ಬಂಗಾಳಾ ಗವರ್ನರ್‌ಜನರಲ್ ಲಾರ್ಡ್ ಮಾರ್ನಿಂಗ್ಟನ್‌ಸಾಹೇಬರವರು ಕೊಟ್ಟಿರುವ ೫೧೬ನೇ ನಂಬರು ಹುಕ್ಕುಂ. ಈ ಹುಕ್ಕುಂಗಳನ್ನು ಅನುಸರಿಸಿ ಪ್ರಭವಸಂವತ್ಸರದ ಆಶ್ವೀಜ ಶು॥ ೩ ಮಕ್ರೂಂನಲ್ಲೂ, ಸದರಿ ಪ್ರಭವಸಂವತ್ಸರದ ಮಾರ್ಗಶಿರ ಬ॥ ೧೩ ಭಾನುವಾರದ ಮಕ್ರೂಂನಲ್ಲೂ, ವಿಭವಸಂವತ್ಸರದ ಮಾರ್ಗಶಿರ ಶು॥ ೩ ಭಾನುವಾರದ ಮಕ್ರೂಂನಲ್ಲೂ ಸಹ ದಿವಾನ್ ಪೂರ್ಣಯ್ಯನವರು ಕೊಟ್ಟಿರುವ ಪರವಾನೆ ಮತ್ತು ರಹದಾರಿ. ೧೮೦೩ನೇ ಡಿಶೆಂಬರು ೨೩ರಲ್ಲೂ, ೧೮೦೮ನೇ ನವಂಬರು ೨೧ರಲ್ಲೂ ಸಹ ರಸಿಡೆಂಟರು ಕೋಲ್‌ಸಾಹೇಬರು ಕೊಟ್ಟಿರುವ ೯೪೨ - ೮೨೬ನೇ ನಂಬರು ಹುಕ್ಕುಂಗಳು, ೧೮೦೮ನೇ ನವಂಬರು ೨೧ರಲ್ಲೂ ಮೈಲಾಪುರಿಚನ್ನಪಟ್ಟಣದ ಗವರ್ನರ್ ಲಾರ್ಡ್ ಬಲೂರ್‌ಸಾಹೇಬರು ಕೊಟ್ಟಿರುವ ೯೦೮ನೇ ನಂಬರು ಹುಕ್ಕುಂ. ಸನ್ ೧೮೨೧ನೇ ಇಸವಿ ಜೂನ್ ತಾರೀಖು ೨೭ರಲ್ಲೂ ಮತ್ತು ೧೮೨೬ನೇ ಇಸವಿ ಸೆಪ್ಟೆಂಬರು ತಾರೀಖು ೯ರಲ್ಲೂ ಸಹ ಮಹಾರಾಜರಾಜಾಸಾಹೇಬ್ ಬಹದ್ದರವರು ಕೊಟ್ಟಿರುವ ಸನ್ನದು, ಮತ್ತು ರಹದಾರಿ ಸಹ ಸಾದರಾಗಿ ಇರುವವನ್ನು ಶ್ರೀಮಠದ ಪಾರುಪತ್ಯೇಗಾರ ಭಿಕ್ಷೈಯ್ಯಶಾಸ್ತ್ರಿಗಳು ಹುಜೂರಲ್ಲಿ ಹಾಜರ್ಮಾಡಿ ಈ ಮೇರಿಗೆ ಅಪ್ಪಣೆ ಆಗಬೇಕೆಂದು ಅರ್ಜಿ ಮಾಡಿಕೊಂಡದ್ದರಿಂದ ಅಪ್ಪಣೆ ಕೊಡಿಸಿ ಇದ್ದೇತು. ಸದರಿ ಬರಸಿರುವ ಮೇರಿಗೂ ಬಿಲ್‌ಷೇಲ್‌ಸಾಬುಕಿನ ಹುಕ್ಕುಂಗಳು, ಪರವಾನೆ ಸನ್ನದು, ರಹದಾರಿ ಸಹ ಇರುವ ಮಾಮೂಲ್ಕೇರಿಗೆ ನಡೆದುಕೊಳ್ಳುವದು.

ತಾರೀಖು ೫ನೇ ಮಾಹೆ ಸೆಪ್ಟೆಂಬರ್ ಸನ್ ೧೮೩೨ನೇ ಇಸವಿ ದರಜಾಗಾ ಬೆಂಗಳೂರು ಕ್ಯಾಷ್ ಮೇಜರ್ ಕಮಿಶನರ್ ಎಂದು ಸೈನಿಫೆ. ಸೂರಪ್ಪ, ಹೆಡ್ ಶಿವಾನ್ ಎಂದು ಸೈನಿಫೆ.

ಶ್ರೀಮತ್ಪರಮಹಂಸ ಯಥೋಕ್ತಬಿರುದಾಂಕಿತರಾದಂಥ ಶ್ರೀ ಸಚ್ಚಿದಾನಂದಭಾರತಿಗಳಿಗೆ.

ಟೀಪು ಸುಲತಾನ್ ಪಾದಷಹರು ಮಾಡುವ ಸಲಾಂ. ನೀವು ಕಳುಹಿಸಿದ ಪತ್ರಿಕೆಯಿಂದ ಎಲ್ಲಾ ವಿವರವು ತಿಳಿಯಬಂತು. ನಮ್ಮ ಸರಕಾರದ ಶೀಮೆಯಲ್ಲಿ ಇರುವ ದೇವಸ್ಥಾನ ಪುಣ್ಯಕ್ಷೇತ್ರಗಳಲ್ಲೂ ದೇವತಾದರ್ಶನಮಾಡಿಕೊಂಡು ಬರತಕ್ಕಬಗ್ಯೆ ಅಪ್ಪಣೆಕೊಟ್ಟು ರಹದಾರಿ ಕಳುಹಿಸಿಕೊಟ್ಟಲ್ಲಿ ಹೋಗಿ ದೇವರ ಸನ್ನಿಧಿಗಳಲ್ಲಿ ಸರಕಾರದ ಶ್ರೇಯಸ್ಸು ಪ್ರಾರ್ಥಿಸಿಕೊಂಡು ಬರುವದಾಗಿ ಬರದು ಇರುವದು ಸರಿಯಷ್ಟೆ; ಅದೇಪ್ರಕಾರಕ್ಕೆ ರಹದಾರಿ ಕಳುಹಿಸಿ ಇದ್ದೇತು. ಸರಕಾರದ ಶೀಮೆಯಲ್ಲಿರುವ ದೇವತಾಸ್ಥಳ ಪುಣ್ಯಕ್ಷೇತ್ರಗಳಲ್ಲಿ ಸಹ ಹೋಗಿ ದೇವರ ಸನ್ನಿಧಾನಗಳಲ್ಲು ತಾವು ತ್ರಿಕಾಲ ಈಶ್ವರಪೂಜೆಯನ್ನೂ ಸಹ ಸರಕಾರದ ಶ್ರೇಯೋಭಿವೃದ್ಧಿಯಾಗುವಂತೆ ಈಶ್ವರಪ್ರಾರ್ಥನೆ ಮಾಡಿಕೊಂಡು ಬರುವಹಾಗೆ ಮಾಡಿಸುವದು. ತಾರೀಖು ೧೦ನೇ ಮಾಹೆ ಜಾಫರಿಸಾಲ್ ಇರಾರಸಕ್ ಸನ್ ೧೨೨೪ ಮಹಮ್ಮದು ನಳಸಂವತ್ಸರ ಎಂತೆ ಇಧೆ.

ಜಯಲಕ್ಷ್ಮೀವಿಲಾಸಮುದ್ರಾಕ್ಷರಶಾಲಾ ದೊಡ್ಡಪೇಟೆ ಮೈಸೂರು.

मोहर.

श्री.

॥ जगद्गुरुयाच ॥

हे संस्थान च विशिष्ट आमील व शिरस्तेदार याम लिहिवावुन पाठविल संनद वैगेरि विला ऐसाजे आमिला न शिरस्तेदारा न हाल इस्तकवाल मोकदंमा निमुजारे या सरकार दारुल रियासत मैहिसूर विदानद ॥ ॥ श्री श्रिंगेरी ॥ ॥ श्रीमठाहून मटमुद्र ब्राह्मण एउन तुमच तुमच तालूकेंत मामूलप्रकार त्याच शिष्यवर्गा च वर्णाश्रम च आचारविचार विचारणाकरून घेउन श्रीमठासएणे च चरणकाणिका मूलानक्षत्रकाणिका अग्रतांबूल दीपराधनकाणिका प्रायश्चित्तकाणिका सुदा शिष्यवर्गलोका कडून एणे सारीख करुन घेणेच्या विषयांत हि कोणी तरी काणिका देइनाते मुद्रा अतिक्रमवाणि चालतरि त्यास ताकीद करुन बंदोबस्त करवाउन देणेच्या सही सदरी शिष्या कडून वसूल जाहलेतें काणक्यास कोणि जकात वसूल करिना सारिखहि श्री श्रिंगेरी श्रीमठास पूर्वापासून मिळालते शिष्यमंडलींत वाइट जाहलेते बाइकास श्रीमटच हवाला करुन रशीद घेणे विशया सहि सदरी श्रीमठास मिळालते ब्राह्मण सुदा समस्त इतर वर्णाश्रमांत हि सुदा त्यास्या वर्णाश्रमप्रकार त्यास्या कालांत उपनयन विवाह प्रायश्चित्त वगैरे करुन घेणेच विषयांत ही सरकारवालेनि प्रवेश करितानये ह्मणुन हि श्री श्रिंगेरि ॥ ॥ याच सवारिहि कोणत कोणतग्रामास आलियाहि तुमचतुमच तालूक सरहदेंत त्यास्या स्थलांत असणेच शिवालय विष्णु आलय वगैरे देवस्थानांतहि असणेच सदरि देवास श्री श्रियानि पूजा करणेवदल सोडून देणेविषइ सुदा याप्रकार निरोपव्हाव ह्मणून हजूर शिरस्तेदार तिरमलपंडित व आणि द्यावपैया व श्रीमठाधिकार पद्मनाभशास्त्रि याणि सुदा हजूरात अर्जकरून घेतलकरिता त्यास निरोपदेणेच काय ह्मणिजे सदरी प्रमाणे वरिलिहिले सारिख केव्हाहि चालून घेउन एणेच नव्हत हेसंनदच नकल प्रति तालूकेच शिरस्तेदाराच दफ्तरास दाखल करुन घेउन असल संनद सदरि तिरमलपंडित याच सुफर्देसहो पद्मनाभशास्त्रीयाच सुफर्देसहो वापस देणेच आहे जाणिजे तारीख २९ वि माहे दिनिसालसाहोर संन १२२१ने मरकुंम प्रमादीच संवत्सर कार्तीकमास खत लक्षीनारणैया मुनषी हजूर.

हेजागि फारषींत टीपू सुलतानयाच दस्तखतआहे.

हे जागि चारि महाराष्ट्र दफ्तरदाराच दाखला आहे.

मोहर.

हे जागि फारषीत संनददाखला आहे.

PRINCIPAL — SEAL of NIZAM ALI KHAN NIZA-MUL MULK DATED 1175-H — ROYAL ORDER

Addressed to the Goomastas of Jagirdars, Desa Mukies, Desa Pandayas, Monegars, Potels, Farmers, &c., &c, in the Subhas of Deckan, Hyderabad

Whereas the Vakeel of the *Sri Swami Jagadguru, Sumsthan Sringeri* represents that the Sri Swami is about to set out on tour in the Deckan with certain insignia on the strength of a *Sunud* formerly issued by this Government: that the usual honors specified in the said *Sunud* issued under the seal of thist kingdom should be continued that the practice of offering to the Mutt annual contributions and nuzars during the occasion of marriage, &c., should be continued, that the Enams, Jagirs, &c, bestowed on the *Mutt* should be continued as before; and that no other Guru be allowed to travel about with the above said honors and insignia

Wherefore it is directed thus:——

In accordance with the above representation the orders formerly issued in regard to the Guru's progress in this kingdom with the usual insignia, the usual *Istakabole, Bichsha Kanicay* (offering) of the people to the said Mutt are hereby renewed. It is further ordered that the property of such disciples of the said *Mutt* as may die *Bewaris* (without heirs) shall vest in the said *Mutt* and that the *Swami* is the supreme in the matter of the performance on the part of his disciples of their respective religious duties. This order will have reference to the following matters.——

1. The said swami will have authority in the Mulikarjoona and other temples.
2. *The Enams, Jagirs*, &c., bestowed on the *Mutt* to continue as before.
3. The elephants and horses in the possession of *Jorsas* to be the property of the *Mutt*.
4. The property of *Sunyasis*, *Avadhutas* and such others who may die without heirs to vest in the *Mutt*.
5. During the occasion of marriages, &c, among the Mutt disciples, the first honors, *Nuzurs*, &c, to be offered to the *Mutt*.
6. That out of the temple founds a contribution of one anna in the Rupee to be paid in to the *Mutt*.
7. That a portion of the allowance made for the *Lungurkhana* and *Kyrat* for Mussulmen *Fakeers* to be paid in to the *Mutt*.

Dated 24th Rubei Sani 1196 Higiri corresponding with the year A. D. 1779/80.
Registerd in the Huzur Dufter 3rd Jamadilevel in the year 1196 Hijiri.
Registerd in the Dewan's Dufter 1st Jamadilevel in the year 1196 Hijiri.
Copy registered in the Sultan's Dufter 1st Jamadi level in the year 1196 Hijiri corresponding to A. D. 1779—80

The above is a translation from Persian language

Jayalakshmi vilasa press, mysore.

GENERAL NO. 2396/101 OF 1868-69.

MYSORE COMMISSIONER'S OFFICE,

Bangalore, 27th July, 1868

TO

The Secretary to the Government of India,
Foreign Department.

SIMLA.

SIR,

In reply to para 2 of your letter 1201, dated 16th instant, I have the honor to submit for the information of the Government of India the following explanation

2. The Sringeri Guru is the direct representative of the Sectarian Shunkar Acharya and is the acknowledged spiritual Director not only of the greater proportion of the Hindus of Southern India, but also of those of the leading Maharatta Houses, such as Holakr and the former Peshwas. It may be said that his influence is far greater than that of any Hindu spiritual guide in India and I presume it is for this reason that he is regarded with such unlimited respect. He is the only Guru in the Province who is permitted to carry the Adda Palkee or Cross Palaukeen, and he has in his possession Sunuds of great antiquity from the Nizam, the Peishwas, the Mysore Rajah, Holkar and others all enjoing the utmost respect to be paid to him.

3. Owing to the extraordinary veneration in which he has always been held, a [illegible] of Silledars has been attached to him from the earliest period and on the occasion of his visiting H. M. Territory an extra escort has always been given, to which purport the Guru holds several communications to and from the Madras Government.

4. The Guru enjoys Enam lands valued at more than half a lac in the Kadur district near the sources of the Toongabhadra river, and during his periodical tours in Mysore receives from his disciples large sums of money which he distributes in charity. The late Rajah used to pay him Rs. 1000 a month.

5. The Guru Narsing Bhartee is a venerable old man of 72, who has been a great traveller and has a considerable reputation for learning. He is deservedly respected, being very unassuming in manner and having a well established character for benevolence and wisdom.

6. I may observe that I do not think it expedient to curtail the Guru of his customary guard of honor, but I have endeavoured to dissuade him from proceeding to Her Majesty's Territory with any additional followers, although he can quote undoubted precedents for the practice.

I have, &c.,

(Signed) L. BOWRING,

Commissioner.

No. 1360

FROM

W. S. SETON KARR, ESQ.,

Secretary to the Government of India.

TO

THE COMMISSIONER OF MYSORE.

SIR,

I have the honor to acknowledge the receipt of your letter dated 27th ultimo, No. 2369/101, submitting an explanation in regard to the escort of Silledar Horse furnished to the Sringeri Guru.

2. In reply, I am directed to state that His Excellency the Viceroy and Governor General in Council accepts your explanation of the custom in force regarding the native gentleman and approves the views set forth in the 6th paragraph of the letter under acknowledgment.

I have the honor to be,
Sir.
Your most obedient Servant,
(Signed) W. S. SETON KARR,
Secretary to the Government of India,

SIMLA,
19th August, 1868

True copy,

(Signed) L BOWRING

Put up to Muzrai Sec
13/11/95

13

ಮೈಸೂರು ಸಂಸ್ಥಾನದ ಎಗ್ಸಿಕ್ಯೂಟಿವ್ ಕೌನ್ಸಿಲ್ ಪ್ರಸಿಡೆಂಟ್ ಮತ್ತು ದಿವಾನ್ ಸರ್. ಕೆ. ಶೇಷಾದ್ರಯ್ಯನವರ ಸನ್ನಿಧಾನಂಗಳಿಗೆ.

——:o:——

ನಿವಾಸಿಗಳಾದ ಬ್ರಾಹ್ಮಣರು ಮೊದಲಾದ ಚತುರ್ವರ್ಣದ ಪ್ರಜೆಗಳು ಬರದುಕೊಂಡ ಅರ್ಜಿ —

ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳಸ್ವಾರಿಯು ಕಳೆದ ಜೂನ್ ಮಾಹೆಯಲ್ಲಿ ಮೈಸೂರಿಗೆ ಬಿಜಯಂಗೈಯ್ಯುತ್ತಿದ್ದಕಾಲದಲ್ಲಿ ಶಿಷ್ಯಜನರ ಪ್ರಾರ್ಥನಪೂರ್ವಕ ಶ್ರೀರಂಗಪಟ್ಟಣದ ಕೋಟೆವಳಕ್ಕೆ ದಯಮಾಡಿಸಿ ಅಲ್ಲಿ ರಂಗನಾಥಸ್ವಾಮಿದೇವರ ದರ್ಶನವಂ ಮಾಡಿದ್ದಕ್ಕಾಗಿ ದೇವರಿಗೆ ಸಂಪ್ರೋಕ್ಷಣೆ ಆಗಬೇಕೆಂದು ಶ್ರೀವೈಷ್ಣವರಲ್ಲಿ ಕೆಲವರು "ಅ ಖಿ ಲ ವೈ ಷ್ಣ ವ ಸ ಭಾ" ಎಂದು ದೊಡ್ಡ ಹೆಸರನ್ನಿಟ್ಟುಕೊಂಡು ಸರ್ಕಾರದಲ್ಲಿ ಫಿರ್ಯಾದುಮಾಡಿದ್ದರಮೇಲೆ ಸ್ಮಾರ್ತಜನಗಳು ಸಂಪ್ರೋಕ್ಷಣೆ ಮಾಡಕೂಡದೆಂದು ತಕರಾರುಮಾಡಿದ್ದಕ್ಕಾಗಿ ೧೮೯೫ನೇ ಇಸವಿ ಜೂನ್ ೨೩ನೇ ತಾರೀಖಿನಲ್ಲಿ ಮುಜರಾಯಿ ಸೂಪರಿಂಟೆಂಡೆಂಟರವರು ಖುದ್ದು ವಿಚಾರಣೆ ಮಾಡಿ ಗೌರ್ನಮೆಂಟಿಗೆ ಮಾಡಿದ ರಿಪೋರ್ಟನ್ನ ಪರಾಂಬರಿಸಿ ಗೌರ್ನಮೆಂಟಿನವರಿಂದ ತೀರ್ಮಾನದ ಹುಕುಂ ಕೊಡೋಣವಾಗಿರುತ್ತೆ. ಈತೀರ್ಮಾನವು ದ್ವೇಷಾಸೂಯಾಪರರಾದ ಕೆಲವರಿಗೆ ತೃಪ್ತಿಕರವಾಗದೆ ಅವರು ವರ್ತಮಾನಪತ್ರಿಕೆಗಳಿಂದ ಮನಸ್ವಿಚರ್ಚೆಯನ್ನು ಮಾಡುತ್ತಾ ಇರುವದಲ್ಲದೆ ತಮ್ಮ ಅಭಿಪ್ರಾಯದಂತೆ ಸಂಪ್ರೋಕ್ಷಣೆಗೆ ಹುಕುಂ ಕೊಡದೇಹೋದಲ್ಲಿ ಮತಸಮ್ಮಂಧವಾದ ಮರಣವನ್ನ ಹೊಂದುತ್ತೇವೆಂಬದಾಗಿ ಬರಿಯೋಣವೇ ಮುಂತಾದ್ದರಿಂದ ಗೌರ್ನಮೆಂಟಿನವರಿಗೆ ಘಾಬರಿಯನ್ನುಂಟುಮಾಡಿ ತನ್ಮೂಲಕ ನ್ಯಾಯಕ್ಕೆ ವಿರುದ್ಧವಾಗಿರತಕ್ಕ ತಮ್ಮ ಸ್ವಾರ್ಥಗಳನ್ನ ಪಡೆಯಬೇಕೆಂದು ಪುನಃಪುನಃ ಶ್ರೀಮನ್ಮಹಾರಾಜ್ಞೀ ರೀಜೆಂಟರವರಿಗೂ ರಸಿಡೆಂಟ ಸಾಹೇಬರಿಗೂ ಅರ್ಜಿಯನ್ನು ಕೊಡುವದೇ ಮುಂತಾದ ದುಸ್ಸಾಧನಾಪ್ರಯತ್ನದಲ್ಲಿರುತ್ತಾರೆ.

ಈ ವಿಚಾರವನ್ನ ಕುರಿತು ನಾವು ಗಾರ್ನಮೆಂಟಿಗೆ ಶೃತಪಡಿಸತಕ್ಕದ್ದೇನೂ ಇಲ್ಲದೇ ಇದ್ದಾಗ್ಯೂ ಪ್ರೊಸೀಡಿಂಗ್ಸಿನ ೮ನೇ ಪ್ಯಾರಾದಲ್ಲಿ ನಮೂದಿಸಿರುವ ಸಂದರ್ಭದಲ್ಲಿಯೂ ಶ್ರೀವೈಷ್ಣವರಿಗೆ ಶ್ರೀ ರಂಗನಾಥಸ್ವಾಮಿದೇವರಮೇಲೆ ಇರತಕ್ಕ ಹಕ್ಕುದಾರಿ ವಿಚಾರವಲ್ಲೂ ಅರಿಕೆಮಾಡಿಕೊಳ್ಳುವದನ್ನ ಘನತೆಯನ್ನ ಹೊಂದಿದ ಕೌನ್ಸಿಲ್ ಸಭೆಯವರು ಸಾವಧಾನವಾಗಿ ಪರ್ಯಾಲೋಚಿಸಬೇಕೆಂದು ಬೇಡುತ್ತೇವೆ.

೧ ನೇದು ಮೇಲ್ಕಂಡ ಪ್ರೊಸಿಡಿಂಗ್ಸಿನ ನಾಲ್ಕನೇ ಪ್ಯಾರಾ. * * * * * * * *

* ವೇದೋಕ್ತ ಕರ್ಮಾನುಷ್ಠಾಯಿಗಳಾದ ಬ್ರಾಹ್ಮಣರಿಗೆ ವಿಧಿರೂಪವಾಗಿರುವ ಆಗಮಗಳಪ್ರಕಾರ ಪೂಜೆಗಳಂ ನಡೆಸಲ್ಪಡುವ ಒಂದು ದೇವಾಲಯದಲ್ಲಿ ಒಬ್ಬ ಮಠಾಧಿಪತಿಯಾದವರು ಪೂಜೆಮಾಡಬಹುದೆಂಬ ಸಾಮಾನ್ಯ ಜಿಜ್ಞಾಸೆಯನ್ನಾಗಲೀ ಅಥವಾ ಮಾಮೂಲ್ ಅನುಸರಿಸಿ ಶೃಂಗೇರಿಸ್ವಾಮಿಗಳವರಿಗೆ ಇಂಥಾ ವಿಷಯಗಳಲ್ಲಿ ಯಾವದಾದರೂ ವಿಶೇಷ ಬಾಧ್ಯತೆ ಉಂಟೆ ಎಂಬ ಮುಖ್ಯವಾದಜಿಜ್ಞಾಸೆಯನ್ನಾಗಲಿ, ಪ್ರಕೃತ ಮೊಕದ್ದಮೆಯನ್ನು ಫೈಸಲ್ ಮಾಡುವದರಲ್ಲಿ ಆಲೋಚಿಸಬೇಕಾದ್ದು ದೈವಾತ್ ಅನಾವಶ್ಯಕವಾಗಿದೆ. ಕಳೆದ ಜೂನ್ ತಿಂಗಳು ೧೦ನೇ ತಾರೀಖಿನಲ್ಲಿ ಶೃಂಗೇರಿಸ್ವಾಮಿಗಳವರು ದೇವರಿಗೆ ಪೂಜೆಮಾಡಬೇಕೆಂಬ ಉದ್ದೇಶ್ಯದೊಡನೆ ದೇವಾಲಯಕ್ಕೆ ದಯಮಾಡಿಸಿದವರಲ್ಲವೆಂದು ಹೇಳುವದು ಪ್ರಕೃತ ಮೊಕದ್ದಮೇವ್ಯವಸ್ಥೆಗೆ ಸಾಕಾದ್ದಾಗಿದೆ. * *
* *

ವಿಷ್ಣುದೇವಾಲಯಗಳಲ್ಲಿ ಶೃಂಗೇರಿ ಜಗದ್ಗುರುಗಳವರು ಪೂಜೆಮಾಡತಕ್ಕದ್ದಕ್ಕೆ ಅವರಿಗೆ ವಿಶೇಷ ಬಾಧ್ಯತೆ ಇರತಕ್ಕದ್ದನ್ನ ವಿಚಾರಮಾಡತಕ್ಕದ್ದು ಈ ಮೊಕದ್ದಮಾ ತೀರ್ಮಾನಕ್ಕೆ ಮುಖ್ಯವಾದ ಅಂಶವಾಗಿತ್ತು.

ಹಾಗೆ ಮಾಡಿಸಿ ತೀರ್ಮಾನವನ್ನ ಅಪ್ಪಣೇಕೊಡಿಸಿದ್ದಪಕ್ಷದಲ್ಲಿ ಶ್ರೀವೈಷ್ಣವರು ಪುನಃಪುನಃ ಚರ್ಚಿಸುವಕ್ಕೂ ಶೃಂಗೇರಿಮಠದ ಶಿಷ್ಯರಾದ ನಾಲ್ಕು ವರ್ಣದವರೂ ಈ ವಿಚಾರವಾಗಿ ಗೌರ್ನಮೆಂಟನವರಿಗೆ ತೊಂದರೆ ಕೊಡುವದಕ್ಕೂ ಅವಕಾಶವಾಗುತ್ತಿರಲಿಲ್ಲ. ಎಂಬುವದನ್ನ ಭಯಭಕ್ತಿಗಳೊಡನೆ ಅರಿಕೆ ಮಾಡಿಕೊಳ್ಳುತ್ತೇವೆಯೇ ಹೊರ್ತು ಗೌರ್ನಮೆಂಟನವರ ನಡವಳಿಕೆಮೇಲೆ ಆಕ್ಷೇಪರೂಪವನ್ನಾಗಿ ಅರಿಕೆಮಾಡುವವಿಲ್ಲ ಎಂಬುವನ್ನ ಘನವಾದ ಚಿತ್ತದಲ್ಲಿ ಲಾಲಿಸಬೇಕು.

೨ ಬ್ರಾಹ್ಮಣ್ಯವು ಕೆಲವು ಶತಮಾನಗಳ ಕೆಳಗೆ ಬೌದ್ಧರ ಪ್ರಾಬಲ್ಯದಲ್ಲಿ ಕ್ಷೀಣಗತಿಗೆ ಬಂದದ್ದರಿಂ ದೇವಾಲಯ ಮೊದಲಾದವುಗಳೆಲ್ಲಾ ಬೌದ್ಧಾಕ್ರಾಂತಗಳಾಗಿರಲು ಶ್ರೀಮಚ್ಛಂಕರಭಗವತ್ಪಾದರವರು ಅವತರವಂಮಾಡಿ ಈ ದುರ್ಮತಗಳನ್ನೆಲ್ಲಾ ಖಂಡಿಸಿ ಬ್ರಾಹ್ಮಣ್ಯವನ್ನ ಜೀರ್ಣೋದ್ಧಾರಮಾಡಿ ಷಣ್ಮತಗಳನ್ನೂ ನ್ಯಾಸಾಶ್ರಮವನ್ನೂ ಶಿವವಿಷ್ಣ್ವಾದಿ ಪಂಚಾಯತನಾರಾಧನ ಕ್ರಮವನ್ನೂ ಸಹಾ ಶಾಸ್ತ್ರೀಯ್ಯವಾದದ್ದೆಂದ ಸ್ಥಾಪಿಸಿದಂಥಾವರಾಗಿ ಅದರಂತೆ ತಾವು ಆಚರಣೆಮಾಡುತ್ತಾ ತಮ್ಮ ಶಿಷ್ಯಮಂಡಲಿಯಿಂದ ನಡೆಸುತ್ತಲೂ ಬಂದರು. ಅನ್ಯಮತಾಕ್ರಾಂತವಾಗಿ ನಾಮಾವಶಿಷ್ಟವಾಗಿದ್ದ ಆಸೇತು ಹಿಮಾಚಲಪರ್ಯಂತ ಇರತಕ್ಕ ದೇವಾಲಯಗಳಿಗೆಲ್ಲಾ ಪ್ರೋಕ್ಷ್ಯ ಅವುಗಳನ್ನ ವಿಧ್ಯುಕ್ತವಾಗಿ ಶುದ್ಧಿಮಾಡಿ ಶಿವವಿಷ್ಣುದೇವರುಗಳಿಗೆಲ್ಲಾ ಯಂತ್ರೋದ್ಧಾರ ಕುಂಭಾಭಿಷೇಕ ಮುಂತಾದ್ದನ್ನ ಶಾಸ್ತ್ರೋಕ್ತವಾದ ವಿಧಿಗಳಿಂದ ನಡಿಸಿ, ದೇವತಾಸಾನ್ನಿಧ್ಯ ಉಂಟಾಗುವಂತೆಮಾಡಿ ತಾವು ಸ್ವತಃ ಆ ದೇವರುಗಳನ್ನ ಪೂಜೆಮಾಡಿ ನಂತರ ಆಯಾಯ ಸ್ಥಳದಲ್ಲಿರತಕ್ಕ ಬ್ರಾಹ್ಮಣರಿಗೆ ಪೂಜೆಮಾಡುವದಕ್ಕೆ ಅಪ್ಪಣೇಕೊಡಿಸಿದರೆಂಬುವದು ಶಂಕರವಿಜಯ ಮೊದಲಾದ ಅನೇಕ ಗ್ರಂಥಗಳಿಂದ ತಿಳಿಯಬರುತ್ತೆ.

೩ ಶ್ರೀಶಂಕರ ಭಗವತ್ಪಾದರವರ ತರುವಾಯ ಆ ಪೀಠವನ್ನಲಂಕರಿಸಿದ ಗುರುಪರಂಪರೆಯವರೆಲ್ಲಾ ಮೇಲೆಹೇಳಿದ ಕ್ರಮದಲ್ಲೆ ಆಚಾರ ವಿಚಾರಗಳನ್ನ ಪರಾಮರ್ಶಿಸುವದಕ್ಕಾಗಿ ಸಂಚಾರ ಹೊರಟಕಾಲಗಳಲ್ಲಿ ಶಿಷ್ಯವ ಶಿವವಿಷ್ಣು ದೇವಾಲಯಗಳಿಗೆ ದಯಮಾಡಿಸಿ ದೇವತಾರಾಧನೆಯನ್ನ ನಡೆಸುತ್ತಾ ಇಧಾರೆ.

೪ ಏತನ್ಮಧ್ಯೆ ಅಂದರೆ ಶ್ರೀಶಂಕರಭಗತ್ಪಾದರವರು ಅವತಾರಮಾಡಿ ಮತಾಚಾರ ನಿಬಂಧನೆಗಳನ್ನ ಸ್ಥಿರಪಡಿಸಿದನಂತರ ಸುಮಾರು ಸಾವಿರಾರು ವರುಷಗಳವರಿಗೂ ಸ್ಮಾರ್ತರೇ ವಿಷ್ಣುದೇವಾಲಯಗಳಲ್ಲಿ ವೈಖಾನಸಾಗಮೋಕ್ತವಾದ ಪೂಜಾವಿಧಿಗಳನ್ನ ನಡೆಸುತ್ತಾಬಂದರು. ನಂತರ ಶ್ರೀ ರಾಮಾನುಜಾಚಾರ್ಯರವರು ಅವತಾರಮಾಡಿ ತಮ್ಮ ಮತಕ್ಕೆ ಶೇರಿಸಿಕೊಂಡವರಪೈಕಿ ಕೆಲವು ಸ್ಮಾರ್ತರು ವಿಷ್ಣುದೇವಾಲಯಗಳಲ್ಲಿ ಪೂಜಕರಾಗಿಯೂ, ಸ್ಥಾನೀಕ ಮುಂತಾದ ನೌಕರಿಯಲ್ಲಿಯೂ ಸೇರಿಕೊಂಡಿದ್ದರು. ಈ ನೌಕರಿಯಿಂದಲೇ ಅವರು ಜೀವಿಸುತ್ತಿದ್ದದ್ದರಿಂದ ಇವರಿಗೆ ಸಂಬಂಧಿಗಳಾಗಿಯೂ ಮಿತ್ರವರ್ಗದವರಾಗಿಯೂ ಇದ್ದ ಇತರ ಸ್ಮಾರ್ತಬ್ರಾಹ್ಮಣರು ಇವರ ಜೀವನಕ್ಕೆ ಉಪಹತಿಮಾಡುವದಕ್ಕೆ ಸಮ್ಮತವಿಲ್ಲದೆ ಇದ್ದದ್ದರಿಂದಲೂ ಇಂಥಾವರ ಪೂಜೆಯಿಂದ ದೇವರಸಾನ್ನಿಧ್ಯವು ಒಂದುವ್ಯಾಳೆ ಕಡಮೆಯಾದಾಗ್ಯೂ ಶ್ರೀ ಜಗದ್ಗುರುಗಳವರು ಆಗಾಗ್ಯೆ ದಯಮಾಡಿ ದೇವರನ್ನ ಪೂಜಿಸೋಣದರಿಂದ ಕಳಾಸಾನ್ನಿಧ್ಯವೃದ್ಧಿಯಾಗುತ್ತೆಂತಲೂ ಇದರಿಂದ ತಾವು ದೇವತಾಪ್ರಸಾದವನ್ನ ಪರಿಗ್ರಹಿಸಬಹುದೆಂದು ಯೋಚಿಸಿ ತಟಸ್ಥರಾಗಿದ್ದರು. ಇದರನ್ನ ಕುರಿತು ಆಕ್ಷೇಪಿಸದೆ ಅವರುಗಳು ದೇವತಾರಾಧನೆ ಮಾಡಿಕೊಂಡು ಬರುವದಕ್ಕೆ ಅವಕಾಶಕೊಟ್ಟದ್ದರಿಂದಲೇ ಶ್ರೀ ಜಗದ್ಗುರುಗಳವರಿಗೆ ಸಮಸ್ತ ಪ್ರಾಣಿಗಳಲ್ಲಿಯೂ ಇರತಕ್ಕ ದಯಾಳುತ್ವವೂ ಬ್ರಾಹ್ಮಣವರ್ಣಕ್ಕೆ ಸೇರಿದ ಮತಾಂತರಸ್ಥರಲ್ಲಿಯೂಕೂಡ ಇರತಕ್ಕ ಅನುರಾಗವು ಜಗದ್ವಿಖ್ಯಾತವಾಗಿದ್ದಾಗ್ಯೂ ಇಂಥಾ ಮಹಾನುಭಾವರು ರಾಜರು ಮತ್ತು ರಾಷ್ಟ್ರದ ಕ್ಷೇಮಾರ್ಥವಾಗಿ ಶಿವವಿಷ್ಣು ದೇವಾಯಗಳಲ್ಲಿರತಕ್ಕ ದೇವರುಗಳಿಗೆ ಮಾಡತಕ್ಕ ಪೂಜೆಯು ಬಹುಕಾಲದಾರಭ್ಯ ಆಚಾರವಾಗಿ ನಡೆದುಬರುವಂಥಾದ್ದಾದ್ದಾಗ್ಯೂ ಇವರನ್ನ ಈ ಪೂಜಕರಾದ ಶ್ರೀವೈಷ್ಣವರು ದ್ವೇಷಾಸೂಯದಿಂದ ಈಚೀಚಿಗೆ ಅಡ್ಡಿಮಾಡುವದಕ್ಕೆ ಉಪಕ್ರಮಿಸಿದರು. ಅಂಥಾಸಂದರ್ಭಗಳಲ್ಲೆಲ್ಲಾ ಆಯಾಯ ಕಾಲದಲ್ಲಿದ್ದ ರಾಜರು ಈ ಪೂಜಕರಿಗೆ ನಿರ್ಬಂಧಪಡಿಸಿ, ಶ್ರೀಜಗದ್ಗುರುಗಳವರು ಪೂಜೆಮಾಡುವದಕ್ಕೆ ಅವಕಾಶಗೊಳಿಸಿದ್ದಲ್ಲದೆ ಕೆಲವು ಸಂದರ್ಭಗಳಲ್ಲಿ ನೌಕರಿಯಿಂದ ಇವರನ್ನ ಬರತಫ್‌ಮಾಡೋಣದರಮೂಲಕ ಶಿಕ್ಷೆಯನ್ನ ಕೊಟ್ಟಿರುತ್ತಾರೆ. ಈಗ್ಯೆ ೫೨ ವರ್ಷಗಳಮುಂಚೆ ಅಂದರೆ ವಿಳಂಬಿಸಂವತ್ಸರದಲ್ಲಿ ಶ್ರೀಜಗದ್ಗುರುನರಸಿಂಹ್ಮಭಾರತೀಸ್ವಾಮಿಗಳವರು ತಿರಮಕೂಡ್ಲು ನರಶೀಪುರದ ಶ್ರೀ ಗುಂಜಾನರಸಿಹ್ಮಸ್ವಾಮಿಗೆ ಪೂಜೆಮಾಡುವಕಾಲದಲ್ಲಿ ಅಡ್ಡಿಪಡಿಸುವದಕ್ಕೆಬಂದ ದೇವಸ್ಥಾನದ ನೌಕರರಿಗೆ ನಿರ್ಬಂಧಪಡಿಸಿ ಶ್ರೀಗಳವರು ಕ್ರಮವಾಗಿ ಪೂಜೆಮಾಡುವದಕ್ಕೆ ಅವಕಾಶ

ವಂಕೊಡಿಸಿದ್ದಲ್ಲದೆ ಅಡ್ಡಿಮಾಡಿದ ಶ್ರೀವೈಷ್ಣವರನ್ನು ನೌಕರಿಯಿಂದ ವಜಾಮಾಡಿ ಇವರು ಮಾಡುತ್ತಿದ್ದ ನೌಕರಿಯನ್ನು ಸ್ಮಾರ್ತರಿಂದ ನಡಿಸುತ್ತಾಬಂದರು. ಆ ಕಾಲದಲ್ಲಿ ಸಂಭವಿಸಿದ ಆಗಮೋಕ್ತವಾದ ರಥೋತ್ಸವಾದಿಗಳನ್ನೂ ಸಹ ಸ್ಮಾರ್ತರೇನಡೆಯಿಸಿರುತ್ತಾರೆ. ಎಂಬುವದು ತಿರುಮಕೂಡಲುನರಸೀಪುರ ತಾಲ್ಲೂಕ್ ಮತ್ತು ಕಮಿಷನರ ಹುಜೂರು ರಿಕಾರ್ಡಿನಲ್ಲಿಯೂ ದಾಖಲೆ ಇರುತ್ತೆಂದು ತಿಳಿಯಬರುವದರಿಂದ ಅದರನ್ನೂ ದರಾಮರಿಸಿ ದಲ್ಲಿ ವ್ಯಕ್ತವಡುತ್ತೆ.

೫ ಶ್ರೀಜಗದ್ಗುರುಗಳವರು ಮೈಸೂರು ಶೀಮೆಯಲ್ಲಿರತಕ್ಕ ಪ್ರಸಿದ್ಧವಾದ ದೇವಾಲಯಗಳಲ್ಲಿರುವ ದೇವರುಗಳನ್ನ ಆರಾಧನೆ ಮಾಡುವದು ಮಾತ್ರವಲ್ಲದೆ ಮದ್ರಾಸು, ಬೊಂಬಾಯಿ, ಮುಂತಾದ ಪ್ರಸಿಡೆನ್ಸಿಯಲ್ಲಿರತಕ್ಕ ಆಗಮೋಕ್ತಾರಾಧನೆಗೆ ಒಳಪಟ್ಟಿರುವ ಪ್ರಸಿದ್ಧ ಶಿವ ವಿಷ್ಣುದೇವಾಲಯಗಳಲ್ಲಿಯೂ ದೇವತಾರಾಧನೆ ಮಾಡ್ತಿರುತ್ತಾರೆಂಬುವದು ಲೋಕಪ್ರಸಿದ್ಧವಾಗಿರುತ್ತೆ. ಅಂದರೆ ದಕ್ಷಿಣದೇಶದಲ್ಲಿ ಪ್ರಸಿದ್ಧವಾದ ದೇವಾಲಯಗಳು ತಿರುಪತಿ, ಶ್ರೀರಂಗ, ಕಾಂಚಿ, ಅನಂತಶಯನ, ದರ್ಭಶಯನ ಮುಂತಾದ ಸ್ಥಳಗಳಲ್ಲಿ ಅನೇಕಾವರ್ತಿ ಪ್ರೂಜೆ ಮಾಡಿರತಕ್ಕ ದಾಖಲೆಗಳಪೈಕಿ ಪ್ರಕೃತ ದೊರತಿರುವಷ್ಟರನ್ನೂ ಪರಾಂಬರಿಕೆ ಬಗ್ಗೆ ಹಾಜರ್ಮಾಡಿರುತ್ತೇವೆ. ಇದರಂತೆಯೆ ಈ ದೇಶದ ದೇವಾಲಯಗಳಲ್ಲಿ ಶ್ರೀಗಳವರು ದೇವತಾರಾಧನೆ ಮಾಡುವದಕ್ಕಾಗಿ ಅನೇಕ ರಾಜರು ಮತ್ತು ಅಧಿಕಾರಿಗಳು ಕೊಟ್ಟರತಕ್ಕ ಲಿಖಾವಟ್ಟುಗಳು ಸರಕಾರದಲ್ಲೂ, ಮತ್ತು ಶ್ರೀಮಠದಲ್ಲೂ, ಅನೇಕವಾಗಿರುತ್ತೆ. ಇವುಗಳಲ್ಲಿ ಪ್ರಕೃತ ನಮಗೆ ದೊರತಿರತಕ್ಕ ದಾಖಲೆಗಳು ಅಂದರೆ ಟೀಪ್ರೂಸುಲ್ತಾನರು ಕೊಟ್ಟರತಕ್ಕ ಒಂದೆರಡು ಸನ್ನದಿನ ನಕಲು, ಈ ಸಂಸ್ಥಾನದ ರಾಜ್ಯಭಾರ ಬ್ರಿಟೀಷ್ ಆಫೀಸರ ಅಧ್ಯಕ್ಷಕಗೆ ಒಳಪಟ್ಟಿದ್ದಕಾಲ ಅಂದರೆ ೧೮೩೨ನೇ ಇಸವಿ ನಂದನಸಂವತ್ಸರದಲ್ಲಿ ಕಮಿಷನರ್ ಕ್ಯಾಷ್ ಮೇಜರ್ ಸಾಹೇಬರು ಕೊಟ್ಟಿರುವ ಒಟ್ಟು ಪರವಾನೆ ನಕಲನ್ನೂ, ಚೀಫ್ ಕಮಿಷನರ್ ಬೌರಿಂಗಸಾಹೇಬರವರು ಇಂಡಿಯಾ ಗೌರ್ನಮೆಂಟಗೆ ಬರದ ಲೆಟರು, ಅದರ ಜವಾಬಿನ ನಕಲನ್ನೂ, ಹೈದರಾಬಾದ್ ಸರಕಾರದವರು ಕೊಟ್ಟಿರುವ ಸನ್ನದಿನ ತರ್ಜುಮಾನಕಲನ್ನೂ ಸಹ ಇದರ ಸಂಗಡ ಹಾಜರ್ಮಾಡಿರುತ್ತೇವೆ. ಈ ಪೈಕಿ ನಂದನ ಸಂವತ್ಸರದ ಒಟ್ಟು ಪರವಾನೆಯಲ್ಲಿ ನಮೂದಿಸಿರುವ ಮದ್ರಾಸ್ ಬಂಗಾಳಾ ಗೌನರವರು ಕೊಟ್ಟಿರತಕ್ಕ ಲೆಟರುಗಳು ಮತ್ತು ದಿವಾನ್ ಪೂರ್ಣಯ್ಯನವರು ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರವರು ಕೊಟ್ಟರತಕ್ಕ ಸನ್ನದು ವಗ್ಯೆರೆ ಕಾಗದಪತ್ರಗಳ ಸಂಖ್ಯೆ ೪೫) ಆಗುತ್ತೆ. ಇವುಗಳೆಲ್ಲಾ ಕಮಿಷನರ ಬಳಿಗೆ ಹಾಜರಾಗಿರುತ್ತೆಂಬುವದು ಸದರಿ ಒಟ್ಟು ಪರವಾನೆಯಿಂದಲೇ ಗೊತ್ತಾಗುತ್ತೆ. ಇವುಗಳು ವಾಪಸ್ ಆಗದೆ ಚೀಫ್‌ಕಮಿಷನರ ಆಫೀಸ್ ಕಾರ್ಡಿನಲ್ಲಿರುತ್ತೆಂಬದಾಗಿ ಕೇಳುತ್ತೇವೆ. ಅವುಗಳನ್ನ ಪರಾಂಬರಿಸಬೇಕೆಂದು ಬೇಡುತ್ತೇವೆ.

೬ ಮೇಲೆ ನಮೂದಿಸಿರತಕ್ಕ ರಿಕಾರ್ಡುಗಳಿಂದ ಶ್ರೀ ಶೃಂಗೇರಿ ಜಗದ್ಗುರುಗಳವರಿಗೆ ಪ್ರಕೃತದಲ್ಲಿ ಪಾಂಚರಾತ್ರವೈಖಾನಸಾದಿ ಆಗಮೋಕ್ತವಾಗಿ ಆರಾಧಿಸಲ್ಪಡುತ್ತಿರುವ ಶಿವವಿಷ್ಣು ದೇವಾಲಯಗಳಲ್ಲಿರುವ ದೇವರುಗಳಿಗೆ ಸ್ವತಃ ಪ್ರೂಜೆಮಾಡತಕ್ಕ ವಿಶೇಷಬಾಧ್ಯತೆಯು ಮತ್ತು ಹಕ್ಕು ಉಂಟೆಂಬುವದು ರುಜುವಾತು ಆಗುವದು ಸರಿಯಷ್ಟೆ; ಪ್ರಕೃತ ಚರ್ಚೆಗೆ ಸಮ್ಮಂಧಪಟ್ಟ ಶ್ರೀರಂಗಪಟ್ಟಣದ ರಂಗನಾಥಸ್ವಾಮಿಯವರಿಗೆ ಶ್ರೀರುಗಳವರು ಸ್ವತಃ ಪ್ರೂಜೆಮಾಡುವ ಹಕ್ಕು ಉಂಟೆಂಬುವದಕ್ಕೆ ಮೇಲೆ ಹೇಳಲ್ಪಟ್ಟ ಟೀಪ್ರೂಸುಲ್ತಾನರವರ ಸನ್ನದೇ ಸಾಕ್ಷಿಯಾಗಿರುವದಲ್ಲದೆ, ಇದಕ್ಕೆ ಅನುಸಾರವಾಗಿ ಪ್ರೂಜೆ ಮಾಡುತ್ತಿದ್ದರೆಂಬ ಸಂಗತಿಯನ್ನು ಹೇಳತಕ್ಕಂಥಾ ದೊಡ್ಡವಂಶೀಯರಾದ ಮಹಮ್ಮದೀಯರ್ದೂ ದೊಡ್ಡಮನುಷ್ಯರು ಅನೇಕರಿರುತ್ತಾರೆ. ಅವರುನ್ನೂ ಸಾಕ್ಷ್ಯ ಕೊಡುವದರಲ್ಲಿ ಅಭ್ಯಂತರವಿರುವದಿಲ್ಲ. ಇದು ಅವಶ್ಯಕವಾದ್ದೆಂದು ತೋರುವಪಕ್ಷದಲ್ಲಿ ಗೌರ್ನಮೆಂಟಿನವರು ಅವರಿಂದಲೂ ತಿಳಿದುಕೊಳ್ಳಬಹುದು.

೭ ಶ್ರೀರಂಗಪಟ್ಟಣದ ಶ್ರೀ ರಂಗನಾಥದೇವರನ್ನ ಇಂಥಾವರು ಇಂಥಾಕಾಲದಲ್ಲಿ ಈ ರೀತಿಯಾಗಿ ಪ್ರತಿಷ್ಠೆ ಮಾಡಿದ ಸಂಗತಿ ನಿಸ್ಸಂದೇಹವಾಗಿ ಗೊತ್ತಾಗದೇ ಇದ್ದಾಗ್ಯೂ, ಇದು ಬಹಳ ಪ್ರುರಾತನವಾದದ್ದು. ಕೆಲವು ಶತಮಾನಗಳಕೆಳಗೆ ಗೌತಮಮಹರ್ಷಿಗಳು ಪ್ರೂಜಿಸುತ್ತಿದ್ದರೆಂಬುವದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರಷ್ಟೆ; ಮಹರ್ಷಿಗಳು ತಾಂತ್ರಿಕಾಗಮದೀಕ್ಷಾಬದ್ಧರಾದವರಲ್ಲ; ಪಾಷಂಡಿಗಳೂ ಅಲ್ಲ. ಇವರುಗಳು ವೈದಿಕಾಗಮದಲ್ಲಿ ಅರ್ಚನೆ ಮಾಡುತ್ತಿದ್ದರೆಂಬುವದು ಶಾಸ್ತ್ರಸಿದ್ಧವಾಗಿರುತ್ತೆ. ಅವನ್ನ ಅನುಸರಿಸಿಯೇ ಶ್ರೀಮಚ್ಛಂಕರಭಗವತ್ಪಾದರವರು ಈದೇವರನ್ನ ಅರ್ಚಿಸಿದರು. ಅದರಂತೆ ಅವರ ಪೀಠವನ್ನಲಂಕರಿಸಿದ ಗುರುಪರಂಪರೆಯವರೆಲ್ಲಾ ಪ್ರೂಜಿಸುತ್ತಾಬಂದರು. ಈ ಗೌತಮ ಮಹರ್ಷಿಗಳಿಗೆ ಗೋಹತ್ಯಾಪವಾದ ಸಂಘಟನೆ ಮಾಡಬೇಕೆಂದು ಕೆಲವು ದುಷ್ಟರಾದ ಬ್ರಾಹ್ಮಣರು ನಡೆಸಿದ ತಂತ್ರ ಅವರಿಗೆ ತಿಳಿದು ಇಂಥಾ ದುಷ್ಟಕೃತ್ಯ

ವನ್ನು ಮಾಡಿದ ಬ್ರಾಹ್ಮಣರು ಇವರ ವಂಶೀಯರು ತಪ್ತಮುದ್ರಾಂಕಿತರಾಗಿ ಪಾಂಚರಾತ್ರ ಶೈವಾದ್ಯಾಗಮದೀಕ್ಷಾಬದ್ಧರಾಗಿ ಕೆಟ್ಟುಹೋಗಲಿ, ಎಂದು ಶಾಪಕೊಟ್ಟರೆಂತ ಗ್ರಂಥಗಳು ಇರೋಣದರಿಂದ ಗೌತಮಋಷಿಗಳ. ಪಾಂಚರಾತ್ರಾಗಮ ದೀಕ್ಷಾಬದ್ಧರಲ್ಲವೆಂಬುವಧು ಸ್ಪಷ್ಟವಾಗುತ್ತೆ.

೮ ಶ್ರೀರಂಗಪಟ್ಟಣದ ಶ್ರೀರಂಗನಾಥದೇವರಿಗೆ ಹಿಂದೂಮತಕ್ಕೆ ಸೇರಿದ ನಾಲ್ಕು ವರ್ಣದವರೂ ಭಕ್ತರು. ಈಗ ಚರ್ಚೆಮಾಡುತ್ತಿರುವ ಶ್ರೀವೈಷ್ಣವರು ಈ ಭಕ್ತಸಮುದಾಯವೆಂಬ ಸಮುದ್ರದಲ್ಲಿ ಕೆಲವು ತುಂತುರೆಗಳಾಗಿರುತ್ತಾರೆ. ಆದಾಗ್ಯೂ ತಮ್ಮ ಮತಸ್ಥರು ಪ್ರಕೃತದಲ್ಲಿ ಪೂಜಕರಾಗಿರುತ್ತಾರಷ್ಟೆ ಆದ್ದರಿಂದ ದೇವರು ತಮ್ಮ ಸ್ವಂತ ಪದಾರ್ಥವೆಂದು ಭಾವಿಸುವ ದುರಭಿಮಾನ ವಿನಹ ಇತರ ಭಕ್ತರಿಗೆ ಇರತಕ್ಕದ್ದಕ್ಕಿಂತಲೂ ಬ್ಯಾರೆ ಯಾವ ವಿಧವಾದ ವಿಶೇಷ ಬಾಧ್ಯತೆಯೂ ದೇವರಲ್ಲಿ ಇವರಿಗೆ ಇರುವಹಾಗೆ ತೋರುವದಿಲ್ಲ. ಈ ದೇವಾಲಯವು ಸಂಸ್ಥಾನಕ್ಕೆ ಸೇರಿದ್ದು, ಸರ್ಕಾರದ ಜನರಲ್ ರೆವಿನ್ಯೂಯಿಂದ ಈ ದೇವರ ಆರಾಧನೇಖರ್ಚು ಸಲ್ಲುತ್ತಾಯಿಧೆ. ದೇವರಿಗೆ ಧರಿಸತಕ್ಕ ವಸ್ತ್ರಾಭರಣಗಳಲ್ಲಿ ಪ್ರಾಯಶಃ ಮೈಸೂರು ಸಂಸ್ಥಾನದ ಮಹಾರಾಜರವರ ಸಂತತಿಯಿಂದಲೇ ಕೊಡಲ್ಪಟ್ಟದ್ದಾಗಿರುತ್ತೆ. ಭಕ್ತರಿಂದ ಕೊಡಲ್ಪಟ್ಟದ್ದು ಅತ್ಯಲ್ಪವಾಗಿದ್ದಾಗ್ಯೂ ಅದೂ ಸರ್ಕಾರಕ್ಕೆ ಸೇರಿದ್ದಾಗಿರುತ್ತೆ. ಹೀಗೆ ಸಂಸ್ಥಾನಕ್ಕೆ ಒಳಪಟ್ಟ ಬಾಧ್ಯತೆಯನ್ನ ಶ್ರೀವೈಷ್ಣವರಲ್ಲಿ ಕೆಲವರು ಮಾತ್ರ ತಮಗೇನೇ ಇರುವಂತ ಎಣಿಸಿ ಗದ್ದಲ ಮಾಡುವದು ಎಷ್ಟರಮಟ್ಟಿಗೆ ಊರ್ಜಿತವಡತಕ್ಕದ್ದೋ ಅದರನ್ನ ಗೌರ್ನಮೆಂಟಿನವರೇ ಆಲೋಚಿಸಬೇಕು. ಈ ಕಾರಣದಿಂದ ಇವರಿಗೆ ವಿಶೇಷ ಬಾಧ್ಯತೆ ಏನೂ ಇಲ್ಲದೇ ಇದ್ದಾಗ್ಯೂ ಚಿಹ್ನಾಸಾರ್ಥವಾಗಿ ಇಧೆಯೆಂದು ಇಟ್ಟುಕೊಳ್ಳುವ ಸಂದರ್ಭದಲ್ಲಿಯೂ ಇವರ ಮತಸ್ಥಾಪಕರಾದ ಶ್ರೀರಾಮಾನುಜಾಚಾರ್ಯರವರ ಅವತಾರಕ್ಕಿಂತ ನೂರಾರು ವರುಷಗಳ ಹಿಂದೆ ಶ್ರೀಮಚ್ಛಂಕರ ಭಗವತ್ಪಾದರವರು ಅವತಾರಮಾಡಿದರೆಂಬ ಅಂಶವನ್ನ ಶ್ರೀವೈಷ್ಣವರು ಒಪ್ಪಿಕೊಳ್ಳದೇ ಇದ್ದರೆ ನಿಧಿ ಇಲ್ಲವಷ್ಟೆ ಇದರಿಂದ ಶ್ರೀಜಗದ್ಗುರುಗಳವರಿಗೆ ಇರತಕ್ಕ ಬಾಧ್ಯತೆಯು ಇವರಿಗಿಂತ ಸಾವಿರಾರು ವರುಷಗಳಮಟ್ಟಿಗೂ ಪ್ರಾಚೀನವಾಗಿರುತ್ತೆಎಂಬುವದು ಸಾಮಾನ್ಯವಾಗಿ ಸಕಲರಿಗೂ ತಿಳಿಯಬರುವಂಥಾ ಅಂಶವು ಇವರಿಗೆ ತಿಳಿಯದೇ ಹೋದದ್ದು ಮಾತ್ರವಲ್ಲದೆ, ಶ್ರೀ ಜಗದ್ಗುರುಗಳವರಿಗೆ ಹಕ್ಕೇ ಇಲ್ಲವೆಂದು ಹೇಳುವದು ಪರ್ಯಾಲೋಚನೆ ಯಿಲ್ಲದಮಾತಾಗಿ ತೋರುತ್ತೆ ಅಥವಾ ಪ್ರಕೃತ ಸಂದರ್ಭದಲ್ಲಿ ಇವರುಮಾಡತಕ್ಕ ವ್ಯಾಜ್ಯವು ಊರ್ಜಿತವಾಗದೇ ಇದ್ದಾಗ್ಯೂ ಮುಂದೆ ಮಾಡಬೇಕಾಗುವ ಇಂಥಾ ವ್ಯಾಜ್ಯಗಳಿಗೆ ತಾವು ಫಿರ್ಯಾದಿಗಳಾಗಿ ನಿಲ್ಲುವದಕ್ಕೆ ಇದು ಬಾಧ್ಯತೆಯನ್ನ ಕೊಡತಕ್ಕ ಪ್ರಸೀಡೆಂಟಿಯಾನೆ ಪೀಠಿಕಾ ರಚನೆಯಾಗಿರುತ್ತೆಂದು ಭಾವಿಸಿರಬಹುದಾಗಿತೋರುತ್ತೆ.

೯ ಶ್ರೀರಂಗನಾಥದೇವರಿಗೆ ಸಂಪ್ರೋಕ್ಷಣೆ ಆಗಬೇಕೆಂದು ವ್ಯಾಜ್ಯಮಾಡುವರ ಸಂಖ್ಯೆಯು ಈ ದೇವರಲ್ಲಿ ಅಭಿಮಾನವಿರತಕ್ಕ ಮತ್ತು ಇವರಿಗೆ ಸಮಾನವಾಗಿ ಹಕ್ಕು, ಬಾಧ್ಯತೆವುಳ್ಳ ಇತರ ಭಕ್ತರ ಸಮುದಾಯ ಸಂಖ್ಯೆಗೂ ಮೊಕಾಬಿಲೆ ನೋಡಿದರೆ ಒಟ್ಟು ಸಮುದಾಯದಲ್ಲಿ ಲಕ್ಷ ಪ್ರಜೆಗ ವ್ಯಾಜ್ಯಮಾಡುವರು ಒಬ್ಬರೆಂದೂ ಕೂಡ ಗಣಿಸುವದಕ್ಕ ಸಾಲದ್ದಾಗಿರುತ್ತೆ. ಆದ್ದರಿಂದ ಶ್ರೀಜಗದ್ಗುರುಗಳವರು ಆಗಾಗ್ಯೆ ಶ್ರೀರಂಗನಾಥದೇವರ ಆರಾಧನೆಮಾಡತಕ್ಕದ್ದು ಸರ್ವಜನ ಸಮ್ಮತವಾದದೆಂದು ಸರ್ಕಾರದವರು ಧಾರಾಳವಾಗಿ ನಂಬತಕ್ಕದ್ದಾಗಿರುತ್ತೆ.

೧೦ ಮೇಲೆ ಹೇಳಲ್ಪಟ್ಟಿರುವ ಸಂಗತಿಗಳೆಲ್ಲಾ ಸರ್ಕಾರೀ ವ್ಯಾವಹಾರಿಕರೀತ್ಯಾ ಶ್ರೀಜಗದ್ಗುರುಗಳವರಿಗೆ ಶ್ರೀ ರಂಗನಾಥದೇವರನ್ನ ಆರಾಧಿಸತಕ್ಕ ವಿಷಯದಲ್ಲಿರತಕ್ಕ ವಿಶೇಷ ಬಾಧ್ಯತೆಯನ್ನ ತೋರಿಸತಕ್ಕವುಗಳಾಗಿ ಇರುತ್ತವೆ. ಈ ಸಂಬಂಧವಾದ ಶಾಸ್ತ್ರಾಧಾರ ಅಪ್ರತಿಹತವಾದ ಸದಾಚಾರ ಮುಂತಾದ್ದರನ್ನ ಇದರಡಿಯಲ್ಲಿ ಶೃತಪಡಿಸಿರುತ್ತೇವೆ ಏನಂದರೆ.--

೧೧ ಶ್ರೀಜಗದ್ಗುರುಗಳವರು ಶ್ರೀ ರಂಗನಾಥದೇವರಿಗೆ ಅರ್ಚನೆ ಮಾಡತಕ್ಕದ್ದು ಪಾಂಚರಾತ್ರಾಗಮಕ್ಕೆ ವಿರುದ್ಧವಾಗಿರುತ್ತೆಂದು ಫಿರ್ಯಾದಿಗಳು ಹೇಳುವ ಅಂಶವನ್ನ ಖಂಡನೆಮಾಡತಕ್ಕ ಶಾಸ್ತ್ರ ಮತ್ತು ಆಚಾರವು ಹೇರಳವಾಗಿರುತ್ತ. ಆ ವಿಚಾರವನ್ನ ಪೂರ್ವಪಕ್ಷ ಸಮಾಧಾನ ಸಿದ್ಧಾಂತರೂಪವಾಗಿ ಶೃತಪಡಿಸಲು ಬಹಳ ವಿಳಂಬವಾಗುತ್ತಾದ್ದರಿಂದ ಸೂಕ್ಷ್ಮ [illegible] ವ್ಯಾಂಶಗಳನ್ನ ತಿಳಸದೆ ಇದ್ದರೆ ವಿಧಿಯಿಲ್ಲವಾಗಿ ತಿಳಿಸುವದೇನಂದರೆ:-- ಶೃತಿಸ್ಮೃತಿಗಳಲ್ಲಿ [illegible] ಭಿಪ್ರಾಯಬಂದಾಗ್ಯ ಶೃತಿಯೇ ಪ್ರಬಲವಾದದ್ದೆಂತಲೂ, ತದ್ವತ್ ಸ್ಮೃತಿ ಪುರಾಣಗಳಲ್ಲಿ ಸ್ಮೃತಿಬಲವಾದ್ದೆಂತಲೂ ಪುರಾಣ ಇತಿಹಾಸಾದಿಗಳಲ್ಲಿ ಪುರಾಣಬಲವಾದ್ದೆಂತಲೂ ಹೀಗೆ ಎಲ್ಲಾದ್ದರಲ್ಲಿಯೂ ಭಿನ್ನಾಭಿಪ್ರಾಯಗಳು ಬಂದಕಾಲದಲ್ಲಿ ಮಹಾಜನಗಳು ಅನುಸರಿಸಿ ನಡೆಸಿಕೊಂಡು

ಬರುವ ಆಚಾರವೇ ಬಲಿಷ್ಠವಾದದ್ದೆಂತಲೂ ಈ ಆಚಾರದಲ್ಲಿ ನವೀನಗಳು ಪ್ರಾಚೀನಗಳು ಇರತಕ್ಕವು ಇವುಗಳಲ್ಲಿ ಪುರಾತನಕ್ಕೆ ಪ್ರಾಶಸ್ತ್ಯವಿರುತ್ತೇಂಬುವದು ಸಾಮಾನ್ಯವಾಗಿ ಸರ್ವರಿಗೂ ತಿಳಿದಿರುತ್ತೆ. ಈಗ ಶ್ರೀವೈಷ್ಣವರು ಶ್ರೀರಂಗನಾಥದೇವರಿಗೆ ತಾವು ನಡಿಸತಕ್ಕ ಆರಾಧನೆಯು ಪಾಂಚರಾತ್ರಾಗಮಕ್ಕೆ ಒಳಪಟ್ಟಿರುತ್ತೆಂದುನ್ನೂ ಇದು ಶ್ರೀವೈಷ್ಣವರು ದೇವಾಲಯಕ್ಕೆ ಸೇರಿದಾರಭ್ಯ ಆಚರಣೆಗೆ ತಂದಿರುತ್ತಾರೆಂದೂ ಗೊತ್ತಾಗಿರೋಣದರಿಂದ ಇವರ ಮತವೇ ನೂತನವಾಗಿರುವಲ್ಲಿ ಇವರ ಆಚಾರ ಪುರಾತನವಾಗಲಾಗದಷ್ಟು: ಆದ್ದರಿಂದ ಇವರ ಆಚಾರವು ನವೀನಾಚಾರವೇಸರಿಯೆಂದು ಧಾರಾಳವಾಗಿ ಹೇಳಬಹುದು. ಶ್ರೀಜಗದ್ಗುರುಗಳವರು ಮಾಡತಕ್ಕ ಆರಾಧನೆಯು "ರಾಮಾನುಜ ಮತಕ್ಕಿಂತ ಸಾವಿರ ರು ವರ್ಷಗಳ ಹಿಂದಿನಿಂದಾ ಆಚರಣೆಯಲ್ಲಿ ಇರುತ್ತಾಗಿ ಇದು ಪ್ರಾಚೀನವಾದ ಆಚಾರವೆಂಬುವದು ಸ್ಪಷ್ಟವಾಗಿರುತ್ತೆ. ಮತ್ತು ಶ್ರೀಜಗದ್ಗುರುಗಳವರು ಪರಮಹಂಸಾಶ್ರಮದಲ್ಲಿ ಮಹರ್ಷಿಗಳಂತೆ ಇರತಕ್ಕವರುಗಳಾದ್ದರಿಂದ ಇತರ ಗೃಹಸ್ಥಾಶ್ರಮಗಳಂತೆ ದೀಕ್ಷಾವಿಧಿಗಳಿಗೆ ಬದ್ಧರಾಗುವದಿಲ್ಲ. ಇವರು ಎಲ್ಲಾ ದೀಕ್ಷಿತರಿಗಿಂತಲೂ ಶ್ರೇಷ್ಠವಾದವರು. ಮತ್ತು ಪಾಂಚರಾತ್ರಾಗಮದೀಕ್ಷೆಗೆ ಬದ್ಧರಲ್ಲದ ಗೌತಮಮಹರ್ಷಿಗಳು ಈ ದೇವರನ್ನ ಆರಾಧಿಸುತ್ತಾ ಇದ್ದರೆಂಬುವದು ಗ್ರಂಥಗಳಲ್ಲಿ ಹೇಳಲ್ಪಟ್ಟಿರುವದಲ್ಲದೆ ಇದರನ್ನ ಶ್ರೀವೈಷ್ಣವರೆ ಒಪ್ಪಿಕೊಳ್ಳುತ್ತಾರೆ. ಆಗ್ಯೆ ಇವರಷ್ಟೆಂದು ಹೇಳಿಕೊಳ್ಳುವ ಶ್ರೀರಂಗನಾಥದೇವರು ಹ್ಯಾಗೆ ಅಶುಚಿ ಆಗಲಿಲ್ಲವ್ರೋ ಅದರಂತಯೆ ಗೌತಮಮಹರ್ಷಿಗಳು ಮಾಡುತ್ತಿದ್ದ ವಿಧಿಯನ್ನ ಅನುಸರಿಸಿ ಶ್ರೀಜಗದ್ಗುರುಗಳವರ ಪರಂಪರೆಯವರೆಲ್ಲಾ ಆರಾಧಿಸತಕ್ಕದ್ದು ಅಶುಚಿತ್ವವನ್ನುಂಟುಮಾಡತಕ್ಕದ್ದಲ್ಲವೆಂಬುವದು ಮತ್ತು ಆದಿನಿಕರಿಂದ ಪ್ರತಿಷ್ಠಿತವಾದ ಬಿಂಬಕ್ಕೆ ಮಾಡತಕ್ಕ ಆರಾಧನೆಯಂತೆ ಶ್ರೀವೈಷ್ಣವರು ಈ ಅನಾದಿ ದೇವರಿಗೆಮಾಡುವ ಆರಾಧನೆಯಿಂದ ಉಂಟಾದ ದೋಷಗಳನ್ನ ಪರಿಹಾರ ಮಾಡತಕ್ಕ ಶ್ರೀಜಗದ್ಗುರುಗಳವರು ಮಾಡತಕ್ಕ ಆರಾಧನಾಕ್ರಮವು ಸದಾಚಾರವಾದ್ದೆಂತಲೂ ಬಹೋಪಕಾರವರರಾದವರು ತೀರ್ಮಾನಿಸದೆ ಇರಲಾರರು. ಈ ಮೇರೆ ಲೌಕಿಕಪಾರಮಾರ್ಥಿಕ ಎರಡುವಿಧವಾದ ನ್ಯಾಯಗಳು ಅಪೇಕ್ಷಿಸುವ ಸಮಾಧಾನರೂಪವಾದ ಸಂಗತಿಗಳನ್ನೆಲ್ಲಾ ಶೃತಪಡಿಸಿರುತ್ತೇವೆ.

೧೨. ಮೇಲೆ ವಿವರಿಸಲ್ಪಟ್ಟ ಗ್ರಂಥಗಳು, ರಾಜರು ಮುಂತಾದವರು ಕೊಟ್ಟಿರತಕ್ಕ ಸನ್ನದಿನ ದಾಖಲೆಗಳು ಶೃಷಾಂತ್ರಗಳು, ಚಿರಕಾಲಾರಭ್ಯ ನಡೆದುಬರುವ ಮಾಮೂಲು ಶಾಸ್ತ್ರಸಮ್ಮತವಾದ ಆಚಾರವು, ಸರ್ವಜನ ಸಮ್ಮತಿಯೂ, ಇವುಗಳೆಲ್ಲಾ ಶ್ರೀರಂಗನಾಥದೇವರನ್ನ ಆರಾಧಿಸತಕ್ಕದ್ದಕ್ಕೆ ಶ್ರೀಜಗದ್ಗುರುಗಳವರಿಗೆ ಇರತಕ್ಕ ವಿಶೇಷ ಹಕ್ಕುಬಾಧ್ಯತೆಗಳನ್ನ ಸ್ಥಿರಪಡಿಸುತ್ತವೆ. ಇವುಗಳನ್ನೆಲ್ಲಾ ಘನವನ್ನ ಹೊಂದಿದ ಕೌನ್ಸಲ್ ಸಭೆಯವರು ಪರ್ಯಾಲೋಚಿಸತಕ್ಕ ಸಮಯದಲ್ಲಿ ಶ್ರೀಜಗದ್ಗುರುಗಳವರು ಈ ಮೇರೆ ದೇವತಾರಾಧನೆ ಮಾಡತಕ್ಕದ್ದು ಆ ಮಹಾನುಭಾವರ ಸ್ವಪ್ರಯೋಜನಕ್ಕಾಗಿ ಅಲ್ಲ. ರಾಜರು ಮತ್ತು ರಾಷ್ಟ್ರದ ಕ್ಷೇಮಾರ್ಥವಾಗಿ ಇವರುಗಳ ಅಪೇಕ್ಷೆಯನ್ನು ನೆರವೇರಿಸುವದಕ್ಕಾಗಿ ಮಾಡುತ್ತಾರೆ ಎಂಬುವದರನ್ನು ಮನಸ್ಸಿನಲ್ಲಿಟ್ಟುಕೊಂಡು ಭಾರಿಭಾರಿಗೂ ದುಷ್ಟರು ತೊಂದರೆ ಕೊಡುವದಕ್ಕೆ ಆಸ್ಪದವಿಲ್ಲದಂತೆ ನ್ಯಾಯವಾಗಿಯೂ, ಖಂಡಿತವಾಗಿಯೂ, ಇರುವ ತೀರ್ಮಾನವನ್ನ ಅಪ್ಪಣೆ ಕೊಡಿಸಬೇಕೆಂದು ವಿನಯಪೂರ್ವಕವಾಗಿ ಬರಮಾಕೊಂಡ ಅರ್ಜಿ.

ಜಯಲಕ್ಷ್ಮೀವಿಲಾಸಮುದ್ರಾಕ್ಷರಶಾಲಾ ದೊಡ್ಡಪೇಟೆ ಮೈಸೂರು.

ಕಮಿಷನರಯಾನೆ ಇಲಾಖಾ ಸರಕಾರ ಕುಂಫನಿ ಬಹದ್ದರವರ ಪ್ರಾಂತ್ಯ,

ಮೈ ಸೂ ರು .

ನಂದನಸಂವತ್ಸರದ ಭಾದ್ರಪದ ಶುದ್ಧ ೧೧ ಯಲ್ಲೂ ಅರಮನೆಶೀಮೊಗಡಿಗಳ ಅಮಿಲರವರಿಗೆ ಬರೆಸಿ ಕಳುಹಿಸಿದ ನಿರೂಪ ಅದಾಗಿ:---

ಶ್ರೀ ಶ್ರಿಂಗೇರೀಜಗದ್ಗುರುಗಳವರ ಶ್ರೀ ಮಠದಿಂದ ಮಠಮುದ್ರೆ ಬ್ರಾಂಹ್ಮಣರುಎಂದು ನಿಮ್ಮ ನಿಮ್ಮ ತಾಲ್ಲೂಕಿನಲ್ಲಿ ಮಾಮೂಲ್‌ಮೇರಿಗೆ ಅವರ ಶಿಷ್ಯವರ್ಗಗಳ ಶ್ರೀ ಮಠದ ಆಚಾರವಿಚಾರ ವಿಚಾರಿಸಿಕೊಂಡು ಶ್ರೀ ಮಠಕ್ಕೆ ಬರತಕ್ಕ ಚರಣಕಾಣಿಕೆ, ಮೂಲಾನಕ್ಷತ್ರಕಾಣಿಕೆ, ಅಗ್ರತಾಂಬೂಲ, ದೇವಾರಾಧನೆಕಾಣಿಕೆ, ಪ್ರಾಯಶ್ಚಿತ್ತಕಾಣಿಕೆ ಮುಂತಾಗಿ ಶಿಷ್ಯವರ್ಗ ಜನರಿಂದ ಬರಮಾಡಿಕೊಳ್ಳುವಲ್ಲಿ ಯಾರ ದರೂ ಕಾಣಿಕೆ ಕೊಡದೆ ಮುದ್ರಾಧಿಕ್ರಮವಾಗಿ ನಡೆಯುಕೊಂಡವರಿಗೆ ತಾಕೀತ್‌ಮಾಡಿ ಬಂದೋಬಸ್ತು ಮಾಡಿಸಿಕೊಡುವಬಗ್ಯೂ ಸದರೀ ಶಿಷ್ಯರಿಂದ ವಸೂಲಾದ ಕಾಣಿಕೆಗಳಿಗೆ ಯಾವ ಸರ್ಕಾರದವರೂ ಸುಂಕ ವಸೂಲ್‌ಮಾಡದಿರುವಬಗ್ಯೂ ಶ್ರೀ ಶ್ರಿಂಗೇರಿ ಶ್ರೀಮಠಕ್ಕೆ ಪೂರ್ವದಾರಭ್ಯದಿಂದ ಸೇರಿದ ಶಿಷ್ಯಜನರಲ್ಲಿ ಕೆಟ್ಟ ಹೆಣ್ಣುಗಳನ್ನೂ ಶ್ರೀಮಠದವರ ಹವಾಲಿಗೆ ಕೊಟ್ಟು ರಶೀತಿ ತಗದುಕೊಳ್ಳುವಬಗ್ಯೂ ಸದರೀ ಶ್ರೀಮಠಕ್ಕೆ ಪೂರ್ವದಾರಭ್ಯದಿಂದ ಸೇರಿದ ಬ್ರಾಂಹ್ಮಣರು ಮತ್ತು ಸಮಸ್ತ ಇತರ ಜಾತಿಯವರುಗಳಲ್ಲಿಯೂ ಸಹ ಆಯಾಯ ವರ್ಣಾಶ್ರಮರೀತ್ಯಾ ಆಯಾಯ ಕಾಲಗಳಲ್ಲಿ ಮುಂಜಿ, ಮದುವೆ, ಪ್ರಾಯಶ್ಚಿತ್ತ, ವಗೈರೆ ಮಾಡಿಕೊಳ್ಳತಕ್ಕಭಾಗದಲ್ಲಿ ಮಠವಿಚಾರಗಳಿಗೆ ಯಾವ ಸರಕಾರದವರೂ ಪ್ರವೇಶ ಮಾಡಕೂಡದೆಂಬುವಬಗ್ಯೂ ಶ್ರೀ ಜಗದ್ಗುರುಗಳವರ ಸವಾರಿಯು ಯಾವ ಗ್ರಾಮಗಳಿಗೆ ಬಂದಾಗ್ಯೂ ಆ ಸ್ಥಳದಲ್ಲಿರುವ ಶಿವ, ವಿಷ್ಣು, ವಗೈರೆ ವಿಶಿಷ್ಟ ದೇವಸ್ಥಾನಗಳನ್ನೂ ಶ್ರೀಗಳವರು ಪೂಜೆಮಾಡತಕ್ಕಬಗ್ಗೆ ಬಿಟ್ಟುಕೊಡತಕ್ಕಬಗ್ಯೂಸಹಾ.

೧೭೭೬ನೇ ಇಸವಿ ಏಪ್ರಿಲ್ ೨೦ಕ್ಕೆ ಸರಿಯಾದ ದುರ್ಮುಖಿಸಂ|| ಚೈತ್ರಮಾಸದಲ್ಲಿ ಮೈಲಾಪುರಿ ಚನ್ನಪಟ್ಣದ ಗವರ್ನರ್ ಲಾರ್ಡ್‌ಪಿಕ್ಕಾಯಿ ಸಾಹೇಬರು ಕೊಟ್ಟಿರುವ ೩೬-೫೪ನೇ ನಂಬರ್ ಹುಕ್ಕುಂ, ಸದರಿ ದುರ್ಮುಖಿ ಸಂ|| ಶ್ರಾವಣಶುದ್ಧ ೭ ಯಲ್ಲೂ ಬಂಗಾಳಾ ಗೌವರ್ನರ್‌ಜನರಲ್ ಸಾಹೇಬರು ಕೊಟ್ಟಿರುವ ೧೩೮ನೇ ನಂಬರು ಹುಕ್ಕುಂ ೧೭೭೭ನೇ ಜನವರಿ ೨೦ಕ್ಕೆ ಸರಿಯಾದ ದುರ್ಮುಖಿಸಂ|| ಪುಷ್ಯಮಾಸದಲ್ಲಿ ಮೈಲಾಪುರಿ ಚನ್ನಪಟ್ಟಣದ ಗವರ್ನರ್ ಲಾರ್ಡ್‌ಪಿಕಿಸಿಸಾಹೇಬರು ಕೊಟ್ಟಿರುವ ೮೮ನೇ ನಂಬರುಹುಕ್ಕುಂ. ೧೭೮೨ನೇ ಅಕ್ಟೋಬರ್ ೨೮ಕ್ಕೆ ಸರಿಯಾದ ಶುಭಕೃತು ಸಂ|| ಆಶ್ವೀಜಮಾಸದಲ್ಲಿ ತಂಜಾವೂರು ರೆಸಿಡೆಂಟರು ಜಾರ್ಜಸಲಿವಾನ್ ಸಾಹೇಬರವರು ಕೊಟ್ಟಿರುವ ೧೮ - ೨೮ನೇ ನಂಬರ್ ಹುಕ್ಕುಂ. ೧೭೮೨ನೇ ನವಂಬರ್ ೨೭ರಲ್ಲಿ ಮೈಲಾಪುರಿ ಚನ್ನಪಟ್ಣದ ಗವರ್ನರ್ ಲಾರ್ಡ್‌ಮಕಾರ್ಟ್ನಿಯವರು ಕೊಟ್ಟಿರುವ ೬೫ - ೭೪ನೇ ನಂಬರ್ ಹುಕ್ಕುಂ. ಸದರಿ ಡಿಶಂಬರ್ ೮ನೇ ತಾರೀಖಿನಲ್ಲಿ ಪಾಲ್ರ ಷಾಪ್ಟಸಾಹೇಬರವರು ತಂಜಾವೂರು ಮೊಕ್ಕಾಂನಿಂದ ಕೊಟ್ಟಿರುವ ೭೯ - ೮೬ ನೇ ನಂಬರ್ ಹುಕ್ಕುಂ. ೧೭೮೩ನೇ ಏಪ್ರಿಲ್ ೨೮ಕ್ಕೆಸರಿಯಾದ ಶೋಭಕೃತುಸಂ|| ಚೈತ್ರಮಾಸದಲ್ಲಿ ಕರ್ನಲ್ ಲ್ಯಾಂಗ್ಸ್‌ಸಾಹೇಬರು ತಂಜಾವೂರು ಮೊಕ್ಕಾಂನಿಂದ ಕೊಟ್ಟಿರುವ ೮೫ - ೯೬ನೇ ನಂಬರ್ ಹುಕ್ಕುಂ ೧೭೮೩ನೇ ಮೇ ತಾರೀಖು ೪ ರಲ್ಲೂ ಜನರಲ್‌ಕೂಟ್‌ಸಾಹೇಬರು ಕೊಟ್ಟಿರುವ ೪೫ - ೯೯ ನೇ ನಂಬರು ಹುಕ್ಕುಂ. ೧೭೮೩ನೇ ಮೇ ತಾರೀಖು ೧೬ರಲ್ಲು ಕರ್ನಲ್ ಫ್ಲೋಲಾರ್ಟನ್ ಸಾಹೇಬರವರು ಕೊಟ್ಟಿರುವ ೧೧೯ - ೧೫೦ನೇ ನಂಬರ್ ಹುಕ್ಕುಂ ೧೭೮೫ನೇ ಇಸವಿ ಮಾರ್ಚಿ ೧೬ಕ್ಕೆ ಸರಿಯಾದ ಕ್ರೋಧಿಸಂ|| ಫಾಲ್ಗುಣಮಾಸದಲ್ಲಿ ತಂಜಾವೂರು ರೆಸಿಡೆಂಟ್ ಹಡ್ಲಸ್ಟನ್‌ಸಾಹೇಬರುಕೊಟ್ಟಿರುವ ೧೬೬ - ೧೭೬ನೇ ನಂಬರ್ ಹುಕ್ಕುಂ. ಸದರಿ ೧೭೮೫ನೇ ಏಪ್ರಿಲ್ ೧೮ಕ್ಕೆ ಸರಿಯಾದ ವಿಶ್ವಾವಸು ಸಂ|| ಚೈತ್ರಮಾಸದಲ್ಲಿ ಮೈಲಾಪುರಿ ಚನ್ನಪಟ್ಣದ ಗವರ್ನರ್ ಲಾರ್ಡ್‌ಜನರಲ್ ಮೆಡೋಸಾಹೇಬರವರು ಕೊಟ್ಟಿರುವ ೧೮೮ - ೧೯೮ನೇ ನಂಬರ್ ಹುಕ್ಕುಂ. ೧೭೮೬ನೇ ಜನವರಿ ೧೬ಕ್ಕೆ ಸರಿಯಾದ ವಿಶ್ವಾವಸು ಸಂ|| ಪುಷ್ಯಮಾಸದಲ್ಲಿ ಲಾರ್ಡ್‌ವಾಲಿಸ ಸಾಹೇಬರವರು ಕೊಟ್ಟಿರುವ ೮೮ನೇ ನಂಬರು ಹುಕ್ಕುಂ. ೧೭೮೫ನೇ ಮಾರ್ಚಿ ೧೪ರಲ್ಲೂ ವೆಬ್ಬ್‌ಸಾಹೇಬರವರು ಕೊಟ್ಟಿರುವ ೨೫ನೇ ನಂಬರು ಹುಕ್ಕುಂ. ೧೭೯೦ನೇ ಸಾಧಾರಣ ಸಂ|| ವೈಶಾಖಶುದ್ಧ ೧೧ ಯಲ್ಲೂ ಮ್ಯಾಯಸ್‌ಸಾಹೇಬರು ಸತ್ಯಮಂಗಲದ ಮೊಕ್ಕಾಂನಿದ ಕೊಟ್ಟಿರುವ ೨೦೦-೩೦೫ನೇ ನಂಬರುಹುಕ್ಕುಂ. ಸದರಿ ವೈಶಾಖ ಬಹುಳ ೧೧ ಯಲ್ಲೂ ಕಾರ್ಜಿಟ್‌ಸಾಹೇಬರು ಕೊಯಮತ್ತೂರು ಮೊಕ್ಕಾಮಿನಿಂದ ಕೊಟ್ಟಿರುವ ೩೪೫ - ೪೦೫ನೇ ನಂ|| ಹುಕ್ಕುಂ. ಸದರೀ ಜ್ಯೇಷ್ಠಶುದ್ಧ ೮ ಯಲ್ಲೂ ಸರ್ವಯಜಮಾನರಾದ ಲಾರ್ಡ್‌ಕಾರ್ನ್‌ವಾಲೀಸ್‌ಸಾಹೇಬರು ಕೊಟ್ಟಿರುವ ೪೨೮ - ೪೫೪ನೇ ನಂ|| ಹುಕ್ಕುಂ. ಸದರೀ ಶ್ರಾವಣ ಶುದ್ಧ ೧೩ ಯಲ್ಲೂ ಮೇಜರ್‌ಕ್ಲೋಸ್‌ಸಾಹೇಬರವರು ಕೊಟ್ಟಿರುವ ೪೬೮ - ೫೩೬ನೇ ನಂ|| ಹುಕ್ಕುಂ. ಸದರಿ ಶ್ರಾವಣ ಬಹುಳ ೫ ಯಲ್ಲೂ ದಂಡಿನ ಯಜಮಾನರಾದ ಚಾಲ್ಮರ್ಸ್‌ಸಾಹೇಬರು ಕೊಯಮತ್ತೂರು ಮೊಕ್ಕಾಂನಿಂದ ಕೊಟ್ಟಿರುವ ೫೪೫ - ೫೬೮ನೇ ಹುಕ್ಕುಂ. ೧೭೯೧ನೇ ಮೇ ೧ಕ್ಕೆ ಸರಿಯಾದ ವಿರೋಧಿಕೃತು ಸಂ|| ವೈಶಾಖಮಾಸದಲ್ಲಿ ಜನರಲ್‌ಹ್ಯಾರಿಸ್ ಸಾಹೇಬರು ಕೊಟ್ಟಿರುವ ೬೬೮ - ೭೮೨ನೇ ನಂ|| ಹುಕ್ಕುಂ. ಸದರೀ ೧೭೯೧ನೇ ಮೇ ೫ ರಲ್ಲೂ ಲಾರ್ಡ್‌ವೆಲ್ಲಸ್ಲಿಸಾಹೇಬರವರು ಕೋರ್ಟ್‌ಆಫ್ ಡೈರೆಕ್ಟರುಗಳಿಗೆ ಡಿಸ್ಪ್ಯಾಚನ್ನು ಬರಿಯುವದಕ್ಕೆ ಇಂಡಿಯಾ ಕಂಪೆನಿಯವರು ಕೊಟ್ಟಿರುವ ೧೪೧ನೇ ನಂ|| ಹುಕ್ಕುಂ. ಸದರಿ ಮೇ ೧೫ರಲ್ಲೂ ಕೋರ್ಟ್‌ಆಫ್ ಡೈರೆಕ್ಟರುಗಳು ಕೊಟ್ಟಿರುವ ೧೩೨ನೇ ನಂಬರು ಹುಕುಂ. ೧೭೯೨ನೇ ಮಾರ್ಚಿ ೩ಕ್ಕೆ ಸರಿಯಾದ ವಿರೋಧಿಕೃತು ಸಂವತ್ಸರದ ಫಾಲ್ಗುಣಮಾಸದಲ್ಲಿ ಲಾರ್ಡ್ ಕಾರ್ನ್‌ವಾಲೀಸ್‌ಸಾಹೇಬರು ಕೊಟ್ಟಿರುವ ೯೨೪ - ೯೪೮ನೇ ನಂಬರು ಹುಕ್ಕುಂ. ೧೩೬೨ನೇ ಮೇ ೧೪ಕ್ಕೆ ಸರಿಯಾದ ಪರಿಧಾವಿ ಸಂವತ್ಸರದ ವೈಶಾಖಮಾಸದಲ್ಲಿ

ह जागि चारि महाराष्ट्र दफ्तरदाराच दाखला आहे.

मोहर.

हे जागि फारषींत संनददाखला आहे.

ಮುಲ್ಕಿ ೮೩ ನಂಬರು.
೩೯

ನರಸೀಪುರದ
ತಾಲ್ಲೂಕು ಮೊಹರು

ನ ರ ಶೀ ಪು ರ ದ ತಾ ಲ್ಲೂ ಕು ಕ ಚೇ ರಿ ಯಿಂ ದ.

ಕಸಬಾ ಲಕ್ಷ್ಮೀನರಸಿಂಹಸ್ವಾಮಿಯವರ ದೇವಸ್ಥಾನದ ಪಾರುಪತ್ಯಗಾರ ಕೃಷ್ಣಪ್ಪನವರಿಗೆ

ಇಸ್ತಾರ್ ಹುಕುಂ.

ಶ್ರೀ ಶೃಂಗೇರಿ ಜಗದ್ಗುರುಗಳಾದ ನರಸಿಂಹಭಾರತೀಸ್ವಾಮಿಗಳವರು ನರಶೀಪುರಕ್ಕೆ ಚಿತ್ತೈಸಿದ್ದಾಗ್ಯೆ ದೇವರಪೂಜಾ ಮಂಗಳಾರತಿ ಪಾದಕಾಣಿಕೆ ಮುಂತಾದ್ದು ಮಾಡುವದಕ್ಕೆ ಮಾಮೂಲ್‌ಮೇರೆ ಸದರೀ ಲಕ್ಷ್ಮೀನರಸಿಂಹಸ್ವಾಮಿಯವರ ದೇವಸ್ಥಾನಕ್ಕೆ ದಯಮಾಡಿಸಿದ್ದವೇಳೆ ಅರ್ಚಕ ಕೃಷ್ಣಭಟ್ಟ ಬಾಗಿಲು ಹಾಕಿಕೊಂಡಿದ್ದನಿಮಿತ್ಯ ಸ್ವಲ್ಪಹೊತ್ತು ಸ್ವಾಮಿಗಳವರು ಬಾಗಿಲು ತೆಗೆಯತಕ್ಕದ್ದರ ನಿರೀಕ್ಷಣೆಮಾಡುವಂತೆ ಮಾಡಲ್ಪಟ್ಟ ಸದರಿ ಅರ್ಚಕನಿಗೆ ಬಂದೋಬಸ್ತು ಆಗತಕ್ಕ ವಿಷಯದಲ್ಲಿ ನೀನು ಹುಜೂರು ಫಿರ್ಯಾದ್‌ಮಾಡಿದ್ದಕ್ಕೆ ತಾಲ್ಲೂಕಿನಿಂದ ಜಾಹಿರ್ಮಾಡಿದ್ದ ರಿಪೋರ್ಟಿನಮೇಲೆ ಈ ದಫಾಕ್ಕೆ ನಿಮ್ಮ ಮುನಾಸಬ್ ಅರ್ಚಕನಿಗೆ ಜರ್ಮಾನೆವಿಧಿಸಿ ಫೈಸಲ್‌ಮಾಡುವಂತೆ ಕೊಟ್ಟರುವ ಹುಕುಂ ಅಮಲ್‌ಜಾರಿ ಆಗಿರುವ ತಪ್ಸೀಲನ್ನು ಅರ್ಜೀದಾರಗೆ ತಿಳಿಸುವಂತೆ ಸರ್ ಮಜಕೂರು ಮೆ ೧೨ನೇ ಮುಕಾಂ ಮುಜರಾಯಿ ೧ನೇ ನಂಬರು ಹುಕುಂ ಸಾದರಾದಕಾರಣ ಈ ಮೊಕದ್ದಮಾ ಕಟ್ಟು ಮುಂತಾದ ಕಾಗದ ಪತ್ರಗಳ ನೋಡುವಾಗ್ಯೆ ಕೂಡ್ಲೆ ಅರ್ಚಕ ಬಾಗಿಲು ತೆಗದ್ದಾಗಿಯೂ ಶ್ರೀ ಸ್ವಾಮಿಗಳವರು ಕಟ್ಲೇಪ್ರಕಾರ ಪೂಜಾ, ಪಾದಕಾಣಿಕೆ, ಮಂಗಳಾರತಿ ಮುಂತಾಗಿ ನೆರವೇರಿಸಿದಬಳಿಕ ಮಾಮೂಲ್‌ಮೇರೆ ಮರಿಯಾದೆ ನಡೆಸಿರುವದಾಗಿ ಅರ್ಚಕ ಕೃಷ್ಣಭಟ್ಟನಕೈಫಿಯತಿನಿಂದ ತಿಳಿಯಬರುವದಲ್ಲದೆ ದೇವಸ್ಥಾನದ ಬಾಗಿಲು ಹಾಕಿದ ತಪ್ಸಿತಕ್ಕಾಗಿ ಸರ್ ೧೮೭೭ನೇ ಇಸವಿ ಏಪ್ರಿಲ್ ೧೭ನೇ ಮುಕಾಂ ಮುಜರಾಯಿ ೫ನೇ ನಂಬರು ಹುಕುಂ ಪ್ರಕಾರ ಈ ದಫಾಕ್ಕೆ ಸದರಿ ಅರ್ಚಕ ಕೃಷ್ಣಭಟ್ಟನಿಗೆ ೨ರೂಪಾಯಿ ಜರ್ಮಾನೆ ಮೊಕರೂರ್‌ಮಾಡಿ ವಸೂಲ್ಮಾಡಿರುತ್ತೆ. ತಿಳಿಯುವದು. ತಾರೀಖು ೧೮ನೇ ಮಾಹೆ ಜೂನ್ ಸರ್ ೧೮೭೭ನೇ ಇಸವಿ ಮೊಕ್ಕಾಂ ಕಸಬಾ. ... ... *

ಜೂನ್ ತಾರೀಖು ೨೦ರಲ್ಲು ದಾಖಲ್.

ರುಜು ನಾರಾಯಣರಾವ್ ಮಾಮಲೇದಾರ್,

ಎಂದು ಮಹಾರಾಷ್ಟ್ರಲಿಪಿಯಲ್ಲಿ ಬರಿದೆ.

1895

No. 1868

Name of Petitioner, R C Anantha Ramaiya and others

Village, Kusbas

Taluk, Mercara & Kushalnuggar

District, Coorg

Date of Arzi,

Date of Receipt, 15-11-95

Date of Disposal,

No. of Enclosure, 6.

ABSTRACT.

A protest against the Sri Vaishnavas' objection of the Sringeri Jagadguru's entry into the Runganathaswamy's temple at Seringapatam

436

B.... Pet Enc: 7.
1022

22/11

Transferred to the Secretary to the Government, Muzarai Depa.
By order

23 Nov. 1895

Ramaswami Iyengar
2nd Rev: Secretary

1796 R
14-11-95

ಮೈಸೂರು ಸಂಸ್ಥಾನದ ಎಗ್ಸಿಕ್ಯೂಟಿವ್ ಕೌನ್ಸಿಲ್ ಪ್ರಸಿಡೆಂಟ್ ಮತ್ತು

ದಿವಾನ್ ಸರ್. ಕೆ. ಶೇಷಾದ್ರಯ್ಯನವರ

ಸನ್ನಿಧಾನಂಗಳಿಗೆ.

——:o:——

[illegible]

ನಿವಾಸಿಗಳಾದ ಬ್ರಾಹ್ಮಣರು ಮೊದಲಾದ ಚತುರ್ವರ್ಣದ ಪ್ರಜೆಗಳು ಬರೆದುಕೊಂಡ ಅರ್ಜಿ—

ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳಸ್ವಾರಿಯು ಕಳೆದ ಜೂನ್‌ಮಾಹೆಯಲ್ಲಿ ಮೈಸೂರಿಗೆ ಬಿಜಯಂಗೈಯ್ಯುತ್ತಿದ್ದಕಾಲದಲ್ಲಿ ಶಿಷ್ಯಜನರ ಪ್ರಾರ್ಥನಪೂರ್ವಕ ಶ್ರೀರಂಗಪಟ್ಟಣದ ಕೋಟೆವಳಕ್ಕೆ ದಯಮಾಡಿಸಿ ಅಲ್ಲಿ ರಂಗನಾಥಸ್ವಾಮಿದೇವರ ದರ್ಶನವಂ ಮಾಡಿದ್ದಕ್ಕಾಗಿ ದೇವರಿಗೆ ಸಂಪ್ರೋಕ್ಷಣೆ ಆಗಬೇಕೆಂದು ಶ್ರೀವೈಷ್ಣವರಲ್ಲಿ ಕೆಲವರು "ಅ ಖಿ ಲ ವೈ ಷ್ಣ ವ ಸ ಭಾ" ಎಂದು ದೊಡ್ಡ ಹೆಸರನ್ನಿಟ್ಟುಕೊಂಡು ಸರ್ಕಾರದಲ್ಲಿ ಫಿರ್ಯಾದುಮಾಡಿದ್ದರಮೇಲೆ ಸ್ಮಾರ್ತಜನಗಳು ಸಂಪ್ರೋಕ್ಷಣೆ ಮಾಡಕೂಡದೆಂದು ತಕರಾರುಮಾಡಿದ್ದಕ್ಕಾಗಿ ೧೮೯೫ನೇ ಇಸವಿ ಜೂನ್ ೨೩ನೇ ತಾರೀಖಿನಲ್ಲಿ ಮುಜರಾಯಿ ಸೂಪರಿಂಟೆಂಡೆಂಟರವರು ಖುದ್ದು ವಿಚಾರಣೆ ಮಾಡಿ ಗೌರ್ನಮೆಂಟಿಗೆ ಮಾಡಿದ ರಿಪೋರ್ಟನ್ನ ಪರಾಂಬರಿಸಿ ಗೌರ್ನಮೆಂಟಿನವರಿಂದ ತೀರ್ಮಾನದ ಹುಕುಂ ಕೊಡೋಣವಾಗಿರುತ್ತೆ. ಈತೀರ್ಮಾನವು ದ್ವೇಷಾಸೂಯಾಪರರಾದ ಕೆಲವರಿಗೆ ತೃಪ್ತಿಕರವಾಗದೆ ಅವರು ವರ್ತಮಾನಪತ್ರಿಕೆಗಳಿಂದ ಮನಸ್ವಿಚರ್ಚೆಯನ್ನು ಮಾಡುತ್ತಾ ಇರುವದಲ್ಲದೆ ತಮ್ಮ ಅಭಿಪ್ರಾಯದಂತೆ ಸಂಪ್ರೋಕ್ಷಣೆಗೆ ಹುಕುಂ ಕೊಡದೇಹೋದಲ್ಲಿ ಮತಸಂಬಂಧವಾದ ಮರಣವನ್ನ ಹೊಂದುತ್ತೇವೆಂಬದಾಗಿ ಬರಿಯೋಣವೇ ಮುಂತಾದ್ದರಿಂದ ಗೌರ್ನಮೆಂಟಿನವರಿಗೆ ಘಾಬರಿಯನ್ನುಂಟುಮಾಡಿ ತನ್ಮೂಲಕ ನ್ಯಾಯಕ್ಕೆ ವಿರುದ್ಧವಾಗಿರತಕ್ಕ ತಮ್ಮ ಇಷ್ಟಾರ್ಥಗಳನ್ನ ಪಡಿಯಬೇಕೆಂದು ಪುನಃಪುನಃ ಶ್ರೀಮನ್ಮಹಾರಾಜ್ಞೀ ರೀಜಂಟರವರಿಗೂ ರಸಿಡೆಂಟ ಸಾಹೇಬರಿಗೂ ಅರ್ಜಿಯನ್ನು ಕೊಡುವದೇ ಮುಂತಾದ ಹಠಸಾಧನಾಪ್ರಯತ್ನದಲ್ಲಿರುತ್ತಾರೆ.

ಈ ವಿಚಾರವನ್ನ ಕುರಿತು ನಾವು ಗವರ್ನಮೆಂಟಿಗೆ ಶೃತಪಡಿಸತಕ್ಕದ್ದೇನೂ ಇಲ್ಲದೇ ಇದ್ದಾಗ್ಯೂ ಪ್ರೊಸೀಡಿಂಗ್ಸಿನ ೮ನೇ ಪ್ಯಾರಾದಲ್ಲಿ ನಮೂದಿಸಿರುವ ಸಂದರ್ಭದಲ್ಲಿಯೂ ಶ್ರೀವೈಷ್ಣವರಿಗೆ ಶ್ರೀ ರಂಗನಾಥಸ್ವಾಮಿದೇವರಮೇಲೆ ಇರತಕ್ಕ ಹಕ್ಕುದಾರಿ ವಿಚಾರದಲ್ಲೂ ಅರಿಕೆಮಾಡಿಕೊಳ್ಳುವದನ್ನ ಘನತೆಯನ್ನ ಹೊಂದಿದ ಕೌನ್ಸಿಲ್ ಸಭೆಯವರು ಸಾವಧಾನವಾಗಿ ಪರ್ಯಾಲೋಚಿಸಬೇಕೆಂದು ಬೇಡುತ್ತೇವೆ.

೧ ನೇದು ಮೇಲ್ಕಂಡ ಪ್ರೊಸಿಡಿಂಗ್ಸಿನ ನಾಲ್ಕನೇ ಪ್ಯಾರಾ. * * * * * * * *

ವೇದೋಕ್ತ ಕರ್ಮಾನುಷ್ಠಾಯಿಗಳಾದ ಬ್ರಾಹ್ಮಣರಿಗೆ ವಿಧಿರೂಪವಾಗಿರುವ ಆಗಮಗಳಪ್ರಕಾರ ಪೂಜೆಗಳು ನಡೆಸಲ್ಪಡುವ ಒಂದು ದೇವಾಲಯದಲ್ಲಿ ಒಬ್ಬ ಮಠಾಧಿಪತಿಯಾದವರು ಪೂಜೆಮಾಡಬಹುದೆಂಬ ಸಾಮಾನ್ಯ ಜಿಜ್ಞಾಸೆಯನ್ನಾಗಲೀ ಅಥವಾ ಮಾಮೂಲ್ ಅನುಸರಿಸಿ ಶೃಂಗೇರಿಸ್ವಾಮಿಗಳವರಿಗೆ ಇಂಥಾ ವಿಷಯಗಳಲ್ಲಿ ಯಾವದಾದರೂ ವಿಶೇಷ ಬಾಧ್ಯತೆ ಉಂಟೆ ಎಂಬ ಮುಖ್ಯವಾದಜಿಜ್ಞಾಸೆಯನ್ನಾಗಲಿ, ಪ್ರಕೃತ ಮೊಕದ್ದಮೆಯನ್ನು ಫೈಸಲ್ ಮಾಡುವದರಲ್ಲಿ ಆಲೋಚಿಸಬೇಕಾದ್ದು ದೈವಾತ್ ಅನಾವಶ್ಯಕವಾಗಿದೆ. ಕಳೆದ ಜೂನ್ ತಿಂಗಳು ೧೦ನೇ ತಾರೀಖಿನಲ್ಲಿ ಶೃಂಗೇರಿಸ್ವಾಮಿಗಳವರು ದೇವರಿಗೆ ಪೂಜೆಮಾಡಬೇಕೆಂಬ ಉದ್ದೇಶ್ಯದೊಡನೆ ದೇವಾಲಯಕ್ಕೆ ದಯಮಾಡಿಸಿದವರಲ್ಲವೆಂದು ಹೇಳುವದು ಪ್ರಕೃತ ಮೊಕದ್ದಮೇವ್ಯವಸ್ಥೆಗೆ ಸಾಕಾದ್ದಾಗಿದೆ. * *
* *

ವಿಷ್ಣುದೇವಾಲಯಗಳಲ್ಲಿ ಶೃಂಗೇರಿ ಜಗದ್ಗುರುಗಳವರು ಪೂಜೆಮಾಡತಕ್ಕದ್ದಕ್ಕೆ ಅವರಿಗೆ ವಿಶೇಷ ಬಾಧ್ಯತೆ ಇರತಕ್ಕದ್ದನ್ನ ವಿಚಾರಮಾಡತಕ್ಕದ್ದು ಕದ್ದಮಾ ತೀರ್ಮಾನಕ್ಕೆ ಮುಖ್ಯವಾದ ಅಂಶವಾಗಿತ್ತು.

ಹಾಗೆ ಮಾಡಿಸಿ ತೀರ್ಮಾನವನ್ನ ಅಪ್ಪಣೀಕೊಡಿಸಿದ್ದಪಕ್ಷದಲ್ಲಿ ಶ್ರೀವೈಷ್ಣವರು ಪುನಃಪುನಃ ಚರ್ಚಿಸುವದಕ್ಕೂ ಶ್ರಿಂಗೇರಿಮಠದ ಶಿಷ್ಯರಾದ ನಾಲ್ಕು ವರ್ಣದವರೂ ಈ ವಿಚಾರವಾಗಿ ಗೌರ್ನಮೆಂಟನವರಿಗೆ ತೊಂದರೆ ಕೊಡುವದಕ್ಕೂ ಅವಕಾಶವಾಗುತ್ತಿರಲಿಲ್ಲ. ಎಂಬುವದನ್ನ ಭಯಭಕ್ತಿಗಳೊಡನೆ ಅರಿಕೆ ಮಾಡಿಕೊಳ್ಳುತ್ತೇವೆಯೇ ಹೊರ್ತು ಗೌರ್ನಮೆಂಟನವರ ನಡವಳಿಕೆಮೇಲೆ ಆಕ್ಷೇಪರೂಪವನ್ನಾಗಿ ಅರಿಕೆಮಾಡುವದಿಲ್ಲ ಎಂಬುವದನ್ನ ಘನವಾದ ಚಿತ್ತದಲ್ಲಿ ಲಾಲಿಸಬೇಕು.

೨ ಬ್ರಾಹ್ಮಣ್ಯವು ಕೆಲವು ಶತಮಾನಗಳ ಕೆಳಗೆ ಬೌದ್ಧರ ಪ್ರಾಬಲ್ಯದಲ್ಲಿ ಕ್ಷೀಣಗತಿಗೆ ಬಂದದ್ದರಿಂದ ದೇವಾಲಯ ಮೊದಲಾದವುಗಳೆಲ್ಲಾ ಬೌದ್ಧಾಕ್ರಾಂತಗಳಾಗಿರಲು ಶ್ರೀಮಚ್ಛಂಕರಭಗವತ್ಪಾದರವರು ಅವತಾರವಂಮಾಡಿ ಈ ದುರ್ಮತಗಳನ್ನೆಲ್ಲಾ ಖಂಡಿಸಿ ಬ್ರಾಹ್ಮಣ್ಯವನ್ನ ಜೀರ್ಣೋದ್ಧಾರಮಾಡಿ ಷಣ್ಮತಗಳನ್ನೂ ಸನ್ಯಾಸಾಶ್ರಮವನ್ನೂ ಶಿವವಿಷ್ಣ್ವಾದಿ ಪಂಚಾಯತನಾರಾಧನ ಕ್ರಮವನ್ನೂ ಸಹಾ ಶಾಸ್ತ್ರೀಯವಾದದ್ದೆಂದು ಸ್ಥಾಪಿಸಿದಂಥಾವರಾಗಿ ಅದರಂತೆ ತಾವು ಆಚರಣೆಮಾಡುತ್ತಾ ತಮ್ಮ ಶಿಷ್ಯಮಂಡಲಿಯಿಂದ ನಡೆಸುತ್ತಲೂ ಬಂದರು. ಅನ್ಯಮತಾಕ್ರಾಂತವಾಗಿ ನಾಮಾವಶಿಷ್ಟವಾಗಿದ್ದ ಆಸೇತು ಹಿಮಾಚಲಪರ್ಯಂತ ಇರತಕ್ಕ ದೇವಾಲಯಗಳಿಗೆಲ್ಲಾ ಪ್ರೋಕ್ಷ್ಯ ಅವುಗಳನ್ನ ವಿಧ್ಯುಕ್ತವಾಗಿ ಶುದ್ಧಿಮಾಡಿ ಶಿವವಿಷ್ಣುದೇವರುಗಳಿಗೆಲ್ಲಾ ಯಂತ್ರೋದ್ಧಾರ ಕುಂಭಾಭಿಷೇಕ ಮುಂತಾದ್ದನ್ನ ಶಾಸ್ತ್ರೋಕ್ತವಾದ ವಿಧಿಗಳಿಂದ ನಡಿಸಿ, ದೇವತಾಸಾನ್ನಿಧ್ಯ ಉಂಟಾಗುವಂತೆಮಾಡಿ ತಾವು ಸ್ವತಃ ಆ ದೇವರುಗಳನ್ನ ಪೂಜೆಮಾಡಿ ನಂತರ ಆಯಾಯ ಸ್ಥಲದಲ್ಲಿರತಕ್ಕ ಬ್ರಾಹ್ಮಣರಿಗೆ ಪೂಜೆಮಾಡುವದಕ್ಕೆ ಅಪ್ಪಣೀಕೊಡಿಸಿದರೆಂಬುವದು ಶಂಕರವಿಜಯ ಮೊದಲಾದ ಅನೇಕ ಗ್ರಂಥಗಳಿಂದ ತಿಳಿಯಬರುತ್ತೆ.

೩ ಶ್ರೀಶಂಕರ ಭಗವತ್ಪಾದರವರ ತರುವಾಯ ಆ ಪೀಠವನ್ನಲಂಕರಿಸಿದ ಗುರುಪರಂಪರೆಯವರೆಲ್ಲಾ ಮೇಲೆಹೇಳಿದ ಕ್ರಮದಲ್ಲೇ ಆಚಾರ ವಿಚಾರಗಳನ್ನ ಪರಾಮರ್ಶಿಸುವದಕ್ಕಾಗಿ ಸಂಚಾರ ಹೊರಟಕಾಲಗಳಲ್ಲಿ ಶಿಕ್ಕುವ ಶಿವವಿಷ್ಣು ದೇವಾಲಯಗಳಿಗೆ ದಯಮಾಡಿಸಿ ದೇವತಾರಾಧನೆಯನ್ನ ನಡೆಸುತ್ತಾ ಇಧಾರೆ.

೪ ಏತನ್ಮಧ್ಯೆ ಅಂದರೆ ಶ್ರೀಶಂಕರಭಗತ್ಪಾದರವರು ಅವತಾರಮಾಡಿ ಮತಾಚಾರ ನಿಬಂಧನೆಗಳನ್ನ ಸ್ಥಿರಪಡಿಸಿದನಂತರ ಸುಮಾರು ಸಾವಿರಾರು ವರುಷಗಳವರಿಗೂ ಸ್ಮಾರ್ತರೇ ವಿಷ್ಣುದೇವಾಲಯಗಳಲ್ಲಿ ವೈದಿಕಾಗಮೋಕ್ತವಾದ ಪೂಜಾವಿಧಿಗಳನ್ನ ನಡೆಸುತ್ತಾಬಂದರು. ನಂತರ ಶ್ರೀ ರಾಮಾನುಜಾಚಾರ್ಯರವರು ಅವತಾರಮಾಡಿ ತಮ್ಮ ಮತಕ್ಕೆ ಶೇರಿಸಿಕೊಂಡವರಪೈಕಿ ಕೆಲವು ಸ್ಮಾರ್ತರು ವಿಷ್ಣುದೇವಾಲಯಗಳಲ್ಲಿ ಪೂಜಕರಾಗಿಯೂ, ಸ್ಥಾನೀಕ ಮುಂತಾದ ನೌಕರಿಯಲ್ಲಿಯೂ ಸೇರಿಕೊಂಡಿದ್ದರು. ಈ ನೌಕರಿಯಿಂದಲೇ ಅವರು ಜೀವಿಸುತ್ತಿದ್ದದ್ದರಿಂದ ಇವರಿಗೆ ಸಂಬಂಧಿಗಳಾಗಿಯೂ ಮಿತ್ರವರ್ಗದವರಾಗಿಯೂ ಇದ್ದ ಇತರ ಸ್ಮಾರ್ತಬ್ರಾಹ್ಮಣರು ಇವರ ಜೀವನಕ್ಕೆ ಉಪಹತಿಮಾಡುವದಕ್ಕೆ ಸಮ್ಮತವಿಲ್ಲದೆ ಇದ್ದದ್ದರಿಂದಲೂ ಇಂಥಾವರ ಪೂಜೆಯಿಂದ ದೇವರಸಾನ್ನಿಧ್ಯವು ಒಂದುವ್ಯಾಳೆ ಕಡಮೆಯಾದಾಗ್ಯೂ ಶ್ರೀ ಜಗದ್ಗುರುಗಳವರು ಆಗಾಗ್ಯೆ ದಯಮಾಡಿ ದೇವರನ್ನ ಪೂಜಿಸೋಣದರಿಂದ ಕಳಾಸಾನ್ನಿಧ್ಯವೃದ್ಧಿಯಾಗುತ್ತಂತಲೂ ಇದರಿಂದ ತಾವು ದೇವತಾಪ್ರಸಾದವನ್ನ ಪರಿಗ್ರಹಿಸಬಹುದೆಂದು ಯೋಚಿಸಿ ತಟಸ್ಥರಾಗಿದ್ದರು. ಇದರನ್ನ ಕುರಿತು ಆಕ್ಷೇಪಿಸದೆ ಅವರುಗಳು ದೇವತಾರಾಧನೆ ಮಾಡಿಕೊಂಡು ಬರುವದಕ್ಕೆ ಅವಕಾಶಕೊಟ್ಟದ್ದರಿಂದಲೇ ಶ್ರೀ ಜಗದ್ಗುರುಗಳವರಿಗೆ ಸಮಸ್ತ ಪ್ರಾಣಿಗಳಲ್ಲಿಯೂ ಇರತಕ್ಕ ದಯಾಳುತ್ವವೂ ಬ್ರಾಹ್ಮಣವರ್ಣಕ್ಕೆ ಸೇರಿದ ಮತಾಂತರಸ್ಥರಲ್ಲಿಯೂಕೂಡ ಇರತಕ್ಕ ಅನುರಾಗವು ಜಗದ್ವಿಖ್ಯಾತವಾಗಿದ್ದಾಗ್ಯೂ ಇಂಥಾ ಮಹಾನುಭಾವರು ರಾಜರು ಮತ್ತು ರಾಷ್ಟ್ರದ ಕ್ಷೇಮಾರ್ಥವಾಗಿ ಶಿವವಿಷ್ಣು ದೇವಾಯಗಳಲ್ಲಿರತಕ್ಕ ದೇವರುಗಳಿಗೆ ಮಾಡತಕ್ಕ ಪೂಜೆಯು ಬಹುಕಾಲದಾರಭ್ಯ ಆಚಾರವಾಗಿ ನಡೆದುಬರುವಂಥಾದ್ದಾದಾಗ್ಯೂ ಇದರನ್ನ ಈ ಪೂಜಕರಾದ ಶ್ರೀವೈಷ್ಣವರು ದ್ವೇಷಾಸೂಯದಿಂದ ಈಚೀಚಿಗೆ ಅಡ್ಡಿಮಾಡುವದಕ್ಕೆ ಉಪಕ್ರಮಿಸಿದರು. ಅಂಥಾಸಂದರ್ಭಗಳಲ್ಲೆಲ್ಲಾ ಆಯಾಯ ಕಾಲದಲ್ಲಿದ್ದ ರಾಜರು ಈ ಪೂಜಕರಿಗೆ ನಿರ್ಬಂಧಪಡಿಸಿ, ಶ್ರೀಜಗದ್ಗುರುಗಳವರು ಪೂಜೆಮಾಡುವದಕ್ಕೆ ಅವಕಾಶಗೊಳಿಸಿದ್ದಲ್ಲದೆ ಕೆಲವು ಸಂದರ್ಭಗಳಲ್ಲಿ ನೌಕರಿಯಿಂದ ಇವರನ್ನ ಬರತರಫ್‌ಮಾಡೋಣದರಮೂಲಕ ಶಿಕ್ಷೆಯನ್ನ ಕೊಟ್ಟಿರುತ್ತಾರೆ. ಈಗ್ಯೆ ೫೮ ವರ್ಷಗಳಮುಂಚೆ ಅಂದರೆ ವಿಳಂಬಿಸಂವತ್ಸರದಲ್ಲಿ ಶ್ರೀಜಗದ್ಗುರುನರಸಿಂಹಭಾರತೀಸ್ವಾಮಿಗಳವರು ತಿರಮಕೂಡ್ಲು ನರಶೀಪುರದ ಶ್ರೀ ಗುಂಜಾನರಸಿಂಹಸ್ವಾಮಿಗೆ ಪೂಜೆಮಾಡುವಕಾಲದಲ್ಲಿ ಅಡ್ಡಿನಡಿಸುವದಕ್ಕೆಬಂದ ದೇವಸ್ಥಾನದ ನೌಕರರಿಗೆ ನಿರ್ಬಂಧಪಡಿಸಿ ಶ್ರೀಗಳವರು ಕ್ರಮವಾಗಿ ಪೂಜೆಮಾಡುವದಕ್ಕೆ ಅವಕಾಶ

ವಂಕೊಡಿಸಿದ್ದಲ್ಲದೆ ಅಡ್ಡಿಮಾಡಿದ ಶ್ರೀವೈಷ್ಣವರನ್ನು ನೌಕರಿಯಿಂದ ವಜಾಮಾಡಿ ಇವರು ಮಾಡುತ್ತಿದ್ದ ನೌಕರಿಯನ್ನು ಸ್ಮಾರ್ತರಿಂದ ನಡಿಸುತ್ತಾಬಂದರು. ಆ ಕಾಲದಲ್ಲಿ ಸಂಭವಿಸಿದ ಆಗಮೋಕ್ತವಾದ ರಥೋತ್ಸವಾದಿಗಳನ್ನೂ ಸಹ ಸ್ಮಾರ್ತರೇ ನಡೆಸಿರುತ್ತಾರೆ. ಎಂಬುವದು ತಿರುಮಕೂಡಲುನರಸೀಪುರ ತಾಲ್ಲೂಕ್ ಮತ್ತು ಕಮಿಷನರ ಹುಜೂರು ರಿಕಾರ್ಡಿನಲ್ಲಿಯೂ ದಾಖಲೆ ಇರುತ್ತೆಂದು ತಿಳಿಯಬರುವದರಿಂದ ಅದರನ್ನು ಪರಾಮರಿಸಿದಲ್ಲಿ ವ್ಯಕ್ತವಡುತ್ತೆ.

೫ ಶ್ರೀಜಗದ್ಗುರುಗಳವರು ಮೈಸೂರು ಶೀಮೆಯಲ್ಲಿರತಕ್ಕ ಪ್ರಸಿದ್ಧವಾದ ದೇವಾಲಯಗಳಲ್ಲಿರುವ ದೇವರುಗಳನ್ನ ಆರಾಧನೆ ಮಾಡುವದು ಮಾತ್ರವಲ್ಲದೆ ಮದ್ರಾಸು, ಬೊಂಬಾಯಿ, ಮುಂತಾದ ಪ್ರಸಿಡೆನ್ಸಿಯಲ್ಲಿರತಕ್ಕ ಆಗಮೋಕ್ತಾರಾಧನೆಗೆ ಒಳಪಟ್ಟಿರುವ ಪ್ರಸಿದ್ಧ ಶಿವ ವಿಷ್ಣುದೇವಾಲಯಗಳಲ್ಲಿಯೂ ದೇವತಾರಾಧನೆ ಮಾಡಿರುತ್ತಾರೆಂಬುವದು ಲೋಕಪ್ರಸಿದ್ಧವಾಗಿರುತ್ತೆ. ಅಂದರೆ ದಕ್ಷಿಣದೇಶದಲ್ಲಿ ಪ್ರಸಿದ್ಧವಾದ ದೇವಾಲಯಗಳು ತಿರುಪತಿ, ಶ್ರೀರಂಗ, ಕಾಂಚಿ, ಅನಂತಶಯನ, ದರ್ಭಶಯನ ಮುಂತಾದ ಸ್ಥಳಗಳಲ್ಲಿ ಅನೇಕಾವರ್ತಿ ಪೂಜೆ ಮಾಡಿರತಕ್ಕ ದಾಖಲೆಗಳಪೈಕಿ ಪ್ರಕೃತ ದೊರತಿರುವಷ್ಟರನ್ನೂ ಪರಾಂಬರಿಕೆ ಬಗ್ಯೆ ಹಾಜರ್ಮಾಡಿರುತ್ತೇವೆ. ಇದರಂತೆಯೆ ಈ ದೇಶದ ದೇವಾಲಯಗಳಲ್ಲಿ ಶ್ರೀಗಳವರು ದೇವತಾರಾಧನೆ ಮಾಡುವದಕ್ಕಾಗಿ ಅನೇಕ ರಾಜರು ಮತ್ತು ಅಧಿಕಾರಿಗಳು ಕೊಟ್ಟರತಕ್ಕ ಲಿಖಾವಟ್ಟುಗಳು ಸರಕಾರದಲ್ಲೂ, ಮತ್ತು ಶ್ರೀಮಠದಲ್ಲೂ, ಅನೇಕವಾಗಿರುತ್ತೆ. ಇವುಗಳಲ್ಲ ಪ್ರಕೃತ ನಮಿಗೆ ದೊರತಿರತಕ್ಕ ದಾಖಲೆಗಳು ಅಂದರೆ ಟೀಪೂಸುಲ್ತಾನರು ಕೊಟ್ಟರತಕ್ಕ ಒಂದೆರಡು ಸನ್ನದಿನ ನಕಲು, ಈ ಸಂಸ್ಥಾನದ ರಾಜ್ಯಭಾರ ಬ್ರಿಟೀಷ್ ಆಫೀಸರ ಅಧ್ಯಕ್ಷತೆಗೆ ಒಳಪಟ್ಟಿದ್ದಕಾಲ ಅಂದರೆ ೧೮೩೨ನೇ ಇಸವಿ ನಂದನಸಂವತ್ಸರದಲ್ಲಿ ಕಮಿಷನರ್ ಕ್ಯಾಷ್ ಮೆಜರ್ ಸಾಹೇಬರು ಕೊಟ್ಟಿರುವ ಒಟ್ಟು ಪರವಾನೆ ನಕಲನ್ನೂ, ಚೀಫ್ ಕಮಿಷನರ್ ಬೌರಿಂಗ್‌ಸಾಹೇಬರವರು ಇಂಡಿಯಾ ಗೌರ್ನಮೆಂಟಗೆ ಬರದ ಲೆಟರು, ಅದರ ಜವಾಬಿನ ನಕಲನ್ನೂ, ಹೈದರಾಬಾದ್ ಸರಕಾರದವರು ಕೊಟ್ಟಿರುವ ಸನ್ನದಿನ ತರ್ಜುಮಾನಕಲನ್ನೂ ಸಹ ಇದರ ಸಂಗಡ ಹಾಜರ್ಮಾಡಿರುತ್ತೇವೆ. ಈ ಪೈಕಿ ನಂದನ ಸಂವತ್ಸರದ ಒಟ್ಟು ಪರವಾನೆಯಲ್ಲಿ ನಮೂದಿಸಿರುವ ಮದ್ರಾಸ್ ಬಂಗಾಳಾ ಗೌನರವರು ಕೊಟ್ಟರತಕ್ಕ ಲೆಟರುಗಳು ಮತ್ತು ದಿವಾನ್ ಪೂರ್ಣಯ್ಯನವರು ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರವರು ಕೊಟ್ಟರತಕ್ಕ ಸನ್ನದು ವಗ್ಯೆರೆ ಕಾಗದಪತ್ರಗಳ ಸಂಖ್ಯೆ ೫೪) ಆಗುತ್ತೆ. ಇವುಗಳೆಲ್ಲಾ ಕಮಿಷನರ ಬಳಿಗೆ ಹಾಜರಾಗಿರುತ್ತೆಂಬುವದು ಸದರಿ ಒಟ್ಟು ಪರವಾನೆಯಿಂದಲೇ ಗೊತ್ತಾಗುತ್ತೆ. ಇವುಗಳು ವಾಪಸ್ ಆಗದೆ ಚೀಫ್‌ಕಮಿಷನರ ಆಫೀಸ್ ರಿಕಾರ್ಡಿನಲ್ಲಿರುತ್ತೆಂಬದಾಗಿ ಕೇಳುತ್ತೇವೆ. ಅವುಗಳನ್ನ ಪರಾಂಬರಿಸಬೇಕೆಂದು ಬೇಡುತ್ತೇವೆ.

೬ ಮೇಲೆ ನಮೂದಿಸಿರತಕ್ಕ ರಿಕಾರ್ಡುಗಳಿಂದ ಶ್ರೀ ಶೃಂಗೇರಿ ಜಗದ್ಗುರುಗಳವರಿಗೆ ಪ್ರಕೃತದಲ್ಲಿ ಪಾಂಚರಾತ್ರವೈಖಾನಸಾದಿ ಆಗಮೋಕ್ತವಾಗಿ ಆರಾಧಿಸಲ್ಪಡುತ್ತಿರುವ ಶಿವವಿಷ್ಣು ದೇವಾಲಯಗಳಲ್ಲಿರುವ ದೇವರುಗಳಿಗೆ ಸ್ವತಃ ಪೂಜೆಮಾಡತಕ್ಕ ವಿಶೇಷಬಾಧ್ಯತೆಯು ಮತ್ತು ಹಕ್ಕು ಉಂಟೆಂಬುವದು ರುಜುವಾತು ಆಗುವದು ಸರಿಯಷ್ಟೆ; ಪ್ರಕೃತ ಚರ್ಚೆಗೆ ಸಮ್ಮಂಧಪಟ್ಟ ಶ್ರೀರಂಗಪಟ್ಟಣದ ರಂಗನಾಥಸ್ವಾಮಿಯವರಿಗೆ ಶ್ರೀರುಗಳವರು ಸ್ವತಃ ಪೂಜೆಮಾಡುವ ಹಕ್ಕು ಉಂಟೆಂಬುವದಕ್ಕೆ ಮೇಲೆ ಹೇಳಲ್ಪಟ್ಟ ಟೀಪೂಸುಲ್ತಾನರವರ ಸನ್ನದೇ ಸಾಕ್ಷಿಯಾಗಿರುವದಲ್ಲದೆ, ಇದಕ್ಕೆ ಅನುಸಾರವಾಗಿ ಪೂಜೆ ಮಾಡುತ್ತಿದ್ದರೆಂಬ ಸಂಗತಿಯನ್ನು ಹೇಳತಕ್ಕಂಥಾ ದೊಡ್ಡವಂಶೀಯರಾದ ಮಹಮ್ಮದೀಯರ್ ದೊಡ್ಡಮನುಷ್ಯರು ಅನೇಕರಿರುತ್ತಾರೆ. ಅವರುನ್ನೂ ಸಾಕ್ಷ್ಯ ಕೊಡುವದರಲ್ಲಿ ಅಭ್ಯಂತರವಿರುವದಿಲ್ಲ. ಇದು ಅವಶ್ಯಕವಾದ್ದೆಂದು ತೋರುವಪಕ್ಷದಲ್ಲಿ ಗೌರ್ನಮೆಂಟಿನವರು ಅವರಿಂದಲೂ ತಿಳಿದುಕೊಳ್ಳಬಹುದು.

೭ ಶ್ರೀರಂಗಪಟ್ಟಣದ ಶ್ರೀ ರಂಗನಾಥದೇವರನ್ನ ಇಂಥಾವರು ಇಂಥಾಕಾಲದಲ್ಲಿ ಈ ರೀತಿಯಾಗಿ ಪ್ರತಿಷ್ಠೆ ಮಾಡಿದ ಸಂಗತಿ ನಿಸ್ಸಂದೇಹವಾಗಿ ಗೊತ್ತಾಗದೇ ಇದ್ದಾಗ್ಯೂ, ಇದು ಬಹಳ ಪುರಾತನವಾದದ್ದು. ಕೆಲವು ಶತಮಾನಗಳಕೆಳಗೆ ಗೌತಮಮಹರ್ಷಿಗಳು ಪೂಜಿಸುತ್ತಿದ್ದರೆಂಬುವದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರಷ್ಟೆ; ಮಹರ್ಷಿಗಳು ತಾಂತ್ರಿಕಾಗಮಾಪೇಕ್ಷಾಬದ್ಧರಾದವರಲ್ಲ; ಪಾಷಂಡಿಗಳೂ ಅಲ್ಲ. ಇವರುಗಳು ವೈದಿಕಾಗಮದಲ್ಲಿ ಅರ್ಚನೆ ಮಾಡುತ್ತಿದ್ದರೆಂಬುವದು ಶಾಸ್ತ್ರಸಿದ್ಧವಾಗಿರುತ್ತೆ. ಅದನ್ನ ಅನುಸರಿಸಿಯೇ ಶ್ರೀಮಚ್ಛಂಕರಭಗವತ್ಪಾದರವರು ಈದೇವರನ್ನ ಅರ್ಚಿಸಿದರು. ಅದರಂತೆ ಅವರ ಪೀಠವನ್ನಲಂಕರಿಸಿದ ಗುರುಪರಂಪರೆಯವರೆಲ್ಲಾ ಪೂಜಿಸುತ್ತಾಬಂದರು. ಈ ಗೌತಮ ಮಹರ್ಷಿಗಳಿಗೆ ಗೋಹತ್ಯಾಪವಾದ ಸಂಘಟನೆ ಮಾಡಬೇಕೆಂದು ಕೆಲವು ದುಷ್ಟರಾದ ಬ್ರಾಹ್ಮಣರು ನಡೆಸಿದ ತಂತ್ರ ಅವರಿಗೆ ತಿಳಿದು ಇಂಥಾ ದುಷ್ಟಕೃತ್ಯ

ವನ್ನ ಮಾಡಿದ ಬ್ರಾಹ್ಮಣರು ಇವರ ವಂಶೀಯರು ತಪ್ತಮುದ್ರಾಂಕಿತರಾಗಿ ಪಾಂಚರಾತ್ರ ಶೈವಾದ್ಯಾಗಮದೀಕ್ಷಾಬದ್ಧರಾಗಿ ಕೆಟ್ಟು ಹೋಗಲಿ, ಎಂದು ಶಾಪಕೊಟ್ಟರೆಂತ ಗ್ರಂಥಗಳು ಇರೋಣದರಿಂದ ಗೌತಮಋಷಿಗಳ ಪಾಂಚರಾತ್ರಾಗಮ ದೀಕ್ಷಾಬದ್ಧರಲ್ಲವೆಂಬುವದು ಸ್ಪಷ್ಟವಾಗುತ್ತೆ.

೮ ಶ್ರೀರಂಗಪಟ್ಟಣದ ಶ್ರೀರಂಗನಾಥದೇವರಿಗೆ ಹಿಂದೂಮತಕ್ಕೆ ಸೇರಿದ ನಾಲ್ಕು ವರ್ಣದವರೂ ಭಕ್ತರು ಈಗ ಚರ್ಚೆಮಾಡುತ್ತಿರುವ ಶ್ರೀವೈಷ್ಣವರು ಈ ಭಕ್ತಸಮುದಾಯವೆಂಬ ಸಮುದ್ರದಲ್ಲಿ ಕೆಲವು ತುಂತುರೇ ಳಾಗಿರುತ್ತಾರೆ. ಆದಾಗ್ಯೂ ತಮ್ಮ ಮತಸ್ಥರು ಪ್ರಕೃತದಲ್ಲಿ ಪೂಜಕರಾಗಿರುತ್ತಾರಷ್ಟೆ ಆದ್ದರಿಂದ ದೇವರು ತಮ್ಮ ಸ್ವಂತ ಪದಾರ್ಥವೆಂದು ಭಾವಿಸುವ ದುರಭಿಮಾನ ವಿನಹ ಇತರ ಭಕ್ತರಿಗೆ ಇರತಕ್ಕದ್ದಕ್ಕಿಂತಲೂ ಬ್ಯಾರೆ ಯಾವ ವಿಧವಾದ ವಿಶೇಷ ಬಾಧ್ಯತೆಯೂ ದೇವರಲ್ಲಿ ಇವರಿಗೆ ಇರುವಹಾಗೆ ತೋರುವದಿಲ್ಲ. ಈ ದೇವಾಲಯವು ಸಂಸ್ಥಾನಕ್ಕೆ ಸೇರಿದ್ದು, ಸರ್ಕಾರದ ಜನರಲ್ ರೆವಿನ್ಯೂಯಿಂದ ಈ ದೇವರ ಆರಾಧನೇ ಖರ್ಚು ಸಲ್ಲುತ್ತಾಯಿದೆ. ದೇವರಿಗೆ ಧರಿಸತಕ್ಕ ವಸ್ತ್ರಾಭರಣಗಳಲ್ಲಿ ಪ್ರಾಯಶಃ ಮೈಸೂರು ಸಂಸ್ಥಾನದ ಮಹಾರಾಜರವರ ಸಂತತಿಯಿಂದಲೇ ಕೊಡಲ್ಪಟ್ಟದ್ದಾಗಿರುತ್ತೆ. ಭಕ್ತರಿಂದ ಕೊಡಲ್ಪಟ್ಟದ್ದು ಅತ್ಯಲ್ಪವಾಗಿದ್ದಾಗ್ಯೂ ಅದೂ ಸರ್ಕಾರಕ್ಕೆ ಸೇರಿದ್ದಾಗಿರುತ್ತೆ. ಹೀಗೆ ಸಂಸ್ಥಾನಕ್ಕೆ ಒಳಪಟ್ಟ ಬಾಧ್ಯತೆಯನ್ನ ಶ್ರೀವೈಷ್ಣವರಲ್ಲಿ ಕೆಲವರು ಮಾತ್ರ ತಮಗೇನೇ ಇರುವಂತೆ ಎಣಿಸಿ ಗದ್ದಲ ಮಾಡುವದು ಎಷ್ಟರಮಟ್ಟಿಗೆ ಊರ್ಜಿತವಹತಕ್ಕದ್ದೋ ಅದರನ್ನ ಗೌರ್ನಮೆಂಟಿನವರೇ ಆಲೋಚಿಸಬೇಕು. ಈ ಕಾರಣದಿಂದ ಇವರಿಗೆ ವಿಶೇಷ ಬಾಧ್ಯತೆ ಏನೂ ಇಲ್ಲದೇ ಇದ್ದಾಗ್ಯೂ ಜಿಜ್ಞಾಸಾರ್ಥವಾಗಿ ಇದೆಯೆಂದು ಇಟ್ಟುಕೊಳ್ಳುವ ಸಂದರ್ಭದಲ್ಲಿಯೂ ಇವರ ಮತಸ್ಥಾಪಕರಾದ ಶ್ರೀರಾಮಾನುಜಾಚಾರ್ಯರವರ ಅವತಾರಕ್ಕಿಂತ ಸಾವಿರಾರು ವರುಷಗಳ ಹಿಂದೆ ಶ್ರೀಮಚ್ಛಂಕರಭಗವತ್ಪಾದರವರು ಅವತಾರಮಾಡಿದರೆಂಬ ಅಂಶವನ್ನ ಶ್ರೀವೈಷ್ಣವರು ಒಪ್ಪಿಕೊಳ್ಳದೇ ಇದ್ದರೆ ವಿಧಿ ಇಲ್ಲವಷ್ಟೆ ಇದರಿಂದ ಶ್ರೀಜಗದ್ಗುರುಗಳವರಿಗೆ ಇರತಕ್ಕ ಬಾಧ್ಯತೆಯು ಇವರಿಗಿಂತ ಸಾವಿರಾರು ವರುಷಗಳಮಟ್ಟಿಗೂ ಪ್ರಾಚೀನವಾಗಿರುತ್ತೆಎಂಬುವದು ಸಾಮಾನ್ಯವಾಗಿ ಸಕಲರಿಗೂ ತಿಳಿಯಬರುವಂಥಾ ಅಂಶವು ಇವರಿಗೆ ತಿಳಿಯದೇ ಹೋದದ್ದು ಮಾತ್ರವಲ್ಲದೆ, ಶ್ರೀ ಜಗದ್ಗುರುಗಳವರಿಗೆ ಹಕ್ಕೇ ಇಲ್ಲವೆಂದು ಹೇಳುವದು ಪರ್ಯಾಲೋಚನೆ ಯಿಲ್ಲದಮಾತಾಗಿ ತೋರುತ್ತೆ ಅಥವಾ ಪ್ರಕೃತ ಸಂದರ್ಭದಲ್ಲಿ ಇವರುಮಾಡತಕ್ಕ ವ್ಯಾಜ್ಯವು ಊರ್ಜಿತವಾಗದೇ ಇದ್ದಾಗ್ಯೂ ಮುಂದೆ ಮಾಡಬೇಕಾಗುವ ಇಂಥಾ ವ್ಯಾಜ್ಯಗಳಿಗೆ ತಾವು ಫಿರ್ಯಾದಿಗಳಾಗಿ ನಿಲ್ಲುವದಕ್ಕೆ ಇದು ಬಾಧ್ಯತೆಯನ್ನ ಕೊಡತಕ್ಕ ಪ್ರಿಸೀಡೆಂಟ್‌ಯಾನೆ ಪೀಠಿಕಾ ರಚನೆಯಾಗಿರುತ್ತೆಂದು ಭಾವಿಸಿರಬಹುದಾಗಿತೋರುತ್ತೆ.

೯ ಶ್ರೀರಂಗನಾಥದೇವರಿಗೆ ಸಂಪ್ರೋಕ್ಷಣೆ ಆಗಬೇಕೆಂದು ವ್ಯಾಜ್ಯಮಾಡುವರ ಸಂಖ್ಯೆಯು ಈ ದೇವರಲ್ಲಿ ಅಭಿಮಾನವಿರತಕ್ಕ ಮತ್ತು ಇವರಿಗೆ ಸಮಾನವಾಗಿ ಹಕ್ಕು, ಬಾಧ್ಯತೆವುಳ್ಳ ಇತರ ಭಕ್ತರ ಸಮುದಾಯ ಸಂಖ್ಯೆಗೂ ಮೊಕಾಬಿಲೆ ನೋಡಿದರೆ ಒಟ್ಟು ಸಮುದಾಯದಲ್ಲಿ ಲಕ್ಷ ಪ್ರಜೆಗೆ ವ್ಯಾಜ್ಯಮಾಡುವರು ಒಬ್ಬರೆಂದೂ ಕೂಡ ಗಣಿಸುವದಕ್ಕ ಸಾಲದ್ದಾಗಿರುತ್ತೆ. ಆದ್ದರಿಂದ ಶ್ರೀಜಗದ್ಗುರುಗಳವರು ಆಗಾಗ್ಯೆ ಶ್ರೀರಂಗನಾಥದೇವರ ಆರಾಧನೆಮಾಡತಕ್ಕದ್ದು ಸರ್ವಜನ ಸಮ್ಮತವಾದದೆಂದು ಸರ್ಕಾರದವರು ಧಾರಾಳವಾಗಿ ನಂಬತಕ್ಕದ್ದಾಗಿರುತ್ತೆ.

೧೦ ಮೇಲೆ ಹೇಳಲ್ಪಟ್ಟಿರುವ ಸಂಗತಿಗಳೆಲ್ಲಾ ಸರ್ಕಾರೀ ವ್ಯಾವಹಾರಿಕರೀತ್ಯಾ ಶ್ರೀಜಗದ್ಗುರುಗಳವರಿಗೆ ಶ್ರೀ ರಂಗನಾಥದೇವರನ್ನ ಆರಾಧಿಸತಕ್ಕ ವಿಷಯದಲ್ಲಿರತಕ್ಕ ವಿಶೇಷ ಬಾಧ್ಯತೆಯನ್ನ ತೋರಿಸತಕ್ಕವುಗಳಾಗಿ ಇರುತ್ತವೆ. ಈ ಸಂಬಂಧವಾದ ಶಾಸ್ತ್ರಾಧಾರ ಅಪ್ರತಿಹತವಾದ ಸದಾಚಾರ ಮುಂತಾದ್ದರನ್ನ ಇದರಡಿಯಲ್ಲಿ ಶೃತಪಡಿಸಿರುತ್ತೇವೆ ಏನಂದರೆ.--

೧೧ ಶ್ರೀಜಗದ್ಗುರುಗಳಿಗು ಶ್ರೀ ರಂಗನಾಥದೇವರಿಗೆ ಅರ್ಚನೆ ಮಾಡತಕ್ಕದ್ದು ಪಾಂಚರಾತ್ರಾಗಮಕ್ಕೆ ವಿರುದ್ಧವಾಗಿರುತ್ತೆಂದು ಫಿರ್ಯಾದಿಗಳು ಹೇಳುವ ಅಂಶವನ್ನ ಖಂಡನೆಮಾಡತಕ್ಕ ಶಾಸ್ತ್ರ ಮತ್ತು ಆಚಾರವು ಹೇರಳವಾಗಿರುತ್ತೆ. ಆ ವಿಚಾರವನ್ನ ಪೂರ್ವಪಕ್ಷ ಸಮಾಧಾನ ಸಿದ್ಧಾಂತರೂಪವಾಗಿ ಶೃತಪಡಿಸಲು ಬಹಳ ವಿಳಂಬವಾಗುತ್ತಾದ್ದರಿಂದ ಸೂಕ್ಷ್ಮವಾಗಿ ಸಾಮಾನ್ಯಾಂಶಗಳನ್ನ ತಿಳಿಸದೆ ಇದ್ದರೆ ವಿಧಿಯಿಲ್ಲವಾಗಿ ತಿಳಿಸ್ತುವದೇನಂದರೆ:-- ಶೃತಿಸ್ಮೃತಿಗಳಲ್ಲಿ ಪರಸ್ಪರ ಭಿನ್ನಾಭಿಪ್ರಾಯಬಂದಾಗ್ಯೆ ಶೃತಿಯೇ ಪ್ರಬಲವಾದದ್ದೆಂತಲೂ, ತದ್ವತ್ ಸ್ಮೃತಿ ಪುರಾಣಗಳಲ್ಲಿ ಸ್ಮೃತಿಬಲವಾದ್ದೆಂತಲೂ ಪುರಾಣ ಇತಿಹಾಸಾದಿಗಳಲ್ಲಿ ಪುರಾಣಬಲವಾದ್ದೆಂತಲೂ ಹೀಗೆ ಎಲ್ಲಾದ್ದರಲ್ಲಿಯೂ ಭಿನ್ನಾಭಿಪ್ರಾಯಗಳು ಬಂದಕಾಲದಲ್ಲಿ ಮಹಾಜನಗಳು ಅನುಸರಿಸಿ ನಡೆಸಿಕೊಂಡು

ಬರುವ ಆಚಾರವೇ ಬಲಿಷ್ಟವಾದದ್ದೆಂತಲೂ ಈ ಆಚಾರದಲ್ಲಿ ನವೀನಗಳು ಪ್ರಾಚೀನಗಳು ಇರುವ ಪಕ್ಷ ಇವುಗಳಲ್ಲಿ ಪುರಾತನಕ್ಕೆ ಪ್ರಾಶಸ್ತ್ಯವಿರುತ್ತೆಂಬುವದು ಸಾಮಾನ್ಯವಾಗಿ ಸರ್ವರಿಗೂ ತಿಳಿದಿರುತ್ತೆ. ಈಗ ಶ್ರೀವೈಷ್ಣವರು ಶ್ರೀರಂಗನಾಥದೇವರಿಗೆ ತಾವು ನಡಿಸತಕ್ಕ ಆರಾಧನೆಯು ಪಾಂಚರಾತ್ರಾಗಮಕ್ಕೆ ಒಳಪಟ್ಟಿರುತ್ತೆಂದುನ್ನೂ ಇದು ಶ್ರೀವೈಷ್ಣವರು ದೇವಾಲಯಕ್ಕೆ ಸೇರಿದಾರಭ್ಯ ಆಚರಣೆಗೆ ತಂದಿರುತ್ತಾರೆಂತಲೂ ಗೊತ್ತಾಗಿರೋಣದರಿಂದ ಇವರ ಮತವೇ ನೂತನವಾಗಿರುವಲ್ಲಿ ಇವರ ಆಚಾರ ಪುರಾತನವಾಗಲಾರದಷ್ಟೆ; ಆದ್ದರಿಂದ ಇವರ ಆಚಾರವು ನವೀನಾಚಾರವೇ ಸರಿಯೆಂದು ಧಾರಾಳವಾಗಿ ಹೇಳಬಹುದು. ಶ್ರೀಜಗದ್ಗುರುಗಳವರು ಮಾಡತಕ್ಕ ಆರಾಧನೆಯು ಶ್ರೀರಾಮಾನುಜ ಮತಕ್ಕಿಂತ ಸಾವಿರಾರು ವರ್ಷಗಳ ಹಿಂದಿನಿಂದಾ ಆಚರಣೆಯಲ್ಲಿ ಇರುತ್ತಾಗಿ ಇದು ಪ್ರಾಚೀನವಾದ ಆಚಾರವೆಂಬುವದು ಸ್ಪಷ್ಟವಾಗಿರುತ್ತೆ. ಮತ್ತು ಶ್ರೀಜಗದ್ಗುರುಗಳವರು ಪರಮಹಂಸಾಶ್ರಮದಲ್ಲಿ ಮಹರ್ಷಿಗಳಂತೆ ಇರತಕ್ಕವರುಗಳಾದ್ದರಿಂದ ಇತರ ಗೃಹಸ್ಥಾಶ್ರಮಗಳಂತೆ ದೀಕ್ಷಾವಿಧಿಗಳಿಗೆ ಬದ್ಧರಾಗುವದಿಲ್ಲ. ಇವರು ಎಲ್ಲಾ ದೀಕ್ಷಿತರಿಗಿಂತಲೂ ಶ್ರೇಷ್ಠವಾದವರು. ಮತ್ತು ಪಾಂಚರಾತ್ರಾಗಮದೀಕ್ಷೆಗೆ ಬದ್ಧರಲ್ಲದ ಗೌತಮಮಹರ್ಷಿಗಳು ಈ ದೇವರನ್ನ ಆರಾಧಿಸುತ್ತಾ ಇದ್ದರೆಂಬುವದು ಗ್ರಂಥಗಳಲ್ಲಿ ಹೇಳಲ್ಪಟ್ಟಿರುವದಲ್ಲದೆ ಇದರನ್ನ ಶ್ರೀವೈಷ್ಣವರೇ ಒಪ್ಪಿಕೊಳ್ಳುತ್ತಾರೆ. ಆಗ್ಯೆ ಇವರವೆಂದು ಹೇಳಿಕೊಳ್ಳುವ ಶ್ರೀರಂಗನಾಥದೇವರು ಹ್ಯಾಗೆ ಅಶುಚಿ ಆಗಲಿಲ್ಲವ್ರೋ ಅದರಂತೆಯೆ ಗೌತಮಮಹರ್ಷಿಗಳು ಮಾಡುತ್ತಿದ್ದ ವಿಧಿಯನ್ನ ಅನುಸರಿಸಿ ಶ್ರೀಜಗದ್ಗುರುಗಳವರ ಪರಂಪರೆಯವರೆಲ್ಲಾ ಆರಾಧಿಸತಕ್ಕದ್ದು ಅಶುಚಿತ್ವವನ್ನುಂಟುಮಾಡತಕ್ಕದ್ದಲ್ಲವೆಂಬುವದು ಮತ್ತು ಆಧುನಿಕರಿಂದ ಪ್ರತಿಷ್ಠಿತವಾದ ಬಿಂಬಕ್ಕೆ ಮಾಡತಕ್ಕ ಆರಾಧನೆಯಂತೆ ಶ್ರೀವೈಷ್ಣವರು ಈ ಅನಾದಿ ದೇವರಿಗೆ ಮಾಡುವ ಆರಾಧನೆಯಿಂದ ಉಂಟಾದ ದೋಷಗಳನ್ನ ಪರಿಹಾರ ಮಾಡತಕ್ಕ ಶ್ರೀಜಗದ್ಗುರುಗಳವರು ಮಾಡತಕ್ಕ ಆರಾಧನಾಕ್ರಮವು ಸದಾಚಾರವಾದ್ದೆಂತಲೂ ಆಲೋಚನಾಪರರಾದವರು ತೀರ್ಮಾನಿಸದೆ ಇರಲಾರರು. ಈ ಮೇರೆ ಲೌಕಿಕಪಾರಮಾರ್ಥಿಕ ಎರಡುವಿಧವಾದ ನ್ಯಾಯಗಳು ಅಪೇಕ್ಷಿಸುವ ಸಮಾಧಾನರೂಪವಾದ ಸಂಗತಿಗಳನ್ನೆಲ್ಲಾ ಶೃತಪಡಿಸಿರುತ್ತೇವೆ.

೧೨ ಮೇಲೆ ವಿವರಿಸಲ್ಪಟ್ಟ ಗ್ರಂಥಗಳು, ರಾಜರು ಮುಂತಾದವರು ಕೊಟ್ಟಿರತಕ್ಕ ಸನ್ನದಿನ ದಾಖಲೆಗಳು ದೃಷ್ಟಾಂತಗಳು, ಚಿರಕಾಲಾರಭ್ಯ ನಡೆದುಬರುವ ಮಾಮೂಲು ಶಾಸ್ತ್ರಸಮ್ಮತವಾದ ಆಚಾರವು, ಸರ್ವಜನ ಸಮ್ಮತಿಯೂ, ಇವುಗಳೆಲ್ಲಾ ಶ್ರೀರಂಗನಾಥದೇವರನ್ನ ಆರಾಧಿಸತಕ್ಕದ್ದಕ್ಕೆ ಶ್ರೀಜಗದ್ಗುರುಗಳವರಿಗೆ ಇರತಕ್ಕ ವಿಶೇಷ ಹಕ್ಕುಬಾಧ್ಯತೆಗಳನ್ನ ಸ್ಥಿರಪಡಿಸುತ್ತವೆ. ಇವುಗಳನ್ನೆಲ್ಲಾ ಘನವನ್ನ ಹೊಂದಿದ ಕೌನ್ಸಲ್ ಸಭೆಯವರು ಪರ್ಯಾಲೋಚಿಸತಕ್ಕ ಸಮಯದಲ್ಲಿ ಶ್ರೀಜಗದ್ಗುರುಗಳವರು ಈ ಮೇರೆ ದೇವತಾರಾಧನೆ ಮಾಡತಕ್ಕದ್ದು ಆ ಮಹಾನುಭಾವರ ಸ್ವಪ್ರಯೋಜನಕ್ಕಾಗಿ ಅಲ್ಲ. ರಾಜರು ಮತ್ತು ರಾಷ್ಟ್ರದ ಕ್ಷೇಮಾರ್ಥವಾಗಿ ಇವರುಗಳ ಅಪೇಕ್ಷೆಯನ್ನು ನೆರವೇರಿಸುವದಕ್ಕಾಗಿ ಮಾಡುತ್ತಾರೆ ಎಂಬುವದರನ್ನು ಮನಸ್ಸಿನಲ್ಲಿಟ್ಟುಕೊಂಡು ಭಾರಿಭಾರಿಗೂ ದುಷ್ಟರು ತೊಂದರೆ ಕೊಡುವದಕ್ಕೆ ಆಸ್ಪದವಿಲ್ಲದಂತೆ ನ್ಯಾಯವಾಗಿಯೂ, ಖಂಡಿತವಾಗಿಯೂ, ಇರುವ ತೀರ್ಮಾನವನ್ನ ಅಪ್ಪಣೆ ಕೊಡಿಸಬೇಕೆಂದು ವಿನಯಪೂರ್ವಕವಾಗಿ ಬರದುಕೊಂಡ ಅರ್ಜಿ.

[illegible]

ಜಯಲಕ್ಷ್ಮೀವಿಲಾಸ ಮುದ್ರಾಕ್ಷರಶಾಲಾ ದೊಡ್ಡಪೇಟೆ ಮೈಸೂರು

[illegible]

[illegible]



[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

GENERAL NO. 2396/101 OF 1868-69

MYSORE COMMISSIONER'S OFFICE,

Bangalore, 27th July, 1868

TO

The Secretary to the Government of India,

Foreign Department

SIMLA.

SIR,

In reply to para 2 of your letter 1201, dated 16th instant, I have the honor to submit for the information of the Government of India the following explanation :-

2 The Sringeri Guru is the direct representative of the Sectarian Shunkur Acharya and is the acknowledged spiritual Director not only of the greater proportion of the Hindus of Southern India, but also of those of the leading Mahratta Houses, such as Holakr and the former Peshwas It may be said that his influence is far greater than that of any Hindu spiritual guide in India and I presume it is for this reason that he is regarded with such unlimited respect He is the only Guru in the Province who is permitted to carry the Addi Palkee or Cross Palankeen, and he has in his possession Sunuds of great antiquity from the Nizam, the Peishwas, the Mysore Rajah, Holkar and others all enjoining the utmost respect to be paid to him

3 Owing to the extraordinary veneration in which he has always been held, a biradari of Silledars has been attached to him from the earliest period and on the occasion of his visiting H M Territory an extra escort has always been given to which purport the Guru holds several communications to and from the Madras Government.

4 The Guru enjoys Enam lands valued at more than half a lac in the Kadur District near the sources of the Toongabhadra river, and during his periodical tours in Mysore receives from his disciples large sums of money which he distributes in charity. The late Rajah used to pay him Rs 1000 a month

5 The Guru Narsing Bhartee is a venerable old man of 72, who has been a great traveller and has a considerable reputation for learning He is deservedly respected, being very unassuming in manner and having a well established character for benevolence and wisdom

6 I may observe that I do not think it expedient to curtail the Guru of his customary guard of honor, but I have endeavoured to dissuade him from proceeding to Her Majesty's Territory with any additional followers, although he can quote undoubted precedents for the practice

I have, &,

(Signed) L BOWRING,

Commissioner

No. 1360.

FROM

W. S. SETON KARR, ESQ.,

Secretary to the Government of India.

TO

THE COMMISSIONER OF MYSORE.

SIR,

I have the honor to acknowledge the receipt of your letter dated 27th ultimo, No. 2369/101, submitting an explanation in regard to the escort of Silledar Horse furnished to the Sringeri Guru.

2. In reply, I am directed to state that His Excellency the Viceroy and Gov nor General in Council accepts your explanation of the custom in force regarding the native gentleman and approves the views set forth in the 6th paragraph of the letter under acknowledgment.

I have the honor to be,
Sir.
Your most obedient Servant,
(Signed) W. S. SETON KARR,
Secretary to the Government of India,

SIMLA,
19th August, 1868.

True copy,

(Signed) L. BOWRING.

मोहर.

श्री.

॥ जगद्गुरुयाच ॥

हे संस्थान च विशिष्ट आमील व शिरस्तेदार यास लिहिवाचुन पाठविल संनद वैगेरि विला ऐसाजे आमिला न शिरस्तेदारा न हाल इस्तकबाल मोकदंमा निमुजारे या सरकार दारुल रियासत मैहिसूर बिदानद ॥ ॥ श्री श्रिंगेरी ॥ ॥ श्रीमठाहून मटमुद्र ब्राह्मण एउन तुमच तुमच तालूकेंत मामूलप्रकार स्याच शिष्यवर्गा च वर्णाश्रम च आचारविचार विचारणाकरुन घेउन श्रीमठासएणे च चरणकाणिका मूलानक्षत्रकाणिका अग्रतांबूल दीपराधनकाणिका प्रायश्चित्तकाणिका सुदा शिष्यवर्गलोका कडून एणे सारीख करुन घेणेच्या विषयांत हि कोणी तरी काणिका देइनाते मुद्रा अतिक्रमवाणि चालतरि स्यास ताकीद करुन बंदोबस्त करवाउन देणेच्या सही सदरी शिष्या कडून वसूल जाहलेतें काणक्यास कोणि जकात वसूल करिना सारिखहि श्री श्रिंगेरी श्रीमठास पूर्वापासून मिळालते शिष्यमंडलींत वाइट जाहलेते वाइकास श्रीमटच हवाला करुन रशीद घेणे विशया सहि सदरी श्रीमठास मिळालते ब्राह्मण सुदा समस्त इतर वर्णाश्रमांत हि सुदा स्यास्या वर्णाश्रमप्रकार स्यास्या कालांत उपनयन विवाह प्रायश्चित्त वगैरे करुन घेणेच विषयांत ही सरकारवालेनि प्रवेश करितानये ह्मणुन हि श्री श्रिंगेरि ॥ ॥ याच सवारिहि कोणत कोणतग्रामास आलियाहि तुमचतुमच तालूक सरहदेंत स्यास्या स्थलांत असणेच शिवालय विष्णु आलय वगैरे देवस्थानांतहि असणेच सदरि देवास श्री श्रियानि पूजा करणेवदल सोडून देणेविपइ सुदा याप्रकार निरोपव्हाव ह्मणून हजूर शिरस्तेदार तिरमलपंडित व आणि ह्यावपैया व श्रीमठाधिकार पद्मनाभशास्त्रि याणि सुदा हजूरात अर्जकरून घेतलकरिता स्यास निरोपदेणेच काय ह्मणिजे सदरी प्रमाणे वरिलिहिले सारिख केव्हाहि चालून घेउन एणेच नव्हत हेसंनदच नकल प्रति तालूकेच शिरस्तेदाराच दफ्तरास दाखल करून घेउन असल संनद सदरि तिरमलपंडित याच सुफर्देसहो पद्मनाभशास्त्रीयाच सुफर्देसहो वापस देणेच आहे जाणीजे तारीख २५ बि माहे दिनिसालसाहोर संन १२२१ने मरकुंम प्रमादीच संवत्सर कार्तीकमास खत लक्षीनारणैया मुनषी हजूर.

हेजागि फारर्षीत टीपू सुलतानयाच दस्तखतआहे.

हे जागि चारि महाराष्ट्र दफ्तरदाराच दाखला आहे.

मोहर.

हे जागि फारषीत संनददाखला आहे.

ಕ್ರ॥ ರಿ॥ ನಂಬರು.
295.

ಶ್ರೀ ಶ್ರೀಂಗೇರಿ ಸ್ವಾಮಿಗಳವರ ಮಠಕ್ಕೆ ಸೇರಿದ ಸರ್ವ ಧರ್ಮಾಧಿಕಾರ
ಲಕ್ಷ್ಮೀನರಸಿಂಹಶಾಸ್ತ್ರಿಗಳಿಗೆ-- ಅಂಕಿ.

ಈ ದಿವಸ ಶ್ರೀ ಶ್ರಿಂಗೇರಿ ಸ್ವಾಮಿಗಳವರು ನರಶೀಪುರದ ಶ್ರೀ ಗುಂಜಾನರಸಿಂಹಸ್ವಾಮಿಯವರ ದೇವಸ್ಥಾನಕ್ಕೆ ದಯಮಾಡಿಸಿ, ಪೂಜೇ ಮುಂತಾದ್ದುಮಾಡಿ ಬರಬೇಕಾದ್ದರಿಂದ ಮಾಮೂಲ್ ಅನುಸರಿಸಿ ಮರ್‍ಯಾದಿ ಮುಂತಾದ್ದು ನಡಿಯಲು ಹುಕ್ಕುಂ ಆಗಬೇಕೆಂದು ವಗೈರೇ ನೀವು ಬರಸಿದ ಖತ್ತು ತಲಪಿತು,

ಶ್ರೀ ಶ್ರೀಗೇರಿ ಸ್ವಾಮಿಗಳವರು ಮಾಮೂಲ್ ಮತ್ತು ಪದ್ಧತಿ ಅನುಸರಿಸಿ ಶ್ರೀ ಗುಂಜಾನರಸಿಂಹಸ್ವಾಮಿಗಳವರ ದೇವಸ್ಥಾನಕ್ಕೆ ದಯಮಾಡಿಸಿ ಮಾಮೂಲ್ ಮತ್ತು ಪದ್ಧತಿ ಅನುಸರಿಸಿ ದೇವರಿಗೆ ಅರ್ಚನೆ ಕರ್ಪೂರಾರತಿ ಮಾಡಿ ದಯಮಾಡಿಸಬಹುದು. ಇದರಲ್ಲಿ ಗೈರ್‌ಮಾಮೂಲ್ ಮತ್ತು ಜನರ ನೆಮ್ಮದಿಗೆ ಭಂಗಕರವಾದ ಕೃತ್ಯ ನಡೆಯಲು ಆಕರಮಾಡಕೂಡದು. ಹಾಗೆ ಮಠದಕಡೆ ಜನರಿಂದ ಗಲಾಟೆಗೆ ಆಕರವಾದಲ್ಲಿ ರಿಗಲರ್‌ಪೋಲೀಸ್ ರೂಲ್ಸ್‌ಅನುಸರಿಸಿ ಅಂಥಾಜನರವಿಷಯದಲ್ಲಿ ನಡೆಸಲು ಆಸ್ಪದವಾದೀತೆಂಬ ಈಸಂಗತಿಗಳನ್ನೆಲ್ಲಾ ಶ್ರೀಸ್ವಾಮಿಗಳವರಿಗೆ ಅರಿಕೇಮಾಡಿ, ಮಾಮೂಲ್ ಮತ್ತು ಪದ್ಧತಿ ಅನುಸರಿಸಿ ನಡೆಯಬೇಕಾಗಿಧೆ. ಅದಕ್ಕೆ ವಿರೋಧವಾದ ಯಾವ ಕೃತ್ಯವೂ ನಡೆಯಬಾರದು. ಈ ವಿಷಯವನ್ನು ಕುರಿತು ದೇವಸ್ಥಾನದ ನೌಕರಿಗೂ ಹುಕ್ಕುಂ ಕೊಟ್ಟು ಉಸ್ತುವಾರೀಗೆ ಪೋಲೀಸ್ ಇಲಾಖೆಯವರಿಗೂ ತಿಳಿಯಪಡಿಸಿಧೆ:

7—9—76.
ನರಶೀಪುರ ತಾಲ್ಲೂಕ್
ತಲಕಾಡು.

(Sd) *M. SHAIK IBRAHIM.*

ಥ- ಮೆ-

ತಲ್ಕಾಡು ತಾಲ್ಲೂಕ್
ಮೇಜಿಸ್ಟ್ರೇಟರ
ಮೊಹರು.

ಲಕ್ಷ್ಮೀವಿಲಾಸಮುದ್ರಾಕ್ಷರಶಾಲಾ ದೊಡ್ಡಪೇಟೆ ಮೈಸೂರು.

ಮುಲ್ಕಿ ೫೧ ನಂಬರು.
೩೯

ನರಶೀಪುರದ
ತಾಲ್ಲೂಕ ಮೊಹರು

ನ ರ ಶೀ ಪು ರ ದ ತಾ ಲ್ಲೂ ಕು ಕ ಚೇ ರಿ ಯಿಂ ದ.

ಕಸಬಾ ಲಕ್ಷ್ಮೀನರಸಿಂಹಸ್ವಾಮಿಯವರ ದೇವಸ್ಥಾನದ ಪಾರುಪತ್ಯಗಾರ ಕೃಷ್ಣಪ್ಪನವರಿಗೆ

ಇಸ್ತಾರ್ಸ ಹುಕುಂ.

ಶ್ರೀ ಶ್ರಿಂಗೇರಿ ಜಗದ್ಗುರುಗಳಾದ ನರಸಿಂಹಭಾರತೀಸ್ವಾಮಿಗಳವರು ನರಶೀಪುರಕ್ಕೆ ಚಿತ್ತೈಸಿದ್ದಾಗ್ಯೆ ದೇವರಪೂಜಾ ಮಂಗಳಾರತಿ ಪಾದಕಾಣಿಕೆ ಮುಂತಾದ್ದು ಮಾಡುವದಕ್ಕೆ ಮಾಮೂಲಮೇರೆ ಸದರೀ ಲಕ್ಷ್ಮೀನರಸಿಂಹಸ್ವಾಮಿಯವರ ದೇವಸ್ಥಾನಕ್ಕೆ ದಯಮಾಡಿಸಿದ್ದವೇಳೆ ಅರ್ಚಕ ಕೃಷ್ಣಭಟ್ಟ ಬಾಗಿಲು ಹಾಕಿಕೊಂಡಿದ್ದನಿಮಿತ್ಯ ಸ್ವಲ್ಪಹೊತ್ತು ಸ್ವಾಮಿಗಳವರು ಬಾಗಿಲು ತೆಗೆಯತಕ್ಕದ್ದರ ನಿರೀಕ್ಷಣೆಮಾಡುವಂತೆ ಮಾಡಲ್ಪಟ್ಟು ಸದರಿ ಅರ್ಚಕನಿಗೆ ಬಂದೋಬಸ್ತು ಆಗತಕ್ಕ ವಿಷಯದಲ್ಲಿ ನೀನು ಹುಜೂರು ಫಿರ್ಯಾದಮಾಡಿದ್ದಕ್ಕೆ ತಾಲ್ಲೂಕಿನಿಂದ ಜಾಹಿರ್ಮಾಡಿದ್ದ ರಿಪೋರ್ಟಿನಮೇರೆ ಈ ದಫಾಕ್ಕೆ ನಿಮ್ಮ ಮುನಾಸಬ ಅರ್ಚಕನಿಗೆ ಜುರ್ಮಾನೆವಿಧಿಸಿ ವಸೂಲಮಾಡುವಂತೆ ಕೊಟ್ಟಿರುವ ಹುಕುಂ ಅಮಲಜಾರಿ ಆಗಿರುವ ತಪ್ಸೀಲನ್ನು ಅರ್ಜೀದಾರಗೆ ತಿಳಿಸುವಂತೆ ಸರ್ಮುಜಕೂರು ಮೆ ೧೭ನೇ ಮುಕ್ಕಾಂ ಮುಜರಾಯಿ ೧ನೇ ನಂಬರು ಹುಕುಂ ಸಾದರಾದಕಾರಣ ಈ ಮೊಕದ್ದಮಾ ಕಟ್ಟು ಮುಂತಾದ ಕಾಗದ ಪತ್ರಗಳ ನೋಡುವಾಗ್ಯೆ ಕೂಡ್ಲೆ ಅರ್ಚಕ ಬಾಗಿಲು ತೆಗದ್ದಾಗಿಯೂ ಶ್ರೀಸ್ವಾಮಿಗಳವರು ಕಟ್ಲೆಪ್ರಕಾರ ಪೂಜಾ, ಪಾದಕಾಣಿಕೆ, ಮಂಗಳಾರತಿ ಮುಂತಾಗಿ ನೆರವೇರಿಸಿದಬಳಿಕ ಮಾಮೂಲಮೇರೆ ಮರಿಯಾದೆ ನಡೆಸಿರುವದಾಗಿ ಅರ್ಚಕ ಕೃಷ್ಣಭಟ್ಟನಕೈಫಿಯತಿನಿಂದ ತಿಳಿಯಬರುವದಲ್ಲದೆ ದೇವಸ್ಥಾನದ ಬಾಗಿಲು ಹಾಕಿದ ತಪ್ಸಿತಕ್ಕಾಗಿ ಸನ್ ೧೮೬೬ನೇ ಇಸವಿ ಏಪ್ರಿಲ್ ೧೬ನೇ ಮುಕ್ಕಾಂ ಮುಜರಾಯಿ ೫ನೇ ನಂಬರು ಹುಕುಂ ಪ್ರಕಾರ ಈ ದಫಾಕ್ಕೆ ಸದರಿ ಅರ್ಚಕ ಕೃಷ್ಣಭಟ್ಟನಿಗೆ ೨ರೂಪಾಯಿ ಜುರ್ಮಾನೆ ಮೊಕರರ್‌ಮಾಡಿ ವಸೂಲ್ಮಾಡಿರುತ್ತೆ. ತಿಳಿಯುವದು. ತಾರೀಖು ೧೮ನೇ ಮಾಹೆ ಜೂನ್ ಸನ್ ೧೮೬೬ನೇ ಇಸವಿ ಮೊಕ್ಕಾಂ ಕಸಬಾ. ... ...

ಜೂನ್ ತಾರೀಖು ೨೦ರಲ್ಲು ದಾಖಲ್.

ರುಜು ನಾರಾಯಣರಾವ್ ಮಾಮಲೇದಾರ್,
ಎಂದು ಮಹಾರಾಷ್ಟ್ರ ಲಿಪಿಯಲ್ಲಿ ಬರದಿದೆ.

ಕಮಿಶಾಷನರಯಾನೆ ಇಲಾಖಾ ಸರಕಾರ ಕುಂಫನಿ ಬಹದ್ದರವರ ಪ್ರಾಂತ್ಯೆ,

ಮೈ ಸೂ ರು .

ನಂದನಸಂವತ್ಸರದ ಭಾದ್ರಪದ ಶುದ್ಧ ೧೧ ಯಲ್ಲೂ ಅರಮನೆಶೀಮೆಗಡಿಗಳ ಅಮಿಲರವರಿಗೆ ಬರೆಸಿ ಕಳುಹಿಸಿದ ನಿರೂಪ ಅದಾಗಿ:---

ಶ್ರೀ ಶೃಂಗೇರೀಜಗದ್ಗುರುಗಳವರ ಶ್ರೀ ಮಠದಿಂದ ಮಠಮುದ್ರೆ ಬ್ರಾಂಹ್ಮಣರುಬಂದು ನಿಮ್ಮ ನಿಮ್ಮ ತಾಲ್ಲೂಕಿನಲ್ಲಿ ಮಾಮೂಲ್‌ಮೇರಿಗೆ ಅವರ ಶಿಷ್ಯವರ್ಗಗಳ ಶ್ರೀ ಮಠದ ಆಚಾರವಿಚಾರ ವಿಚಾರಿಸಿಕೊಂಡು ಶ್ರೀ ಮಠಕ್ಕೆ ಬರತಕ್ಕ ಚರಣಕಾಣಿಕೆ, ಮೂಲಾನಕ್ಷತ್ರಕಾಣಕೆ, ಅಗ್ರತಾಂಬೂಲ, ಪೀಪಾರಾಧನೆಕಾಣಿಕೆ, ಪ್ರಾಯಶ್ಚಿತ್ತಕಾಣಿಕೆ ಮುಂತಾಗಿ ಶಿಷ್ಯವರ್ಗ ಜನರಿಂದ ಬರಮಾಡಿಕೊಳ್ಳುವಲ್ಲಿ ಯಾರಾದರೂ ಕಾಣಕೆ ಕೊಡವೆ ಮುದ್ರಾತಿಕ್ರಮವಾಗಿ ನಡೆದುಕೊಂಡವರಿಗೆ ತಾಕೀತ್‌ಮಾಡಿ ಬಂದೋಬಸ್ತು ಮಾಡಿಸಿಕೊಡುವಬಗ್ಗ್ಯೆ ಸದರೀ ಶಿಷ್ಯರಿಂದ ವಸೂಲಾದ ಕಾಣಿಕೆಗಳಿಗೆ ಯಾವ ಸರ್ಕಾರದವರೂ ಸುಂಕ ವಸೂಲ್ ಮಾಡದಿರುವಬಗ್ಗ್ಯೆ ಶ್ರೀ ಶೃಂಗೇರಿ ಶ್ರೀಮಠಕ್ಕೆ ಪೂರ್ವದಾರಭ್ಯದಿಂದ ಸೇರಿದ ಶಿಷ್ಯಜನರಲ್ಲಿ ಕೆಟ್ಟ ಹೆಣ್ಣುಗಳನ್ನು ಶ್ರೀಮಠದವರ ಹವಾಲಿಗೆ ಕೊಟ್ಟು ರಶೀತಿ ತಗದುಕೊಳ್ಳುವಬಗ್ಗ್ಯೆ ಸದರೀ ಶ್ರೀಮಠಕ್ಕೆ ಪೂರ್ವದಾರಭ್ಯದಿಂದ ಸೇರಿದ ಬ್ರಾಂಹ್ಮಣರು ಮತ್ತು ಸಮಸ್ತ ಇತರ ಜಾತಿಯವರುಗಳಲ್ಲಿಯೂ ಸಹ ಆಯಾಯ ವರ್ಣಾಶ್ರಮರೀತ್ಯಾ ಆಯಾಯ ಕಾಲಗಳಲ್ಲಿ ಮುಂಜಿ, ಮದುವೆ, ಪ್ರಾಯಶ್ಚಿತ್ತ, ವಗೈರೆ ಮಾಡಿಕೊಳ್ಳತಕ್ಕಭಾಗದಲ್ಲಿ ಮಠವಿಚಾರಗಳಿಗೆ ಯಾವ ಸರಕಾರದವರೂ ಪ್ರವೇಶ ಮಾಡಕೂಡದೆಂಬುವಬಗ್ಗ್ಯೆ ಶ್ರೀ ಜಗದ್ಗುರುಗಳವರ ಸವಾರಿಯು ಯಾವ ಗ್ರಾಮಗಳಿಗೆ ಬಂದಾಗ್ಯೂ ಆ ಸ್ಥಳದಲ್ಲಿರುವ ಶಿವ, ವಿಷ್ಣು, ವಗೈರೆ ವಿಶಿಷ್ಟ ದೇವಸ್ಥಾನಗಳನ್ನು ಶ್ರೀಗಳವರು ಪೂಜೆಮಾಡತಕ್ಕಬಗ್ಗೆ ಬಿಟ್ಟುಕೊಡತಕ್ಕಬಗ್ಗ್ಯೆಸಹಾ.

೧೭೭೬ನೇ ಇಸವಿ ಏಪ್ರಿಲ್ ೨೦ಕ್ಕೆ ಸರಿಯಾದ ದುರ್ಮುಖಿಸಂ॥ ಚೈತ್ರಮಾಸದಲ್ಲಿ ಮೈಲಾಪುರಿ ಚನ್ನಪಟ್ಣದ ಗವರ್ನರ್ ಲಾರ್ಡ್‌ಪಿಕ್ಕಯಿ ಸಾಹೇಬರು ಕೊಟ್ಟಿರುವ ೭೬-೫೪ನೇ ನಂಬರ್ ಹುಕ್ಕುಂ, ಸದರಿ ದುರ್ಮುಖಿ ಸಂ॥ ಶ್ರಾವಣಶುದ್ಧ ೭ ಯಲ್ಲೂ ಬಂಗಾಳಾ ಗೌವರ್ನರ್‌ಜನರಲ್ ಸಾಹೇಬರು ಕೊಟ್ಟಿರುವ ೧೭೮ನೇ ನಂಬರು ಹುಕ್ಕುಂ. ೧೭೭೭ನೇ ಜನವರಿ ೨೦ಕ್ಕೆ ಸರಿಯಾದ ದುರ್ಮುಖಿಸಂ॥ ಪುಷ್ಯಮಾಸದಲ್ಲಿ ಮೈಲಾಪುರಿ ಚನ್ನಪಟ್ಟಣದ ಗವರ್ನರ್ ಲಾರ್ಡ್‌ಪಿಕ್‌ಯಿಸಾಹೇಬರು ಕೊಟ್ಟಿರುವ ೮೮ನೇ ನಂಬರುಹುಕ್ಕುಂ. ೧೭೮೨ನೇ ಅಕ್ಟೋಬರ್ ೨೮ಕ್ಕೆ ಸರಿಯಾದ ಶುಭಕೃತು ಸಂ॥ ಆಶ್ವೀಜಮಾಸದಲ್ಲಿ ತಂಜಾವೂರು ರೆಸಿಡೆಂಟರು ಜಾನ್‌ಸಲಿವಾನ್ ಸಾಹೇಬರವರು ಕೊಟ್ಟಿರುವ ೧೮ - ೨೮ನೇ ನಂಬರ್ ಹುಕ್ಕುಂ. ೧೭೮೨ನೇ ನವಂಬರ್ ೨೭ರಲ್ಲಿ ಮೈಲಾಪುರಿ ಚನ್ನಪಟ್ಣದ ಗವರ್ನರ್ ಲಾರ್ಡ್‌ಮಕಾರ್ಟ್ನಿಯವರು ಕೊಟ್ಟಿರುವ ೬೫ - ೭೪ನೇ ನಂಬರ್ ಹುಕ್ಕುಂ. ಸದರಿ ಡಿಶಂಬರ್ ೮ನೇ ತಾರೀಖಿನಲ್ಲಿ ಪಾಲ್ರಿ ಷಾರ್ಟ್‌ಸಾಹೇಬರವರು ತಂಜಾವೂರು ಮೊಕ್ಕಾಂನಿಂದ ಕೊಟ್ಟಿರುವ ೭೯ - ೮೬ ನೇ ನಂಬರ್ ಹುಕ್ಕುಂ. ೧೭೮೩ನೇ ಏಪ್ರಿಲ್ ೨೮ಕ್ಕೆಸರಿಯಾದ ಶೋಭಕೃತುಸಂ॥ ಚೈತ್ರಮಾಸದಲ್ಲಿ ಕರ್ನಲ್ ಲ್ಯಾಂಗ್ಸ್‌ಸಾಹೇಬರು ತಂಜಾವೂರು ಮೊಕ್ಕಾಂನಿಂದ ಕೊಟ್ಟಿರುವ ೮೫ - ೯೬ನೇ ನಂಬರ್ ಹುಕ್ಕುಂ. ೧೭೮೩ನೇ ಮೇ ತಾರೀಖು ೪ ರಲ್ಲೂ ಜನರಲ್‌ಕೂಟ್‌ಸಾಹೇಬರು ಕೊಟ್ಟಿರುವ ೪೫ - ೯೯ ನೇ ನಂಬರು ಹುಕ್ಕುಂ. ೧೭೮೩ನೇ ಮೇ ತಾರೀಖು ೧೬ರಲ್ಲು ಕರ್ನಲ್ ಫ್ರೋಲಾರ್ಟನ್ ಸಾಹೇಬರವರು ಕೊಟ್ಟಿರುವ ೧೧೫ - ೧೫೧ನೇ ನಂಬರ್ ಹುಕ್ಕುಂ. ೧೭೮೫ನೇ ಇಸವಿ ಮಾರ್ಚಿ ೧೬ಕ್ಕೆ ಸರಿಯಾದ ಕ್ರೋಧಿಸಂ॥ ಫಾಲ್ಗುಣಮಾಸದಲ್ಲಿ ತಂಜಾವೂರು ರೆಸಿಡೆಂಟ್ ಹಡ್ಲಸ್ಟರ್‌ಸಾಹೇಬರುಕೊಟ್ಟಿರುವ ೧೬೬ - ೧೭೬ನೇ ನಂಬರ್ ಹುಕ್ಕುಂ. ಸದರಿ ೧೭೮೫ನೇ ಏಪ್ರಿಲ್ ೧೮ಕ್ಕೆ ಸರಿಯಾದ ವಿಶ್ವಾವಸು ಸಂ॥ ಚೈತ್ರಮಾಸದಲ್ಲಿ ಮೈಲಾಪುರಿ ಚನ್ನಪಟ್ಣದ ಗವರ್ನರ್ ಲಾರ್ಡ್‌ಜನರಲ್ ಮೆಡೋಸಾಹೇಬರವರು ಕೊಟ್ಟಿರುವ ೧೮೮ - ೧೯೮ನೇ ನಂಬರ್ ಹುಕ್ಕುಂ. ೧೭೮೬ನೇ ಜನವರಿ ೧೬ಕ್ಕೆ ಸರಿಯಾದ ವಿಶ್ವಾವಸು ಸಂ॥ ಪುಷ್ಯಮಾಸದಲ್ಲಿ ಲಾರ್ಡ್‌ವಾಲಿಸ ಸಾಹೇಬರವರು ಕೊಟ್ಟಿರುವ ೮೮ನೇ ನಂಬರು ಹುಕ್ಕುಂ. ೧೭೮೫ನೇ ಮಾರ್ಚಿ ೧೪ರಲ್ಲೂ ವೆಬ್ಬ್‌ಸಾಹೇಬರವರು ಕೊಟ್ಟಿರುವ ೧೨೫ನೇ ನಂಬರು ಹುಕ್ಕುಂ. ೧೭೯೦ನೇ ಸಾಧಾರಣ ಸಂ॥ ವೈಶಾಖಶುದ್ಧ ೧೧ ಯಲ್ಲು ಪ್ಲಾಯಡ್‌ಸಾಹೇಬರು ಸತ್ಯಮಂಗಲದ ಮೊಕ್ಕಾಂನಿದ ಕೊಟ್ಟಿರುವ ೨೦೦-೩೧೫ನೇ ನಂಬರುಹುಕ್ಕುಂ. ಸದರಿ ವೈಶಾಖ ಬಹುಳ ೧೧ ಯಲ್ಲೂ ಕಾರ್ಜೆಟ್‌ಸಾಹೇಬರು ಕೊಯಮತ್ತೂರು ಮೊಕ್ಕಾಮಿನಿಂದ ಕೊಟ್ಟಿರುವ ೩೪೫ - ೪೦೫ನೇ ನಂ॥ ಹುಕ್ಕುಂ. ಸದರೀ ಜ್ಯೇಷ್ಠಶುದ್ಧ ೮ ಯಲ್ಲೂ ಸರ್ವಯಜಮಾನರಾದ ಲಾರ್ಡ್‌ಕಾರ್ನ್‌ವಾಲೀಸ್‌ಸಾಹೇಬರು ಕೊಟ್ಟಿರುವ ೪೨೮ - ೪೫೪ನೇ ನಂ॥ ಹುಕ್ಕುಂ. ಸದರೀ ಶ್ರಾವಣಶುದ್ಧ ೧೩ ಯಲ್ಲು ಮೇಜರ್‌ಕ್ಲೋಸ್‌ಸಾಹೇಬರವರು ಕೊಟ್ಟಿರುವ ೪೬೮ - ೫೭೬ನೇ ನಂ॥ ಹುಕ್ಕುಂ. ಸದರಿ ಶ್ರಾವಣ ಬಹುಳ ೫ ಯಲ್ಲೂ ದಂಡಿನ ಯಜಮಾನರಾದ ಚಾಲ್ಮರ್ಸ್‌ಸಾಹೇಬರು ಕೊಯಮತ್ತೂರು ಮೊಕ್ಕಾಂನಿಂದ ಕೊಟ್ಟಿರುವ ೫೪೫ - ೫೬೮ನೇ ಹುಕ್ಕುಂ. ೧೭೯೧ನೇ ಮೇ ೧ಕ್ಕೆ ಸರಿಯಾದ ವಿರೋಧಿಕೃತು ಸಂ॥ ವೈಶಾಖಮಾಸದಲ್ಲಿ ಜನರಲ್‌ಹಾರಿಸ್ ಸಾಹೇಬರು ಕೊಟ್ಟಿರುವ ೬೬೮ - ೭೮೨ನೇ ನಂ॥ ಹುಕ್ಕುಂ. ಸದರೀ ೧೭೯೧ನೇ ಮೇ ೫ರಲ್ಲೂ ಲಾರ್ಡ್‌ವೆಲ್ಲಸ್ಲಿಸಾಹೇಬರವರು ಕೋರ್ಟಾಫ್ ಡೈರೆಕ್ಟರುಗಳಿಗೆ ಡಿಸ್ಪ್ಯಾಚನ್ನು ಬರಿಯುವದಕ್ಕೆ ಇಂಡಿಯಾ ಕಂಪೆನಿಯವರು ಕೊಟ್ಟಿರುವ ೧೪೧ನೇ ನಂ॥ ಹುಕ್ಕುಂ. ಸದರಿ ಮೇ ೧೫ರಲ್ಲೂ ಕೋರ್ಟಾಫ್ ಡೈರೆಕ್ಟರುಗಳು ಕೊಟ್ಟಿರುವ ೧೭೨ನೇ ನಂಬರು ಹುಕುಂ. ೧೭೯೨ನೇ ಮಾರ್ಚಿ ೩ಕ್ಕೆ ಸರಿಯಾದ ವಿರೋಧಿಕೃತು ಸಂವತ್ಸರದ ಫಾಲ್ಗುಣಮಾಸದಲ್ಲಿ ಲಾರ್ಡ್ ಕಾರ್ನ್‌ವಾಲೀಸ್‌ಸಾಹೇಬರು ಕೊಟ್ಟಿರುವ ೯೨೪ - ೯೪೮ನೇ

ನೇ ಮೇ ೧೪ಕ್ಕೆ ಸರಿಯಾದ ಪರೀಧಾವಿ ಸಂವತ್ಸರದ ವೈಶಾಖಮಾಸದಲ್ಲಿ

ಲಾರ್ಡ್ ವೆಲ್ಲಸ್ಲಿಸಾಹೇಬರವರು ಕೊಟ್ಟಿರುವ ೩೧೧ನೇ ನಂಬರು ಹುಕ್ಕುಂ. ೧೭೯೩ನೇ ಪ್ರಮಾದೀಚ ಸಂವತ್ಸರದ ವೈಶಾಖ ಶು॥ ೪ ಯಲ್ಲೂ ಮೈಲಾಪುರಿಚನ್ನಪಟ್ಟಣದ ಗವರ್ನರ್ ಲಾರ್ಡ್‌ಹೋಬಾರ್ಟ್ ಸಾಹೇಬರವರು ಕೊಟ್ಟಿರುವ ೯೬ನೇ ನಂಬರು ಹುಕ್ಕುಂ. ಸದರಿ ವೈಶಾಖ ಬ॥ ೫ ಯಲ್ಲೂ ವೆಬ್ ಸಾಹೇಬರು ಕೊಟ್ಟಿರುವ ೯೪ನೇ ನಂಬರು ಹುಕ್ಕುಂ. ಸದರಿ ಜ್ಯೇಷ್ಠ ಶು॥ ೨ ಯಲ್ಲೂ ಜಾರ್ಜ್‌ಸಾಹೇಬರು ಕೊಟ್ಟಿರುವ ೨೧೪ನೇ ನಂಬರು ಹುಕ್ಕುಂ. ಸದರಿ ಪ್ರಮಾದೀಚ ಸಂವತ್ಸರದ ಕಾರ್ತೀಕಮಾಸದಲ್ಲಿ ದೊಡ್ಡನವಾಬರಾದ ಹೈದರಲ್ಲಿ ಸಾಹೇಬರು ಕೊಟ್ಟಿರುವ ಸನ್ನದು. ೧೭೯೪ನೇ ಜೂನ್ ೨೪ಕ್ಕೆ ಸರಿಯಾದ ಆನಂದಸಂವತ್ಸರದ ಜ್ಯೇಷ್ಠಮಾಸದಲ್ಲಿ ಸದರಿ ಜಾರ್ಜ್‌ಸಾಹೇಬರವರು ಕೊಟ್ಟಿರುವ ೨೪೨ನೇ ನಂಬರು ಹುಕ್ಕುಂ. ೧೭೯೫ನೇ ಇಸವಿ ಜುಲೈ ೧೯ಕ್ಕೆ ಸರಿಯಾದ ರಾಕ್ಷಸ ಸಂವತ್ಸರದ ಆಷಾಢಮಾಸದಲ್ಲಿ ಮೈಲಾಪುರಿಚನ್ನಪಟ್ಟಣದ ಗವರ್ನರ್ ಲಾರ್ಡ್‌ಹೋಬಾರ್ಟ್ ಸಾಹೇಬರು ಕೊಟ್ಟಿರುವ ೮೧೪ನೇ ನಂಬರು ಹುಕ್ಕುಂ. ೧೭೯೬ನೇ ಇಸವಿ ಫೆಬ್ರವರಿ ೧೫ರಲ್ಲೂ ಸದರಿ ಹೋಬಾರ್ಟ್‌ಸಾಹೇಬರು ಕೊಟ್ಟಿರುವ ೨೧೨ನೇ ನಂಬರು ಹುಕ್ಕುಂ. ೧೭೯೭ನೇ ಇಸವಿ ಆಗಸ್ಟು ೨೬ಕ್ಕೆ ಸರಿಯಾದ ಪಿಂಗಳ ಸಂವತ್ಸರದ ಶ್ರಾವಣಮಾಸದಲ್ಲಿ ಮೈಲಾಪುರಿಚನ್ನಪಟ್ಟಣದ ಗವರ್ನರ್ ಲಾರ್ಡ್ ಕ್ಲೈವ್‌ಸಾಹೇಬರು ಕೊಟ್ಟಿರುವ ೯೮ನೇ ನಂಬರು ಹುಕ್ಕುಂ. ೧೭೯೮ನೇ ಮಾರ್ಚ್ ೨೪ಕ್ಕೆ ಸರಿಯಾದ ಪಿಂಗಳ ಸಂವತ್ಸರದ ಫಾಲ್ಗುಣಮಾಸದಲ್ಲಿ ಸರ್ವ ಯಜಮಾನರಾದ ಬಂಗಾಳಾ ಗವರ್ನರ್‌ಜನರಲ್ ಲಾರ್ಡ್ ಮಾರ್ನಿಂಗ್ಟನ್ ಸಾಹೇಬರು ಕೊಟ್ಟಿರುವ ೩೧೬ನೇ ನಂಬರು ಹುಕ್ಕುಂ. ೧೭೯೮ನೇ ಮೆ ೧೦ಕ್ಕೆ ಸರಿಯಾದ ಕಾಳಾಯುಕ್ತಿ ಸಂವತ್ಸರದ ವೈಶಾಖಮಾಸದಲ್ಲಿ ಲಾರ್ಡ್‌ಕ್ಲೈವ್‌ಸಾಹೇಬರು, ಲಾರ್ಡ್ ಮಾರ್ನಿಂಗ್ಟನ್‌ಸಾಹೇಬರೂ ಸಹ ಕೊಟ್ಟಿರುವ ೧೮೪ನೇ ನಂ॥ ಹುಕ್ಕುಂ. ೧೭೯೯ನೇ ಜನವರಿ ೧೪ಕ್ಕೆ ಸರಿಯಾದ ಕಾಳಾಯುಕ್ತಿ ಸಂವತ್ಸರದ ಪುಷ್ಯಮಾಸದಲ್ಲಿ ಜನರಲ್ ಹಾರಿಸ್‌ಸಾಹೇಬರವರು ಕೊಟ್ಟಿರುವ ೧೧೦ನೇ ನಂಬರು ಹುಕ್ಕುಂ. ಇದೇ ಪುಷ್ಯ ಬ॥ ೧೪ರಲ್ಲೂ ವೆಬ್‌ಸಾಹೇಬರು ಕೊಟ್ಟಿರುವ ೩೪೮ನೇ ನಂಬರು ಹುಕ್ಕುಂ. ೧೭೯೯ನೇ ಏಪ್ರೆಲ್ ೧೬ಕ್ಕೆ ಸರಿಯಾದ ಸಿದ್ಧಾರ್ಥಿ ಸಂವತ್ಸರದ ಚೈತ್ರಮಾಸದಲ್ಲಿ ಲಾರ್ಡ್‌ಕ್ಲೈವ್‌ಸಾಹೇಬರ ಹುಕ್ಕುಂ ಮೇರಿಗೆ ವೆಬ್‌ಸಾಹೇಬರು ಕೊಟ್ಟಿರುವ ೮೧೬ನೇ ನಂಬರು ಹುಕ್ಕುಂ. ೧೭೯೯ನೇ ಮೇ ೧೪ಕ್ಕೆ ಸರಿಯಾದ ಸಿದ್ಧಾರ್ಥಿಸಂವತ್ಸರದ ವೈಶಾಖಮಾಸದಲ್ಲಿ ಜನರಲ್ ಹಾರಿಸ್‌ಸಾಹೇಬರು ಕೊಟ್ಟಿರುವ ೮೬ - ೩೩೬ನೇ ನಂಬರು ಹುಕ್ಕುಂ. ೧೭೯೯ನೇ ಜೂನ್ ೩೦ರಲ್ಲೂ ಸರ್ವ ಯಜಮಾನರಾದ ಬಂಗಾಳಾ ಗವರ್ನರ್‌ಜನರಲ್ ಲಾರ್ಡ್ ಮಾರ್ನಿಂಗ್ಟನ್‌ಸಾಹೇಬರವರು ಕೊಟ್ಟಿರುವ ೫೧೬ನೇ ನಂಬರು ಹುಕ್ಕುಂ. ಈ ಹುಕ್ಕುಂಗಳನ್ನು ಅನುಸರಿಸಿ ಪ್ರಭವಸಂವತ್ಸರದ ಆಶ್ವೀಜ ಶು॥ ೩ ಮುಕ್ಕಾಂನಲ್ಲೂ, ಸದರಿ ಪ್ರಭವಸಂವತ್ಸರದ ಮಾರ್ಗಶಿರ ಬ॥ ೧೩ ಭಾನುವಾರದ ಮುಕ್ಕಾಂನಲ್ಲೂ, ವಿಭವಸಂವತ್ಸರದ ಮಾರ್ಗಶಿರ ಶು॥ ೩ ಭಾನುವಾರದ ಮುಕ್ಕಾಂನಲ್ಲೂ ಸಹ ದಿವಾನ್ ಪೂರ್ಣಯ್ಯನವರು ಕೊಟ್ಟಿರುವ ಪರವಾನೆ ಮತ್ತು ರಹದಾರಿ. ೧೮೦೩ನೇ ಡಿಶಂಬರು ೨೩ರಲ್ಲೂ, ೧೮೦೮ನೇ ನವಂಬರು ೨೦ರಲ್ಲೂ ಸಹ ರಸಿಡೆಂಟರು ಕೋಲ್‌ಸಾಹೇಬರು ಕೊಟ್ಟಿರುವ ೯೪೨ - ೮೨೬ನೇ ನಂಬರು ಹುಕ್ಕುಂಗಳು, ೧೮೦೮ನೇ ನವಂಬರು ೨೦ರಲ್ಲೂ ಮೈಲಾಪುರಿಚನ್ನಪಟ್ಟಣದ ಗವರ್ನರ್ ಲಾರ್ಡ್ ಬಲೂರ್‌ಸಾಹೇಬರು ಕೊಟ್ಟಿರುವ ೯೦೮ನೇ ನಂಬರು ಹುಕ್ಕುಂ. ಸನ್ ೧೮೨೦ನೇ ಇಸವಿ ಜೂನ್ ತಾರೀಖು ೨೬ರಲ್ಲೂ ಮತ್ತು ೧೮೨೬ನೇ ಇಸವಿ ಸೆಪ್ಟಂಬರು ತಾರೀಖು ೯ರಲ್ಲೂ ಸಹ ಮಹಾರಾಜರಾಜಾಸಾಹೇಬ್ ಬಹದ್ದುರವರು ಕೊಟ್ಟಿರುವ ಸನ್ನದು, ಮತ್ತು ರಹದಾರಿ ಸಹ ಸಾದರಾಗಿ ಇರುವದನ್ನು ಶ್ರೀಮಠದ ಪಾರುಪತ್ಯೇಗಾರ ಭಿಷ್ಟ್ರಯ್ಯಶಾಸ್ತ್ರಿಗಳು ಹುಜೂರಲ್ಲಿ ಹಾಜರ್ಮಾಡಿ ಈ ಮೇರಿಗೆ ಅಪ್ಪಣೆ ಆಗಬೇಕೆಂದು ಅರ್ಜಿ ಮಾಡಿಕೊಂಡದ್ದರಿಂದ ಅಪ್ಪಣೆ ಕೊಡಿಸಿ ಇದ್ದೇತು. ಸದರಿ ಬರಸಿರುವ ಮೇರಿಗೂ ಬಿಲ್‌ಷೇಲ್‌ಸಾಬುಕಿನ ಹುಕ್ಕುಂಗಳು, ಪರವಾನೆ ಸನ್ನದು, ರಹದಾರಿ ಸಹ ಇರುವ ಮಾಮೂಲ್ಮೇರಿಗೆ ನಡೆಸಿಕೊಳ್ಳುವದು.

ತಾರೀಖು ೫ನೇ ಮಾಹೆ ಸೆಪ್ಟಂಬರ್ ಸನ್ ೧೮೩೨ನೇ ಇಸವಿ ದರಹಾಗಾ ಬೆಂಗಳೂರು ಕ್ಯಾಷ್ ಮೇಜರ್ ಕಮಿಷನರ್ ಎಂದು ಸೈನಿಥೆ. ಸೂರಪ್ಪ, ಹೆಡ್ ದಿವಾನ್ ಎಂದು ಸೈನಿಥೆ.

ಶ್ರೀಮತ್ಪರಮಹಂಸ ಯಥೋಕ್ತಬಿರುದಾಂಕಿತರಾದಂಥ ಶ್ರೀ ಸಚ್ಚಿದಾನಂದಭಾರತಿಗಳಿಗೆ.

ಟೀಪು ಸುಲತಾನ್ ಪಾದಷಹರು ಮಾಡುವ ಸಲಾಂ. ನೀವು ಕಳುಹಿಸಿದ ಪತ್ರಿಕೆಯಿಂದ ಎಲ್ಲಾ ವಿವರವು ತಿಳಿಯಬಂತು. ನಮ್ಮ ಸರಕಾರದ ಶೀಮೆಯಲ್ಲಿ ಇರುವ ದೇವಸ್ಥಾನ ಪುಣ್ಯಕ್ಷೇತ್ರಗಳಲ್ಲೂ ದೇವತಾದರ್ಶನಮಾಡಿಕೊಂಡು ಬರತಕ್ಕಬಗ್ಗೆ ಅಪ್ಪಣೆಕೊಟ್ಟು ರಹದಾರಿ ಕಳುಹಿಸಿಕೊಟ್ಟಲ್ಲಿ ಹೋಗಿ ದೇವರ ಸನ್ನಿಧಿಗಳಲ್ಲಿ ಸರಕಾರದ ಶ್ರೇಯಸ್ಸು ಪ್ರಾರ್ಥಿಸಿಕೊಂಡು ಬರುವದಾಗಿ ಬರದು ಇರುವದು ಸರಿಯಷ್ಟೆ; ಅದೇಪ್ರಕಾರಕ್ಕೆ ರಹದಾರಿ ಕಳುಹಿಸಿ ಇದ್ದೇತು. ಸರಕಾರದ ಶೀಮೆಯಲ್ಲಿರುವ ದೇವತಾಸ್ಥಳ ಪುಣ್ಯಕ್ಷೇತ್ರಗಳಲ್ಲಿ ಸಹ ಹೋಗಿ ದೇವರ ಸನ್ನಿಧಾನಗಳಲ್ಲು ತಾವು ತ್ರಿಕಾಲ ಈಶ್ವರಪೂಜೆಯನ್ನೂ ಸಹ ಸರಕಾರದ ಶ್ರೇಯೋಭಿವೃದ್ಧಿಯಾಗುವಂತೆ ಈಶ್ವರಪ್ರಾರ್ಥನೆ ಮಾಡಿಕೊಂಡು ಬರುವಹಾಗೆ ಮಾಡಿಸುವದು. ತಾರೀಖು ೧೬ನೇ ಮಾಹೆ ಜಾಫರಿ ಸಾಲ್ ಇರಾರಸಕ್ ಸನ್ ೧೨೨೪ ಮಹಮ್ಮದು ನಳಸಂವತ್ಸರ ಎಂತ ಇದೆ.

PRINCIPAL — SEAL of NIZAM ALI KHAN NIZA-MUL MULK DATED 1175-H — ROYAL ORDER

Addressed to the Goomastas of Jagirdars, Desa Mukies, Desa Pandava Monegars, Potels, Farmers, &c, &c, in the Subhas of Deckan, Hyderabad

Whereas the Vakeel of the *Sri* Swami *Jagadguru*, *Sumsthan Sringeri*, represents that the Sri Swami is about to set out on tour in the Deckan with certain insignia on the strength of a *Sunud* formerly issued by this Government, that the usual honors specified in the said *Sunud* issued under the seal of thist kingdom should be continued that the practice of offering to the Mutt annual contributions and nuzars during the occasion of marriage, &c, should be continued, that the Enam Jagirs, &c bestowed on the *Mutt* should be continued as before, and that no other Guru be allowed to travel about with the above said honors and insignia.

Wherefore it is directed thus:——

In accordance with the above representation the orders formerly issued in regard to the Guru's progress in this kingdom with the usual insignia, the usual *Istakabole*, *Bicksha Kanicay* (offering) of the people to the said Mutt are hereby renewed It is further ordered that the property of such disciples of the said *Mutt* as may die *Bewaris* (without heirs) shall vest in the said *Mutt* and that the *Swami* is the supreme in the matter of the performance on the part of his disciples of their respective religious duties. This order will have reference to the following matters:——

1. The said swami will have authority in the Mullikarjoona and other temples.
2. *The Enams*, *Jagirs*, &c., bestowed on the *Mutt* to continue as before.
3. The elephants and horses in the possession of *Jonas* to be the property of the *Mutt*.
4. The property of *Sunyasis*, *Avadhutas* and such others who may die without heirs to vest in the *Mutt*.
5. During the occation of marriages, &c., among the Mutt disciples, the first honors, *Nuzurs*, &c., to be offered to the *Mutt*.
6. That out of the temple founds a contribution of one anna in the Rupee to be paid in to the *Mutt*.
7. That a portion of the allowance made for the *Lungurkhana* and *Kyrat* for Mussulmen *Fakeers* to be paid in to the *Mutt*

Dated 24th Rubei Sani 1196 Higiri corresponding with the year A. D. 1779/80.
Registerd in the Huzur Dufter 3rd Jamadilevel in the year 1196 Hijiri.
Registerd in the Dewan's Dufter 1st Jamadilevel in the year 1196 Hijiri

Copy registered in the Sultan's Dufter 1st Jamadi level in the year 1196 Hijiri corresponding to A. D. 1779—80

The above is a translation from Persian language

Jayalakshmi vilasa press, mysore.

14/III/95

7

1.79[illegible]
14-11-95

ಮೈಸೂರು ಸಂಸ್ಥಾನದ ಎಗ್ಸಿಕ್ಯೂಟಿವ್ ಕೌನ್ಸಿಲ್ ಪ್ರಸಿಡೆಂಟ್ ಮತ್ತು

ದಿವಾನ್ ಸರ್. ಕೆ. ಶೇಷಾದ್ರಯ್ಯನವರ

ಸನ್ನಿಧಾನಂಗಳಿಗೆ

—— o ——

[illegible]
[illegible]
ನಿವಾಸಿಗಳಾದ ಬ್ರಾಹ್ಮಣರು ಮೊದಲಾದ ಚತುರ್ವರ್ಣದ ಪ್ರಜೆಗಳು ಬರೆದುಕೊಂಡ ಅರ್ಜಿ—

ಶ್ರೀ ಶ್ರಿಂಗೇರಿ ಜಗದ್ಗುರು ಮಹಾಸ್ವಾಮಿಗಳವರಿಯು ಕಳೆದ ಜೂನ್‌ಮಾಹೆಯಲ್ಲಿ ಮೈಸೂರಿಗೆ ಬಿಜಯಂಗೈಯ್ಯುತ್ತಿದ್ದಕಾಲದಲ್ಲಿ ಶಿಷ್ಯಜನರ ಪ್ರಾರ್ಥನಪೂರ್ವಕ ಶ್ರೀರಂಗಪಟ್ಟಣದ ಕೋಟೆವಳಕ್ಕೆ ದಯಮಾಡಿಸಿ ಅಲ್ಲಿ ರಂಗನಾಥಸ್ವಾಮಿದೇವರ ದರ್ಶನವಂ ಮಾಡಿದ್ದಕ್ಕಾಗಿ ದೇವರಿಗೆ ಸಂಪ್ರೋಕ್ಷಣೆ ಆಗಬೇಕೆಂದು ಶ್ರೀವೈಷ್ಣವರಲ್ಲಿ ಕೆಲವರು „ಅ ಖಿ ಲ ವೈ ಷ್ಣ ವ ಸ ಭಾ„ ಎಂದು ದೊಡ್ಡ ಹೆಸರನ್ನಿಟ್ಟುಕೊಂಡು ಸರ್ಕಾರದಲ್ಲಿ ಫಿರ್ಯಾದುಮಾಡಿದ್ದರಮೇಲೆ ಸ್ಮಾರ್ತಜನಗಳು ಸಂಪ್ರೋಕ್ಷಣೆ ಮಾಡಕೂಡದೆಂದು ತಕರಾರುಮಾಡಿದ್ದಕ್ಕಾಗಿ ೧೮೯೫ನೇ ಇಸವಿ ಜೂನ್ ೨೩ನೇ ತಾರೀಖಿನಲ್ಲಿ ಮುಜರಾಯಿ ಸೂಪರಿಂಟೆಂಡೆಂಟರವರು ಖುದ್ದು ವಿಚಾರಣೆ ಮಾಡಿ ಗೌರ್ನಮೆಂಟಿಗೆ ಮಾಡಿದ ರಿಪೋರ್ಟನ್ನ ಪರಾಂಬರಿಸಿ ಗೌರ್ನಮೆಂಟಿನವರಿಂದ ತೀರ್ಮಾನದ ಹುಕುಂ ಕೊಡೋಣವಾಗಿರುತ್ತೆ. ಈತೀರ್ಮಾನವು ದ್ವೇಷಾಸೂಯಾಪರರಾದ ಕೆಲವರಿಗೆ ತೃಪ್ತಿಕರವಾಗದೆ ಅವರು ವರ್ತಮಾನಪತ್ರಿಕೆಗಳಿಂದ ಮನಸ್ವಿಚರ್ಚೆಯನ್ನು ಮಾಡುತ್ತಾ ಇರುವದಲ್ಲದೆ ತಮ್ಮ ಅಭಿಪ್ರಾಯದಂತೆ ಸಂಪ್ರೋಕ್ಷಣೆಗೆ ಎಸ ಎಂ ಕಾಪ[illegible]ಹೋದಲ್ಲಿ ಮತಸಮ್ಬಂಧವಾದ ಮರಣವನ್ನ ಹೊಂದುತ್ತೇವೆಂಬದಾಗಿ ಬರಿಯೋಣವೇ ಮ[illegible]ಪ್ಪರಿಂದ ಗೌರ್ನಮೆಂಟಿನವರಿಗೆ ಘಾಬರಿಯನ್ನುಂಟುಮಾಡಿ ತನ್ಮೂಲಕ ನ್ಯಾಯಕ್ಕೆ ವಿರುದ್ಧವಾಗತಕ್ಕ ತಮ್ಮ ಇಷ್ಟಾರ್ಥಗಳನ್ನ ಪಡಿಯಬೇಕೆಂದು ಪುನಃಪುನಃ ಶ್ರೀಮನ್ಮಹಾರಾಜ್ಞೀ ರೀಜಂಟರವರಿಗೂ ರ[illegible] ಸಾಹೇಬರಿಗೂ ಅರ್ಜಿಯನ್ನು ಕೊಡುವದೇ ಮುಂತಾದ ಹಠಸಾಧನಾಪ್ರಯತ್ನದಲ್ಲಿರುತ್ತಾರೆ

ಈ ವಿಚಾರವನ್ನ ಕುರಿತು ನಾವು ಗಾರ್ನಮೆಂಟಿಗೆ ಶೃತಪಡಿಸತಕ್ಕದ್ದೇನೂ ಇಲ್ಲದೇ ಇದ್ದಾಗ್ಯೂ ಪ್ರೋಸೀಡಿಂಗ್ಸಿನ ೮ನೇ ಪ್ಯಾರಾದಲ್ಲಿ ನಮೂದಿಸಿರುವ ಸಂದರ್ಭದಲ್ಲಿಯೂ ಶ್ರೀವೈಷ್ಣವರಿಗೆ ಶ್ರೀ ರಂಗನಾಥಸ್ವಾಮಿದೇವರಮೇಲೆ ಇರತಕ್ಕ ಹಕ್ಕುದಾರಿ ವಿಚಾರದಲ್ಲೂ ಅರಿಕೆಮಾಡಿಕೊಳ್ಳುವದನ್ನ ಘನತೆಯನ್ನ ಹೊಂದಿದ ಕೌನ್ಸಿಲ್ ಸಭೆಯವರು ಸಾವಧಾನವಾಗಿ ಪರ್ಯಾಲೋಚಿಸಬೇಕೆಂದು ಬೇಡುತ್ತೇವೆ.

೧ ನೇದು ಮೇಲ್ಕಂಡ ಪ್ರೊಸಿಡಿಂಗ್ಸಿನ ನಾಲ್ಕನೇ ಪ್ಯಾರಾ.

“ ವೇದೋಕ್ತ ಕರ್ಮಾನುಷ್ಠಾಯಿಗಳಾದ ಬ್ರಾಹ್ಮಣರಿಗೆ ವಿಧಿರೂಪವಾಗಿರುವ ಆಗಮಗಳಪ್ರಕಾರ ಪೂಜೆಗಳಂ ನಡೆಸಲ್ಪಡುವ ಒಂದು ದೇವಾಲಯದಲ್ಲಿ ಒಬ್ಬ ಮಠಾಧಿಪತಿಯಾದವರು ಪೂಜೆಮಾಡಬಹುದೆಂಬ ಸಾಮಾನ್ಯ ಜಿಜ್ಞಾಸೆಯನ್ನಾಗಲೀ ಅಥವಾ ಮಾಮೂಲ್ ಅನುಸರಿಸಿ ಶ್ರಿಂಗೇರಿಸ್ವಾಮಿಗಳವರಿಗೆ ಇಂಥಾ ವಿಷಯಗಳಲ್ಲಿ ಯಾವದಾದರೂ ವಿಶೇಷ ಬಾಧ್ಯತೆ ಉಂಟೆ ಎಂಬ ಮುಖ್ಯವಾದಜಿಜ್ಞಾಸೆಯನ್ನಾಗಲಿ, ಪ್ರಕೃತ ಮೊಕದ್ದಮೆಯನ್ನು ಫೈಸಲ್ ಮಾಡುವದರಲ್ಲಿ ಆಲೋಚಿಸಬೇಕಾದ್ದು ದೈವಾತ್ ಅನಾವಶ್ಯಕವಾಗಿದೆ. ಕಳೆದ ಜೂನ್ ತಿಂಗಳು ೧೦ನೇ ತಾರೀಖಿನಲ್ಲಿ ಶ್ರಿಂಗೇರಿಸ್ವಾಮಿಗಳವರು ದೇವರಿಗೆ ಪೂಜೆಮಾಡಬೇಕೆಂಬ ಉದ್ದೇಶ್ಯದೊಡನೆ ದೇವಾಲಯಕ್ಕೆ ದಯಮಾಡಿಸಿದವರಲ್ಲವೆಂದು ಹೇಳುವದು ಪ್ರಕೃತ ಮೊಕದ್ದಮೆಯವ್ಯವಸ್ಥೆಗೆ ಸಾಕಾದ್ದಾಗಿದೆ. ” *

* * * * * * * * * * * * * * * * * * * *

ವಿಷ್ಣುದೇವಾಲಯಗಳಲ್ಲಿ ಶೃಂಗೇರಿ ಜಗದ್ಗುರುಗಳವರು ಪೂಜೆಮಾಡತಕ್ಕದ್ದಕ್ಕೆ ಅವರಿಗೆ ವಿಶೇಷ ಬಾಧ್ಯತೆ ಇರತಕ್ಕದ್ದನ್ನು ವಿಚಾರಮಾಡತಕ್ಕದ್ದು ಈ ಮೊಕದ್ದಮಾ ತೀರ್ಮಾನಕ್ಕೆ ಮುಖ್ಯವಾದ ಅಂಶವಾಗಿತ್ತು.

ಹಾಗೆ ಮಾಡಿಸಿ ತೀರ್ಮಾನವನ್ನ ಅಪ್ಪಣೇಕೊಡಿಸಿದ್ದಪಕ್ಷದಲ್ಲಿ ಶ್ರೀವೈಷ್ಣವರು ಪುನಃಪುನಃ ಚರ್ಚಿಸುವದಕ್ಕೂ ಶ್ರಿಂಗೇರಿಮಠದ ಶಿಷ್ಯರಾದ ನಾಲ್ಕು ವರ್ಣದವರೂ ಈ ವಿಚಾರವಾಗಿ ಗೌರ್ನಮೆಂಟಿನವರಿಗೆ ತೊಂದರೆ ಕೊಡುವದಕ್ಕೂ ಅವಕಾಶವಾಗುತ್ತಿರಲಿಲ್ಲ. ಎಂಬುವದನ್ನ ಭಯಭಕ್ತಿಗಳೊಡನೆ ಅರಿಕೆ ಮಾಡಿಕೊಳ್ಳುತ್ತೇವೆಯೇ ಹೊರ್ತು ಗೌರ್ನಮೆಂಟನವರ ನಡವಳಿಕೆಮೇಲೆ ಆಕ್ಷೇಪರೂಪವನ್ನಾಗಿ ಅರಿಕೆಮಾಡುವವಿಲ್ಲ ಎಂಬುವದನ್ನ ಘನವಾದ ಚಿತ್ತದಲ್ಲಿ ಲಾಲಿಸಬೇಕು.

೨ ಬ್ರಾಹ್ಮಣ್ಯವು ಕೆಲವು ಶತಮಾನಗಳ ಕೆಳಗೆ ಬೌದ್ಧರ ಪ್ರಾಬಲ್ಯದಲ್ಲಿ ಕ್ಷೀಣಗತಿಗೆ ಬಂದದ್ದರಿಂದ ದೇವಾಲಯ ಮೊದಲಾದವುಗಳೆಲ್ಲಾ ಬೌದ್ಧಾಕ್ರಾಂತಗಳಾಗಿರಲು ಶ್ರೀಮಚ್ಛಂಕರಭಗವತ್ಪಾದರವರು ಅವತಾರವಂಮಾಡಿ ಈ ದುರ್ಮತಗಳನ್ನೆಲ್ಲಾ ಖಂಡಿಸಿ ಬ್ರಾಹ್ಮಣ್ಯವನ್ನ ಜೀರ್ಣೋದ್ಧಾರಮಾಡಿ ಷಣ್ಮತಗಳನ್ನೂ ಸನ್ಯಾಸಾಶ್ರಮವನ್ನೂ ಶಿವವಿಷ್ಣ್ವಾದಿ ಪಂಚಾಯತನಾರಾಧನ ಕ್ರಮವನ್ನೂ ಸಹಾ ಶಾಸ್ತ್ರೀಯ್ಯವಾದದ್ದೆಂದು ಸ್ಥಾಪಿಸಿದಂಥಾವರಾಗಿ ಅದರಂತೆ ತಾವು ಆಚರಣೆಮಾಡುತ್ತಾ ತಮ್ಮ ಶಿಷ್ಯಮಂಡಲಿಯಿಂದ ನಡೆಸುತ್ತಲೂ ಬಂದರು. ಅನ್ಯಮತಾಕ್ರಾಂತವಾಗಿ ನಾಮಾವಶಿಷ್ಟವಾಗಿದ್ದ ಆಸೇತು ಹಿಮಾಚಲಪರ್ಯಂತ ಇರತಕ್ಕ ದೇವಾಲಯಗಳಿಗೆಲ್ಲಾ ಪ್ರೋಕ್ಷ ಅವುಗಳನ್ನ ವಿಧ್ಯುಕ್ತವಾಗಿ ಶುದ್ಧಿಮಾಡಿ ಶಿವವಿಷ್ಣುದೇವರುಗಳಿಗೆಲ್ಲಾ ಯಂತ್ರೋದ್ಧಾರ ಕುಂಭಾಭಿಷೇಕ ಮುಂತಾದ್ದನ್ನ ಶಾಸ್ತ್ರೋಕ್ತವಾದ ವಿಧಿಗಳಿಂದ ನಡಿಸಿ, ದೇವತಾಸಾನ್ನಿಧ್ಯ ಉಂಟಾಗುವಂತೆಮಾಡಿ ತಾವು ಸ್ವತಃ ಆ ದೇವರುಗಳನ್ನ ಪೂಜೆಮಾಡಿ ನಂತರ ಆಯಾಯ ಸ್ಥಲದಲ್ಲಿರತಕ್ಕ ಬ್ರಾಹ್ಮಣರಿಗೆ ಪೂಜೆಮಾಡುವದಕ್ಕೆ ಅಪ್ಪಣೇಕೊಡಿಸಿದರೆಂಬುವದು ಶಂಕರವಿಜಯ ಮೊದಲಾದ ಅನೇಕ ಗ್ರಂಥಗಳಿಂದ ತಿಳಿಯಬರುತ್ತೆ.

೩ ಶ್ರೀಶಂಕರ ಭಗವತ್ಪಾದರವರ ತರುವಾಯ ಆ ಪೀಠವನ್ನಲಂಕರಿಸಿದ ಗುರುಪರಂಪರೆಯವರೆಲ್ಲಾ ಮೇಲೆಹೇಳಿದ ಕ್ರಮದಲ್ಲೆ ಆಚಾರ ವಿಚಾರಗಳನ್ನ ಪರಾಮರ್ಶಿಸುವದಕ್ಕಾಗಿ ಸಂಚಾರ ಹೊರಟಕಾಲಗಳಲ್ಲಿ ಶಿಕ್ಷುವ ಶಿವವಿಷ್ಣು ದೇವಾಲಯಗಳಿಗೆ ದಯಮಾಡಿಸಿ ದೇವತಾರಾಧನೆಯನ್ನ ನಡೆಸುತ್ತಾ ಇದ್ಧಾರೆ.

೪ ಏತನ್ಮಧ್ಯೆ ಅಂದರೆ ಶ್ರೀಶಂಕರಭಗತ್ಪಾದರವರು ಅವತಾರಮಾಡಿ ಮತಾಚಾರ ನಿಬಂಧನೆಗಳನ್ನ ಸ್ಥಿರಪಡಿಸಿದನಂತರ ಸುಮಾರು ಸಾವಿರಾರು ವರುಷಗಳವರಿಗೂ ಸ್ಮಾರ್ತರೇ ವಿಷ್ಣುದೇವಾಲಯಗಳಲ್ಲಿ ವೈದಿಕಾಗಮೋಕ್ತವಾದ ಪೂಜಾವಿಧಿಗಳನ್ನ ನಡೆಸುತ್ತಾ ಬಂದರು. ನಂತರ ಶ್ರೀ ರಾಮಾನುಜಾಚಾರ್ಯರವರು ಅವತಾರಮಾಡಿ ತಮ್ಮ ಮತಕ್ಕೆ ಶೇರಿಸಿಕೊಂಡವರಪೈಕಿ ಕೆಲವು ಸ್ಮಾರ್ತರು ವಿಷ್ಣುದೇವಾಲಯಗಳಲ್ಲಿ ಪೂಜಕರಾಗಿಯೂ, ಸ್ಥಾನೀಕ ಮುಂತಾದ ನೌಕರಿಯಲ್ಲಿಯೂ ಸೇರಿಕೊಂಡಿದ್ದರು. ಈ ನೌಕರಿಯಿಂದಲೇ ಅವರು ಜೀವಿಸುತ್ತಿದ್ದದ್ದರಿಂದ ಇವರಿಗೆ ಸಂಬಂಧಿಗಳಾಗಿಯೂ ಮಿತ್ರವರ್ಗದವರಾಗಿಯೂ ಇದ್ದ ಇತರ ಸ್ಮಾರ್ತಬ್ರಾಹ್ಮಣರು ಇವರ ಜೀವನಕ್ಕೆ ಉಪಹತಿಮಾಡುವದಕ್ಕೆ ಸಮ್ಮತವಿಲ್ಲದೆ ಇದ್ದದ್ದರಿಂದಲೂ ಇಂಥಾವರ ಪೂಜೆಯಿಂದ ದೇವರಸಾನ್ನಿಧ್ಯವು ಒಂದುವ್ಯಾಳೆ ಕಡಮೆಯಾದಾಗ್ಯೂ ಶ್ರೀ ಜಗದ್ಗುರುಗಳವರು ಆಗಾಗ್ಯೆ ದಯಮಾಡಿ ದೇವರನ್ನ ಪೂಜಿಸೋಣದರಿಂದ ಕಳಾಸಾನ್ನಿಧ್ಯವೃದ್ಧಿಯಾಗುತ್ತೆಂತಲೂ ಇದರಿಂದ ತಾವು ದೇವತಾಪ್ರಸಾದವನ್ನ ಪರಿಗ್ರಹಿಸಬಹುದೆಂದು ಯೋಚಿಸಿ ತಟಸ್ಥರಾಗಿದ್ದರು. ಇದರನ್ನ ಕುರಿತು ಆಕ್ಷೇಪಿಸದೆ ಅವರುಗಳು ದೇವತಾರಾಧನೆ ಮಾಡಿಕೊಂಡು ಬರುವದಕ್ಕೆ ಅವಕಾಶಕೊಟ್ಟದ್ದರಿಂದಲೇ ಶ್ರೀ ಜಗದ್ಗುರುಗಳವರಿಗೆ ಸಮಸ್ತ ಪ್ರಾಣಿಗಳಲ್ಲಿಯೂ ಇರತಕ್ಕ ದಯಾಳುತ್ವವೂ ಬ್ರಾಹ್ಮಣವರ್ಣಕ್ಕೆ ಸೇರಿದ ಮತಾಂತರಸ್ಥರಲ್ಲಿಯೂಕೂಡ ಇರತಕ್ಕ ಅನುರಾಗವು ಜಗದ್ವಿಖ್ಯಾತವಾಗಿದ್ದಾಗ್ಯೂ ಇಂಥಾ ಮಹಾನುಭಾವರು ರಾಜರು ಮತ್ತು ರಾಷ್ಟ್ರದ ಕ್ಷೇಮಾರ್ಥವಾಗಿ ಶಿವವಿಷ್ಣು ದೇವಾಯಗಳಲ್ಲಿರತಕ್ಕ ದೇವರುಗಳಿಗೆ ಮಾಡತಕ್ಕ ಪೂಜೆಯು ಬಹುಕಾಲದಾರಭ್ಯ ಆಚಾರವಾಗಿ ನಡೆದುಬರುವಂಥಾದ್ದಾದ್ದಾಗ್ಯೂ ಇದರನ್ನ ಈ ಪೂಜಕರಾದ ಶ್ರೀವೈಷ್ಣವರು ದ್ವೇಷಾಸೂಯದಿಂದ ಈಚೀಚಿಗೆ ಅಡ್ಡಿಮಾಡುವದಕ್ಕೆ ಉಪಕ್ರಮಿಸಿದರು. ಅಂಥಾಸಂದರ್ಭಗಳಲ್ಲೆಲ್ಲಾ ಆಯಾಯ ಕಾಲದಲ್ಲಿದ್ದ ರಾಜರು ಈ ಪೂಜಕರಿಗೆ ನಿರ್ಬಂಧಪಡಿಸಿ, ಶ್ರೀಜಗದ್ಗುರುಗಳವರು ಪೂಜೆಮಾಡುವದಕ್ಕೆ ಅವಕಾಶಗೊಳಿಸಿದ್ದಲ್ಲದೆ ಕೆಲವು ಸಂದರ್ಭಗಳಲ್ಲಿ ನೌಕರಿಯಿಂದ ಇವರನ್ನ ಬರತರ್ಫ್‌ಮಾಡೋಣದರಮೂಲಕ ಶಿಕ್ಷೆಯನ್ನ ಕೊಟ್ಟಿರುತ್ತಾರೆ. ಈಗ್ಯೆ ೩೮ ವರ್ಷಗಳಮುಂಚೆ ಅಂದರೆ ವಿಳಂಬಿಸಂವತ್ಸರದಲ್ಲಿ ಶ್ರೀಜಗದ್ಗುರುನರಸಿಂಹಭಾರತೀಸ್ವಾಮಿಗಳವರು ತಿರಮಕೂಡ್ಲು ನರಸೀಪುರದ ಶ್ರೀ ಗುಂಜಾನರಸಿಂಹಸ್ವಾಮಿಗೆ ಪೂಜೆಮಾಡುವಕಾಲದಲ್ಲಿ ಅಡ್ಡಿಪಡಿಸುವವಕ್ಕೆಬಂದ ದೇವಸ್ಥಾನದ ನೌಕರರಿಗೆ ನಿರ್ಬಂಧಪಡಿಸಿ ಶ್ರೀಗಳವರು ಕ್ರಮವಾಗಿ ಪೂಜೆಮಾಡುವದಕ್ಕೆ ಅವಕಾಶ

ವಂಕೊಡಿಸಿದ್ದಲ್ಲದೆ ಅಡ್ಡಿಮಾಡಿದ ಶ್ರೀವೈಷ್ಣವರನ್ನು ನೌಕರಿಯಿಂದ ವಜಾಮಾಡಿ ಜನರು ಮಾಡುತ್ತಿದ್ದ ನೌಕರಿಯನ್ನು ಸ್ಮಾರ್ತರಿಂದ ನಡಿಸುತ್ತಾಬಂದರು. ಆ ಕಾಲದಲ್ಲಿ ಸಂಭವಿಸಿದ ಆಗಮೋಕ್ತವಾದ ರಥೋತ್ಸವಾದಿಗಳನ್ನೂ ಸಹ ಸ್ಮಾರ್ತರೇನಡೆಯಿಸಿರುತ್ತಾರೆ. ಎಂಬುವದು ತಿರುಮಕೂಡಲುನರಶೀಪುರ ತಾಲ್ಲೂಕ್ ಮತ್ತು ಕಮಿಷನರ ಹುಜೂರು ರಿಕಾರ್ಡಿನಲ್ಲಿಯೂ ದಾಖಲೆ ಇರುತ್ತೆಂದು ತಿಳಿಯಬರುವದರಿಂದ ಅದರನ್ನೂ ಪರಾಮರಿಸಿದಲ್ಲಿ ವ್ಯಕ್ತವಪಡುತ್ತೆ.

೫ ಶ್ರೀಜಗದ್ಗುರುಗಳವರು ಮೈಸೂರು ಶೀಮೆಯಲ್ಲಿರತಕ್ಕ ಪ್ರಸಿದ್ಧವಾದ ದೇವಾಲಯಗಳಲ್ಲಿರುವ ದೇವರುಗಳನ್ನ ಆರಾಧನೆ ಮಾಡುವದು ಮಾತ್ರವಲ್ಲದೆ ಮದ್ರಾಸು, ಬೊಂಬಾಯಿ, ಮುಂತಾದ ಪ್ರಸಿಡೆನ್ಸಿಯಲ್ಲಿರತಕ್ಕ ಆಗಮೋಕ್ತಾರಾಧನೆಗೆ ಒಳಪಟ್ಟಿರುವ ಪ್ರಸಿದ್ಧ ಶಿವ ವಿಷ್ಣುದೇವಾಲಯಗಳಲ್ಲಿಯೂ ದೇವತಾರಾಧನೆ ಮಾಡಿರುತ್ತಾರೆಂಬುವದು ಲೋಕಪ್ರಸಿದ್ಧವಾಗಿರುತ್ತೆ. ಅಂದರೆ ದಕ್ಷಿಣದೇಶದಲ್ಲಿ ಪ್ರಸಿದ್ಧವಾದ ದೇವಾಲಯಗಳು ತಿರುಪತಿ, ಶ್ರೀರಂಗ, ಕಾಂಚಿ, ಅನಂತಶಯನ, ದರ್ಭಶಯನ ಮುಂತಾದ ಸ್ಥಳಗಳಲ್ಲಿ ಅನೇಕಾವರ್ತಿ ಪೂಜೆ ಮಾಡಿರತಕ್ಕ ದಾಖಲೆಗಳಪೈಕಿ ಪ್ರಕೃತ ದೊರತಿರುವಷ್ಟರನ್ನೂ ಪರಾಂಬರಿಕೆ ಬಗ್ಯೆ ಹಾಜರ್ಮಾಡಿರುತ್ತೇವೆ. ಇದರಂತೆಯೆ ಈ ದೇಶದ ದೇವಾಲಯಗಳಲ್ಲಿ ಶ್ರೀಗಳವರು ದೇವತಾರಾಧನೆ ಮಾಡುವದಕ್ಕಾಗಿ ಅನೇಕ ರಾಜರು ಮತ್ತು ಅಧಿಕಾರಿಗಳು ಕೊಟ್ಟರತಕ್ಕ ಲಿಖಾವಟ್ಟುಗಳು ಸರಕಾರದಲ್ಲೂ, ಮತ್ತು ಶ್ರೀಮಠದಲ್ಲೂ, ಅನೇಕವಾಗಿರುತ್ತೆ. ಇವುಗಳಲ್ಲಿ ಪ್ರಕೃತ ನಮಗೆ ದೊರತಿರತಕ್ಕ ದಾಖಲೆಗಳು ಅಂದರೆ ಟೀಪ್ಪೂಸುಲ್ತಾನರು ಕೊಟ್ಟರತಕ್ಕ ಒಂದೆರಡು ಸನ್ನದಿನ ನಕಲು, ಈ ಸಂಸ್ಥಾನದ ರಾಜ್ಯಭಾರ ಬ್ರಿಟೀಷ್ ಆಫೀಸರ ಅಧ್ವಕ್ಷೆಗೆ ಒಳಪಟ್ಟದ್ದಕಾಲ ಅಂದರೆ ೧೮೩೨ನೇ ಇಸವಿ ನಂದನಸಂವತ್ಸರದಲ್ಲಿ ಕಮಿಷನರ್ ಕ್ಯಾಷ್ ಮೆಜರ್ ಸಾಹೇಬರು ಕೊಟ್ಟಿರುವ ಒಟ್ಟು ಪರವಾನೆ ನಕಲನ್ನೂ, ಚೀಫ್ ಕಮಿಷನರ್ ಬೌರಿಂಗ್‌ಸಾಹೇಬರವರು ಇಂಡಿಯಾ ಗೌರ್ನಮೆಂಟಗೆ ಬರದ ಲೆಟರು, ಅದರ ಜವಾಬಿನ ನಕಲನ್ನೂ, ಹೈದರಾಬಾದ್ ಸರಕಾರದವರು ಕೊಟ್ಟಿರುವ ಸನ್ನದಿನ ತರ್ಜುಮಾನಕಲನ್ನೂ ಸಹ ಇದರ ಸಂಗಡ ಹಾಜರ್ಮಾಡಿರುತ್ತೇವೆ. ಈ ಪೈಕಿ ನಂದನ ಸಂವತ್ಸರದ ಒಟ್ಟು ಪರವಾನೆಯಲ್ಲಿ ನಮೂದಿಸಿರುವ ಮದ್ರಾಸ್ ಬಂಗಾಳಾ ಗೌನರವರು ಕೊಟ್ಟರತಕ್ಕ ಲೆಟರುಗಳು ಮತ್ತು ದಿವಾನ್ ಪೂರ್ಣಯ್ಯನವರು ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರವರು ಕೊಟ್ಟರತಕ್ಕ ಸನ್ನದು ವಗೈರೆ ಕಾಗದಪತ್ರಗಳ ಸಂಖ್ಯೆ (೪೫) ಆಗುತ್ತೆ. ಇವುಗಳೆಲ್ಲಾ ಕಮಿಷನರ ಬಳಿಗೆ ಹಾಜರಾಗಿರುತ್ತೆಂಬುವದು ಸದರಿ ಒಟ್ಟು ಪರವಾನೆಯಿಂದಲೇ ಗೊತ್ತಾಗುತ್ತೆ. ಇವುಗಳು ವಾಪಸ್ ಆಗದೆ ಚೀಫ್‌ಕಮಿಷನರ ಆಫೀಸ್ ರಿಕಾರ್ಡಿನಲ್ಲಿರುತ್ತೆಂಬವಾಗಿ ಕೇಳುತ್ತೇವೆ. ಅವುಗಳನ್ನ ಪರಾಂಬರಿಸಬೇಕೆಂದು ಬೇಡುತ್ತೇವೆ.

೬ ಮೇಲೆ ನಮೂದಿಸಿಗತಕ್ಕ ರಿಕಾರ್ಡುಗಳಿಂದ ಶ್ರೀ ಶೃಂಗೇರಿ ಜಗದ್ಗುರುಗಳವರಿಗೆ ಪ್ರಕೃತದಲ್ಲಿ ಪಾಂಚರಾತ್ರವೈಖಾನಸಾದಿ ಆಗಮೋಕ್ತವಾಗಿ ಆರಾಧಿಸಲ್ಪಡುತ್ತಿರುವ ಶಿವವಿಷ್ಣು ದೇವಾಲಯಗಳಲ್ಲಿರುವ ದೇವರುಗಳಿಗೆ ಸ್ವತಃ ಪೂಜೆಮಾಡತಕ್ಕ ವಿಶೇಷಬಾಧ್ಯತೆಯು ಮತ್ತು ಹಕ್ಕು ಉಂಟೆಂಬುವದು ರುಜುವಾತು ಆಗುವದು ಸರಿಯಷ್ಟೆ; ಪ್ರಕೃತ ಚರ್ಚೆಗೆ ಸಮ್ಮಂಧಪಟ್ಟ ಶ್ರೀರಂಗಪಟ್ಟಣದ ರಂಗನಾಥಸ್ವಾಮಿಯವರಿಗೆ ಶ್ರೀರುಗಳವರು ಸ್ವತಃ ಪೂಜೆಮಾಡುವ ಹಕ್ಕು ಉಂಟೆಂಬುವದಕ್ಕೆ ಮೇಲೆ ಹೇಳಲ್ಪಟ್ಟ ಟೀಪ್ಪೂಸುಲ್ತಾನರವರ ಸನ್ನದೇ ಸಾಕ್ಷಿಯಾಗಿರುವದಲ್ಲದೆ, ಇದಕ್ಕೆ ಅನುಸಾರವಾಗಿ ಪೂಜೆ ಮಾಡುತ್ತಿದ್ದರೆಂಬ ಸಂಗತಿಯನ್ನು ಹೇಳತಕ್ಕಂಥಾ ದೊಡ್ಡವಂಶೀಯರಾದ ಮಹಮ್ಮದೀಯರ್ ದೊಡ್ಡಮನುಷ್ಯರು ಅನೇಕರಿರುತ್ತಾರೆ. ಅವರುನ್ನೂ ಸಾಕ್ಷ್ಯ ಕೊಡುವದರಲ್ಲಿ ಅಭ್ಯಂತರವಿರುವದಿಲ್ಲ. ಇದು ಅವಶ್ಯಕವಾದ್ದೆಂದು ತೋರುವಪಕ್ಷದಲ್ಲಿ ಗೌರ್ನಮೆಂಟಿನವರು ಅವರಿಂದಲೂ ತಿಳಿದುಕೊಳ್ಳಬಹುದು.

೭ ಶ್ರೀರಂಗಪಟ್ಟಣದ ಶ್ರೀ ರಂಗನಾಥದೇವರನ್ನ ಇಂಥಾವರು ಇಂಥಾಕಾಲದಲ್ಲಿ ಈ ರೀತಿಯಾಗಿ ಪ್ರತಿಷ್ಠೆ ಮಾಡಿದ ಸಂಗತಿ ನಿಸ್ಸಂದೇಹವಾಗಿ ಗೊತ್ತಾಗದೇ ಇದ್ದಾಗ್ಯೂ, ಇದು ಬಹಳ ಪುರಾತನವಾದದ್ದು. ಕೆಲವು ಶತಮಾನಗಳಕೆಳಗೆ ಗೌತಮಮಹರ್ಷಿಗಳು ಪೂಜಿಸುತ್ತಿದ್ದರೆಂಬುವದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರಷ್ಟೆ; ಮಹರ್ಷಿಗಳು ತಾಂತ್ರಿಕಾಗಮದೀಕ್ಷಾಬದ್ಧರಾದವರಲ್ಲ; ಪಾಷಂಡಿಗಳೂ ಅಲ್ಲ. ಇವರುಗಳು ವೈದಿಕಾಗಮದಲ್ಲಿ ಅರ್ಚನೆ ಮಾಡುತ್ತಿದ್ದರೆಂಬುವದು ಶಾಸ್ತ್ರಸಿದ್ಧವಾಗಿರುತ್ತೆ. ಅದನ್ನ ಅನುಸರಿಸಿಯೇ ಶ್ರೀಮಚ್ಛಂಕರಭಗವತ್ಪಾದರವರು ಈದೇವರನ್ನ ಅರ್ಚಿಸಿದರು. ಅದರಂತೆ ಅವರ ಪೀಠವನ್ನಲಂಕರಿಸಿದ ಗುರುಪರಂಪರೆಯವರೆಲ್ಲಾ ಪೂಜಿಸುತ್ತಾಬಂದರು. ಈ ಗೌತಮ ಮಹರ್ಷಿಗಳಿಗೆ ಗೋಹತ್ಯಾಸವಾದ ಸಂಘಟನೆ ಮಾಡಬೇಕೆಂದು ಕೆಲವು ದುಷ್ಟರಾದ ಬ್ರಾಹ್ಮಣರು ನಡೆಸಿದ ತಂತ್ರ ಅವರಿಗೆ ತಿಳಿದು ಇಂಥಾ ದುಷ್ಟಕೃತ್ಯೆ

ವನ್ನ ಮಾಡಿದ ಬ್ರಾಹ್ಮಣರು ಇವರ ವಂಶೀಯರು ತಪ್ತಮುದ್ರಾಂಕಿತರಾಗಿ ಪಾಂಚರಾತ್ರ ಶೈವಾದ್ಯಾಗಮದೀಕ್ಷಾಬದ್ಧರಾಗಿ ಕೆಟ್ಟು ಹೋಗಲಿ, ಎಂದು ಶಾಪಕೊಟ್ಟರೆಂತ ಗ್ರಂಥಗಳು ಇರೋಣದರಿಂದ ಗೌತಮಋಷಿಗಳು ಪಾಂಚರಾತ್ರಾಗಮ ದೀಕ್ಷಾಬದ್ಧರಲ್ಲವೆಂಬುವದು ಸ್ಪಷ್ಟವಾಗುತ್ತೆ.

೮ ಶ್ರೀರಂಗಪಟ್ಣದ ಶ್ರೀರಂಗನಾಥದೇವರಿಗೆ ಹಿಂದೂಮತಕ್ಕೆ ಸೇರಿದ ನಾಲ್ಕು ವರ್ಣದವರೂ ಭಕ್ತರು. ಈಗ ಚರ್ಚೆಮಾಡುತ್ತಿರುವ ಶ್ರೀವೈಷ್ಣವರು ಈ ಭಕ್ತಸಮುದಾಯವೆಂಬ ಸಮುದ್ರದಲ್ಲಿ ಕೆಲವು ತುಂತುರಿಗಳಾಗಿರುತ್ತಾರೆ. ಆದಾಗ್ಯೂ ತಮ್ಮ ಮತಸ್ಥರು ಪ್ರಸ್ತುತದಲ್ಲಿ ಪೂಜಕರಾಗಿರುತ್ತಾರಷ್ಟೆ ಆದ್ದರಿಂದ ದೇವರು ತಮ್ಮ ಸ್ವಂತ ಪದಾರ್ಥವೆಂದು ಭಾವಿಸುವ ದುರಭಿಮಾನ ವಿನಹ ಇತರ ಭಕ್ತರಿಗೆ ಇರತಕ್ಕದ್ದಕ್ಕಿಂತಲೂ ಬ್ಯಾರೆ ಯಾವ ವಿಧವಾದ ವಿಶೇಷ ಬಾಧ್ಯತೆಯೂ ದೇವರಲ್ಲಿ ಇವರಿಗೆ ಇರುವಹಾಗೆ ತೋರುವದಿಲ್ಲ. ಈ ದೇವಾಲಯವು ಸಂಸ್ಥಾನಕ್ಕೆ ಸೇರಿದ್ದು, ಸರ್ಕಾರದ ಜನರಲ್ ರೆವಿನ್ಯೂಯಿಂದ ಈ ದೇವರ ಆರಾಧನೇಖರ್ಚು ಸಲ್ಲುತ್ತಾಯಿದೆ. ದೇವರಿಗೆ ಧರಿಸತಕ್ಕ ವಸ್ತ್ರಾಭರಣಗಳಲ್ಲಿ ಪ್ರಾಯಶಃ ಮೈಸೂರು ಸಂಸ್ಥಾನದ ಮಹಾರಾಜರವರ ಸಂತತಿಯಿಂದಲೇ ಕೊಡಲ್ಪಟ್ಟದ್ದಾಗಿರುತ್ತೆ. ಭಕ್ತರಿಂದ ಕೊಡಲ್ಪಟ್ಟದ್ದು ಅತ್ಯಲ್ಪವಾಗಿದ್ದಾಗ್ಯೂ ಅದೂ ಸರ್ಕಾರಕ್ಕೆ ಸೇರಿದ್ದಾಗಿರುತ್ತೆ. ಹೀಗೆ ಸಂಸ್ಥಾನಕ್ಕೆ ಒಳಪಟ್ಟ ಬಾಧ್ಯತೆಯನ್ನ ಶ್ರೀವೈಷ್ಣವರಲ್ಲಿ ಕೆಲವರು ಮಾತ್ರ ತಮಗೇನೇ ಇರುವಂತೆ ಎಣಿಸಿ ಗದ್ದಲ ಮಾಡುವದು ಎಷ್ಟರಮಟ್ಟಿಗೆ ಊರ್ಜಿತವಾಗತಕ್ಕದ್ದೋ ಅದರನ್ನ ಗೌರ್ನಮೆಂಟಿನವರೇ ಆಲೋಚಿಸಬೇಕು. ಈ ಕಾರಣದಿಂದ ಇವರಿಗೆ ವಿಶೇಷ ಬಾಧ್ಯತೆ ಏನೂ ಇಲ್ಲದೇ ಇದ್ದಾಗ್ಯೂ ಚಿಪ್ಪೊಸ್ತಾರ್ಥವಾಗಿ ಇದೆಯೆಂದು ಇಟ್ಟುಕೊಳ್ಳುವ ಸಂದರ್ಭದಲ್ಲಿಯೂ ಇವರ ಮತಸ್ಥಾಪಕರಾದ ಶ್ರೀರಾಮಾನುಜಾಚಾರ್ಯರ ಅವತಾರಕ್ಕಿಂತ ಸಾವಿರಾರು ವರುಷಗಳ ಹಿಂದೆ ಶ್ರೀಮಚ್ಛಂಕರಭಗವತ್ಪಾದರವರು ಅವತಾರಮಾಡಿದರೆಂಬ ಅಂಶವನ್ನ ಶ್ರೀವೈಷ್ಣವರು ಒಪ್ಪಿಕೊಳ್ಳದೇ ಇದ್ದರೆ ನಿಧಿ ಇಲ್ಲವಷ್ಟೆ ಇದರಿಂದ ಶ್ರೀಜಗದ್ಗುರುಗಳವರಿಗೆ ಇರತಕ್ಕ ಬಾಧ್ಯತೆಯು ಇವರಿಗಿಂತ ಸಾವಿರಾರು ವರುಷಗಳಮಟ್ಟಿಗೂ ಪ್ರಾಚೀನವಾಗಿರುತ್ತೆಂಬುವದು ಸಾಮಾನ್ಯವಾಗಿ ಸಕಲರಿಗೂ ತಿಳಿಯಬರುವಂಥಾ ಅಂಶವು ಇವರಿಗೆ ತಿಳಿಯದೇ ಹೋದದ್ದು ಮಾತ್ರವಲ್ಲದೆ, ಶ್ರೀ ಜಗದ್ಗುರುಗಳವರಿಗೆ ಹಕ್ಕೇ ಇಲ್ಲವೆಂದು ಹೇಳುವದು ಪರ್ಯಾಲೋಚನೆ ಯಿಲ್ಲದನಾತಾಗಿ ತೋರುತ್ತೆ ಅಥವಾ ಪ್ರಕೃತ ಸಂದರ್ಭದಲ್ಲಿ ಇವರುಮಾಡತಕ್ಕ ವ್ಯಾಜ್ಯವು ಊರ್ಜಿತವಾಗದೇ ಇದ್ದಾಗ್ಯೂ ಮುಂದೆ ಮಾಡಬೇಕಾಗುವ ಇಂಥಾ ವ್ಯಾಜ್ಯಗಳಿಗೆ ತಾವು ಫಿರ್ಯಾದಿಗಳಾಗಿ ನಿಲ್ಲುವದಕ್ಕೆ ಇದು ಬಾಧ್ಯತೆಯನ್ನ ಕೊಡತಕ್ಕ ಪ್ರಿಸೀಡೆಂಟ್‌ಯಾನೆ ಪೀಠಿಕಾ ರಚನೆಯಾಗಿರುತ್ತೆಂದು ಭಾವಿಸಿರಬಹುದಾಗಿತೋರುತ್ತೆ.

೯ ಶ್ರೀರಂಗನಾಥದೇವರಿಗೆ ಸಂಪ್ರೋಕ್ಷಣೆ ಆಗಬೇಕೆಂದು ವ್ಯಾಜ್ಯಮಾಡುವರ ಸಂಖ್ಯೆಯು ಈ ದೇವರಲ್ಲಿ ಅಭಿಮಾನವಿರತಕ್ಕ ಮತ್ತು ಅವರಿಗೆ ಸಮಾನವಾಗಿ ಹಕ್ಕು, ಬಾಧ್ಯತೆವುಳ್ಳ ಇತರ ಭಕ್ತರ ಸಮುದಾಯ ಸಂಖ್ಯೆಗೂ ಮೊಕಾಬಿಲೆ ನೋಡಿದರೆ ಒಟ್ಟು ಸಮುದಾಯದಲ್ಲಿ ಲಕ್ಷ ಪ್ರಜೆಗೆ ವ್ಯಾಜ್ಯಮಾಡುವರು ಒಬ್ಬರೆಂದೂ ಕೂಡ ಗಣಿಸುವದಕ್ಕೂ ಸಾಲದ್ದಾಗಿರುತ್ತೆ. ಆದ್ದರಿಂದ ಶ್ರೀಜಗದ್ಗುರುಗಳವರು ಆಗಾಗ್ಯೆ ಶ್ರೀರಂಗನಾಥದೇವರ ಆರಾಧನೆಮಾಡತಕ್ಕದ್ದು ಸರ್ವಜನ ಸಮ್ಮತವಾದದೆಂದು ಸರ್ಕಾರದವರು ಧಾರಾಳವಾಗಿ ನಂಬತಕ್ಕದ್ದಾಗಿರುತ್ತೆ.

೧೦ ಮೇಲೆ ಹೇಳಲ್ಪಟ್ಟಿರುವ ಸಂಗತಿಗಳೆಲ್ಲಾ ಸರ್ಕಾರೀ ವ್ಯಾವಹಾರಿಕರೀತ್ಯಾ ಶ್ರೀಜಗದ್ಗುರುಗಳವರಿಗೆ ಶ್ರೀ ರಂಗನಾಥದೇವರನ್ನ ಆರಾಧಿಸತಕ್ಕ ವಿಷಯದಲ್ಲಿರತಕ್ಕ ವಿಶೇಷ ಬಾಧ್ಯತೆಯನ್ನ ತೋರಿಸತಕ್ಕವುಗಳಾಗಿ ಇರುತ್ತವೆ. ಈ ಸಂಬಂಧವಾದ ಶಾಸ್ತ್ರಾಧಾರ ಅಪ್ರತಿಹತವಾದ ಸದಾಚಾರ ಮುಂತಾದ್ದರನ್ನ ಇದರಡಿಯಲ್ಲಿ ಶೃತಪಡಿಸಿರುತ್ತೇವೆ ಏನಂದರೆ.--

೧೧ ಶ್ರೀಜಗದ್ಗುರುಗಳವರು ಶ್ರೀ ರಂಗನಾಥದೇವರಿಗೆ ಅರ್ಚನೆ ಮಾಡತಕ್ಕದ್ದು ಪಾಂಚರಾತ್ರಾಗಮಕ್ಕೆ ವಿರುದ್ಧವಾಗಿರುತ್ತೆಂದು ಫಿರ್ಯಾದಿಗಳು ಹೇಳುವ ಅಂಶವನ್ನ ಖಂಡನೆಮಾಡತಕ್ಕ ಶಾಸ್ತ್ರ ಮತ್ತು ಆಚಾರವು ಹೇರಳವಾಗಿರುತ್ತೆ. ಆ ವಿಚಾರವನ್ನ ಪೂರ್ವಪಕ್ಷ ಸಮಾಧಾನ ಸಿದ್ಧಾಂತರೂಪವಾಗಿ ಶೃತಪಡಿಸಲು ಬಹಳ ವಿಳಂಬವಾಗುತ್ತಾದ್ದರಿಂದ ಸೂಕ್ಷ್ಮವಾಗಿ ಸಾಮಾನ್ಯಾಂಶಗಳನ್ನ ತಿಳಿಸದೆ ಇದ್ದರೆ ನಿಧಿಯಿಲ್ಲವಾಗಿ ತಿಳಿಸುವದೇನಂದರೆ:-- ಶೃತಿಸ್ಮೃತಿಗಳಲ್ಲಿ ಪರಸ್ಪರ ಭಿನ್ನಾಭಿಪ್ರಾಯಬಂದಾಗ್ಯೆ ಶೃತಿಯೇ ಪ್ರಬಲವಾದದ್ದೆಂತಲೂ ತದ್ವತ್ ಸ್ಮೃತಿ ಪುರಾಣಗಳಲ್ಲಿ ಸ್ಮೃತಿಬಲವಾದ್ದೆಂತಲೂ ಪುರಾಣ ಇತಿಹಾಸಾದಿಗಳಲ್ಲಿ ಪುರಾಣಬಲವಾದ್ದೆಂತಲೂ ಹೀಗೆ ಎಲ್ಲಾದ್ದರಲ್ಲಿಯೂ ಭಿನ್ನಾಭಿಪ್ರಾಯಗಳು ಬಂದಕಾಲದಲ್ಲಿ ಮಹಾಜನಗಳು ಅನುಸರಿಸಿ ನಡೆಸಿಕೊಂಡು

ಇರುವ ಆಚಾರವೇ ಬಲಿಷ್ಠವಾದದ್ದೆಂತಲೂ ಈ ಆಚಾರದಲ್ಲಿ ನವೀನಗಳು ಪ್ರಾಚೀನಗಳು ಇದ್ದ ಪಕ್ಷದಲ್ಲಿ ಇವುಗಳಲ್ಲಿ ಪುರಾತನಕ್ಕೆ ಪ್ರಾಶಸ್ತ್ಯವಿರುತ್ತೆಂಬುವದು ಸಾಮಾನ್ಯವಾಗಿ ಸರ್ವರಿಗೂ ತಿಳಿದಿರುತ್ತೆ. ಈಗ ಶ್ರೀವೈಷ್ಣವರು ಶ್ರೀರಂಗನಾಥದೇವರಿಗೆ ತಾವು ನಡಿಸತಕ್ಕ ಆರಾಧನೆಯು ಪಾಂಚರಾತ್ರಾಗಮಕ್ಕೆ ಒಳಪಟ್ಟಿರುತ್ತೆಂದುನ್ನೂ ಇದು ಶ್ರೀವೈಷ್ಣವರು ದೇವಾಲಯಕ್ಕೆ ಸೇರಿದಾರಭ್ಯ ಆಚರಣೆಗೆ ತಂದಿರುತ್ತಾರೆಂತಲೂ ಗೊತ್ತಾಗಿರೋಣದರಿಂದ ಇವರ ಮತವೇ ನೂತನವಾಗಿರುವಲ್ಲಿ ಇವರ ಆಚಾರ ಪುರಾತನವಾಗಲಾರದಷ್ಟೆ; ಆದ್ದರಿಂದ ಇವರ ಆಚಾರವು ನವೀನಾಚಾರವೇ ಸರಿಯೆಂದು ಧಾರಾಳವಾಗಿ ಹೇಳಬಹುದು. ಶ್ರೀಜಗದ್ಗುರುಗಳವರು ಮಾಡತಕ್ಕ ಆರಾಧನೆಯು ಶ್ರೀರಾಮಾನುಜ ಮತಕ್ಕಿಂತ ಸಾವಿರಾರು ವರ್ಷಗಳ ಹಿಂದಿನಿಂದಾ ಆಚರಣೆಯಲ್ಲಿ ಇರುತ್ತಾಗಿ ಇದು ಪ್ರಾಚೀನವಾದ ಆಚಾರವೆಂಬುವದು ಸ್ಪಷ್ಟವಾಗಿರುತ್ತೆ. ಮತ್ತು ಶ್ರೀಜಗದ್ಗುರುಗಳವರು ಪರಮಹಂಸಾಶ್ರಮದಲ್ಲಿ ಮಹರ್ಷಿಗಳಂತೆ ಇರತಕ್ಕವರುಗಳಾದ್ದರಿಂದ ಇತರ ಗೃಹಸ್ಥಾಶ್ರಮಗಳಂತೆ ದೀಕ್ಷಾದಿ ವಿಧಿಗಳಿಗೆ ಬದ್ಧರಾಗುವದಿಲ್ಲ. ಇವರು ಎಲ್ಲಾ ದೀಕ್ಷಿತರಿಗಿಂತಲೂ ಶ್ರೇಷ್ಠವಾದವರು. ಮತ್ತು ಪಾಂಚರಾತ್ರಾಗಮದೀಕ್ಷೆಗೆ ಬದ್ಧರಲ್ಲದ ಗೌತಮಮಹರ್ಷಿಗಳು ಈ ದೇವರನ್ನ ಆರಾಧಿಸುತ್ತಾ ಇದ್ದರೆಂಬುವದು ಗ್ರಂಥಗಳಲ್ಲಿ ಹೇಳಲ್ಪಟ್ಟಿರುವದಲ್ಲದೆ ಇದರನ್ನ ಶ್ರೀವೈಷ್ಣವರೇ ಒಪ್ಪಿಕೊಳ್ಳುತ್ತಾರೆ. ಆಗ್ಯೆ ಇವರಪೆಂಪು ಹೇಳಿಕೊಳ್ಳುವ ಶ್ರೀರಂಗನಾಥದೇವರು ಹ್ಯಾಗೆ ಅಶುಚಿ ಆಗಲಿಲ್ಲವ್ವೋ ಅದರಂತೆಯೆ ಗೌತಮಮಹರ್ಷಿಗಳು ಮಾಡುತ್ತಿದ್ದ ವಿಧಿಯನ್ನ ಅನುಸರಿಸಿ ಶ್ರೀಜಗದ್ಗುರುಗಳವರ ಪರಂಪರೆಯವರೆಲ್ಲಾ ಆರಾಧಿಸತಕ್ಕದ್ದು ಅಶುಚಿತ್ವವನ್ನುಂಟುಮಾಡತಕ್ಕದ್ದಲ್ಲವೆಂಬುವದು ಮತ್ತು ಆದುನಿಕರಿಂದ ಪ್ರತಿಷ್ಠಿತವಾದ ಬಿಂಬಕ್ಕೆ ಮಾಡತಕ್ಕ ಆರಾಧನೆಯಂತೆ ಶ್ರೀವೈಷ್ಣವರು ಈ ಅನಾದಿ ದೇವರಿಗೆ ಮಾಡುವ ಆರಾಧನೆಯಿಂದ ಉಂಟಾದ ದೋಷಗಳನ್ನ ಪರಿಹಾರ ಮಾಡತಕ್ಕ ಶ್ರೀಜಗದ್ಗುರುಗಳವರು ಮಾಡತಕ್ಕ ಆರಾಧನಾಕ್ರಮವು ಸದಾಚಾರವಾದ್ದೆಂತಲೂ ವಿವೇಚನಾಪರರಾದವರು ತೀರ್ಮಾನಿಸದೆ ಇರಲಾರರು. ಈ ಮೇರೆ ಲೌಕಿಕಪಾರಮಾರ್ಥಿಕ ಎರಡುವಿಧವಾದ ನ್ಯಾಯಗಳು ಅಪೇಕ್ಷಿಸುವ ಸಮಾಧಾನರೂಪವಾದ ಸಂಗತಿಗಳನ್ನೆಲ್ಲಾ ಶೃತಪಡಿಸಿರುತ್ತೇವೆ.

೧೨. ಮೇಲೆ ವಿವರಿಸಲ್ಪಟ್ಟ ಗ್ರಂಥಗಳು, ರಾಜರು ಮುಂತಾದವರು ಕೊಟ್ಟಿರತಕ್ಕ ಸನ್ನದಿನ ದಾಖಲೆಗಳು ದೃಷ್ಟಾಂತಗಳು, ಚಿರಕಾಲಾರಭ್ಯ ನಡೆದುಬರುವ ಮಾಮೂಲು ಶಾಸ್ತ್ರಸಮ್ಮತವಾದ ಆಚಾರವು, ಸರ್ವಜನ ಸಮ್ಮತಿಯೂ, ಇವುಗಳೆಲ್ಲಾ ಶ್ರೀರಂಗನಾಥದೇವರನ್ನ ಆರಾಧಿಸತಕ್ಕದ್ದಕ್ಕೆ ಶ್ರೀಜಗದ್ಗುರುಗಳವರಿಗೆ ಇರತಕ್ಕ ವಿಶೇಷ ಹಕ್ಕುಬಾಧ್ಯತೆಗಳನ್ನ ಸ್ಥಿರಪಡಿಸುತ್ತವೆ. ಇವುಗಳನ್ನೆಲ್ಲಾ ಘನವನ್ನ ಹೊಂದಿದ ಕೌನ್ಸಿಲ್ ಸಭೆಯವರು ಪರ್ಯಾಲೋಚಿಸತಕ್ಕ ಸಮಯದಲ್ಲಿ ಶ್ರೀಜಗದ್ಗುರುಗಳವರು ಈ ಮೇರೆ ದೇವತಾರಾಧನೆ ಮಾಡತಕ್ಕದ್ದು ಆ ಮಹಾನುಭಾವರ ಸ್ವಪ್ರಯೋಜನಕ್ಕಾಗಿ ಅಲ್ಲ. ರಾಜರು ಮತ್ತು ರಾಷ್ಟ್ರದ ಕ್ಷೇಮಾರ್ಥವಾಗಿ ಇವರುಗಳ ಅಪೇಕ್ಷೆಯನ್ನು ನೆರವೇರಿಸುವದಕ್ಕಾಗಿ ಮಾಡುತ್ತಾರೆ ಎಂಬುವದರನ್ನು ಮನಸ್ಸಿನಲ್ಲಿಟ್ಟುಕೊಂಡು ಭಾರಿಭಾರಿಗೂ ದುಷ್ಟರು ತೊಂದರೆ ಕೊಡುವದಕ್ಕೆ ಆಸ್ಪದವಿಲ್ಲದಂತೆ ನ್ಯಾಯವಾಗಿಯೂ, ಖಂಡಿತವಾಗಿಯೂ, ಇರುವ ತೀರ್ಮಾನವನ್ನ ಅಪ್ಪಣೆ ಕೊಡಿಸಬೇಕೆಂದು ವಿನಯಪೂರ್ವಕವಾಗಿ ಬರಮಾಡಿಕೊಂಡ ಅರ್ಜಿ.

ಜಯಲಕ್ಷ್ಮೀವಿಲಾಸಮುದ್ರಾಕ್ಷರಶಾಲಾ ದೊಡ್ಡಪೇಟೆ ಬೆಂಗಳೂರು.

GENERAL NO. 2396/101 OF 1868-69.

MYSORE COMMISSIONER'S OFFICE

Bangalore, 27th July, 1868.

TO

The Secretary to the Government of India,

Foreign Department

SIMLA.

SIR,

In reply to para 2 of your letter 1201, dated 16th instant, I have the honor to submit for the information of the Government of India the following explanation. –

2. The Sringeri Guru is the direct representative of the Sectarian Shunkar Acharya and is the acknowledged spiritiual Director not only of the greater proportion of the Hindus of Southern India, but also of those of the leading Mahratta Houses, such as Holakr and the former Peshwas. It may be said that his influence is far greater than that of any Hindu spiritual guide in India and I presume it is for this reason that he is regarded with such unlimited respect. He is the only Guru in the Province who is permitted to carry the Adda Palkee or Cross Palankeen, and he has in his possession Sunuds of great antiquity from the Nizam, the Peshwas, the Mysore Rajah, Holkar and others all enjoing the utmost respect to be paid to him.

3· Owing to the extraordinary veneration in which he has always been held, a Siradari of Silledars has been attached to him from the earliest period and on the occasion of his visiting H. M. Territory an extra escort has always been given, to which purport the Guru holds several communications to and from the Madras Goverment.

4. The Guru enjoys Enam lands valued at more than half a lac in the Kadur District near the sources of the Toongabhadra river, and during his periodical tours in Mysore receives from his disciples large sums of money which he distributes in charity. The late Rajah used to pay him Rs. 1000 a month.

5 The Guru Narsing Bhartee is a venerable old man of 72, who has been a greât traveller and has a considerable reputation for learning. He is deservedly respected, being very unassuming in manner and having a well established character for benevolence and wisdom.

6 I may observe that I do not think it expedient to curtail the Guru of his customary guard of honor, but I have endeavoured to dissuade him from proceeding to Her Majesty's Territory with any additional followers, although he can quote undoubted precedents for the practice.

I have, &.,

(Signed) L. BOWRING,

Commissioner.

No. 1360

FROM

W. S. SETON KARR, ESQ.,

Secretary to the Government of India.

TO

THE COMMISSIONER OF MYSORE.

SIR,

I have the honor to acknowledge the receipt of your letter dated 27th ultimo, No. 2369/101, submitting an explanation in regard to the escort of Silledar Horse furnished to the Sringeri Guru.

2. In reply, I am directed to state that His Excellency the Viceroy and Governor General in Council accepts your explanation of the custom in force regarding the native gentleman and approves the views set forth in the 6th paragraph of the letter under acknowledgment.

I have the honor to be,
Sir.
Your most obedient Servant,
(Signed) W. S. SETON KARR,
Secretary to the Government of India,

SIMLA,
19th August, 1868.

True copy,

(Signed) L. BOWRING.

मोहर.

श्री.

॥ जगद्गुरुयाच ॥

हे संस्थान च विशिष्ट आमील व शिरस्तेदार यास लिहिवावुन पाठविल संनद वैगेरि विला ऐसाजे आमिला न शिरस्तेदारा न हाल इस्तकवाल मोकदमा निमुजारे या सरकार दारुल रियासत मैहिसूर विदानद ॥ ॥ श्री श्रिंगेरी ॥ ॥ श्रीमठाहून मटमुद्र ब्राह्मण एउन तुमच तुमच तालूकेंत मामूलप्रकार साच शिष्यवर्गा च वर्णाश्रम च आचारविचार विचारणाकरुन घेउन श्रीमठासएणे च चरणकाणिका मूलानक्षत्रकाणिका अग्रतांबूल दीपराधनकाणिका प्रायश्चित्तकाणिका सुदा शिष्यवर्गलोका कडून एणे सारीख करुन घेणेच्या विषयांत हि कोणी तरी काणिका देइनाते मुद्रा अतिक्रमवाणि चा ललतरि सास ताकीद करुन वंदोवस्त करवाउन देणेच्या सही सदरी शिष्या कडून वसूल जाहलेतें काणक्यास कोणि जकात वसूल करिना सारिखहि श्री श्रिंगेरी श्रीमठास पूर्वापासून मिळालते शिष्यमंडलींत वाइट जाहलेते बाइकास श्रीमटच हवाला करुन रशीद घेणे विशया सहि सदरी श्रीमठास मिळालते ब्राह्मण सुदा समस्त इतर वर्णाश्रमांत हि सुदा सासा वर्णाश्रमप्रकार सासा कालांत उपनयन विवाह प्रायश्चित्त वगैरे करुन घेणेच विषयांत ही सरकारवालेनि प्रवेश करितानये ह्मणुन हि श्री श्रिंगेरि ॥ ॥ याच सवारिहि कोणत कोणतग्रामास आलियाहि तुमचतुमच तालूक सरहदेंत सासा स्थलांत असणेच शिवालय विष्णु आलय वगैरे देवस्थानांतहि असणेच सदरि देवास श्री श्रियानि पूजा करणेवदल सोडून देणेविषइ सुदा याप्रकार निरोपव्हाव ह्मणून हजूर शिरस्तेदार तिरमलपंडित व आणि द्यावपैया व श्रीमठाधिकार पद्मनाभशास्त्रि याणि सुदा हजूरात अर्जकरून घेतलकरिता सास निरोपदेणेच काय ह्मणिजे सदरी प्रमाणे वरिलिहिले सारिख केव्हाहि चालून घेउन एणेच नव्हत हेसंनदच नकल प्रति तालूकेच शिरस्तेदाराच दफ्तरास दाखल करुन घेउन असल संनद सदरि तिरमलपंटित याच सुफर्देसहो पद्मनाभशास्त्रीयाच सुफर्देसहो वापस देणेच आहे जाणीजे तारीख २५ वि माहे दिनिसालसाहोर संन १२२१ने मरकुंम प्रमादीच संवत्सर कार्तीकमास खत लक्षीनारणैया मुनषी हजूर.

हेजागि फारषींत टीपू सुलतानयाच दस्तखतआहे.

हे जागि चारि महाराष्ट्र दफ्तरदाराच दाखला आहे.

(मोहर.)

हे जागि फारषीत संनददाखला आहे.

ಕವಿಹಾಷನರಯಾನೆ ಇಲಾಖಾ ಸರಕಾರ ಕುಂಫನಿ ಬಹದ್ದರವರ ಪ್ರಾಂತ್ಯ,

ಮೈಸೂರು.

ನಂದನಸಂವತ್ಸರದ ಭಾದ್ರಪದ ಶುದ್ಧ ೧೧ ಯಲ್ಲೂ ಅರಮನೆಶೀಮೆಗಳ ಅಮಲ್ದಾರರಿಗೆ ಬರೆಸಿ ಕಳುಹಿಸಿದ ನಿರೂಪ ಅದಾಗಿ ---

ಶ್ರೀ ಶೃಂಗೇರೀಜಗದ್ಗುರುಗಳವರ ಶ್ರೀ ಮಠದಿಂದ ಮಠಮುದ್ರೆ ಬ್ರಾಹ್ಮಣರೆಂದು ನಿಮ್ಮ ನಿಮ್ಮ ತಾಲ್ಲೂಕಿನಲ್ಲಿ ಮಾಮೂಲ್‌ಮೇರಿಗೆ ಅವರ ಶಿಷ್ಯವರ್ಗಗಳ ಶ್ರೀ ಮಠದ ಆಚಾರವಿಚಾರ ವಿಚಾರಿಸಿಕೊಂಡು ಶ್ರೀ ಮಠಕ್ಕೆ ಬರತಕ್ಕ ಚರಣಕಾಣಿಕೆ, ಮೂಲಾನಕ್ಷತ್ರ ಕಾಣಿಕೆ, ಅಗ್ರತಾಂಬೂಲ, ಸಂಭಾವನೆ, ಪ್ರಾಯಶ್ಚಿತ್ತಕಾಣಿಕೆ ಮುಂತಾಗಿ ಶಿಷ್ಯವರ್ಗ ಜನರಿಂದ ಬರತಕ್ಕ ಮಠದ ಕಾಣಿಕೆ ಕೂಡದ ಮಠಪ್ರಾತಿಕ್ರಮವಾಗಿ ನಡೆಸಿಕೊಂಡವರಿಗೆ ತಕರಾರು ಇಲ್ಲದೆ ಬಿಟ್ಟು ಮಾಡತಕ್ಕದ್ದುಬಗ್ಗೆ ಸದರೀ ಶಿಷ್ಯರಿಂದ ವಸೂಲಾದ ಕಾಣಿಕೆಗಳಿಗೆ ಯಾವ ಸರ್ಕಾರದವರೂ ಸುಂಕ ವಸೂಲ್ ಮಾಡತಕ್ಕದ್ದಲ್ಲಬಗ್ಗೆ ಶ್ರೀ ಶೃಂಗೇರಿ ಶ್ರೀಮಠಕ್ಕೆ ಪೂರ್ವಪಾರಂಪರ್ಯವಾಗಿ ಸೇರಿದ ಶಿಷ್ಯಜನರಲ್ಲಿ ಕೆಟ್ಟ ಹೆಣ್ಣುಗಳನ್ನು ಶ್ರೀಮಠದವರ ಹವಾಲಿಗೆ ಕೊಟ್ಟು ರಶೀತಿ ತಗದುಕೊಳ್ಳುವಬಗ್ಗೆ ಸದರೀ ಶ್ರೀಮಠಕ್ಕೆ ಪೂರ್ವಪಾರಂಪರ್ಯವಾಗಿ ಸೇರಿದ ಬ್ರಾಹ್ಮಣರು ಮತ್ತು ಸಮಸ್ತ ಇತರ ಜಾತಿಯವರುಗಳಲ್ಲಿಯೂ ಸಹ ಆಯಾಯ ವರ್ಣಾಶ್ರಮರೀತ್ಯಾ ಆಯಾಯ ಕಾಲಗಳಲ್ಲಿ ಮುಂಜಿ, ಮದುವೆ, ಪ್ರಾಯಶ್ಚಿತ್ತ, ಪಂಕ್ತಿ ಮಾಡಿಕೊಳ್ಳತಕ್ಕ ಬಾಗದಲ್ಲಿ ಮಠವಿಚಾರಗಳಿಗೆ ಯಾವ ಸರಕಾರದವರೂ ಪ್ರವೇಶ ಮಾಡಕೂಡದೆಂಬುವಬಗ್ಗೆ ಶ್ರೀ ಜಗದ್ಗುರುಗಳವರ ಸವಾರಿಯು ಯಾವ ಗ್ರಾಮಗಳಿಗೆ ಬಂದಾಗ್ಯೂ ಆ ಸ್ಥಳದಲ್ಲಿರುವ ಶಿವ, ವಿಷ್ಣು, ವಗೈರೆ ವಿಶಿಷ್ಟ ದೇವಸ್ಥಾನಗಳನ್ನು ಶ್ರೀಗಳವರು ಪೂಜೆಮಾಡತಕ್ಕಬಗ್ಗೆ ಬಿಡುಕೂಡತಕ್ಕಬಗ್ಯೂ ಸಹಾ

೧೭೭೬ನೇ ಇಸವಿ ಏಪ್ರಿಲ್ ೨೦ಕ್ಕೆ ಸರಿಯಾದ ದುರ್ಮುಖಿ ಸಂ॥ ಚೈತ್ರ ಮಾಸದಲ್ಲಿ ಮೈಲಾಪುರಿ ಚನ್ನಪಟ್ಣದ ಗವರ್ನರ್ ಲಾರ್ಡ್‌ಪಿಕ್ಕಟು ಸಾಹೇಬರು ಕೊಟ್ಟಿರುವ ೩೬-೪೪ನೇ ನಂಬರ್ ಹುಕ್ಕುಂ, ಸದರಿ ದುರ್ಮುಖಿ ಸಂ॥ ಶ್ರಾವಣಶುದ್ಧ ೭ ಯಲ್ಲೂ ಬಂಗಾಳಾ ಗೌವರ್ನರ್‌ಜನರಲ್ ಸಾಹೇಬರು ಕೊಟ್ಟಿರುವ ೧೩೮ನೇ ನಂಬರು ಹುಕ್ಕುಂ ೧೭೭೭ನೇ ಜನವರಿ ೨೦ಕ್ಕೆ ಸರಿಯಾದ ದುರ್ಮುಖಿ ಸಂ॥ ಪುಷ್ಯಮಾಸದಲ್ಲಿ ಮೈಲಾಪುರಿ ಚನ್ನಪಟ್ಣದ ಗವರ್ನರ್ ಲಾರ್ಡ್‌ಪಿಕ್ಕಿಟುಸಾಹೇಬರು ಕೊಟ್ಟಿರುವ ೮೮ನೇ ನಂಬರುಹುಕ್ಕುಂ. ೧೭೮೨ನೇ ಅಕ್ಟೋಬರ್ ೨೮ಕ್ಕೆ ಸರಿಯಾದ ಶುಭಕೃತು ಸಂ॥ ಅಶ್ವೀಜಮಾಸದಲ್ಲಿ ತಂಜಾವೂರು ರೆಸಿಡೆಂಟರು ಜಾನ್‌ಸಲಿವಾನ್ ಸಾಹೇಬರವರು ಕೊಟ್ಟಿರುವ ೧೮ - ೨೮ನೇ ನಂಬರ್ ಹುಕ್ಕುಂ ೧೭೮೨ನೇ ನವಂಬರ್ ೨೭ರಲ್ಲಿ ಮೈಲಾಪುರಿ ಚನ್ನಪಟ್ಣದ ಗವರ್ನರ್ ಲಾರ್ಡ್‌ಮಾಕಾರ್ಟ್ನಿಯವರು ಕೊಟ್ಟಿರುವ ೬೪ - ೭೪ನೇ ನಂಬರ್ ಹುಕ್ಕುಂ. ಸದರಿ ಡಿಶಂಬರ್ ೮ನೇ ತಾರೀಖಿನಲ್ಲಿ ಮಾಟ್ರಿಷಾರ್ಟ್‌ಸಾಹೇಬರವರು ತಂಜಾವೂರು ಮೊಕ್ಕಾಂನಿಂದ ಕೊಟ್ಟಿರುವ ೭೯ - ೮೬ ನೇ ನಂಬರ್ ಹುಕ್ಕುಂ. ೧೭೮೩ನೇ ಏಪ್ರಿಲ್ ೨೮ಕ್ಕೆ ಸರಿಯಾದ ಶೋಭಕೃತು ಸಂ॥ ಚೈತ್ರಮಾಸದಲ್ಲಿ ಕರ್ನಲ್ ಲ್ಯಾಂಗ್ಸ್‌ಸಾಹೇಬರು ತಂಜಾವೂರು ಮೊಕ್ಕಾಂನಿಂದ ಕೊಟ್ಟಿರುವ ೮೪ - ೯೬ನೇ ನಂಬರ್ ಹುಕ್ಕುಂ. ೧೭೮೩ನೇ ಮೇ ತಾರೀಖು ೪ ರಲ್ಲೂ ಜನರಲ್‌ಕೂಟಸಾಹೇಬರು ಕೊಟ್ಟಿರುವ ೪೫ - ೯೯ ನೇ ನಂಬರು ಹುಕ್ಕುಂ. ೧೭೮೩ನೇ ಮೇ ತಾರೀಖು ೧೬ರಲ್ಲು ಕರ್ನಲ್ ಫ್ಲೋಲಾರ್ಟನ್ ಸಾಹೇಬರವರು ಕೊಟ್ಟಿರುವ ೧೦೧ - ೧೫೦ನೇ ನಂಬರ್ ಹುಕ್ಕುಂ ೧೭೮೫ನೇ ಇಸವಿ ಮಾರ್ಚಿ ೧೬ಕ್ಕೆ ಸರಿಯಾದ ಕ್ರೋಧಿಸಂ॥ ಫಾಲ್ಗುಣಮಾಸದಲ್ಲಿ ತಂಜಾವೂರು ರೆಸಿಡೆಂಟ್ ಡಗ್ಲಾಸ್ಟರ್‌ಸಾಹೇಬರುಕೊಟ್ಟಿರುವ ೧೬೭ - ೧೭೬ನೇ ನಂಬರ್ ಹುಕ್ಕುಂ. ಸದರಿ ೧೭೮೫ನೇ ಏಪ್ರಿಲ್ ೧೮ಕ್ಕೆ ಸರಿಯಾದ ವಿಶ್ವಾವಸು ಸಂ॥ ಚೈತ್ರಮಾಸದಲ್ಲಿ ಮೈಲಾಪುರಿ ಚನ್ನಪಟ್ಣದ ಗವರ್ನರ್ ಲಾರ್ಡ್‌ಜನರಲ್ ಮೆಡೋಸ್‌ಸಾಹೇಬರವರು ಕೊಟ್ಟಿರುವ ೧೮೮ - ೧೯೮ನೇ ನಂಬರ್ ಹುಕ್ಕುಂ. ೧೭೮೬ನೇ ಜನವರಿ ೧೬ಕ್ಕೆ ಸರಿಯಾದ ವಿಶ್ವಾವಸು ಸಂ॥ ಪುಷ್ಯಮಾಸದಲ್ಲಿ ಲಾರ್ಡ್‌ವಾಲಿಸ ಸಾಹೇಬರವರು ಕೊಟ್ಟಿರುವ ೮೮ನೇ ನಂಬರು ಹುಕ್ಕುಂ. ೧೭೮೫ನೇ ಮಾರ್ಚಿ ೧೪ರಲ್ಲೂ ವೆಬ್ಬ್‌ಸಾಹೇಬರವರು ಕೊಟ್ಟಿರುವ ೧೨೫ನೇ ನಂಬರು ಹುಕ್ಕುಂ. ೧೭೯೦ನೇ ಸಾಧಾರಣ ಸಂ॥ ವೈಶಾಖಶುದ್ಧ ೧೧ ಯಲ್ಲು ಮ್ಯಾಯಸ್‌ಸಾಹೇಬರು ಸತ್ಯಮಂಗಲದ ಮೊಕ್ಕಾಂನಿದ ಕೊಟ್ಟಿರುವ ೨೦೦-೩೦೫ನೇ ನಂಬರುಹುಕ್ಕುಂ. ಸದರಿ ವೈಶಾಖ ಬಹುಳ ೧೧ ಯಲ್ಲೂ ಕ್ಯಾಪ್ಟನ್‌ಸಾಹೇಬರು ಕೊಯಮತ್ತೂರು ಮೊಕ್ಕಾಮಿನಿಂದ ಕೊಟ್ಟಿರುವ ೩೪೫ - ೪೦೫ನೇ ನಂ॥ ಹುಕ್ಕುಂ. ಸದರೀ ಜ್ಯೇಷ್ಠಶುದ್ಧ ೮ ಯಲ್ಲೂ ಸರ್ವಯಜಮಾನರಾದ ಲಾರ್ಡ್‌ಕಾರನ್‌ವಾಲೀಸ್‌ಸಾಹೇಬರು ಕೊಟ್ಟಿರುವ ೪೨೮ - ೪೫೪ನೇ ನಂ॥ ಹುಕ್ಕುಂ. ಸದರೀ ಶ್ರಾವಣಶುದ್ಧ ೧೩ ಯಲ್ಲು ಮೇಜರ್‌ಕ್ಲೋಸ್‌ಸಾಹೇಬರವರು ಕೊಟ್ಟಿರುವ ೪೬೮ - ೫೩೬ನೇ ನಂ॥ ಹುಕ್ಕುಂ. ಸದರಿ ಶ್ರಾವಣಬಹುಳ ೫ ಯಲ್ಲೂ ದಂಡಿನ ಯಜಮಾನರಾದ ಬಾಲ್ಕರ್ಸ್‌ಸಾಹೇಬರು ಕೊಯಮತ್ತೂರು ಮೊಕ್ಕಾಂನಿಂದ ಕೊಟ್ಟಿರುವ ೫೪೫ - ೫೬೮ನೇ ಹುಕ್ಕುಂ. ೧೭೯೧ನೇ ಮೇ ೧ಕ್ಕೆ ಸರಿಯಾದ ವಿರೋಧಿಕೃತು ಸಂ॥ ವೈಶಾಖಮಾಸದಲ್ಲಿ ಜನರಲ್‌ಹಾರಿಸ್ ಸಾಹೇಬರು ಕೊಟ್ಟಿರುವ ೬೬೮ - ೭೮೨ನೇ ನಂ॥ ಹುಕ್ಕುಂ. ಸದರೀ ೧೭೯೧ನೇ ಮೇ ೫ರಲ್ಲೂ ಲಾರ್ಡ್‌ವೆಲ್ಲಸ್ಲಿಸಾಹೇಬರವರು ಕೋರ್ಟಾಫ್ ಡೈರೆಕ್ಟರುಗಳಿಗೆ ಡಿಸ್ಪ್ಯಾಚನ್ನು ಬರಿಯುವದಕ್ಕೆ ಇಂಡಿಯಾ ಕಂಪೆನಿಯವರು ಕೊಟ್ಟಿರುವ ೧೪೦ನೇ ನಂ॥ ಹುಕ್ಕುಂ. ಸದರಿ ಮೇ ೧೫ರಲ್ಲೂ ಕೋರ್ಟಾಫ್ ಡೈರೆಕ್ಟರುಗಳು ಕೊಟ್ಟಿರುವ ೧೭೨ನೇ ನಂಬರು ಹುಕುಂ. ೧೭೯೨ನೇ ಮಾರ್ಚಿ ೩ಕ್ಕೆ ಸರಿಯಾದ ವಿರೋಧಿಕೃತು

ಣಮಾಸದಲ್ಲಿ ಲಾರ್ಡ್ ಕಾರನ್‌ವಾಲೀಸ್‌ಸಾಹೇಬರು ಕೊಟ್ಟಿರುವ ೯೨೪ - ೯೪೮ನೇ

ಮೇ ೧೪ಕ್ಕೆ ಸರಿಯಾದ ಪರೀಧಾವಿ ಸಂವತ್ಸರದ ವೈಶಾಖಮಾಸದಲ್ಲಿ

ಲಾರ್ಡ್ ವೆಲ್ಲಸ್ಲಿಸಾಹೇಬರವರು ಕೊಟ್ಟರುವ ೩೧೧ನೇ ನಂಬರು ಹುಕ್ಕುಂ. ೧೭೯೩ನೇ ಪ್ರಮಾದೀಚ ಸಂವತ್ಸರದ ವೈಶಾಖ ಶು॥ ೪ ಯಲ್ಲೂ ಮೈಲಾಪುರಿಚನ್ನಪಟ್ಟಣದ ಗವರ್ನರ್ ಲಾರ್ಡ್‌ಹೋಬಾರ್ಟ್ ಸಾಹೇಬರವರು ಕೊಟ್ಟರುವ ೯೯೬ನೇ ನಂಬರು ಹುಕ್ಕುಂ. ಸದರಿ ವೈಶಾಖ ಬ॥ ೫ ಯಲ್ಲೂ ವೆಬ್ ಸಾಹೇಬರು ಕೊಟ್ಟರುವ ೯೯೪ನೇ ನಂಬರು ಹುಕ್ಕುಂ. ಸದರಿ ಜ್ಯೇಷ್ಠ ಶು॥ ೨ ಯಲ್ಲೂ ಜಾರ್ಜ್‌ಸಾಹೇಬರು ಕೊಟ್ಟರುವ ೨೧೪ನೇ ನಂಬರು ಹುಕುಂ. ಸದರಿ ಪ್ರಮಾದೀಚ ಸಂವತ್ಸರದ ಕಾರ್ತೀಕಮಾಸದಲ್ಲಿ ದೊಡ್ಡನವಾಬರಾದ ಹೈದರಲ್ಲಿ ಸಾಹೇಬರು ಕೊಟ್ಟರುವ ಸನ್ನದು. ೧೭೯೪ನೇ ಜೂನ್ ೨೪ಕ್ಕೆ ಸರಿಯಾದ ಆನಂದಸಂವತ್ಸರದ ಜ್ಯೇಷ್ಠಮಾಸದಲ್ಲಿ ಸದರಿ ಜಾರ್ಜ್‌ಸಾಹೇಬರವರು ಕೊಟ್ಟರುವ ೨೪೨ನೇ ನಂಬರು ಹುಕ್ಕುಂ. ೧೭೯೫ನೇ ಇಸವಿ ಜುಲೈ ೧ಕ್ಕೆ ಸರಿಯಾದ ರಾಕ್ಷಸ ಸಂವತ್ಸರದ ಆಷಾಢಮಾಸದಲ್ಲಿ ಮೈಲಾಪುರಿಚನ್ನಪಟ್ಟಣದ ಗವರ್ನರ್ ಲಾರ್ಡ್‌ಹೋಬಾರ್ಟ್ ಸಾಹೇಬರು ಕೊಟ್ಟರುವ ೮೧೪ನೇ ನಂಬರು ಹುಕ್ಕುಂ. ೧೭೯೬ನೇ ಇಸವಿ ಫೆಬ್ರವರಿ ೧೫ರಲ್ಲೂ ಸದರಿ ಹೋಬಾರ್ಟ್‌ಸಾಹೇಬರು ಕೊಟ್ಟರುವ ೨೧೨ನೇ ನಂಬರು ಹುಕ್ಕುಂ. ೧೭೯೭ನೇ ಇಸವಿ ಆಗಸ್ಟ್ ೨೬ಕ್ಕೆ ಸರಿಯಾದ ಪಿಂಗಳ ಸಂವತ್ಸರದ ಶ್ರಾವಣಮಾಸದಲ್ಲಿ ಮೈಲಾಪುರಿಚನ್ನ ಪಟ್ಟಣದ ಗವರ್ನರ್ ಲಾರ್ಡ್ ಕ್ಲೈವ್‌ಸಾಹೇಬರು ಕೊಟ್ಟರುವ ೯೯೮ನೇ ನಂಬರು ಹುಕ್ಕುಂ. ೧೭೯೮ನೇ ಮಾರ್ಚ್ ೨೪ಕ್ಕೆ ಸರಿಯಾದ ಪಿಂಗಳ ಸಂವತ್ಸರದ ಫಾಲ್ಗುಣಮಾಸದಲ್ಲಿ ಸರ್ವ ಯಜಮಾನರಾದ ಬಂಗಾಳಾ ಗವರ್ನರ್‌ಜನರಲ್ ಲಾರ್ಡ್ ಮಾರ್ನಿಂಗ್ಟನ್ ಸಾಹೇಬರು ಕೊಟ್ಟರುವ ೩೨೬ನೇ ನಂಬರು ಹುಕ್ಕುಂ. ೧೭೯೮ನೇ ಮೆ ೧೦ಕ್ಕೆ ಸರಿಯಾದ ಕಾಳಾಯುಕ್ತಿ ಸಂವತ್ಸರದ ವೈಶಾಖಮಾಸದಲ್ಲಿ ಲಾರ್ಡ್‌ಕ್ಲೈವ್‌ಸಾಹೇಬರು, ಲಾರ್ಡ್ ಮಾರ್ನಿಂಗ್ಟನ್‌ಸಾಹೇಬರೂ ಸಹ ಕೊಟ್ಟರುವ ೧೮೪ನೇ ನಂ॥ ಹುಕ್ಕುಂ. ೧೭೯೯ನೇ ಜನವರಿ ೧೪ಕ್ಕೆ ಸರಿಯಾದ ಕಾಳಾಯುಕ್ತಿ ಸಂವತ್ಸರದ ಪುಷ್ಯಮಾಸದಲ್ಲಿ ಜನರಲ್ ಹಾರಿಸ್‌ಸಾಹೇಬರವರು ಕೊಟ್ಟರುವ ೧೧೦ನೇ ನಂಬರು ಹುಕ್ಕುಂ. ಇದೇ ಪುಷ್ಯ ಬ॥ ೧೪ರಲ್ಲೂ ವೆಬ್‌ಸಾಹೇಬರು ಕೊಟ್ಟರುವ ೩೪೮ನೇ ನಂಬರು ಹುಕ್ಕುಂ. ೧೭೯೯ನೇ ಎಪ್ರಿಲ್ ೧೬ಕ್ಕೆ ಸರಿಯಾದ ಸಿದ್ಧಾರ್ಥಿ ಸಂವತ್ಸರದ ಚೈತ್ರಮಾಸದಲ್ಲಿ ಲಾರ್ಡ್‌ಕ್ಲೈವ್‌ಸಾಹೇಬರ ಹುಕ್ಕುಂ ಮೇರಿಗೆ ವೆಬ್‌ಸಾಹೇಬರು ಕೊಟ್ಟರುವ ೮೧೬ನೇ ನಂಬರು ಹುಕ್ಕುಂ. ೧೭೯೯ನೇ ಮೇ ೧೪ಕ್ಕೆ ಸರಿಯಾದ ಸಿದ್ಧಾರ್ಥಿಸಂವತ್ಸರದ ವೈಶಾಖಮಾಸದಲ್ಲಿ ಜನರಲ್ ಹಾರಿಸ್‌ಸಾಹೇಬರು ಕೊಟ್ಟರುವ ೮೬ - ೩೩೬ನೇ ನಂಬರು ಹುಕ್ಕುಂ. ೧೭೯೯ನೇ ಜೂನ್ ೩೦ರಲ್ಲೂ ಸರ್ವ ಯಜಮಾನರಾದ ಬಂಗಾಳಾ ಗವರ್ನರ್‌ಜನರಲ್ ಲಾರ್ಡ್ ಮಾರ್ನಿಂಗ್ಟನ್‌ಸಾಹೇಬರವರು ಕೊಟ್ಟರುವ ೫೧೬ನೇ ನಂಬರು ಹುಕ್ಕುಂ. ಈ ಹುಕ್ಕುಂಗಳನ್ನು ಅನುಸರಿಸಿ ಪ್ರಭವಸಂವತ್ಸರದ ಆಶ್ವೀಜ ಶು॥ ೩ ಮರ್ಕಂನಲ್ಲೂ, ಸದರಿ ಪ್ರಭವಸಂವತ್ಸರದ ಮಾರ್ಗಶಿರ ಬ॥ ೧೩ ಭಾನುವಾರದ ಮರ್ಕಂನಲ್ಲೂ, ವಿಭವಸಂವತ್ಸರದ ಮಾರ್ಗಶಿರ ಶು॥ ೩ ಭಾನುವಾರದ ಮರ್ಕಂನಲ್ಲೂ ಸಹ ದಿವಾನ್ ಪೂರ್ಣಯ್ಯನವರು ಕೊಟ್ಟರುವ ಪರವಾನೆ ಮತ್ತು ರಹದಾರಿ. ೧೮೦೨ನೇ ಡಿಶಂಬರು ೨೩ರಲ್ಲೂ, ೧೮೦೮ನೇ ನವಂಬರು ೨೧ರಲ್ಲೂ ಸಹ ರಸಿಡೆಂಟರು ಕೋಲ್‌ಸಾಹೇಬರು ಕೊಟ್ಟರುವ ೯೪೨ - ೮೨೬ನೇ ನಂಬರು ಹುಕ್ಕುಂಗಳು, ೧೮೦೮ನೇ ನವಂಬರು ೨೧ರಲ್ಲೂ ಮೈಲಾಪುರಿಚನ್ನಪಟ್ಟಣದ ಗವರ್ನರ್ ಲಾರ್ಡ್ ಬಲೂರ್‌ಸಾಹೇಬರು ಕೊಟ್ಟರುವ ೯೦೮ನೇ ನಂಬರು ಹುಕ್ಕುಂ. ಸನ್ ೧೮೨೨ನೇ ಇಸವಿ ಜೂನ್ ತಾರೀಖು ೨೭ರಲ್ಲೂ ಮತ್ತು ೧೮೨೬ನೇ ಇಸವಿ ಸೆಪ್ಟಂಬರು ತಾರೀಖು ೯ರಲ್ಲೂ ಸಹ ಮಹಾರಾಜರಾಜಾಸಾಹೇಬ್ ಬಹದ್ದೂರವರು ಕೊಟ್ಟರುವ ಸನ್ನದು, ಮತ್ತು ರಹದಾರಿ ಸಹ ಸಾದರಾಗಿ ಇರುವವನ್ನು ಶ್ರೀಮಠದ ಪಾರಪತ್ಯೇಗಾರ ಭಿಷ್ಟ್ರಯ್ಯಶಾಸ್ತ್ರಿಗಳು ಹುಜೂರಲ್ಲಿ ಹಾಜರ್ಮಾಡಿ ಈ ಮೇರಿಗೆ ಅಪ್ಪಣೆ ಆಗಬೇಕೆಂದು ಅರ್ಜಿ ಮಾಡಿಕೊಂಡದ್ದರಿಂದ ಅಪ್ಪಣೆ ಕೊಡಿಸಿ ಇದ್ದೇತು. ಸದರಿ ಬರೆದಿರುವ ಮೇರಿಗೂ ಬಿಲ್‌ಷೇಲ್‌ಸಾಬುಕಿನ ಹುಕ್ಕುಂಗಳು, ಪರವಾನೆ ಸನ್ನದು, ರಹದಾರಿ ಸಹ ಇರುವ ಮಾಮೂಲ್ಮೇರಿಗೆ ನಡೆದುಕೊಳ್ಳುವದು.

ತಾರೀಖು ೫ನೇ ಮಾಹೆ ಸೆಪ್ಟಂಬರ್ ಸನ್ ೧೮೩೨ನೇ ಇಸವಿ ದರಜಾಗಾ ಬೆಂಗಳೂರು ಕ್ಯಾಷ್ ಮೇಜರ್ ಕಮಿಷನರ್ ಎಂದು ಸೈನಿದೆ. ಸೂರಪ್ಪ, ಹೆಡ್ ದಿವಾನ್ ಎಂದು ಸೈನಿದೆ.

ಶ್ರೀಮತ್ಪರಮಹಂಸ ಯಥೋಕ್ತಬಿರುದಾಂಕಿತರಾದಂಥ ಶ್ರೀ ಸಚ್ಚಿದಾನಂದಭಾರತಿಗಳಿಗೆ.

ಟೀಪು ಸುಲತಾನ್ ಪಾದಷಹರು ಮಾಡುವ ಸಲಾಂ. ನೀವು ಕಳುಹಿಸಿದ ಪತ್ರಿಕೆಯಿಂದ ಎಲ್ಲಾ ವಿವರವು ತಿಳಿಯಬಂತು. ನಮ್ಮ ಸರಕಾರದ ಶೀಮೆಯಲ್ಲಿ ಇರುವ ದೇವಸ್ಥಾನ ಪುಣ್ಯಕ್ಷೇತ್ರಗಳಲ್ಲೂ ದೇವತಾದರ್ಶನಮಾಡಿಕೊಂಡು ಬರತಕ್ಕಬಗ್ಯೆ ಅಪ್ಪಣೆಕೊಟ್ಟು ರಹದಾರಿ ಕಳುಹಿಸಿಕೊಟ್ಟಲ್ಲಿ ಹೋಗಿ ದೇವರ ಸನ್ನಿಧಿಗಳಲ್ಲಿ ಸರಕಾರದ ಶ್ರೇಯಸ್ಸು ಪ್ರಾರ್ಥಿಸಿಕೊಂಡು ಬರುವದಾಗಿ ಬರದು ಇರುವದು ಸರಿಯಷ್ಟೆ; ಅದೇಪ್ರಕಾರಕ್ಕೆ ರಹದಾರಿ ಕಳುಹಿಸಿ ಇದ್ದೇತು. ಸರಕಾರದ ಶೀಮೆಯಲ್ಲಿರುವ ದೇವತಾಸ್ಥಳ ಪುಣ್ಯಕ್ಷೇತ್ರಗಳಲ್ಲಿ ಸಹ ಹೋಗಿ ದೇವರ ಸನ್ನಿಧಾನಗಳಲ್ಲು ತಾವು ತ್ರಿಕಾಲ ಈಶ್ವರಪೂಜೆಯನ್ನೂ ಸಹ ಸರಕಾರದ ಶ್ರೇಯೋಭಿವೃದ್ಧಿಯಾಗುವಂತೆ ಈಶ್ವರಪ್ರಾರ್ಥನೆ ಮಾಡಿಕೊಂಡು ಬರುವಹಾಗೆ ಮಾಡಿಸುವದು. ತಾರೀಖು ೧೦ನೇ ಮಾಹೆ ಜಾಫರಿಸಾಲ್ ಇರಾರಸಖ್ ಸನ್ ೧೨೨೪ ಮಹಮ್ಮದು ನಳಸಂವತ್ಸರ ಎಂತೆ ಇದೆ.

ಜಯಲಕ್ಷ್ಮೀವಿಲಾಸ ಮುದ್ರಾಕ್ಷರಶಾಲಾ ದೊಡ್ಡಪೇಟೆ ಮೈಸೂರು.

ಕೃ॥ ೧॥ ನಂಬರು.
295.

ಶ್ರೀ ಶೃಂಗೇರಿ ಸ್ವಾಮಿಗಳವರ ಮಠಕ್ಕೆ ಸೇರಿದ ಸರ್ವ ಧರ್ಮಾಧಿಕಾರ ಲಕ್ಷ್ಮೀನರಸಿಂಹಶಾಸ್ತ್ರಿಗಳಿಗೆ— ಅಂಕಿ.

ಈ ದಿವಸ ಶ್ರೀ ಶೃಂಗೇರಿ ಸ್ವಾಮಿಗಳವರು ನರಶೀಪುರದ ಶ್ರೀ ಗುಂಜಾನರಸಿಂಹಸ್ವಾಮಿಯವರ ದೇವಸ್ಥಾನಕ್ಕೆ ದಯಮಾಡಿಸಿ, ಪೂಜೇ ಮುಂತಾದ್ದುಮಾಡಿ ಬರಬೇಕಾದ್ದರಿಂದ ಮಾಮೂಲ್ ಅನುಸರಿಸಿ ಮರ್ಯಾದಿ ಮುಂತಾದ್ದು ನಡಿಯಲು ಹುಕುಂ ಆಗಬೇಕೆಂದು ವಗೈರೇ ನೀವು ಬರಸಿದ ಖತ್ತು ತಲಪಿತು,

ಶ್ರೀ ಶೃಂಗೇರಿ ಸ್ವಾಮಿಗಳವರು ಮಾಮೂಲ್ ಮತ್ತು ಪದ್ಧತಿ ಅನುಸರಿಸಿ ಶ್ರೀ ಗುಂಜಾನರಸಿಂಹಸ್ವಾಮಿಗಳವರ ದೇವಸ್ಥಾನಕ್ಕೆ ದಯಮಾಡಿಸಿ ಮಾಮೂಲ್ ಮತ್ತು ಪದ್ಧತಿ ಅನುಸರಿಸಿ ದೇವರಿಗೆ ಅರ್ಚನೆ ಕರ್ಪೂರಾರತಿ ಮಾಡಿ ದಯಮಾಡಿಸಬಹುದು. ಇದರಲ್ಲಿ ಗೈರ್‌ಮಾಮೂಲ್ ಮತ್ತು ಜನರ ನೆಮ್ಮದಿಗೆ ಭಂಗಕರವಾದ ಕೃತ್ಯ ನಡೆಯಲು ಆಕರವಾಡಕೂಡದು. ಹಾಗೆ ಮಠದಕಡೆ ಜನರಿಂದ ಗಲಾಟೆಗೆ ಆಕರವಾದಲ್ಲಿ ರಿಗಲರ್‌ಪೋಲೀಸ್ ರೂಲ್ಸ್‌ಅನುಸರಿಸಿ ಅಂಥಾಜನರವಿಷಯದಲ್ಲಿ ನಡೆಸಲು ಆಸ್ಪದವಾದೀತೆಂಬ ಈಸಂಗತಿಗಳನ್ನೆಲ್ಲಾ ಶ್ರೀಸ್ವಾಮಿಗಳವರಿಗೆ ಅರಿಕೇಮಾಡಿ, ಮಾಮೂಲ್ ಮತ್ತು ಪದ್ಧತಿ ಅನುಸರಿಸಿ ನಡೆಯಬೇಕಾಗಿಧೆ. ಅದಕ್ಕೆ ವಿರೋಧವಾದ ಯಾವ ಕೃತ್ಯವೂ ನಡೆಯಬಾರದು. ಈ ವಿಷಯವನ್ನು ಕುರಿತು ದೇವಸ್ಥಾನದ ನೌಕರಿಗೂ ಹುಕುಂ ಕೊಟ್ಟು ಉಸ್ತುವಾರೀಗೆ ಪೋಲೀಸ್ ಇಲಾಖೆಯವರಿಗೂ ತಿಳಿಯಪಡಿಸಿಧೆ:

7—9—76.
ನರಶೀಪುರ ತಾಲ್ಲೂಕ್
ತಲಕಾಡು.

(Sd) *M. SHAIK IBRAHIM.*

ಥ- ಮು-

ತಲ್ಕಾಡು ತಾಲ್ಲೂಕ್
ಮೇಜಸ್ಟ್ರೇಟರ
ಮೊಹರು.

ಜಯಲಕ್ಷ್ಮೀ ವಿಲಾಸ ಮುದ್ರಾಕ್ಷರಶಾಲಾ ದೊಡ್ಡಪೇಟೆ ಮೈಸೂರು.

ಮುಲ್ಕಿ ಚ। ನಂಬರು.
೨೯

ನರಶೀಪುರದ
ತಾಲ್ಲೂಕ ಮೊಹರು

ನ ರ ಶೀ ಪು ರ ದ ತಾ ಲ್ಲೂ ಕು ಕ ಚೇ ರಿ ಯಿಂ ದ.

ಕಸಬಾ ಲಕ್ಷ್ಮೀನರಸಿಂಹಸ್ವಾಮಿಯವರ ದೇವಸ್ಥಾನದ ಪಾರುಪತ್ಯಗಾರ ಕೃಷ್ಣಪ್ಪನವರಿಗೆ

ಇಂಚಾರ್ಜ್ ಹುಕುಂ.

ಶ್ರೀ ಶ್ರಿಂಗೇರಿ ಜಗದ್ಗುರುಗಳಾದ ನರಸಿಂಹಭಾರತೀಸ್ವಾಮಿಗಳವರು ನರಶೀಪುರಕ್ಕೆ ಚಿತ್ತೈಸಿದ್ದಾಗ್ಯೆ ದೇವರಪೂಜಾ ಮಂಗಳಾರತಿ ಪಾದಕಾಣಿಕೆ ಮುಂತಾದ್ದು ಮಾಡುವದಕ್ಕೆ ಮಾಮೂಲಿಮೇರೆ ಸದರೀ ಲಕ್ಷ್ಮೀನರಸಿಂಹಸ್ವಾಮಿಯವರ ದೇವಸ್ಥಾನಕ್ಕೆ ದಯಮಾಡಿಸಿದ್ದವೇಳೆ ಅರ್ಚಕ ಕೃಷ್ಣಭಟ್ಟ ಬಾಗಿಲು ಹಾಕಿಕೊಂಡಿದ್ದನಿಮಿತ್ಯ ಸ್ವಲ್ಪಹೊತ್ತು ಸ್ವಾಮಿಗಳವರು ಬಾಗಿಲು ತೆಗೆಯತಕ್ಕದ್ದರ ನಿರೀಕ್ಷಣೆಮಾಡುವಂತೆ ಮಾಡಲ್ಪಟ್ಟ ಸದರಿ ಅರ್ಚಕನಿಗೆ ಬಂದೋಬಸ್ತು ಆಗತಕ್ಕ ವಿಷಯದಲ್ಲಿ ನೀನು ಹುಜೂರು ಫಿರ್ಯಾದುಮಾಡಿದ್ದಕ್ಕೆ ತಾಲ್ಲೂಕಸಿಂದ ಜಾಹಿರ್ಮಾಡಿದ್ದ ರಿಪೋರ್ಟಿನಮೇಲೆ ಈ ದಫಾಕ್ಕೆ ನಿಮ್ಮ ಮುನಾಸಬ್ ಅರ್ಚಕನಿಗೆ ಜರ್ಮಾನೆವಿಧಿಸಿ ಫೈಸಲ್ಮಾಡುವಂತೆ ಕೊಟ್ಟಿರುವ ಹುಕ್ಕುಂ ಅಮಲ್ಜಾರಿ ಆಗಿರುವ ತಪ್ಸೀಲನ್ನು ಅರ್ಜೀದಾರಗೆ ತಿಳಿಸುವಂತೆ ಸರ್ ಮುಜಕೂರು ಮೆ ೧೨ನೇ ಮಕ್ರೂಂ ಮುಜರಾಯಿ ೧ನೇ ನಂಬರು ಹುಕ್ಕುಂ ಸಾದರಾದಕಾರಣ ಈ ಮೊಕದ್ದಮಾ ಕಟ್ಟು ಮುಂತಾದ ಕಾಗದ ಪತ್ರಗಳ ನೋಡುವಾಗ್ಯೆ ಕೂಡ್ಲೆ ಅರ್ಚಕ ಬಾಗಿಲು ತೆಗದ್ದಾಗಿಯೂ ಶ್ರೀ ಸ್ವಾಮಿಗಳವರು ಕಟ್ಲೆಪ್ರಕಾರ ಪೂಜಾ, ಪಾದಕಾಣಿಕೆ, ಮಂಗಳಾರತಿ ಮುಂತಾಗಿ ನೆರವೇರಿಸಿದಬಳಿಕ ಮಾಮೂಲ್ಮೇರೆ ಮರಿಯಾದೆ ನಡೆಸಿರುವದಾಗಿ ಅರ್ಚಕ ಕೃಷ್ಣಭಟ್ಟನ ಕೈಫಿಯತಿನಿಂದ ತಿಳಿಯಬರುವದಲ್ಲದೆ ದೇವಸ್ಥಾನದ ಬಾಗಿಲು ಹಾಕಿದ ತಪ್ಪಿತಕ್ಕಾಗಿ ಸರ್ ೧೮೭೭ನೇ ಇಸವಿ ಏಪ್ರಿಲ್ ೧೭ನೇ ಮಕ್ರೂಂ ಮುಜರಾಯಿ ೩೦ನೇ ನಂಬರು ಹುಕ್ಕುಂ ಪ್ರಕಾರ ಈ ದಫಾಕ್ಕೆ ಸದರಿ ಅರ್ಚಕ ಕೃಷ್ಣಭಟ್ಟನಿಗೆ ೨ರೂಪಾಯಿ ಜರ್ಮಾನೆ ಮೊಕರೂರ್ಮಾಡಿ ವಸೂಲ್ಮಾಡಿರುತ್ತೆ. ತಿಳಿಯುವದು. ತಾರೀಖು ೧೮ನೇ ಮಾಹೆ ಜೂನ್ ಸರ್ ೧೮೭೭ನೇ ಇಸವಿ ಮೊಕ್ಕಾಂ ಕಸಬಾ. ... ...

ಜೂನ್ ತಾರೀಖು ೨೦ರಲ್ಲು ದಾಖಲ್.

ರುಜು ನಾರಾಯಣರಾವ್ ಮಾಮಲೇದಾರ್,
ಎಂದು ಮಹಾರಾಷ್ಟ್ರಲಿಪಿಯಲ್ಲಿ ಬರೆದಿದೆ.

ಜಯಲಕ್ಷ್ಮೀವಿಲಾಸಮುದ್ರಾಕ್ಷರಶಾಲಾ ದೊಡ್ಡಪೇಟೆ ಮೈಸೂರು.

PRINCIPAL

SEAL
of
NIZAM ALI
KHAN NIZA-
MUL MULK
DATED 1175-H.

ROYAL ORDER

Addressed to the Goomastas of Jagirdars, Desa Mukies, Desa Pandayas, Monegars, Potels, Farmers, &c., &c., in the Subhas of Deckan, Hyderabad.

Whereas the Vakeel of the *Sri Swami Jagadguru, Sumsthan Sringeri*, represents that the Sri Swami is about to set out on tour in the Deckan with certain insignia on the strength of a *Sunud* formerly issued by this Government; that the usual honors specified in the said *Sunud* issued under the seal of thist kingdom should be continued that the practice of offering to the Mutt annual contributions and nuzars during the occasion of marriage, &c., should be continned; that the Enams, Jagirs, &c., bestowed on the *Mutt* should be continued as before; and that no other Guru be allowed to travel about with the above said honors and insignia.

Wherefore it is directed thus:——

In accordance with the above representation the orders formerly issued in regard to the Guru's progress in this kingdom with the usual insignia, the usual *Istakabole, Bichsha Kanicay* (offering) of the people to the said Mutt are hereby renewed. It is further ordered that the property of such disciples of the said *Mutt* as may die *Bewaris* (without heirs) shall vest in the said *Mutt* and that the *Swami* is the supreme in the matter of the performance on the part of his disciples of their respective religious duties. This order will have reference to the following matters:——

1. The said swami will have authority in the Mulikarjoona and other temples.
2. *The Enams, Jagirs*, &c., bestowed on the *Mutt* to continue as before.
3. The elephants and horses in the possession of *Joisas* to be the property of the *Mutt.*.
4. The property of *Sunyasis, Avadhutas* and such others who may die without heirs to vest in the *Mutt.*
5. During the occation of marriages, &c., among the Mutt disciples, the first honors, *Nuzyrs*, &c., to be offered to the *Mutt.*
6. That out of the temple founds a contribution of one anna in the Rupee to be paid in to the *Mutt.*
7. That a portion of the allowance made for the *Lungurkhana* and *Kyrat* for Mussulmen *Fakeers* to be paid in to the *Mutt.*

Dated 24th Rubei Sani 1196 Higiri corresponding with the year A. D. 1779/80.
Registerd in the Huzur Dufter 3rd Jamadilevel in the year 1196 Hijiri.
Registerd in the Dewan's Dufter 1st Jamadilevel in the year 1196 Hijiri.
Copy registered in the Sultan's Dufter 1st Jamadi level in the year 1196 Hijiri corresponding to A. D. 1779—80.

The above is a translation from Persian language.

jayalakshmi vilasa press, mysore.

13

1895

No. 1796 & 1797.

Name of Petitioner, The Brahmins and

Village, other three castes of

Taluk, Nanjanagude, T Narsipur

~~Hatiyur & Coimbatore.~~

District, Mysore & Coimbatore

Date of Arzi, 28-10-95

Date of Receipt, 14-11-95

Date of Disposal,

No. of Enclosure, 6 each

ABSTRACT.

Counter petitions against Sri Vaishnavas' protest against the Sringeri Jagadguru's entry into the Runganathaswamy's temple at Seringapatam.

434

Bhn.

16/11 Red 21/11 Pet/1020. Encs 14.

Transferred to the S to the Govt. Muzarai

23 Nov 1895

By order

Ramaswamy

S No 1827
20

6

1827
18-11-95

ಮೈಸೂರು ಸಂಸ್ಥಾನದ ಎಗ್ಸಿಕ್ಯೂಟಿವ್ ಕೌನ್ಸಿಲ್ ಪ್ರೆಸಿಡೆಂಟ್ ಮತ್ತು ದಿವಾನ್ ಸರ್. ಕೆ. ಶೇಷಾದ್ರಿಯ್ಯನವರ ಸನ್ನಿಧಾನಂಗಳಿಗೆ.

—— o ——

ನಿವಾಸಿಗಳಾದ ಬ್ರಾಹ್ಮಣರು ಮೊದಲಾದ ಚತುರ್ವರ್ಣದ ಪ್ರಜೆಗಳು ಬರೆದುಕೊಂಡ ಅರ್ಜಿ—

ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳಸ್ವಾರಿಯು ಕಳೆದ ಜೂನ್‌ಮಾಹೆಯಲ್ಲಿ ಮೈಸೂರಿಗೆ ಬಿಜಯಂಗೈಯ್ಯುತ್ತಿದ್ದಕಾಲದಲ್ಲಿ ಶಿಷ್ಯಜನರ ಪ್ರಾರ್ಥನಪೂರ್ವಕ ಶ್ರೀರಂಗಪಟ್ಟಣದ ಕೋಟೆವಳಕ್ಕೆ ದಯಮಾಡಿಸಿ ಅಲ್ಲಿ ರಂಗನಾಥಸ್ವಾಮಿದೇವರ ದರ್ಶನವಂ ಮಾಡಿದ್ದಕ್ಕಾಗಿ ದೇವರಿಗೆ ಸಂಪ್ರೋಕ್ಷಣೆ ಆಗಬೇಕೆಂದು ಶ್ರೀವೈಷ್ಣವರಲ್ಲಿ ಕೆಲವರು „ಅ ಖಿ ಲ ವೈ ಷ್ಣ ವ ಸ ಭಾ,, ಎಂದು ದೊಡ್ಡ ಹೆಸರನ್ನಿಟ್ಟುಕೊಂಡು ಸರ್ಕಾರದಲ್ಲಿ ಫಿರ್ಯಾದುಮಾಡಿದ್ದರಮೇಲೆ ಸ್ಮಾರ್ತಜನಗಳು ಸಂಪ್ರೋಕ್ಷಣೆ ಮಾಡಕೂಡದೆಂದು ತಕರಾರುಮಾಡಿದ್ದಕ್ಕಾಗಿ ೧೮೯೫ನೇ ಇಸವಿ ಜೂನ್ ೨೩ನೇ ತಾರೀಖಿನಲ್ಲಿ ಮುಜರಾಯಿ ಸೂಪರಿಂಟೆಂಡೆಂಟರವರು ಖುದ್ದು ವಿಚಾರಣೆ ಮಾಡಿ ಗೌರ್ನಮೆಂಟಿಗೆ ಮಾಡಿದ ರಿಪೋರ್ಟನ್ನ ಪರಾಂಬರಿಸಿ ಗೌರ್ನಮೆಂಟನವರಿಂದ ತೀರ್ಮಾನದ ಹುಕುಂ ಕೊಡೋಣವಾಗಿರುತ್ತೆ. ಈತೀರ್ಮಾನವು ದ್ವೇಷಾಸೂಯಾಪರರಾದ ಕೆಲವರಿಗೆ ತೃಪ್ತಿಕರವಾಗವೆ ಅವರು ವರ್ತಮಾನಪತ್ರಿಕೆಗಳಿಂದ ಮನಸ್ವಿಚರ್ಚೆಯನ್ನು ಮಾಡುತ್ತಾ ಇರುವದಲ್ಲದೆ ತಮ್ಮ ಅಭಿಪ್ರಾಯದಂತೆ ಸಂಪ್ರೋಕ್ಷಣೆಗೆ ಹುಕುಂ ಕೊಡದೇಹೋದಲ್ಲಿ ಮತಸಮ್ಮಂಧವಾದ ಮರಣವನ್ನ ಹೊಂದುತ್ತೇವೆಂಬದಾಗಿ ಬರಿಯೋಣವೇ ಮುಂತಾದ್ದರಿಂದ ಗೌರ್ನಮೆಂಟನವರಿಗೆ ಘಾಬರಿಯನ್ನುಂಟುಮಾಡಿ ತನ್ಮೂಲಕ ನ್ಯಾಯಕ್ಕೆ ವಿರುದ್ಧವಾಗಿರತಕ್ಕ ತಮ್ಮ ಇಷ್ಟಾರ್ಥಗಳನ್ನ ಪಡಿಯಬೇಕೆಂದು ಪುನಃಪುನಃ ಶ್ರೀಮನ್ಮಹಾರಾಜ್ಞೀ ರೀಜಂಟರವರಿಗೂ ರಸಿಡೆಂಟ್ ಸಾಹೇಬರಿಗೂ ಅರ್ಜಿಯನ್ನು ಕೊಡುವದೇ ಮುಂತಾದ ಹಠಸಾಧನಾಪ್ರಯತ್ನದಲ್ಲಿರುತ್ತಾರೆ.

ಈ ವಿಚಾರವನ್ನ ಕುರಿತು ನಾವು ಗಾರ್ನಮೆಂಟಿಗೆ ಶೃತಪಡಿಸತಕ್ಕದ್ದೇನೂ ಇಲ್ಲದೇ ಇದ್ದಾಗ್ಯೂ ಪ್ರೊಸೀಡಿಂಗ್ಸಿನ ೪ನೇ ಪ್ಯಾರಾದಲ್ಲಿ ನಮೂದಿಸಿರುವ ಸಂದರ್ಭದಲ್ಲಿಯೂ ಶ್ರೀವೈಷ್ಣವರಿಗೆ ಶ್ರೀ ರಂಗನಾಥಸ್ವಾಮಿದೇವರಮೇಲೆ ಇರತಕ್ಕ ಹಕ್ಕುದಾರಿ ವಿಚಾರದಲ್ಲೂ ಅರಿಕೆಮಾಡಿಕೊಳ್ಳುವದನ್ನ ಘನತೆಯನ್ನ ಹೊಂದಿದ ಕೌನ್ಸಿಲ್ ಸಭೆಯವರು ಸಾವಧಾನವಾಗಿ ಪರ್ಯಾಲೋಚಿಸಬೇಕೆಂದು ಬೇಡುತ್ತೇವೆ.

೧ ನೇದು ಮೇಲ್ಕಂಡ ಪ್ರೊಸಿಡೆಂಗ್ಸಿನ ನಾಲ್ಕನೇ ಪ್ಯಾರಾ.

ವೇದೋಕ್ತ ಕರ್ಮಾನುಷ್ಠಾಯಿಗಳಾದ ಬ್ರಾಹ್ಮಣರಿಗೆ ವಿಧಿರೂಪವಾಗಿರುವ ಆಗಮಗಳಪ್ರಕಾರ ಪೂಜೆಗಳಂ ನಡೆಸಲ್ಪಡುವ ಒಂದು ದೇವಾಲಯದಲ್ಲಿ ಒಬ್ಬ ಮಠಾಧಿಪತಿಯಾದವರು ಪೂಜೆಮಾಡಬಹುದೆಂಬ ಸಾಮಾನ್ಯ ಜಿಜ್ಞಾಸೆಯನ್ನಾಗಲೀ ಅಥವಾ ಮಾಮೂಲ್ ಅನುಸರಿಸಿ ಶೃಂಗೇರಿಸ್ವಾಮಿಗಳವರಿಗೆ ಇಂಥಾ ವಿಷಯಗಳಲ್ಲಿ ಯಾವದಾದರೂ ವಿಶೇಷ ಬಾಧ್ಯತೆ ಉಂಟೆ ಎಂಬ ಮುಖ್ಯವಾದಜಿಜ್ಞಾಸೆಯನ್ನಾಗಲಿ, ಪ್ರಕೃತ ಮೊಕದ್ದಮೆಯನ್ನು ಫೈಸಲ್ ಮಾಡುವದರಲ್ಲಿ ಆಲೋಚಿಸಬೇಕಾದ್ದು ದೈವಾತ್ ಅನಾವಶ್ಯಕವಾಗಿದೆ. ಕಳೆದ ಜೂನ್ ತಿಂಗಳು ೧೦ನೇ ತಾರೀಖಿನಲ್ಲಿ ಶೃಂಗೇರಿಸ್ವಾಮಿಗಳವರು ದೇವರಿಗೆ ಪೂಜೆಮಾಡಬೇಕೆಂಬ ಉದ್ದೇಶ್ಯದೊಡನೆ ದೇವಾಲಯಕ್ಕೆ ದಯಮಾಡಿಸಿದವರಲ್ಲವೆಂದು ಹೇಳುವದು ಪ್ರಕೃತ ಮೊಕದ್ದಮೆಯವಸ್ಥೆಗೆ ಸಾಕಾದ್ದಾಗಿದೆ.

ವಿಷ್ಣುದೇವಾಲಯಗಳಲ್ಲಿ ಶೃಂಗೇರಿ ಜಗದ್ಗುರುಗಳವರು ಪೂಜೆಮಾಡತಕ್ಕದ್ದಕ್ಕೆ ಅವರಿಗೆ ವಿಶೇಷ ಬಾಧ್ಯತೆ ಇರತಕ್ಕದ್ದನ್ನ ವಿಚಾರಮಾಡತಕ್ಕದ್ದು ಈ ಮೊಕದ್ದಮಾ ತೀರ್ಮಾನಕ್ಕೆ ಮುಖ್ಯವಾದ ಅಂಶವಾಗಿತ್ತು.

ಹಾಗೆ ಮಾಡಿಸಿ ತೀರ್ಮಾನವನ್ನು ಅಪ್ಪಣೆಕೊಡಿಸಿದ್ದಪಕ್ಷದಲ್ಲಿ ಶ್ರೀವೈಷ್ಣವರು ಪುನಃಪುನಃ ಚರ್ಚಿಸುವದಕ್ಕೂ ಶೃಂಗೇರಿಮಠದ ಶಿಷ್ಯರಾದ ನಾಲ್ಕು ವರ್ಣದವರೂ ಈ ವಿಚಾರವಾಗಿ ಗೌರ್ನಮೆಂಟಿನವರಿಗೆ ತೊಂದರೆ ಕೊಡುವದಕ್ಕೂ ಅವಕಾಶವಾಗುತ್ತಿರಲಿಲ್ಲ. ಎಂಬುವದನ್ನು ಭಯಭಕ್ತಿಗಳೊಡನೆ ಅರಿಕೆ ಮಾಡಿಕೊಳ್ಳುತ್ತೇವೆಯೇ ಹೊರತು ಗೌರ್ನಮೆಂಟಿನವರ ನಡವಳಿಕೆಮೇಲೆ ಆಕ್ಷೇಪರೂಪವನ್ನಾಗಿ ಅರಿಕೆಮಾಡುವದಿಲ್ಲ ಎಂಬುವದನ್ನು ಘನವಾದ ಚಿತ್ತದಲ್ಲಿ ಲಾಲಿಸಬೇಕು.

೨ ಬ್ರಾಹ್ಮಣ್ಯವು ಕೆಲವು ಶತಮಾನಗಳ ಕೆಳಗೆ ಬೌದ್ಧರ ಪ್ರಾಬಲ್ಯದಲ್ಲಿ ಕ್ಷೀಣಗತಿಗೆ ಬಂದದ್ದರಿಂದ ದೇವಾಲಯ ಮೊದಲಾದವುಗಳೆಲ್ಲಾ ಬೌದ್ಧಾಕ್ರಾಂತಗಳಾಗಿರಲು ಶ್ರೀಮಚ್ಛಂಕರಭಗವತ್ಪಾದರವರು ಅವತಾರವಂಮಾಡಿ ಈ ದುರ್ಮತಗಳನ್ನೆಲ್ಲಾ ಖಂಡಿಸಿ ಬ್ರಾಹ್ಮಣ್ಯವನ್ನು ಜೀರ್ಣೋದ್ಧಾರಮಾಡಿ ಷಣ್ಮತಗಳನ್ನೂ ಸನ್ಯಾಸಾಶ್ರಮವನ್ನೂ ಶಿವವಿಷ್ಣ್ವಾದಿ ಪಂಚಾಯತನಾರಾಧನ ಕ್ರಮವನ್ನೂ ಸಹಾ ಶಾಸ್ತ್ರೀಯವಾದದ್ದೆಂದು ಸ್ಥಾಪಿಸಿದಂಥಾವರಾಗಿ ಅದರಂತೆ ತಾವು ಆಚರಣೆಮಾಡುತ್ತಾ ತಮ್ಮ ಶಿಷ್ಯಮಂಡಲಿಯಿಂದ ನಡೆಸುತ್ತಲೂ ಬಂದರು. ಅನ್ಯಮತಾಕ್ರಾಂತವಾಗಿ ನಾಮಾವಶಿಷ್ಟವಾಗಿದ್ದ ಆಸೇತು ಹಿಮಾಚಲಪರ್ಯಂತ ಇರತಕ್ಕ ದೇವಾಲಯಗಳಿಗೆಲ್ಲಾ ಪ್ರೋಕ್ಷ್ಯ ಅವುಗಳನ್ನು ವಿಧ್ಯುಕ್ತವಾಗಿ ಶುದ್ಧಿಮಾಡಿ ಶಿವವಿಷ್ಣುದೇವರುಗಳಿಗೆಲ್ಲಾ ಯಂತ್ರೋದ್ಧಾರ ಕುಂಭಾಭಿಷೇಕ ಮುಂತಾದ್ದನ್ನು ಶಾಸ್ತ್ರೋಕ್ತವಾದ ವಿಧಿಗಳಿಂದ ನಡಿಸಿ, ದೇವತಾಸಾನ್ನಿಧ್ಯ ಉಂಟಾಗುವಂತೆಮಾಡಿ ತಾವು ಸ್ವತಃ ಆ ದೇವರುಗಳನ್ನು ಪೂಜೆಮಾಡಿ ನಂತರ ಆಯಾಯ ಸ್ಥಲದಲ್ಲಿರತಕ್ಕ ಬ್ರಾಹ್ಮಣರಿಗೆ ಪೂಜೆಮಾಡುವದಕ್ಕೆ ಅಪ್ಪಣೆಕೊಡಿಸಿದರೆಂಬುವದು ಶಂಕರವಿಜಯ ಮೊದಲಾದ ಅನೇಕ ಗ್ರಂಥಗಳಿಂದ ತಿಳಿಯಬರುತ್ತೆ.

೩ ಶ್ರೀಶಂಕರ ಭಗವತ್ಪಾದರವರ ತರುವಾಯ ಆ ಪೀಠವನ್ನಲಂಕರಿಸಿದ ಗುರುಪರಂಪರೆಯವರೆಲ್ಲಾ ಮೇಲೆಹೇಳಿದ ಕ್ರಮದಲ್ಲೇ ಆಚಾರ ವಿಚಾರಗಳನ್ನು ಪರಾಮರ್ಶಿಸುವದಕ್ಕಾಗಿ ಸಂಚಾರ ಹೊರಟಕಾಲಗಳಲ್ಲಿ ಸಿಕ್ಕುವ ಶಿವವಿಷ್ಣು ದೇವಾಲಯಗಳಿಗೆ ದಯಮಾಡಿಸಿ ದೇವತಾರಾಧನೆಯನ್ನು ನಡೆಸುತ್ತಾ ಇದ್ದಾರೆ.

೪ ಏತನ್ಮಧ್ಯೆ ಅಂದರೆ ಶ್ರೀಶಂಕರಭಗತ್ಪಾದರವರು ಅವತಾರಮಾಡಿ ಮತಾಚಾರ ನಿಬಂಧನೆಗಳನ್ನು ಸ್ಥಿರಪಡಿಸಿದನಂತರ ಸುಮಾರು ಸಾವಿರಾರು ವರುಷಗಳವರಿಗೂ ಸ್ಮಾರ್ತರೇ ವಿಷ್ಣುದೇವಾಲಯಗಳಲ್ಲಿ ವೈದಿಕಾಗಮೋಕ್ತವಾದ ಪೂಜಾದಿಗಳನ್ನು ನಡೆಸುತ್ತಾಬಂದರು. ನಂತರ ಶ್ರೀ ರಾಮಾನುಜಾಚಾರ್ಯರವರು ಅವತಾರಮಾಡಿ ತಮ್ಮ ಮತಕ್ಕೆ ಸೇರಿಸಿಕೊಂಡವರಪೈಕಿ ಕೆಲವು ಸ್ಮಾರ್ತರು ವಿಷ್ಣುದೇವಾಲಯಗಳಲ್ಲಿ ಪೂಜಕರಾಗಿಯೂ, ಸ್ಥಾನೀಕ ಮುಂತಾದ ನೌಕರಿಯಲ್ಲಿಯೂ ಸೇರಿಕೊಂಡಿದ್ದರು. ಈ ನೌಕರಿಯಿಂದಲೇ ಅವರು ಜೀವಿಸುತ್ತಿದ್ದದ್ದರಿಂದ ಇವರಿಗೆ ಸಂಬಂಧಿಗಳಾಗಿಯೂ ಮಿತ್ರವರ್ಗದವರಾಗಿಯೂ ಇದ್ದ ಇತರ ಸ್ಮಾರ್ತಬ್ರಾಹ್ಮಣರು ಇವರ ಜೀವನಕ್ಕೆ ಉಪಹತಿಮಾಡುವದಕ್ಕೆ ಸಮ್ಮತವಿಲ್ಲದೆ ಇದ್ದದ್ದರಿಂದಲೂ ಇಂಥಾವರ ಪೂಜೆಯಿಂದ ದೇವರಸಾನ್ನಿಧ್ಯವು ಒಂದುವೇಳೆ ಕಡಮೆಯಾದಾಗ್ಯೂ ಶ್ರೀ ಜಗದ್ಗುರುಗಳವರು ಆಗಾಗ್ಯೆ ದಯಮಾಡಿ ದೇವರನ್ನು ಪೂಜಿಸೋಣದರಿಂದ ಕಳಾಸಾನ್ನಿಧ್ಯವೃದ್ಧಿಯಾಗುತ್ತೆಂತಲೂ ಇದರಿಂದ ತಾವು ದೇವತಾಪ್ರಸಾದವನ್ನು ಪರಿಗ್ರಹಿಸಬಹುದೆಂದು ಯೋಚಿಸಿ ತಟಸ್ಥರಾಗಿದ್ದರು. ಇದರನ್ನು ಕುರಿತು ಆಕ್ಷೇಪಿಸದೆ ಅವರುಗಳು ದೇವತಾರಾಧನೆ ಮಾಡಿಕೊಂಡು ಬರುವದಕ್ಕೆ ಅವಕಾಶಕೊಟ್ಟದ್ದರಿಂದಲೇ ಶ್ರೀ ಜಗದ್ಗುರುಗಳವರಿಗೆ ಸಮಸ್ತ ಪ್ರಾಣಿಗಳಲ್ಲಿಯೂ ಇರತಕ್ಕ ದಯಾಳುತ್ವವೂ ಬ್ರಾಹ್ಮಣವರ್ಣಕ್ಕೆ ಸೇರಿದ ಮತಾಂತರಸ್ಥರಲ್ಲಿಯೂಕೂಡ ಇರತಕ್ಕ ಅನುರಾಗವು ಜಗದ್ವಿಖ್ಯಾತವಾಗಿದ್ದಾಗ್ಯೂ ಇಂಥಾ ಮಹಾನುಭಾವರು ರಾಜರು ಮತ್ತು ರಾಷ್ಟ್ರದ ಕ್ಷೇಮಾರ್ಥವಾಗಿ ಶಿವವಿಷ್ಣು ದೇವಾಯಗಳಲ್ಲಿರತಕ್ಕ ದೇವರುಗಳಿಗೆ ಮಾಡತಕ್ಕ ಪೂಜೆಯು ಬಹುಕಾಲದಾರಭ್ಯ ಆಚಾರವಾಗಿ ನಡೆದುಬರುವಂಥಾದ್ದಾದಾಗ್ಯೂ ಇವರನ್ನು ಈ ಪೂಜಕರಾದ ಶ್ರೀವೈಷ್ಣವರು ದ್ವೇಷಾಸೂಯದಿಂದ ಈಚೀಚೆಗೆ ಅಡ್ಡಿಮಾಡುವದಕ್ಕೆ ಉಪಕ್ರಮಿಸಿದರು. ಅಂಥಾ ಸಂದರ್ಭಗಳಲ್ಲೆಲ್ಲಾ ಆಯಾಯ ಕಾಲದಲ್ಲಿದ್ದ ರಾಜರು ಈ ಪೂಜಕರಿಗೆ ನಿರ್ಬಂಧಪಡಿಸಿ, ಶ್ರೀಜಗದ್ಗುರುಗಳವರು ಪೂಜೆಮಾಡುವದಕ್ಕೆ ಅವಕಾಶಗೊಳಿಸಿದ್ದಲ್ಲದೆ ಕೆಲವು ಸಂದರ್ಭಗಳಲ್ಲಿ ನೌಕರಿಯಿಂದ ಇವರನ್ನು ಬರತರಫ್‌ಮಾಡೋಣದರಮೂಲಕ ಶಿಕ್ಷೆಯನ್ನು ಕೊಟ್ಟಿರುತ್ತಾರೆ. ಈಗ್ಯೆ ೫೮ ವರ್ಷಗಳಮುಂಚೆ ಅಂದರೆ ವಿಳಂಬಿಸಂವತ್ಸರದಲ್ಲಿ ಶ್ರೀಜಗದ್ಗುರುನರಸಿಂಹಭಾರತೀಸ್ವಾಮಿಗಳವರು ತಿರಮಕೂಡ್ಲು ನರಸೀಪುರದ ಶ್ರೀ ಗುಂಜಾನರಸಿಂಹಸ್ವಾಮಿಗೆ ಪೂಜೆಮಾಡುವಕಾಲದಲ್ಲಿ ಅಡ್ಡಿಪಡಿಸುವದಕ್ಕೆ ಬಂದ ದೇವಸ್ಥಾನದ ನೌಕರರಿಗೆ ನಿರ್ಬಂಧಪಡಿಸಿ ಶ್ರೀಗಳವರು ಕ್ರಮವಾಗಿ ಪೂಜೆಮಾಡುವದಕ್ಕೆ ಅವಕಾಶ

ವಂಕೊಡಿಸಿದ್ದಲ್ಲದೆ ಅಡ್ಡಿಮಾಡಿದ ಶ್ರೀವೈಷ್ಣವರನ್ನು ನೌಕರಿಯಿಂದ ವಜಾಮಾಡಿ ಇವರು ಮಾಡುತ್ತಿದ್ದ ನೌಕರಿಯನ್ನು ಸ್ಮಾರ್ತರಿಂದ ನಡಿಸುತ್ತಾಬಂದರು. ಆ ಕಾಲದಲ್ಲಿ ಸಂಭವಿಸಿದ ಆಗಮೋಕ್ತವಾದ ರಥೋತ್ಸವಾದಿಗಳನ್ನೂ ಸಹ ಸ್ಮಾರ್ತರೇನಡೆಯಿಸಿರುತ್ತಾರೆ. ಎಂಬುವದು ತಿರುಮಕೂಡಲುನರಶೀಪುರ ತಾಲ್ಲೂಕ ಮತ್ತು ಕಮಿಷನರ ಹುಜೂರು ರಿಕಾರ್ಡಿನಲ್ಲಿಯೂ ದಾಖಲೆ ಇರುತ್ತೆಂದು ತಿಳಿಯಬರುವದರಿಂದ ಅದರನ್ನೂ ಪರಾಮರಿಸಿದಲ್ಲಿ ವ್ಯಕ್ತಪಡುತ್ತೆ.

೫ ಶ್ರೀಜಗದ್ಗುರುಗಳವರು ಮೈಸೂರು ಶೀಮೆಯಲ್ಲಿರತಕ್ಕ ಪ್ರಸಿದ್ಧವಾದ ದೇವಾಲಯಗಳಲ್ಲಿರುವ ದೇವರುಗಳನ್ನ ಆರಾಧನೆ ಮಾಡುವದು ಮಾತ್ರವಲ್ಲದೆ ಮದ್ರಾಸು, ಬೊಂಬಾಯಿ, ಮುಂತಾದ ಪ್ರಸಿಡೆಂಸಿಯಲ್ಲಿರತಕ್ಕ ಆಗಮೋಕ್ತಾರಾಧನೆಗೆ ಒಳಪಟ್ಟಿರುವ ಪ್ರಸಿದ್ಧ ಶಿವ ವಿಷ್ಣುದೇವಾಲಯಗಳಲ್ಲಿಯೂ ದೇವತಾರಾಧನೆ ಮಾಡಿರುತ್ತಾರೆಂಬುವದು ಲೋಕಪ್ರಸಿದ್ಧವಾಗಿರುತ್ತೆ. ಅಂದರೆ ದಕ್ಷಿಣದೇಶದಲ್ಲಿ ಪ್ರಸಿದ್ಧವಾದ ದೇವಾಲಯಗಳು ತಿರುಪತಿ, ಶ್ರೀರಂಗ, ಕಾಂಚಿ, ಅನಂತಶಯನ, ದರ್ಭಶಯನ ಮುಂತಾದ ಸ್ಥಳಗಳಲ್ಲಿ ಅನೇಕಾವರ್ತಿ ಪೂಜೆ ಮಾಡಿರತಕ್ಕ ದಾಖಲೆಗಳಪೈಕಿ ಪ್ರಕೃತ ದೊರತಿರುವಷ್ಟರನ್ನೂ ಪರಾಂಬರಿಕೆ ಬಗ್ಯೆ ಹಾಜರ್ಮಾಡಿರುತ್ತೇವೆ. ಇದರಂತಯೆ ಈ ದೇಶದ ದೇವಾಲಯಗಳಲ್ಲಿ ಶ್ರೀಗಳವರು ದೇವತಾರಾಧನೆ ಮಾಡುವದಕ್ಕಾಗಿ ಅನೇಕ ರಾಜರು ಮತ್ತು ಅಧಿಕಾರಿಗಳು ಕೊಟ್ಟಿರತಕ್ಕ ಲಿಖಾವಟ್ಟುಗಳು ಸರಕಾರದಲ್ಲೂ, ಮತ್ತು ಶ್ರೀಮಠದಲ್ಲೂ, ಅನೇಕವಾಗಿರುತ್ತೆ. ಇವುಗಳಲ್ಲಿ ಪ್ರಕೃತ ನಮಗೆ ದೊರತಿರತಕ್ಕ ದಾಖಲೆಗಳು ಅಂದರೆ ಟೀಪ್ಪೂಸುಲ್ತಾನರು ಕೊಟ್ಟಿರತಕ್ಕ ಒಂದೆರಡು ಸನ್ನದಿನ ನಕಲು, ಈ ಸಂಸ್ಥಾನದ ರಾಜ್ಯಭಾರ ಬ್ರಿಟೀಷ್ ಆಫೀಸರ ಆಳ್ವಿಕೆಗೆ ಒಳಪಟ್ಟಿದ್ದಕಾಲ ಅಂದರೆ ೧೮೩೨ನೇ ಇಸವಿ ನಂದನಸಂವತ್ಸರದಲ್ಲಿ ಕಮಿಷನರ್ ಕ್ಯಾಷ್ ಮೆಜರ್ ಸಾಹೇಬರು ಕೊಟ್ಟಿರುವ ಒಟ್ಟು ಪರವಾನೆ ನಕಲನ್ನೂ, ಚೀಫ್ ಕಮಿಷನರ್ ಬೌರಿಂಗ್‌ಸಾಹೇಬರವರು ಇಂಡಿಯಾ ಗೌರ್ನಮೆಂಟಗೆ ಬರದ ಲೆಟರು, ಅದರ ಜವಾಬಿನ ನಕಲನ್ನೂ, ಹೈದರಾಬಾದ್ ಸರಕಾರದವರು ಕೊಟ್ಟಿರುವ ಸನ್ನದಿನ ತರ್ಜುಮಾನಕಲನ್ನೂ ಸಹ ಇದರ ಸಂಗಡ ಹಾಜರ್ಮಾಡಿರುತ್ತೇವೆ. ಈ ಪೈಕಿ ನಂದನ ಸಂವತ್ಸರದ ಒಟ್ಟು ಪರವಾನೆಯಲ್ಲಿ ನಮೂದಿಸಿರುವ ಮದ್ರಾಸ್ ಬಂಗಾಳಾ ಗೌವನರವರು ಕೊಟ್ಟಿರತಕ್ಕ ಲೆಟರುಗಳು ಮತ್ತು ದಿವಾನ್ ಪೂರ್ಣಯ್ಯನವರು ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರವರು ಕೊಟ್ಟಿರತಕ್ಕ ಸನ್ನದು ವಗೈರೆ ಕಾಗದಪತ್ರಗಳ ಸಂಖ್ಯೆ (೪೫) ಆಗುತ್ತೆ. ಇವುಗಳೆಲ್ಲಾ ಕಮಿಷನರ ಬಳಿಗೆ ಹಾಜರಾಗಿರುತ್ತೆಂಬುವದು ಸದರಿ ಒಟ್ಟು ಪರವಾನೆಯಿಂದಲೇ ಗೊತ್ತಾಗುತ್ತೆ. ಇವುಗಳು ವಾಪಸ್ ಆಗದೆ ಚೀಫ್‌ಕಮಿಷನರ ಆಫೀಸ್ ರಿಕಾರ್ಡಿನಲ್ಲಿರುತ್ತೆಂಬದಾಗಿ ಕೇಳುತ್ತೇವೆ. ಅವುಗಳನ್ನ ಪರಾಂಬರಿಸಬೇಕೆಂದು ಬೇಡುತ್ತೇವೆ.

೬ ಮೇಲೆ ನಮೂದಿಸಿರತಕ್ಕ ರಿಕಾರ್ಡುಗಳಿಂದ ಶ್ರೀ ಶೃಂಗೇರಿ ಜಗದ್ಗುರುಗಳವರಿಗೆ ಪ್ರಕೃತದಲ್ಲಿ ಪಾಂಚರಾತ್ರವೈಖಾನಸಾದಿ ಆಗಮೋಕ್ತವಾಗಿ ಆರಾಧಿಸಲ್ಪಡುತ್ತಿರುವ ಶಿವವಿಷ್ಣು ದೇವಾಲಯಗಳಲ್ಲಿರುವ ದೇವರುಗಳಿಗೆ ಸ್ವತಃ ಪೂಜೆಮಾಡತಕ್ಕ ವಿಶೇಷಬಾಧ್ಯತೆಯು ಮತ್ತು ಹಕ್ಕು ಉಂಟೆಂಬುವದು ರುಜುವಾತು ಆಗುವದು ಸರಿಯಷ್ಟೆ; ಪ್ರಕೃತ ಚರ್ಚೆಗೆ ಸಮ್ಮಂಧಪಟ್ಟ ಶ್ರೀರಂಗಪಟ್ಟಣದ ರಂಗನಾಥಸ್ವಾಮಿಯವರಿಗೆ ಶ್ರೀಗಳವರು ಸ್ವತಃ ಪೂಜೆಮಾಡುವ ಹಕ್ಕು ಉಂಟೆಂಬುವದಕ್ಕೆ ಮೇಲೆ ಹೇಳಲ್ಪಟ್ಟ ಟೀಪ್ಪೂಸುಲ್ತಾನರವರ ಸನ್ನದೇ ಸಾಕ್ಷಿಯಾಗಿರುವದಲ್ಲದೆ, ಇದಕ್ಕೆ ಅನುಸಾರವಾಗಿ ಪೂಜೆ ಮಾಡುತ್ತಿದ್ದರೆಂಬ ಸಂಗತಿಯನ್ನು ಹೇಳತಕ್ಕಂಥಾ ದೊಡ್ಡವಂಶೀಯರಾದ ಮಹಮ್ಮದೀಯರ್ ದೊಡ್ಡಮನುಷ್ಯರು ಅನೇಕರಿರುತ್ತಾರೆ. ಅವರನ್ನೂ ಸಾಕ್ಷ್ಯ ಕೊಡುವದರಲ್ಲಿ ಅಭ್ಯಂತರವಿರುವದಿಲ್ಲ. ಇದು ಅವಶ್ಯಕವಾದ್ದೆಂದು ತೋರುವಪಕ್ಷದಲ್ಲಿ ಗೌರ್ನಮೆಂಟಿನವರು ಅವರಿಂದಲೂ ತಿಳಿದುಕೊಳ್ಳಬಹುದು.

೭ ಶ್ರೀರಂಗಪಟ್ಟಣದ ಶ್ರೀ ರಂಗನಾಥದೇವರನ್ನ ಇಂಥಾವರು ಇಂಥಾಕಾಲದಲ್ಲಿ ಈ ರೀತಿಯಾಗಿ ಪ್ರತಿಷ್ಠೆ ಮಾಡಿದ ಸಂಗತಿ ನಿಸ್ಸಂದೇಹವಾಗಿ ಗೊತ್ತಾಗದೇ ಇದ್ದಾಗ್ಯೂ, ಇದು ಬಹಳ ಪುರಾತನವಾದದ್ದು. ಕೆಲವು ಶತಮಾನಗಳಕೆಳಗೆ ಗೌತಮಮಹರ್ಷಿಗಳು ಪೂಜಿಸುತ್ತಿದ್ದರೆಂಬುವದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರಷ್ಟೆ; ಮಹರ್ಷಿಗಳು ತಾಂತ್ರಿಕಾಗಮಾಪೇಕ್ಷಾಬದ್ಧರಾದವರಲ್ಲ; ಪಾಷಂಡಿಗಳೂ ಅಲ್ಲ. ಇವರುಗಳು ವೈದಿಕಾಗಮ್ಯದಲ್ಲಿ ಅರ್ಚನೆ ಮಾಡುತ್ತಿದ್ದರೆಂಬುವದು ಶಾಸ್ತ್ರಸಿದ್ಧವಾಗಿರುತ್ತೆ. ಅದನ್ನ ಅನುಸರಿಸಿಯೇ ಶ್ರೀಮಚ್ಛಂಕರಭಗವತ್ಪಾದರವರು ಈದೇವರನ್ನ ಅರ್ಚಿಸಿದರು. ಅದರಂತೆ ಅವರ ಪೀಠವನ್ನಲಂಕರಿಸಿದ ಗುರುಪರಂಪರೆಯವರೆಲ್ಲಾ ಪೂಜಿಸುತ್ತಾಬಂದರು. ಈ ಗೌತಮ ಮಹರ್ಷಿಗಳಿಗೆ ಗೋಹತ್ಯಾಪವಾದ ಸಂಘಟನೆ ಮಾಡಬೇಕೆಂದು ಕೆಲವು ದುಷ್ಟರಾದ ಬ್ರಾಹ್ಮಣರು ನಡೆಸಿದ ತಂತ್ರ ಅವರಿಗೆ ತಿಳಿದು ಇಂಥಾ ದುಷ್ಟಕೃತ್ಯ

ವನ್ನ ಮಾಡಿದ ಬ್ರಾಹ್ಮಣರು ಇವರ ವಂಶೀಯರು ತಪ್ತಮುದ್ರಾಂಕಿತರಾಗಿ ಪಾಂಚರಾತ್ರ ಶೈವಾದ್ಯಾಗಮದೀಕ್ಷಾಬದ್ಧರಾಗಿ ಕೆಟ್ಟುಹೋಗಲಿ, ಎಂದು ಶಾಪಕೊಟ್ಟರೆಂತ ಗ್ರಂಥಗಳು ಇರೋಣದರಿಂದ ಗೌತಮಋಷಿಗಳು ಪಾಂಚರಾತ್ರಾಗಮ ದೀಕ್ಷಾಬದ್ಧರಲ್ಲವೆಂಬುವದು ಸ್ಪಷ್ಟವಾಗುತ್ತೆ.

೮ ಶ್ರೀರಂಗಪಟ್ಣದ ಶ್ರೀರಂಗನಾಥದೇವರಿಗೆ ಹಿಂದೂಮತಕ್ಕೆ ಸೇರಿದ ನಾಲ್ಕು ವರ್ಣದವರೂ ಭಕ್ತರು. ಈಗ ಚರ್ಚೆಮಾಡುತ್ತಿರುವ ಶ್ರೀವೈಷ್ಣವರು ಈ ಭಕ್ತಸಮುದಾಯವೆಂಬ ಸಮುದ್ರದಲ್ಲಿ ಕೆಲವು ತುಂತುರೆಗಳಾಗಿರುತ್ತಾರೆ. ಆದಾಗ್ಯೂ ತಮ್ಮ ಮತಸ್ಥರು ಪ್ರಕೃತದಲ್ಲಿ ಪೂಜಕರಾಗಿರುತ್ತಾರಷ್ಟೆ ಆದ್ದರಿಂದ ದೇವರು ತಮ್ಮ ಸ್ವಂತ ಪದಾರ್ಥವೆಂದು ಭಾವಿಸುವ ದುರಭಿಮಾನ ವಿನಹ ಇತರ ಭಕ್ತರಿಗೆ ಇರತಕ್ಕದ್ದಕ್ಕಿಂತಲೂ ಬ್ಯಾರೆ ಯಾವ ವಿಧವಾದ ವಿಶೇಷ ಬಾಧ್ಯತೆಯೂ ದೇವರಲ್ಲಿ ಇವರಿಗೆ ಇರುವಹಾಗೆ ತೋರುವದಿಲ್ಲ. ಈ ದೇವಾಲಯವು ಸಂಸ್ಥಾನಕ್ಕೆ ಸೇರಿದ್ದು, ಸರ್ಕಾರದ ಜನರಲ್ ರೆವಿನ್ಯೂಯಿಂದ ಈ ದೇವರ ಆರಾಧನೆ ಖರ್ಚು ಸಲ್ಲುತ್ತಾಯಿದೆ. ದೇವರಿಗೆ ಧರಿಸತಕ್ಕ ವಸ್ತ್ರಾಭರಣಗಳಲ್ಲಿ ಪ್ರಾಯಶಃ ಮೈಸೂರು ಸಂಸ್ಥಾನದ ಮಹಾರಾಜರವರ ಸಂತತಿಯಿಂದಲೇ ಕೊಡಲ್ಪಟ್ಟದ್ದಾಗಿರುತ್ತೆ. ಭಕ್ತರಿಂದ ಕೊಡಲ್ಪಟ್ಟದ್ದು ಅತ್ಯಲ್ಪವಾಗಿದ್ದಾಗ್ಯೂ ಅದೂ ಸರ್ಕಾರಕ್ಕೆ ಸೇರಿದ್ದಾಗಿರುತ್ತೆ. ಹೀಗೆ ಸಂಸ್ಥಾನಕ್ಕೆ ಒಳಪಟ್ಟ ಬಾಧ್ಯತೆಯನ್ನ ಶ್ರೀವೈಷ್ಣವರಲ್ಲಿ ಕೆಲವರು ಮಾತ್ರ ತಮಗೇನೇ ಇರುವಂತೆ ಎಣಿಸಿ ಗದ್ದಲ ಮಾಡುವದು ಎಷ್ಟರಮಟ್ಟಿಗೆ ಊರ್ಜಿತವಪಡತಕ್ಕದ್ದೋ ಅದರನ್ನ ಗೌರ್ನಮೆಂಟಿನವರೇ ಆಲೋಚಿಸಬೇಕು. ಈ ಕಾರಣದಿಂದ ಇವರಿಗೆ ವಿಶೇಷ ಬಾಧ್ಯತೆ ಏನೂ ಇಲ್ಲದೇ ಇದ್ದಾಗ್ಯೂ ಚಿಪ್ಲ್ನಾಸಾರ್ಥವಾಗಿ ಇಥೆಯೊಂದು ಇಟ್ಟುಕೊಳ್ಳುವ ಸಂದರ್ಭದಲ್ಲಿಯೂ ಇವರ ಮತಸ್ಥಾಪಕರಾದ ಶ್ರೀರಾಮಾನುಜಾಚಾರ್ಯರವರ ಅವತಾರಕ್ಕಿಂತ ಸಾವಿರಾರು ವರುಷಗಳ ಹಿಂಪೆ ಶ್ರೀಮಚ್ಛಂಕರಭಗವತ್ಪಾದರವರು ಅವತಾರಮಾಡಿದರೆಂಬ ಅಂಶವನ್ನ ಶ್ರೀವೈಷ್ಣವರು ಒಪ್ಪಿಕೊಳ್ಳದೇ ಇದ್ದರೆ ವಿಧಿ ಇಲ್ಲವಷ್ಟೆ ಇದರಿಂದ ಶ್ರೀಜಗದ್ಗುರುಗಳವರಿಗೆ ಇರತಕ್ಕ ಬಾಧ್ಯತೆಯು ಇವರಿಗಿಂತ ಸಾವಿರಾರು ವರುಷಗಳಮಟ್ಟಿಗೂ ಪ್ರಾಚೀನವಾಗಿರುತ್ತೆಎಂಬುವದು ಸಾಮಾನ್ಯವಾಗಿ ಸಕಲರಿಗೂ ತಿಳಿಯಬರುವಂಥಾ ಅಂಶವು ಇವರಿಗೆ ತಿಳಿಯದೇ ಹೋದದ್ದು ಮಾತ್ರವಲ್ಲದೆ, ಶ್ರೀ ಜಗದ್ಗುರುಗಳವರಿಗೆ ಹಕ್ಕೇ ಇಲ್ಲವೆಂದು ಹೇಳುವದು ಪರ್ಯಾಲೋಚನೆ ಯಿಲ್ಲದಮಾತಾಗಿ ತೋರುತ್ತೆ ಅಥವಾ ಪ್ರಕೃತ ಸಂದರ್ಭದಲ್ಲಿ ಇವರುಮಾಡತಕ್ಕ ವ್ಯಾಜ್ಯವು ಊರ್ಜಿತವಾಗದೇ ಇದ್ದಾಗ್ಯೂ ಮುಂದೆ ಮಾಡಬೇಕಾಗುವ ಇಂಥಾ ವ್ಯಾಜ್ಯಗಳಿಗೆ ತಾವು ಫಿರ್ಯಾದಿಗಳಾಗಿ ನಿಲ್ಲುವದಕ್ಕೆ ಇದು ಬಾಧ್ಯತೆಯನ್ನ ಕೊಡತಕ್ಕ ಪ್ರಿಸೀಡೆಂಟಯಾನೆ ಪೀಠಿಕಾ ರಚನೆಯಾಗಿರುತ್ತೆಂದು ಭಾವಿಸಿರಬಹುದಾಗಿತೋರುತ್ತೆ.

೯ ಶ್ರೀರಂಗನಾಥದೇವರಿಗೆ ಸಂಪ್ರೋಕ್ಷಣೆ ಆಗಬೇಕೆಂದು ವ್ಯಾಜ್ಯಮಾಡುವರ ಸಂಖ್ಯೆಯು ಈ ದೇವರಲ್ಲಿ ಅಭಿಮಾನವಿರತಕ್ಕ ಮತ್ತು ಇವರಿಗೆ ಸಮಾನವಾಗಿ ಹಕ್ಕು, ಬಾಧ್ಯತೆವುಳ್ಳ ಇತರ ಭಕ್ತರ ಸಮುದಾಯ ಸಂಖ್ಯೆಗೂ ಮೊಕಾಬಿಲೆ ನೋಡಿದರೆ ಒಟ್ಟು ಸಮುದಾಯದಲ್ಲಿ ಲಕ್ಷ ಪ್ರಜೆಗೆ ವ್ಯಾಜ್ಯಮಾಡುವರು ಒಬ್ಬರೆಂದೂ ಕೂಡ ಗಣಿಸುವದಕ್ಕೆ ಸಾಲದ್ದಾಗಿರುತ್ತೆ. ಆದ್ದರಿಂದ ಶ್ರೀಜಗದ್ಗುರುಗಳವರು ಆಗಾಗ್ಯೆ ಶ್ರೀರಂಗನಾಥದೇವರ ಆರಾಧನೆಮಾಡತಕ್ಕದ್ದು ಸರ್ವಜನ ಸಮ್ಮತವಾದದೆಂದು ಸರ್ಕಾರದವರು ಧಾರಾಳವಾಗಿ ನಂಬತಕ್ಕದ್ದಾಗಿರುತ್ತೆ

೧೦ ಮೇಲೆ ಹೇಳಲ್ಪಟ್ಟಿರುವ ಸಂಗತಿಗಳೆಲ್ಲಾ ಸರ್ಕಾರೀ ವ್ಯಾವಹಾರಿಕರೀತ್ಯಾ ಶ್ರೀಜಗದ್ಗುರುಗಳವರಿಗೆ ಶ್ರೀ ರಂಗನಾಥದೇವರನ್ನ ಆರಾಧಿಸತಕ್ಕ ವಿಷಯದಲ್ಲಿರತಕ್ಕ ವಿಶೇಷ ಬಾಧ್ಯತೆಯನ್ನ ತೋರಿಸತಕ್ಕವುಗಳಾಗಿ ಇರುತ್ತವೆ. ಈ ಸಂಬಂಧವಾದ ಶಾಸ್ತ್ರಾಧಾರ ಅಪ್ರತಿಹತವಾದ ಸದಾಚಾರ ಮುಂತಾದ್ದರನ್ನ ಇದರಡಿಯಲ್ಲಿ ಶೃತಪಡಿಸಿರುತ್ತೇವೆ ಏನಂದರೆ.--

೧೧ ಶ್ರೀಜಗದ್ಗುರುಗಳವರು ಶ್ರೀ ರಂಗನಾಥದೇವರಿಗೆ ಅರ್ಚನೆ ಮಾಡತಕ್ಕದ್ದು ಪಾಂಚರಾತ್ರಾಗಮಕ್ಕೆ ವಿರುದ್ಧವಾಗಿರುತ್ತೆಂದು ಫಿರ್ಯಾದಿಗಳು ಹೇಳುವ ಅಂಶವನ್ನ ಖಂಡನೆಮಾಡತಕ್ಕ ಶಾಸ್ತ್ರ ಮತ್ತು ಆಚಾರವು ಹೇರಳವಾಗಿರುತ್ತೆ. ಆ ವಿಚಾರವನ್ನ ಪೂರ್ವಪಕ್ಷ ಸಮಾಧಾನ ಸಿದ್ಧಾಂತರೂಪವಾಗಿ ಶೃತಪಡಿಸಲು ಬಹಳ ವಿಳಂಬವಾಗುತ್ತಾದ್ದರಿಂದ ಸೂಕ್ಷ್ಮವಾಗಿ ಸಾಮಾನ್ಯಾಂಶಗಳನ್ನ ತಿಳಿಸದೆ ಇದ್ದರೆ ವಿಧಿಯಿಲ್ಲವಾಗಿ ತಿಳಿಸುವದೇನಂದರೆ:-- ಶೃತಿಸ್ಮೃತಿಗಳಲ್ಲಿ ಪರಸ್ಪರ ಭಿನ್ನಾಭಿಪ್ರಾಯಬಂದಾಗ್ಯೆ. ಶೃತಿಯೇ ಪ್ರಬಲವಾದದ್ದೆಂತಲೂ, ತದ್ವತ್ ಸ್ಮೃತಿ ಪುರಾಣಗಳಲ್ಲಿ ಸ್ಮೃತಿಬಲವಾದ್ದೆಂತಲೂ ಪುರಾಣ ಇತಿಹಾಸಾದಿಗಳಲ್ಲಿ ಪುರಾಣಬಲವಾದ್ದೆಂತಲೂ ಹೀಗೆ ಎಲ್ಲಾದ್ದರಲ್ಲಿಯೂ ಭಿನ್ನಾಭಿಪ್ರಾಯಗಳು ಬಂದಕಾಲದಲ್ಲಿ ಮಹಾಜನಗಳು ಅನುಸರಿಸಿ ನಡೆಸಿಕೊಂಡು

ಬರುವ ಆಚಾರವೇ ವಿಶಿಷ್ಟವಾದದ್ದೆಂತಲೂ ಈ ಆಚಾರದಲ್ಲಿ ನವೀನಗಳು ಪ್ರಾಚೀನಗಳು ಇರುತ್ತ ಪಕ್ಷ ಇವುಗಳಲ್ಲಿ ಪುರಾತನಕ್ಕೆ ಪ್ರಾಶಸ್ತ್ಯವಿರುತ್ತೆಂಬುವದು ಸಾಮಾನ್ಯವಾಗಿ ಸರ್ವರಿಗೂ ತಿಳಿದಿರುತ್ತೆ. ತೆಂಗ ಶ್ರೀವೈಷ್ಣವರು ಶ್ರೀರಂಗನಾಥದೇವರಿಗೆ ತಾವು ನಡಿಸತಕ್ಕ ಆರಾಧನೆಯು ಪಾಂಚರಾತ್ರಾಗಮಕ್ಕೆ ಒಳಪಟ್ಟಿರುತ್ತೆಂದೂನ್ನೂ ಇದು ಶ್ರೀವೈಷ್ಣವರು ದೇವಾಲಯಕ್ಕೆ ಸೇರಿದಾರಭ್ಯ ಆಚರಣೆಗೆ ತಂದಿರುತ್ತಾರೆಂತಲೂ ಗೊತ್ತಾಗಿರೋಣದರಿಂದ ಇವರ ಮತವೇ ನೂತನವಾಗಿರುವಲ್ಲಿ ಇವರ ಆಚಾರ ಪುರಾತನವಾಗಲಾರದಷ್ಟೆ; ಆದ್ದರಿಂದ ಇವರ ಆಚಾರವು ನವೀನಾಚಾರವೇ ಸರಿಯೆಂದು ಧಾರಾಳವಾಗಿ ಹೇಳಬಹುದು. ಶ್ರೀಜಗದ್ಗುರುಗಳವರು ಮಾಡತಕ್ಕ ಆರಾಧನೆಯು ರಾಮಾನುಜ ಮತಕ್ಕಿಂತ ಸಾವಿರಾರು ವರ್ಷಗಳ ಹಿಂದಿನಿಂದಾ ಆಚರಣೆಯಲ್ಲಿ ಇರುತ್ತಾಗಿ ಇದು ಪ್ರಾಚೀನವಾದ ಆಚಾರವೆಂಬುವದು ಸ್ಪಷ್ಟವಾಗಿರುತ್ತೆ. ಮತ್ತು ಶ್ರೀಜಗದ್ಗುರುಗಳವರು ಪರಮಹಂಸಾಶ್ರಮದಲ್ಲಿ ಮಹರ್ಷಿಗಳಂತೆ ಇರತಕ್ಕವರುಗಳಾದ್ದರಿಂದ ಇತರ ಗೃಹಸ್ಥಾಶ್ರಮಗಳಂತೆ ದೀಕ್ಷಾದಿ ವಿಧಿಗಳಿಗೆ ಬದ್ಧರಾಗುವದಿಲ್ಲ. ಇವರು ಎಲ್ಲಾ ದೀಕ್ಷಿತರಿಗಿಂತಲೂ ಶ್ರೇಷ್ಠವಾದವರು. ಮತ್ತು ಪಾಂಚರಾತ್ರಾಗಮದೀಕ್ಷೆಗೆ ಬದ್ಧರಲ್ಲದ ಗೌತಮಮಹರ್ಷಿಗಳು ಈ ದೇವರನ್ನ ಆರಾಧಿಸುತ್ತಾ ಇದ್ದರೆಂಬುವದು ಗ್ರಂಥಗಳಲ್ಲಿ ಹೇಳಲ್ಪಟ್ಟಿರುವವಲ್ಲದೆ ಇದರನ್ನ ಶ್ರೀವೈಷ್ಣವರೆ ಒಪ್ಪಿಕೊಳ್ಳುತ್ತಾರೆ. ಆಗ್ಯೆ ಇವರವೆಂದು ಹೇಳಿಕೊಳ್ಳುವ ಶ್ರೀರಂಗನಾಥದೇವರು ಹ್ಯಾಗೆ ಅಶುಚಿ ಆಗಲಿಲ್ಲವೋ ಅದರಂತೆಯೆ ಗೌತಮಮಹರ್ಷಿಗಳು ಮಾಡುತ್ತಿದ್ದ ವಿಧಿಯನ್ನ ಅನುಸರಿಸಿ ಶ್ರೀಜಗದ್ಗುರುಗಳವರ ಪರಂಪರೆಯವರೆಲ್ಲಾ ಆರಾಧಿಸತಕ್ಕದ್ದು ಅಶುಚಿತ್ವವನ್ನುಂಟುಮಾಡತಕ್ಕದ್ದಲ್ಲವೆಂಬುವದು ಮತ್ತು ಆದಿನಿಕರಿಂದ ಪ್ರತಿಷ್ಠಿತವಾದ ಬಿಂಬಕ್ಕೆ ಮಾಡತಕ್ಕ ಆರಾಧನೆಯಂತೆ ಶ್ರೀವೈಷ್ಣವರು ಈ ಅನಾದಿ ದೇವರಿಗೆ ಮಾಡುವ ಆರಾಧನೆಯಿಂದ ಉಂಟಾದ ದೋಷಗಳನ್ನ ಪರಿಹಾರ ಮಾಡತಕ್ಕ ಶ್ರೀಜಗದ್ಗುರುಗಳವರು ಮಾಡತಕ್ಕ ಆರಾಧನಾಕ್ರಮವು ಸದಾಚಾರವಾದ್ದೆಂತಲೂ ವಿಚಾರಣಾಪರರಾದವರು ತೀರ್ಮಾನಿಸದೆ ಇರಲಾರರು. ಈ ಮೇರೆ ಲೌಕಿಕಪಾರಮಾರ್ಥಿಕ ಎರಡುವಿಧವಾದ ನ್ಯಾಯಗಳು ಅಪೇಕ್ಷಿಸುವ ಸಮಾಧಾನರೂಪವಾದ ಸಂಗತಿಗಳನ್ನೆಲ್ಲಾ ಶೃತಪಡಿಸಿರುತ್ತೇವೆ.

೧೨ ಮೇಲೆ ವಿವರಿಸಲ್ಪಟ್ಟ ಗ್ರಂಥಗಳು, ರಾಜರು ಮುಂತಾದವರು ಕೊಟ್ಟಿರತಕ್ಕ ಸನ್ನದಿನ ದಾಖಲೆಗಳು ದೃಷ್ಟಾಂತಗಳು, ಚಿರಕಾಲಾರಭ್ಯ ನಡೆದುಬರುವ ಮಾಮೂಲು ಶಾಸ್ತ್ರಸಮ್ಮತವಾದ ಆಚಾರವು, ಸರ್ವಜನ ಸಮ್ಮತಿಯೂ, ಇವುಗಳೆಲ್ಲಾ ಶ್ರೀರಂಗನಾಥದೇವರನ್ನ ಆರಾಧಿಸತಕ್ಕದ್ದಕ್ಕೆ ಶ್ರೀಜಗದ್ಗುರುಗಳವರಿಗೆ ಇರತಕ್ಕ ವಿಶೇಷ ಪಕ್ಕಾಬಾಧ್ಯತೆಗಳನ್ನ ಸ್ಥಿರಪಡಿಸುತ್ತವೆ. ಇವುಗಳನ್ನೆಲ್ಲಾ ಘನವನ್ನ ಹೊಂದಿದ ಕೌನ್ಸಲ್ ಸಭೆಯವರು ಪರ್ಯಾಲೋಚಿಸತಕ್ಕ ಸಮಯದಲ್ಲಿ ಶ್ರೀಜಗದ್ಗುರುಗಳವರು ಈ ಮೇರೆ ದೇವತಾರಾಧನೆ ಮಾಡತಕ್ಕದ್ದು ಆ ಮಹಾನುಭಾವರ ಸ್ವಪ್ರಯೋಜನಕ್ಕಾಗಿ ಅಲ್ಲ. ರಾಜರು ಮತ್ತು ರಾಷ್ಟ್ರದ ಕ್ಷೇಮಾರ್ಥವಾಗಿ ಇವರುಗಳ ಅಪೇಕ್ಷೆಯನ್ನು ನೆರವೇರಿಸುವದಕ್ಕಾಗಿ ಮಾಡುತ್ತಾರೆ ಎಂಬುವದರನ್ನು ಮನಸ್ಸಿನಲ್ಲಿಟ್ಟುಕೊಂಡು ಘಾರಿಘಾರಿಗೂ ದುಷ್ಟರು ತೊಂದರೆ ಕೊಡುವದಕ್ಕೆ ಆಸ್ಪದವಿಲ್ಲದಂತೆ ನ್ಯಾಯವಾಗಿಯೂ, ಖಂಡಿತವಾಗಿಯೂ, ಇರುವ ತೀರ್ಮಾನವನ್ನ ಅಪ್ಪಣೆ ಕೊಡಿಸಬೇಕೆಂದು ವಿನಯಪೂರ್ವಕವಾಗಿ ಬರದುಕೊಂಡ ಅರ್ಜಿ.

ಜಯಲಕ್ಷ್ಮೀವಿಲಾಸ ಮುದ್ರಾಕ್ಷರಶಾಲಾ ದೊಡ್ಡಪೇಟೆ ಮೈಸೂರು.

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

189 5

No.	1827
Name of Petitioner,	Venkata Subba Shastri and others
Village,	
Taluk,	Siddlagatta
District,	Kolar
Date of Arzi,	
Date of Receipt,	18 - 11 95
Date of Disposal,	
No. of Enclosure,	Pet 1

ABSTRACT.

A counter petition against the Sri Vaishnava's protest against the Sringeri Jagad-guru's entry into the Ranga-nathaswamy's temple at Seringapatam.

B.Mu 22/11

Pet / 1023 Enc: 1 437

Transferred to the Secretary to the Government, Muzarai Dept.

By order

23 Nov 1895

[illegible] Ramaswami Aiyangar

For Rev. Secretary

1873 Refn 23/11/95

1873.R 23-11-95

ಮೈಸೂರು ಸಂಸ್ಥಾನದ ಎಗ್ಸಿಕ್ಯೂಟಿವ್ ಕೌನ್ಸಿಲ್ ಪ್ರಸಿಡೆಂಟ್ ಮತ್ತು

ದಿವಾನ್ ಸರ್. ಕೆ. ಶೇಷಾದ್ರ್ಯಯ್ಯನವರ

ಸನ್ನಿಧಾನಂಗಳಿಗೆ.

——:o:——

ಬೆಂಗಳೂರು ನಿವಾಸಿಗಳಾದ ಬ್ರಾಹ್ಮಣರು ಮೊದಲಾದ ಚತುರ್ವರ್ಣದ ಪ್ರಜೆಗಳು ಬರೆದುಕೊಂಡ ಅರ್ಜಿ—

ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳಸ್ವಾರಿಯು ಕಳೆದ ಜೂನ್‌ಮಾಹೆಯಲ್ಲಿ ಮೈಸೂರಿಗೆ ಬಿಜಯಂಗೈಯ್ಯುತ್ತಿದ್ದಕಾಲದಲ್ಲಿ ಶಿಷ್ಯಜನರ ಪ್ರಾರ್ಥನಪೂರ್ವಕ ಶ್ರೀರಂಗಪಟ್ಟಣದ ಕೋಟೆವಳಕ್ಕೆ ದಯಮಾಡಿಸಿ ಅಲ್ಲಿ ರಂಗನಾಥಸ್ವಾಮಿದೇವರ ದರ್ಶನವಂ ಮಾಡಿದ್ದಕ್ಕಾಗಿ ದೇವರಿಗೆ ಸಂಪ್ರೋಕ್ಷಣೆ ಆಗಬೇಕೆಂದು ಶ್ರೀವೈಷ್ಣವರಲ್ಲಿ ಕೆಲವರು "ಅ ಖಿ ಲ ವೈ ಷ್ಣ ವ ಸ ಭಾ" ಎಂದು ದೊಡ್ಡ ಹೆಸರನ್ನಿಟ್ಟುಕೊಂಡು ಸರ್ಕಾರದಲ್ಲಿ ಫಿರ್ಯಾದುಮಾಡಿದ್ದರಮೇಲೆ ಸ್ಮಾರ್ತಜನಗಳು ಸಂಪ್ರೋಕ್ಷಣೆ ಮಾಡಕೂಡದೆಂದು ತಕರಾರುಮಾಡಿದ್ದಕ್ಕಾಗಿ ೧೮೯೫ನೇ ಇಸವಿ ಜೂನ್ ೨೫ನೇ ತಾರೀಖಿನಲ್ಲಿ ಮುಜರಾಯಿ ಸೂಪರಿಂಟೆಂಡೆಂಟರವರು ಖುದ್ದು ವಿಚಾರಣೆ ಮಾಡಿ ಗೌರ್ನಮೆಂಟಿಗೆ ಮಾಡಿದ ರಿಪೋರ್ಟನ್ನು ಪರಾಂಬರಿಸಿ ಗೌರ್ನಮೆಂಟಿನವರಿಂದ ತೀರ್ಮಾನದ ಹುಕುಂ ಕೊಡೋಣವಾಗಿರುತ್ತೆ. ಈತೀರ್ಮಾನವು ದ್ವೇಷಾಸೂಯಾಪರರಾದ ಕೆಲವರಿಗೆ ತೃಪ್ತಿಕರವಾಗವೆ ಅವರು ವರ್ತಮಾನಪತ್ರಿಕೆಗಳಿಂದ ಮನಸ್ಸಿಚರ್ಚೆಯನ್ನು ಮಾಡುತ್ತಾ ಇರುವದಲ್ಲದೆ ತಮ್ಮ ಅಭಿಪ್ರಾಯದಂತೆ ಸಂಪ್ರೋಕ್ಷಣೆಗೆ ಹುಕುಂ ಕೊಡದೇಹೋದಲ್ಲಿ ಮತಸಂಬಂಧವಾದ ಮರಣವನ್ನ ಹೊಂದುತ್ತೇವೆಂಬದಾಗಿ ಬರಿಯೋಣವೇ ಮುಂತಾದ್ದರಿಂದ ಗೌರ್ನಮೆಂಟಿನವರಿಗೆ ಘಾಬರಿಯನ್ನುಂಟುಮಾಡಿ ತನ್ಮೂಲಕ ನ್ಯಾಯಕ್ಕೆ ವಿರುದ್ಧವಾಗಿರತಕ್ಕ ತಮ್ಮ ಇಷ್ಟಾರ್ಥಗಳನ್ನ ಪಡಿಯಬೇಕೆಂದು ಪುನಃಪುನಃ ಶ್ರೀಮನ್ಮಹಾರಾಜ್ಞೀ ರೀಜಂಟರವರಿಗೂ ರಸಿಡೆಂಟ್ ಸಾಹೇಬರಿಗೂ ಅರ್ಜಿಯನ್ನು ಕೊಡುವದೇ ಮುಂತಾದ ಹಠಸಾಧನಾಪ್ರಯತ್ನದಲ್ಲಿರುತ್ತಾರೆ.

ಈ ವಿಚಾರವನ್ನ ಕುರಿತು ನಾವು ಗಾರ್ನಮೆಂಟಿಗೆ ಶೃತಪಡಿಸತಕ್ಕದ್ದೇನೂ ಇಲ್ಲದೇ ಇದ್ದಾಗ್ಯೂ ಪ್ರೊಸೀಡಿಂಗ್ಸಿನ ೪ನೇ ಪ್ಯಾರಾದಲ್ಲಿ ನಮೂದಿಸಿರುವ ಸಂದರ್ಭದಲ್ಲಿಯೂ ಶ್ರೀವೈಷ್ಣವರಿಗೆ ಶ್ರೀ ರಂಗನಾಥಸ್ವಾಮಿದೇವರಮೇಲೆ ಇರತಕ್ಕ ಹಕ್ಕುದಾರಿ ವಿಚಾರದಲ್ಲೂ ಅರಿಕೆಮಾಡಿಕೊಳ್ಳುವದನ್ನ ಘನತೆಯನ್ನ ಹೊಂದಿದ ಕೌನ್ಸಿಲ್ ಸಭೆಯವರು ಸಾವಧಾನವಾಗಿ ಪರ್ಯಾಲೋಚಿಸಬೇಕೆಂದು ಬೇಡುತ್ತೇವೆ.

೧ ನೇದು ಮೇಲ್ಕಂಡ ಪ್ರೊಸಿಡಿಂಗ್ಸಿನ ನಾಲ್ಕನೇ ಪ್ಯಾರಾ. * * * * * * * *

* ವೇದೋಕ್ತ ಕರ್ಮಾನುಷ್ಠಾಯಿಗಳಾದ ಬ್ರಾಹ್ಮಣರಿಗೆ ವಿಧಿರೂಪವಾಗಿರುವ ಆಗಮಗಳಪ್ರಕಾರ ಪೂಜೆಗಳಂ ನಡೆಸಲ್ಪಡುವ ಒಂದು ದೇವಾಲಯದಲ್ಲಿ ಒಬ್ಬ ಮಠಾಧಿಪತಿಯಾದವರು ಪೂಜೆಮಾಡಬಹುದೆಂಬ ಸಾಮಾನ್ಯ ಜಿಜ್ಞಾಸೆಯನ್ನಾಗಲೀ ಅಥವಾ ಮಾಮೂಲ್ ಅನುಸರಿಸಿ ಶೃಂಗೇರಿಸ್ವಾಮಿಗಳವರಿಗೆ ಇಂಥಾ ವಿಷಯಗಳಲ್ಲಿ ಯಾವದಾದರೂ ವಿಶೇಷ ಬಾಧ್ಯತೆ ಉಂಟೆ ಎಂಬ ಮುಖ್ಯವಾದಜಿಜ್ಞಾಸೆಯನ್ನಾಗಲಿ, ಪ್ರಕೃತ ಮೊಕದ್ದಮೆಯನ್ನು ಫೈಸಲ್ ಮಾಡುವದರಲ್ಲಿ ಆಲೋಚಿಸಬೇಕಾದ್ದು ದೈವಾತ್ ಅನಾವಶ್ಯಕವಾಗಿಧೆ. ಕಳೆದ ಜೂನ್ ತಿಂಗಳು ೧೧ನೇ ತಾರೀಖಿನಲ್ಲಿ ಶೃಂಗೇರಿಸ್ವಾಮಿಗಳವರು ದೇವರಿಗೆ ಪೂಜಮಾಡಬೇಕೆಂಬ ಉದ್ದೇಶ್ಯದೊಡನೆ ದೇವಾಲಯಕ್ಕೆ ದಯಮಾಡಿಸಿದವರಲ್ಲವೆಂದು ಹೇಳುವದು ಪ್ರಕೃತ ಮೊಕದ್ದಮೇವ್ಯವಸ್ಥೆಗೆ ಸಾಕಾದ್ದಾಗಿಧೆ. *

ವಿಷ್ಣುದೇವಾಲಯಗಳಲ್ಲಿ ಶೃಂಗೇರಿ ಜಗದ್ಗುರುಗಳವರು ಪೂಜೆಮಾಡತಕ್ಕದ್ದಕ್ಕೆ ಅವರಿಗೆ ವಿಶೇಷ ಬಾಧ್ಯತೆ ಇರತಕ್ಕದ್ದನ್ನ ವಿಚಾರಮಾಡತಕ್ಕದ್ದು ಈ ಮೊಕದ್ದಮಾ ತೀರ್ಮಾನಕ್ಕೆ ಮುಖ್ಯವಾದ ಅಂಶವಾಗಿತ್ತು.

ವನ್ನು ಮಾಡಿದ ಬ್ರಾಹ್ಮಣರು ಇವರ ವಂಶೀಯರು ತಪ್ತಮುದ್ರಾಂಕಿತರಾಗಿ ಪಾಂಚರಾತ್ರ ಶೈವಾದ್ಯಾಗಮದೀಕ್ಷಾಬದ್ಧರಾಗಿ ಕೆಟ್ಟುಹೋಗಲಿ, ಎಂದು ಶಾಪಕೊಟ್ಟರೆಂತ ಗ್ರಂಥಗಳು ಇರೋಣದರಿಂದ ಗೌತಮಋಷಿಗಳು ಪಾಂಚರಾತ್ರಾಗಮ ದೀಕ್ಷಾಬದ್ಧರಲ್ಲವೆಂಬುವದು ಸ್ಪಷ್ಟವಾಗುತ್ತೆ.

೮ ಶ್ರೀರಂಗಪಟ್ಟಣದ ಶ್ರೀರಂಗನಾಥದೇವರಿಗೆ ಹಿಂದೂಮತಕ್ಕೆ ಸೇರಿದ ನಾಲ್ಕು ವರ್ಣದವರೂ ಭಕ್ತರು. ಈಗ ಚರ್ಚೆಮಾಡುತ್ತಿರುವ ಶ್ರೀವೈಷ್ಣವರು ಈ ಭಕ್ತಸಮುದಾಯವೆಂಬ ಸಮುದ್ರದಲ್ಲಿ ಕೆಲವು ತುಂತುರೆಗಳಾಗಿರುತ್ತಾರೆ. ಆದಾಗ್ಯೂ ತಮ್ಮ ಮತಸ್ಥರು ಪ್ರಕೃತದಲ್ಲಿ ಪೂಜಕರಾಗಿರುತ್ತಾರಷ್ಟೆ ಆದ್ದರಿಂದ ದೇವರು ತಮ್ಮ ಸ್ವಂತ ಪದಾರ್ಥವೆಂದು ಭಾವಿಸುವ ದುರಭಿಮಾನ ವಿನಹ ಇತರ ಭಕ್ತರಿಗೆ ಇರತಕ್ಕದ್ದಕ್ಕಿಂತಲೂ ಬ್ಯಾರೆ ಯಾವ ವಿಧವಾದ ವಿಶೇಷ ಬಾಧ್ಯತೆಯೂ ದೇವರಲ್ಲಿ ಇವರಿಗೆ ಇರುವಹಾಗೆ ತೋರುವದಿಲ್ಲ. ಈ ದೇವಾಲಯವು ಸಂಸ್ಥಾನಕ್ಕೆ ಸೇರಿದ್ದು, ಸರ್ಕಾರದ ಜನರಲ್ ರೆವಿನ್ಯೂಯಿಂದ ಈ ದೇವರ ಆರಾಧನೇ ಖರ್ಚು ಸಲ್ಲುತ್ತಾಯಿದೆ. ದೇವರಿಗೆ ಧರಿಸತಕ್ಕ ವಸ್ತ್ರಾಭರಣಗಳಲ್ಲಿ ಪ್ರಾಯಶಃ ಮೈಸೂರು ಸಂಸ್ಥಾನದ ಮಹಾರಾಜರವರ ಸಂತತಿಯಿಂದಲೇ ಕೊಡಲ್ಪಟ್ಟದ್ದಾಗಿರುತ್ತೆ. ಭಕ್ತರಿಂದ ಕೊಡಲ್ಪಟ್ಟದ್ದು ಅತ್ಯಲ್ಪವಾಗಿದ್ದಾಗ್ಯೂ ಅದೂ ಸರ್ಕಾರಕ್ಕೆ ಸೇರಿದ್ದಾಗಿರುತ್ತೆ. ಹೀಗೆ ಸಂಸ್ಥಾನಕ್ಕೆ ಒಳಪಟ್ಟ ಬಾಧ್ಯತೆಯನ್ನ ಶ್ರೀವೈಷ್ಣವರಲ್ಲಿ ಕೆಲವರು ಮಾತ್ರ ತಮಗೇನೇ ಇರುವಂತ ಎಣಿಸಿ ಗದ್ದಲ ಮಾಡುವದು ಎಷ್ಟರಮಟ್ಟಿಗೆ ಊರ್ಜಿತಪಡತಕ್ಕದ್ದೋ ಅದರನ್ನ ಗೌರ್ನಮೆಂಟಿನವರೇ ಆಲೋಚಿಸಬೇಕು. ಈ ಕಾರಣದಿಂದ ಇವರಿಗೆ ವಿಶೇಷ ಬಾಧ್ಯತೆ ಏನೂ ಇಲ್ಲದೇ ಇದ್ದಾಗ್ಯೂ ಚಿಹ್ನಾಸಾರ್ಥವಾಗಿ ಇದೆಯೆಂದು ಇಟ್ಟುಕೊಳ್ಳುವ ಸಂದರ್ಭದಲ್ಲಿಯೂ ಇವರ ಮತಸ್ಥಾಪಕರಾದ ಶ್ರೀರಾಮಾನುಜಾಚಾರ್ಯರವರ ಅವತಾರಕ್ಕಿಂತ ಸಾವಿರಾರು ವರುಷಗಳ ಹಿಂದೆ ಶ್ರೀಮಚ್ಛಂಕರ ಭಗವತ್ಪಾದರವರು ಅವತಾರಮಾಡಿದರೆಂಬ ಅಂಶವನ್ನ ಶ್ರೀವೈಷ್ಣವರು ಒಪ್ಪಿಕೊಳ್ಳದೇ ಇದ್ದರೆ ನಿಧಿ ಇಲ್ಲವಷ್ಟೆ ಇದರಿಂದ ಶ್ರೀಜಗದ್ಗುರುಗಳವರಿಗೆ ಇರತಕ್ಕ ಬಾಧ್ಯತೆಯು ಇವರಿಗಿಂತ ಸಾವಿರಾರು ವರುಷಗಳಮಟ್ಟಿಗೂ ಪ್ರಾಚೀನವಾಗಿರುತ್ತೆಎಂಬುವದು ಸಾಮಾನ್ಯವಾಗಿ ಸಕಲರಿಗೂ ತಿಳಿಯಬರುವಂಥಾ ಅಂಶವು ಇವರಿಗೆ ತಿಳಿಯದೇ ಹೋದದ್ದು ಮಾತ್ರವಲ್ಲದೆ, ಶ್ರೀ ಜಗದ್ಗುರುಗಳವರಿಗೆ ಹಕ್ಕೇ ಇಲ್ಲವೆಂದು ಹೇಳುವದು ಪರ್ಯಾಲೋಚನೆ ಯಿಲ್ಲದಮಾತಾಗಿ ತೋರುತ್ತೆ ಅಥವಾ ಪ್ರಕೃತ ಸಂದರ್ಭದಲ್ಲಿ ಇವರುಮಾಡತಕ್ಕ ವ್ಯಾಜ್ಯವು ಊರ್ಜಿತವಾಗದೇ ಇದ್ದಾಗ್ಯೂ ಮುಂದೆ ಮಾಡಬೇಕಾಗುವ ಇಂಥಾ ವ್ಯಾಜ್ಯಗಳಿಗೆ ತಾವು ಫಿರ್ಯಾದಿಗಳಾಗಿ ನಿಲ್ಲುವದಕ್ಕೆ ಇದು ಬಾಧ್ಯತೆಯನ್ನ ಕೊಡತಕ್ಕ ಪ್ರಸೀಡೆಂಟಾನೆ ಪೀಠಿಕಾ ರಚನೆಯಾಗಿರುತ್ತೆಂದು ಭಾವಿಸಬಹುದಾಗಿತೋರುತ್ತೆ.

೯ ಶ್ರೀರಂಗನಾಥದೇವರಿಗೆ ಸಂಪ್ರೋಕ್ಷಣೆ ಆಗಬೇಕೆಂದು ವ್ಯಾಜ್ಯಮಾಡುವರ ಸಂಖ್ಯೆಯು ಈ ದೇವರಲ್ಲಿ ಅಭಿಮಾನವಿರತಕ್ಕ ಮತ್ತು ಅವರಿಗೆ ಸಮಾನವಾಗಿ ಹಕ್ಕು, ಬಾಧ್ಯತೆವುಳ್ಳ ಇತರ ಭಕ್ತರ ಸಮುದಾಯ ಸಂಖ್ಯೆಗೂ ಮೊಕಾಬಿಲೆ ನೋಡಿದರೆ ಒಟ್ಟು ಸಮುದಾಯದಲ್ಲಿ ಲಕ್ಷ ಪ್ರಜೆಗೆ ವ್ಯಾಜ್ಯಮಾಡುವರು ಒಬ್ಬರೆಂದೂ ಕೂಡ ಗಣಿಸುವದಕ್ಕ ಸಾಲದ್ದಾಗಿರುತ್ತೆ. ಆದ್ದರಿಂದ ಶ್ರೀಜಗದ್ಗುರುಗಳವರು ಆಗಾಗ್ಯೆ ಶ್ರೀರಂಗನಾಥದೇವರ ಆರಾಧನೆಮಾಡತಕ್ಕದ್ದು ಸರ್ವಜನ ಸಮ್ಮತವಾದದೆಂದು ಸರ್ಕಾರದವರು ಧಾರಾಳವಾಗಿ ನಂಬತಕ್ಕದ್ದಾಗಿರುತ್ತೆ.

೧೦ ಮೇಲೆ ಹೇಳಲ್ಪಟ್ಟಿರುವ ಸಂಗತಿಗಳೆಲ್ಲಾ ಸರ್ಕಾರೀ ವ್ಯಾವಹಾರಿಕರೀತ್ಯಾ ಶ್ರೀಜಗದ್ಗುರುಗಳವರಿಗೆ ಶ್ರೀ ರಂಗನಾಥದೇವರನ್ನ ಆರಾಧಿಸತಕ್ಕ ವಿಷಯದಲ್ಲಿರತಕ್ಕ ವಿಶೇಷ ಬಾಧ್ಯತೆಯನ್ನ ತೋರಿಸತಕ್ಕವುಗಳಾಗಿ ಇರುತ್ತವೆ. ಈ ಸಂಬಂಧವಾದ ಶಾಸ್ತ್ರಾಧಾರ ಅಪ್ರತಿಹತವಾದ ಸದಾಚಾರ ಮುಂತಾದ್ದರನ್ನ ಇದರಡಿಯಲ್ಲಿ ಶೃತಪಡಿಸಿರುತ್ತೇವೆ ಏನಂದರೆ.--

೧೧ ಶ್ರೀಜಗದ್ಗುರುಗಳವರು ಶ್ರೀ ರಂಗನಾಥದೇವರಿಗೆ ಅರ್ಚನೆ ಮಾಡತಕ್ಕದ್ದು ಪಾಂಚರಾತ್ರಾಗಮಕ್ಕೆ ವಿರುದ್ಧವಾಗಿರುತ್ತೆಂದು ಫಿರ್ಯಾದಿಗಳು ಹೇಳುವ ಅಂಶವನ್ನ ಖಂಡನೆಮಾಡತಕ್ಕ ಶಾಸ್ತ್ರ ಮತ್ತು ಆಚಾರವು ಹೇರಳವಾಗಿರುತ್ತೆ. ಆ ವಿಚಾರವನ್ನ ಪೂರ್ವಪಕ್ಷ ಸಮಾಧಾನ ಸಿದ್ಧಾಂತರೂಪವಾಗಿ ಶೃತಪಡಿಸಲು ಬಹಳ ವಿಳಂಬವಾಗುತ್ತಾದ್ದರಿಂದ ಸೂಕ್ಷ್ಮವಾಗಿ ಸಾಮಾನ್ಯಾಂಶಗಳನ್ನ ತಿಳಿಸದೆ ಇದ್ದರೆ ವಿಧಿಯಿಲ್ಲವಾಗಿ ತಿಳಿಸುವದೇನಂದರೆ:-- ಶೃತಿಸ್ಮೃತಿಗಳಲ್ಲಿ ಪರಸ್ಪರ ಭಿನ್ನಾಭಿಪ್ರಾಯಬಂದಾಗ್ಯೆ ಶೃತಿಯೇ ಪ್ರಬಲವಾದದ್ದೆಂತಲೂ ಪ್ರತಿ ಸ್ಮೃತಿ ಪುರಾಣಗಳಲ್ಲಿ ಸ್ಮೃತಿಬಲವಾದ್ದೆಂತಲೂ ಪುರಾಣ ಇತಿಹಾಸಾದಿಗಳಲ್ಲಿ ಪುರಾಣಬಲವಾದ್ದೆಂತಲೂ ಹೀಗೆ ಎಲ್ಲಾದ್ದರಲ್ಲಿಯೂ ಭಿನ್ನಾಭಿಪ್ರಾಯಗಳು ಬಂದಕಾಲದಲ್ಲಿ ಮಹಾಜನಗಳು ಅನುಸರಿಸಿ ನಡೆಸಿಕೊಂಡು

ಬರುವ ಆಚಾರವೇ ಬಲಿಷ್ಟವಾದದ್ದೆಂತಲೂ ಈ ಆಚಾರದಲ್ಲಿ ನವೀನಗಳು ಪ್ರಾಚೀನಗಳು ಇರತಕ್ಕವು ಇವುಗಳಲ್ಲಿ ಪುರಾತನಕ್ಕೆ ಪ್ರಶಸ್ತ್ಯವಿರುತ್ತೆಂಬುವದು ಸಾಮಾನ್ಯವಾಗಿ ಸರ್ವರಿಗೂ ತಿಳಿದಿರುತ್ತೆ. ಈಗ ಶ್ರೀವೈಷ್ಣವರು ಶ್ರೀರಂಗನಾಥದೇವರಿಗೆ ತಾವು ನಡಿಸತಕ್ಕ ಆರಾಧನೆಯು ಪಾಂಚರಾತ್ರಾಗಮಕ್ಕೆ ಒಳಪಟ್ಟಿರುತ್ತೆಂದುನ್ನೂ ಇದು ಶ್ರೀವೈಷ್ಣವರು ದೇವಾಲಯಕ್ಕೆ ಸೇರಿದಾರಭ್ಯ ಆಚರಣೆಗೆ ತಂದಿರುತ್ತಾರೆಂತಲೂ ಗೊತ್ತಾಗಿರೋಣದರಿಂದ ಇವರ ಮತವೇ ನೂತನವಾಗಿರುವಲ್ಲಿ ಇವರ ಆಚಾರ ಪುರಾತನವಾಗಲಾರದಷ್ಟೆ; ಆದ ರಿಂದ ಇವರ ಆಚಾರವು ನವೀನಾಚಾರವೇ ಸರಿಯೆಂದು ಧಾರಾಳವಾಗಿ ಹೇಳಬಹುದು. ಶ್ರೀಜಗದ್ಗುರುಗಳವರು ಮಾಡತಕ್ಕ ಆರಾಧನೆಯು ರಾಮಾನುಜ ಮತಕ್ಕಿಂತ ಸಾವಿರಾರು ವರ್ಷಗಳ ಹಿಂದೆಯೇ ಆಚಾರದಲ್ಲಿ ಇರುತ್ತಾಗಿ ಇದು ಪ್ರಾಚೀನವಾದ ಆಚಾರವೆಂಬುವದು ಸ್ಪಷ್ಟವಾಗಿರುತ್ತೆ. ಮತ್ತು ಶ್ರೀಜಗದ್ಗುರುಗಳವರು ಪರಮಹಂಸಾಶ್ರಮದಲ್ಲಿ ಮಹರ್ಷಿಗಳಂತೆ ಇರತಕ್ಕವರುಗಳಾದ್ದರಿಂದ ಇತರ ಗೃಹಸ್ಥಾಶ್ರಮಗಳಂತೆ ದೀಕ್ಷಾವಿಧಿಗಳಿಗೆ ಬದ್ಧರಾಗುವದಿಲ್ಲ. ಇವರು ಎಲ್ಲಾ ದೀಕ್ಷಿತರಿಗಿಂತಲೂ ಶ್ರೇಷ್ಠವಾದವರು. ಮತ್ತು ಪಾಂಚರಾತ್ರಾಗಮದೀಕ್ಷೆಗೆ ಬದ್ಧರಲ್ಲದ ಗೌತಮಮಹರ್ಷಿಗಳು ಈ ದೇವರನ್ನ ಆರಾಧಿಸುತ್ತಾ ಇದ್ದರೆಂಬುವದು ಗ್ರಂಥಗಳಲ್ಲಿ ಹೇಳಲ್ಪಟ್ಟಿರುವದಲ್ಲದೆ ಇದರನ್ನ ಶ್ರೀವೈಷ್ಣವರೇ ಒಪ್ಪಿಕೊಳ್ಳುತ್ತಾರೆ. ಆಗ್ಯೆ ಇವರದೆಂದು ಹೇಳಿಕೊಳ್ಳುವ ಶ್ರೀರಂಗನಾಥದೇವರು ಹ್ಯಾಗೆ ಅಶುಚಿ ಆಗಲಿಲ್ಲವೋ ಅದರಂತೆಯೆ ಗೌತಮಮಹರ್ಷಿಗಳು ನಡಸುತ್ತಿದ್ದ ವಿಧಿಯನ್ನ ಅನುಸರಿಸಿ ಶ್ರೀಜಗದ್ಗುರುಗಳವರ ಪರಂಪರೆಯವರೆಲ್ಲಾ ಆರಾಧಿಸತಕ್ಕದ್ದು ಅಪವಿತ್ರತೆಯನ್ನುಂಟುಮಾಡತಕ್ಕದ್ದಲ್ಲವೆಂಬುವದು ಮತ್ತು ಆಧುನಿಕರಿಂದ ಪ್ರತಿಷ್ಠಿತವಾದ ಬಿಂಬಕ್ಕೆ ನಡಸತಕ್ಕ ಆರಾಧನೆಯಂತೆ ಶ್ರೀವೈಷ್ಣವರು ಈ ಅನಾದಿ ದೇವರಿಗೆ ಮಾಡುವ ಆರಾಧನೆಯಿಂದ ಉಂಟಾದ ದೋಷಗಳನ್ನ ಪರಿಹಾರ ಮಾಡತಕ್ಕ ಶ್ರೀಜಗದ್ಗುರುಗಳವರು ಮಾಡತಕ್ಕ ಆರಾಧನಾಕ್ರಮವು ಸದಾಚಾರವಾದ್ದೆಂತಲೂ ವಿಚಾರವಂತರಾದವರು ತೀರ್ಮಾನಿಸದೆ ಇರಲಾರರು. ಈ ಮೇರೆ ಲೌಕಿಕಪಾರಮಾರ್ಥಿಕ ಎರಡುವಿಧವಾದ ನ್ಯಾಯಗಳು ಅಪೇಕ್ಷಿಸುವ ಸಮಾಧಾನರೂಪವಾದ ಸಂಗತಿಗಳನ್ನೆಲ್ಲಾ ಶ್ರುತಪಡಿಸಿರುತ್ತೇವೆ.

೧೨. ಮೇಲೆ ವಿವರಿಸಲ್ಪಟ್ಟ ಗ್ರಂಥಗಳು, ರಾಜರು ಮುಂತಾದವರು ಕೊಟ್ಟಿರತಕ್ಕ ಸನ್ನದಿನ ದಾಖಲೆಗಳು ದೃಷ್ಟಾಂತಗಳು, ಚಿರಕಾಲಾರಭ್ಯ ನಡೆದುಬರುವ ಮಾಮೂಲು ಶಾಸ್ತ್ರಸಮ್ಮತವಾದ ಆಚಾರವು, ಸರ್ವಜನ ಸಮ್ಮತಿಯೂ, ಇವುಗಳೆಲ್ಲಾ ಶ್ರೀರಂಗನಾಥದೇವರನ್ನ ಆರಾಧಿಸತಕ್ಕದ್ದಕ್ಕೆ ಶ್ರೀಜಗದ್ಗುರುಗಳವರಿಗೆ ಇರತಕ್ಕ ವಿಶೇಷ ಹಕ್ಕುಬಾಧ್ಯತೆಗಳನ್ನ ಸ್ಥಿರಪಡಿಸುತ್ತವೆ. ಇವುಗಳನ್ನೆಲ್ಲಾ ಘನವನ್ನ ಹೊಂದಿದ ಕೌನ್ಸಲ್ ಸಭೆಯವರು ಪರ್ಯಾಲೋಚಿಸತಕ್ಕ ಸಮಯದಲ್ಲಿ ಶ್ರೀಜಗದ್ಗುರುಗಳವರು ಈ ಮೇರೆ ದೇವತಾರಾಧನೆ ಮಾಡತಕ್ಕದ್ದು ಆ ಮಹಾನುಭಾವರ ಸ್ವಪ್ರಯೋಜನಕ್ಕಾಗಿ ಅಲ್ಲ. ರಾಜರು ಮತ್ತು ರಾಷ್ಟ್ರದ ಕ್ಷೇಮಾರ್ಥವಾಗಿ ಇವರುಗಳ ಅಪೇಕ್ಷೆಯನ್ನು ನೆರವೇರಿಸುವದಕ್ಕಾಗಿ ಮಾಡುತ್ತಾರೆ ಎಂಬುವದರನ್ನು ಮನಸ್ಸಿನಲ್ಲಿಟ್ಟುಕೊಂಡು ಭಾರಿಭಾರಿಗೂ ದುಷ್ಟರು ತೊಂದರೆ ಕೊಡುವದಕ್ಕೆ ಆಸ್ಪದವಿಲ್ಲದಂತೆ ನ್ಯಾಯವಾಗಿಯೂ, ಖಂಡಿತವಾಗಿಯೂ, ಇರುವ ತೀರ್ಮಾನವನ್ನ ಅಪ್ಪಣೆ ಕೊಡಿಸಬೇಕೆಂದು ವಿನಯಪೂರ್ವಕವಾಗಿ ಬರಮಾಡಿಕೊಂಡ ಅರ್ಜಿ.

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

S. S. Esha Iyer

[illegible]

[illegible]

[illegible]

S. Venkata Rao

Subba Rao

[illegible]

वासुदेव शर्मा

नारायण शास्त्री

[illegible]

G. S. Subbaiah

[illegible]

D. R. Bhamarkar

H. Ramaiya

Narasimayya

[illegible]

B. Chaliyya

[illegible]

Sitaramaiah

Ganapathy Sastri

A Venkata Subba Rau

[illegible]

T. Narasingappah

[illegible]

B. Sivappa

[illegible]

[illegible]

[illegible]

K Subbramanyamshastry

[illegible]

[illegible]

పం। లక్ష్మీనారాయణ శాస్త్రి

[illegible]

V. Subba Rao

[illegible]

[illegible]

V. B. Soobbiah

[illegible]

Subba Rama

[illegible]

G. Sivaraman

[illegible]

[illegible]

[illegible]

[illegible]

K Lakshminarayaniah

[illegible]

[illegible]

వేంకటరామ [illegible]

[illegible]

[illegible]

GENERAL No. $\frac{2396}{101}$ OF 1868-69.

MYSORE COMMISSIONER'S OFFICE

Bangalore, 27th July, 1868.

TO

The Secretary to the Government of India

Foreign Department

SIMLA.

SIR,

In reply to para 2 of your letter 1201, dated 16th instant I have the honor to submit for the information of the Government of India the following explanation

2. The Sringeri Guru is the direct representative of the Swami Shunkara Acharya and is the acknowledged spiritual Director not only of the greater proportion of the Hindus of Southern India, but also of those of the leading Maharatta Houses, such as Holakr and the former Peshwas It may be said that his influence is far greater than that of any Hindu spiritual guide in India and I presume it is for this reason that he is regarded with such unlimited respect He is the only Guru in the Province who is permitted to carry the Addi Palkee or Cross Palankeen, and he has in his possession Sunuds of great antiquity from the Nizam, the Peshwas, the Mysore Rajah, Holkar and others all enjoining the utmost respect to be paid to him

3. Owing to the extraordinary veneration in which he has always been held, a biradari of Silledars has been attached to him from the earliest period and on the occasion of his visiting H. M Territory an extra escort has always been given to which purport the Guru holds several communications to and from the Madras Government.

4. The Guru enjoys Enam lands valued at more than half a lac in the Kadur District near the sources of the Toongabhadra river, and during his periodical tours in Mysore receives from his disciples large sums of money which he distributes in charity. The late Rajah used to pay him Rs. 1000 a month

5 The Guru Narsing Bhartee is a venerable old man of 72, who has been a great traveller and has a considerable reputation for learning He is deservedly respected, being very unassuming in manner and having a well established character for benevolence and wisdom.

6 I may observe that I do not think it expedient to curtail the Guru of his customary guard of honor, but I have endeavoured to dissuade him from proceeding to Her Majesty's Territory with any additional followers, although he can quote undoubted precedents for the practice.

I have, &.

(Signed) L. BOWRING,

Commissioner.

No. 1360.

FROM

W. S. SETON KARR, Esq.,

Secretary to the Government of India.

TO

THE COMMISSIONER OF MYSORE.

SIR,

I have the honor to acknowledge the receipt of your letter dated 27th ultimo, No. 2369/101, submitting an explanation in regard to the escort of Silledar Horse furnished to the Sringeri Guru.

2. In reply, I am directed to state that His Excellency the Viceroy and Governor General in Council accepts your explanation of the custom in force regarding the native gentleman and approves the views set forth in the 6th paragraph of the letter under acknowledgment.

I have the honor to be,
Sir.
Your most obedient Servant,
(Signed) W. S. SETON KARR,
Secretary to the Government of India,

SIMLA,
19th August 1868.

True copy,

(Signed) L. BOWRING.

ಕೈ॥ ರಿ॥ ನಂಬರು.
295.

ಶ್ರೀ ಶೃಂಗೇರಿ ಸ್ವಾಮಿಗಳವರ ಮಠಕ್ಕೆ ಸೇರಿದ ಸರ್ವ ಧರ್ಮಾಧಿಕಾರ
ಲಕ್ಷ್ಮೀನರಸಿಂಹಶಾಸ್ತ್ರಿಗಳಿಗೆ-- ಅಂಕಿ.

ಈ ದಿವಸ ಶ್ರೀ ಶೃಂಗೇರಿ ಸ್ವಾಮಿಗಳವರು ನರಶೀಪುರದ ಶ್ರೀ ಗುಂಜಾನರಸಿಂಹಸ್ವಾಮಿಯವರ ದೇವಸ್ಥಾನಕ್ಕೆ ದಯಮಾಡಿಸಿ, ಪೂಜೇ ಮುಂತಾದ್ದುಮಾಡಿ ಬರಬೇಕಾದ್ದರಿಂದ ಮಾಮೂಲ್ ಅನುಸರಿಸಿ ಮರ್ಯಾದಿ ಮುಂತಾದ್ದು ನಡಿಯಲು ಹುಕ್ಕುಂ ಆಗಬೇಕೆಂದು ವಗೈರೇ ನೀವು ಬರಸಿದ ಖತ್ತು ತಲಪಿತು,

ಶ್ರೀ ಶೃಂಗೇರಿ ಸ್ವಾಮಿಗಳವರು ಮಾಮೂಲ್ ಮತ್ತು ಪದ್ಧತಿ ಅನುಸರಿಸಿ ಶ್ರೀ ಗುಂಜಾನರಸಿಂಹಸ್ವಾಮಿಗಳವರ ದೇವಸ್ಥಾನಕ್ಕೆ ದಯಮಾಡಿಸಿ ಮಾಮೂಲ್ ಮತ್ತು ಪದ್ಧತಿ ಅನುಸರಿಸಿ ದೇವರಿಗೆ ಅರ್ಚನೆ ಕರ್ಪೂರಾರತಿ ಮಾಡಿ ದಯಮಾಡಿಸಬಹುದು. ಇದರಲ್ಲಿ ಗೈರ್‌ಮಾಮೂಲ್ ಮತ್ತು ಜನರ ನೆಮ್ಮದಿಗೆ ಭಂಗಕರವಾದ ಕೃತ್ಯ ನಡೆಯಲು ಆಕರಮಾಡಕೂಡದು. ಹಾಗೆ ಮಠದಕಡೆ ಜನರಿಂದ ಗಲಾಟೆಗೆ ಆಕರವಾದಲ್ಲಿ ರಿಗಲರ್‌ಪೋಲೀಸ್ ರೂಲ್ಸ್‌ಅನುಸರಿಸಿ ಅಂಥಾಜನರವಿಷಯದಲ್ಲಿ ನಡೆಸಲು ಆಸ್ಪದವಾದೀತೆಂಬ ಈಸಂಗತಿಗಳನ್ನೆಲ್ಲಾ ಶ್ರೀಸ್ವಾಮಿಗಳವರಿಗೆ ಅರಿಕೇಮಾಡಿ, ಮಾಮೂಲ್ ಮತ್ತು ಪದ್ಧತಿ ಅನುಸರಿಸಿ ನಡೆಯಬೇಕಾಗಿದೆ. ಅದಕ್ಕೆ ವಿರೋಧವಾದ ಯಾವ ಕೃತ್ಯವೂ ನಡೆಯಬಾರದು. ಈ ವಿಷಯವನ್ನು ಕುರಿತು ದೇವಸ್ಥಾನದ ನೌಕರಿಗೂ ಹುಕ್ಕುಂ ಕೊಟ್ಟು ಉಸ್ತುವಾರೀಗೆ ಪೋಲೀಸ್ ಇಲಾಖೆಯವರಿಗೂ ತಿಳಿಯಪಡಿಸಿದೆ:

7—9—76.
ನರಶೀಪುರ ತಾಲ್ಲೂಕ್
ತಲಕಾಡು.

(Sd) *M. SHAIK IBRAHIM.*

ಫ- ಮೆ-

ತಲ್ಕಾಡು ತಾಲ್ಲೂಕ್
ಮೇಜಸ್ಟ್ರೇಟರ
ಮೊಹರು.

ಜಯಲಕ್ಷ್ಮೀವಿಲಾಸಮುದ್ರಾಕ್ಷರಶಾಲಾ ದೊಡ್ಡಪೇಟೆ ಮೈಸೂರು.

ಮುಲ್ಕಿ ೫೧ ನಂಬರು.
೭೯

ನರಶೀಪುರದ
ತಾಲ್ಲೂಕ ಮೊಹರು

ನರಶೀಪುರದ ತಾಲ್ಲೂಕು ಕಚೇರಿಯಿಂದ.

ಕಸಬಾ ಲಕ್ಷ್ಮೀನರಸಿಂಹಸ್ವಾಮಿಯವರ ದೇವಸ್ಥಾನದ ಪಾರುಪತ್ಯಗಾರ ಕೃಷ್ಣಪ್ಪನವರಿಗೆ

ಇಂತಾರ್ಸ ಹುಕ್ಕುಂ.

ಶ್ರೀ ಶೃಂಗೇರಿ ಜಗದ್ಗುರುಗಳಾದ ನರಸಿಂಹಭಾರತೀಸ್ವಾಮಿಗಳವರು ನರಶೀಪುರಕ್ಕೆ ಚಿತ್ತೈಸಿದ್ದಾಗ್ಯೆ ದೇವರಪೂಜಾ ಮಂಗಳಾರತಿ ಪಾದಕಾಣಿಕೆ ಮುಂತಾದ್ದು ಮಾಡುವದಕ್ಕೆ ಮಾಮೂಲ್‌ಮೇರೆ ಸದರೀ ಲಕ್ಷ್ಮೀನರಸಿಂಹಸ್ವಾಮಿಯವರ ದೇವಸ್ಥಾನಕ್ಕೆ ದಯಮಾಡಿಸಿದ್ದವೇಳೆ ಅರ್ಚಕ ಕೃಷ್ಣಭಟ್ಟ ಬಾಗಿಲು ಹಾಕಿಕೊಂಡಿದ್ದನಿಮಿತ್ಯ ಸ್ವಲ್ಪಹೊತ್ತು ಸ್ವಾಮಿಗಳವರು ಬಾಗಿಲು ತೆಗೆಯತಕ್ಕದ್ವರ ನಿರೀಕ್ಷಣೆಮಾಡುವಂತೆ ಮಾಡಲ್ಪಟ್ಟ ಸದರಿ ಅರ್ಚಕನಿಗೆ ಬಂದೋಬಸ್ತು ಆಗತಕ್ಕ ವಿಷಯದಲ್ಲಿ ನೀನು ಹುಜೂರು ಫಿರ್ಯಾದ್‌ಮಾಡಿದ್ದಕ್ಕೆ ತಾಲ್ಲೂಕಿನಿಂದ ಜಾಹಿರ್ಮಾಡಿದ್ದ ರಿಪೋರ್ಟಿನಮೇರೆ ಈ ದಫಾಕ್ಕೆ ನಿಮ್ಮ ಮುನಾಸಬ್ ಅರ್ಚಕನಿಗೆ ಜರ್ಮಾನೆವಿಧಿಸಿ ಫೈಸಲ್‌ಮಾಡುವಂತೆ ಕೊಟ್ಟಿರುವ ಹುಕ್ಕುಂ ಅಮಲ್‌ಜಾರಿ ಆಗಿರುವ ತಪ್ಸೀಲನ್ನ ಅರ್ಜೀದಾರಗೆ ತಿಳಿಸುವಂತೆ ಸರ್ ಮಜಕೂರು ಮೆ ೧೨ನೇ ಮಾರ್ಚ್ ಮುಜರಾಯಿ ೧ನೇ ನಂಬರು ಹುಕ್ಕುಂ ಸಾದರಾದಕಾರಣ ಈ ಮೊಕದ್ದಮಾ ಕಟ್ಟು ಮುತಾದ ಕಾಗದ ಪತ್ರಗಳ ನೋಡುವಾಗ್ಯೆ ಕೂಡ್ಲೆ ಅರ್ಚಕ ಬಾಗಿಲು ತೆಗದ್ದಾಗಿಯೂ ಶ್ರೀ ಸ್ವಾಮಿಗಳವರು ಕಟ್ಲೇಪ್ರಕಾರ ಪೂಜಾ, ಪಾದಕಾಣಿಕೆ, ಮಂಗಳಾರತಿ ಮುಂತಾಗಿ ನೆರವೇರಿಸಿದಬಳಿಕ ಮಾಮೂಲ್‌ಮೇರೆ ಮರಿಯಾದೆ ನಡೆಸಿರುವದಾಗಿ ಅರ್ಚಕ ಕೃಷ್ಣಭಟ್ಟನಕೈಫಿಯತಿನಿಂದ ತಿಳಿಯಬರುವದಲ್ಲದೆ ದೇವಸ್ಥಾನದ ಬಾಗಿಲು ಹಾಕಿದ ತಪ್ಸಿತಕ್ಕಾಗಿ ಸರ್ ೧೮೬೬ನೇ ಇಸವಿ ಏಪ್ರಿಲ್ ೧೬ನೇ ಮಾರ್ಚ್ ಮುಜರಾಯಿ ೪೦ನೇ ನಂಬರು ಹುಕ್ಕುಂ ಪ್ರಕಾರ ಈ ದಫಾಕ್ಕೆ ಸದರಿ ಅರ್ಚಕ ಕೃಷ್ಣಭಟ್ಟನಿಗೆ ೨ರೂಪಾಯಿ ಜರ್ಮಾನೆ ಮೊಕರರ್‌ಮಾಡಿ ವಸೂಲ್ಮಾಡಿರುತ್ತೆ. ತಿಳಿಯುವದು. ತಾರೀಖು ೧೮ನೇ ಮಾಹೆ ಜೂನ್ ಸರ್ ೧೮೬೬ನೇ ಇಸವಿ ಮೊಕ್ಕಾಂ ಕಸಬಾ. . . ..

ಜೂನ್ ತಾರೀಖು ೨೦ರಲ್ಲು ದಾಖಲ್.

ರುಜು ನಾರಾಯಣರಾವ್ ಮಾಮಲೇದಾರ್,
ಎಂದು ಮಹಾರಾಷ್ಟ್ರಲಿಪಿಯಲ್ಲಿ ಬರುಜಿ.

ಜಯಲಕ್ಷ್ಮೀವಿಲಾಸಮುದ್ರಾಕ್ಷರಶಾಲಾ ದೊಡ್ಡಪೇಟೆ ಮೈಸೂರು.

मोहर.

श्री.

॥ जगद्गुरुयाच ॥

हे संस्थान च विशिष्ट आमील व शिरस्तेदार यास लिहिवाबुन पाठविल संनद वैगेरि विला ऐसाजे आमीला न शिरस्तेदारा न हाल इस्तकबाल मोकदंमा निमुजारे या सरकार दारुल रियासत मैहिसूर विदानद ॥ ॥ श्री श्रिंगेरी ॥ ॥ श्रीमठाहून मटमुद्र ब्राह्मण एउन तुमच तुमच तालूकेंत मामूलप्रकार त्याच शिष्यवर्गा च वर्णाश्रम च आचारविचार विचारणाकरुन घेउन श्रीमठासएणे च चरणकाणिका मूलानक्षत्रकाणिका अग्रतांबूल दीपराधनकाणिका प्रायश्चित्तकाणिका सुदा शिष्यवर्गलोका कडून एणे सारीख करुन घेणेच्या विषयांत हि कोणी तरी काणिका देइनाते मुद्रा अतिक्रमवाणि चा ललतरि त्यास ताकीद करुन बंदोबस्त करवाउन देणेच्या सही सदरी शिष्या कडून वसूल जाहलेतें काणक्यास कोणि जकात वसूल करिना सारिखहि श्री श्रिंगेरी श्रीमठास पूर्वापासून मिळालते शिष्यमंडलींत वाइट जाहलेते वाइकास श्रीमटच हवाला करुन रशीद घेणे विशया सहि सदरी श्रीमठास मिळालते ब्राह्मण सुदा समस्त इतर वर्णाश्रमांत हि सुदा त्यात्या वर्णाश्रमप्रकार त्यात्या कालांत उपनयन विवाह प्रायश्चित्त वगैरे करुन घेणेच विषयांत ही सरकारवालेनि प्रवेश करितानये ह्मणुन हि श्री श्रिंगेरि ॥ ॥ याच सवारिहि कोणत कोणतग्रामास आलियाहि तुमचतुमच तालूक सरहदेंत त्यात्या स्थलांत असणेच शिवालय विष्णु आलय वगैरे देवस्थानांतहि असणेच सदरि देवास श्री श्रियालि पूजा करणेबदल सोडून देणेविषइ सुदा याप्रकार निरोपव्हाव ह्मणून हजूर शिरस्तेदार तिरमलपंडित व आणि धावपैया व श्रीमठाधिकार पद्मनाभशास्त्रि यांणि सुदा हजूरात अर्जकरून घेतलकरिता त्यास निरोपदेणेच काय ह्मणिजे सदरी प्रमाणे वरिलिहिले सारिख केव्हाहि चालून घेउन एणेच नव्हत हेसंनदच नकल प्रति तालूकेच शिरस्तेदाराच दफ्तरास दाखल करुन घेउन असल संनद सदरि तिरमलपंडित याच सुफर्देसहो पद्मनाभशास्त्रीयाच सुफर्देसहो वापस देणेच आहे जाणीजे तारीख २५ वि आहे दिनिसालमाहोर संन १२२१ने मरकुंम प्रमादीच संवत्सर कार्तीकमास खत लक्षीनारणैया मुनषी हजूर.

हेजागि फारषींत टीपू सुलतानयाच दस्तखतआहे.

हे जागि चारि महाराष्ट्र दफ्तरदाराच दाखला आहे.

मोहर.

हे जागि फारषीत संनददाखला आहे.

SEAL
of
NIZAM ALI
KHAN NIZA-
MUL MULK
DATED 1175-H

PRINCIPAL ROYAL ORDER

Addressed to the Goomastas of Jagirdars, Desa Mukhs, Desa Pandayas, Monegars, Potels, Farmers, &c., &c , in the Subhas of Deckan, Hyderabad.

Whereas the Vakeel of the *Sri Swami Jagadguru*, *Sumsthan Sringeri*, represents that the Sri Swami is about to set out on tour in the Deckan with certain insignia on the strength of a S*unud* formerly issued by this Government; that the usual honors specified in the said S*unud* issued under the seal of thist kingdom should be continued that the practice of offering to the Mutt annual contributions and nuzars during the occasion of marriage, &c , should be continued, that the Enams, Jagirs, &c , bestowed on the *Mutt* should be continued as before; and that no other Guru be allowed to travel about with the above said honors and insignia

Wherefore it is directed thus:——

In accordance with the above representation the orders formerly issued in regard to the Guru's progress in this kingdom with the usual insignia, the usual *Istakabole*, *Buchsha Kanicay* (offering) of the people to the said Mutt are hereby renewed. It is further ordered that the property of such disciples of the said *Mutt* as may die *Bewaris* (without heirs) shall vest in the said *Mutt* and that the *Swami* is the supreme in the matter of the performance on the part of his disciples of their respective religious duties. This order will have reference to the following matters:——

1. The said swami will have authority in the Mulikarjoona and other temple
2. *The Enams*, *Jagirs*, &c , bestowed on the *Mutt* to continue as before
3. The elephants and horses in the possession of *Jousas* to be the property of the *Mutt*.
4. The property of *Sunyasis*, *Avadhutas* and such others who may die without heirs to vest in the M*utt*
5. During the occation of marriages, &c , among the Mutt disciples, the first honors, *Nuzurs*, &c., to be offered to the M*utt*.
6. That out of the temple founds a contribution of one anna in the Rupee to be paid in to the M*utt*.
7. That a portion of the allowance made for the *Lunqurkhana* and *Kyrat* for Mussulmen *Fakeers* to be paid in to the M*utt*

Dated 24th Rubei Sani 1196 Higiri corresponding with the year A. D. 1779 80.
Registerd in the Huzur Dufter 3rd Jamadilevel in the year 1196 Hijiri.
Registerd in the Dewan's Dufter 1st Jamadilevel in the year 1196 Hijiri
Copy registered in the Sultan's Dufter 1st Jamadi level in the year 1196 Hijiri corresponding to A. D. 1779—80.

The above is a translation from Persian language

jayalakshmi vilasa press, mysore.

ಕಮಿಶಾಷನರಯಾನೆ ಇಲಾಖಾ ಸರಕಾರ ಕುಂಫನಿ ಬಹದ್ದೂರವರ ಪ್ರಾಂತ್ಯ,

ಮೈಸೂರು

ನಂದನಸಂವತ್ಸರದ ಭಾದ್ರಪದ ಶುದ್ಧ ೧೧ ಯಲ್ಲೂ ಅರಮನೆಶೀಮೊಗಡಿಗಳ ಅವಿಸಾಲರವರಿಗೆ ಬರೆಸಿ ಕಳುಹಿಸಿದ ನಿರೂಪ ಅದಾಗಿ:---

ಶ್ರೀ ಶ್ರಿಂಗೇರೀಜಗದ್ಗುರುಗಳವರ ಶ್ರೀ ಮಠದಿಂದ ಮಠವುದ್ರೆ, ಬ್ರಾಹ್ಮಣರುಯಿಂದು ನಿಮ್ಮ ನಿಮ್ಮ ತಾಲ್ಲೂಕಿನಲ್ಲಿ ಮಾಮೂಲ್ಮೇರಿಗೆ ಅವರ ಶಿಷ್ಯವರ್ಗಗಳ ಶ್ರೀ ಮಠದ ಆಚಾರವಿಚಾರ ವಿಚಾರಿಸಿಕೊಂಡು ಶ್ರೀ ಮಠಕ್ಕೆ ಬರತಕ್ಕ ಚರಣಕಾಣಿಕೆ, ಮೂಲಾನಕ್ಷತ್ರಕಾಣಿಕೆ, ಅಗ್ರತಾಂಬೂಲ, ಪೀಪಾರಾಧನೆಕಾಣಿಕೆ, ಪ್ರಾಯಶ್ಚಿತ್ತಕಾಣಿಕೆ ಮುಂತಾಗಿ ಶಿಷ್ಯವರ್ಗ ಜನರಿಂದ ಬರಮಾಡಿಕೊಳ್ಳುವಲ್ಲಿ ಯಾರಾದರೂ ಕಾಣಿಕೆ ಕೊಡದೆ ಮುದ್ರಾತಿಕ್ರಮವಾಗಿ ನಡೆಮಕೊಂಡವರಿಗೆ ತಾಕೀತ್ಮಾಡಿ ಬಂದೋಬಸ್ತು ಮಾಡಿಸಿಕೊಡುವಬಗ್ಯೆ ಸದರೀ ಶಿಷ್ಯರಿಂದ ವಸೂಲಾದ ಕಾಣಿಕೆಗಳಿಗೆ ಯಾವ ಸರ್ಕಾರದವರೂ ಸುಂಕ ವಸೂಲ್ಮಾಡದಿರುವಬಗ್ಯೆ ಶ್ರೀ ಶ್ರಿಂಗೇರಿ ಶ್ರೀಮಠಕ್ಕೆ ಪೂರ್ವದಾರಭ್ಯವಿಂದ ಸೇರಿದ ಶಿಷ್ಯಜನರಲ್ಲಿ ಕೆಟ್ಟಹೆಣ್ಣುಗಳನ್ನು ಶ್ರೀಮಠದವರ ಹವಾಲಿಗೆ ಕೊಟ್ಟು ರಶೀತಿ ತಗದುಕೊಳ್ಳುವಬಗ್ಯೆ ಸದರೀ ಶ್ರೀಮಠಕ್ಕೆ ಪೂರ್ವದಾರಭ್ಯವಿಂದ ಸೇರಿದ ಬ್ರಾಹ್ಮಣರು ಮತ್ತು ಸಮಸ್ತ ಇತರ ಜಾತಿಯವರುಗಳಲ್ಲಿಯೂ ಸಹ ಆಯಾಯ ವರ್ಣಾಶ್ರಮರೀತ್ಯಾ ಆಯಾಯ ಕಾಲಗಳಲ್ಲಿ ಮುಂಜಿ, ಮದುವೆ, ಪ್ರಾಯಶ್ಚಿತ್ತ, ವಗೈರೆ ಮಾಡಿಕೊಳ್ಳತಕ್ಕಭಾಗದಲ್ಲಿ ಮತವಿಚಾರಗಳಿಗೆ ಯಾವ ಸರಕಾರದವರೂ ಪ್ರವೇಶ ಮಾಡಕೂಡದೆಂಬುವಬಗ್ಯೆ ಶ್ರೀ ಜಗದ್ಗುರುಗಳವರ ಸವಾರಿಯು ಯಾವ ಗ್ರಾಮಗಳಿಗೆ ಬಂದಾಗ್ಯೂ ಆ ಸ್ಥಳದಲ್ಲಿರುವ ಶಿವ, ವಿಷ್ಣು, ವಗೈರೆ ವಿಶಿಷ್ಟ ದೇವಸ್ಥಾನಗಳನ್ನು ಶ್ರೀಗಳವರು ಪೂಜೆಮಾಡತಕ್ಕಬಗ್ಯೆ ಬಿಟ್ಟುಕೊಡತಕ್ಕಬಗ್ಯೆಸಹಾ.

೧೭೭೬ನೇ ಇಸವಿ ಏಪ್ರಿಲ್ ೨೦ಕ್ಕೆ ಸರಿಯಾದ ದುರ್ಮುಖಿಸಂ॥ ಚೈತ್ರಮಾಸದಲ್ಲಿ ಮೈಲಾಪ್ರುರಿ ಚೆನ್ನಪಟ್ಣದ ಗವರ್ನರ್ ಲಾರ್ಡ್‌ಪಿಕ್ಕಯಿ ಸಾಹೇಬರು ಕೊಟ್ಟಿರುವ ೩೬-೪೩ನೇ ನಂಬರ್ ಹುಕ್ಕುಂ. ಸದರಿ ದುರ್ಮುಖಿಸಂ॥ ಶ್ರಾವಣಶುದ್ಧ ೭ ಯಲ್ಲೂ ಬಂಗಾಳಾ ಗೌವರ್ನರ್‌ಜನರಲ್ ಸಾಹೇಬರು ಕೊಟ್ಟಿರುವ ೧೩೮ನೇ ನಂಬರು ಹುಕ್ಕುಂ. ೧೭೭೭ನೇ ಜನವರಿ ೨೦ಕ್ಕೆ ಸರಿಯಾದ ದುರ್ಮುಖಿಸಂ॥ ಪುಷ್ಯಮಾಸದಲ್ಲಿ ಮೈಲಾಪ್ರುರಿ ಚನ್ನಪಟ್ಟಣದ ಗವರ್ನರ್ ಲಾರ್ಡ್‌ಪಿಕ್ಕಯಿಸಾಹೇಬರು ಕೊಟ್ಟಿರುವ ೮೮ನೇ ನಂಬರುಹುಕ್ಕುಂ. ೧೭೮೨ನೇ ಅಕ್ಟೋಬರ್ ೨೮ಕ್ಕೆ ಸರಿಯಾದ ಶುಭಕೃತು ಸಂ॥ ಆಶ್ವೀಜಮಾಸದಲ್ಲಿ ತಂಜಾವೂರು ರೆಸಿಡೆಂಟರು ಜಾನಸಲಿವಾನ್ ಸಾಹೇಬರವರು ಕೊಟ್ಟಿರುವ ೧೮ - ೨೮ನೇ ನಂಬರ್ ಹುಕ್ಕುಂ. ೧೭೮೨ನೇ ನವಂಬರ್ ೨೩ರಲ್ಲಿ ಮೈಲಾಪುರಿ ಚನ್ನಪಟ್ಣದ ಗವರ್ನರ್ ಲಾರ್ಡ್‌ಮಕಾರ್ಟ್ನಿಯವರು ಕೊಟ್ಟಿರುವ ೬೪ - ೩೪ನೇ ನಂಬರ್ ಹುಕ್ಕುಂ. ಸದರಿ ಡಿಶಂಬರ್ ೮ನೇ ತಾರೀಖಿನಲ್ಲಿ ಪಾಲ್ರಿ ಷಾರ್ಟ್ಸಾಹೇಬರವರು ತಂಜಾವೂರು ಮೊಕ್ಕಾಂನಿಂದ ಕೊಟ್ಟಿರುವ ೭೯ - ೮೬ ನೇ ನಂಬರ್ ಹುಕ್ಕುಂ. ೧೭೮೩ನೇ ಏಪ್ರಿಲ್ ೨೮ಕ್ಕೆಸರಿಯಾದ ಶೋಭಕೃತುಸಂ॥ ಚೈತ್ರಮಾಸದಲ್ಲಿ ಕರ್ನಲ್ ಲ್ಯಾಂಗ್ಸ್‌ಸಾಹೇಬರು ತಂಜಾವೂರು ಮೊಕ್ಕಾಂನಿಂದ ಕೊಟ್ಟಿರುವ ೮೪ - ೯೬ನೇ ನಂಬರ್ ಹುಕ್ಕುಂ. ೧೭೮೩ನೇ ಮೇ ತಾರೀಖು ೪ ರಲ್ಲೂ ಜನರಲ್‌ಕೂಪೆಸಾಹೇಬರು ಕೊಟ್ಟಿರುವ ೪೫ - ೯೯ನೇ ನಂಬರು ಹುಕ್ಕುಂ. ೧೭೮೩ನೇ ಮೇ ತಾರೀಖು ೧೬ರಲ್ಲು ಕರ್ನಲ್ ಪ್ರೋಲಾರ್ಟನ್ ಸಾಹೇಬರವರು ಕೊಟ್ಟಿರುವ ೧೧೫ - ೧೫೦ನೇ ನಂಬರ್ ಹುಕ್ಕುಂ. ೧೭೮೫ನೇ ಇಸವಿ ಮಾರ್ಚಿ ೧೬ಕ್ಕೆ ಸರಿಯಾದ ಕ್ರೋಧಿಸಂ॥ ಫಾಲ್ಗುಣಮಾಸದಲ್ಲಿ ತಂಜಾವೂರು ರೆಸಿಡೆಂಟ್ ಡಗ್ಲಸ್ಟರ್‌ಸಾಹೇಬರುಕೊಟ್ಟಿರುವ ೧೬೬ - ೧೭೭ನೇ ನಂಬರ್ ಹುಕ್ಕುಂ. ಸದರಿ ೧೭೮೫ನೇ ಏಪ್ರಿಲ್ ೧೮ಕ್ಕೆ ಸರಿಯಾದ ವಿಶ್ವಾವಸು ಸಂ॥ ಚೈತ್ರಮಾಸದಲ್ಲಿ ಮೈಲಾಪುರಿ ಚನ್ನಪಟ್ಣದ ಗವರ್ನರ್ ಲಾರ್ಡ್‌ಜನರಲ್ ಮೆಡೋಸಾಹೇಬರವರು ಕೊಟ್ಟಿರುವ ೧೮೮ - ೧೯೮ನೇ ನಂಬರ್ ಹುಕ್ಕುಂ. ೧೭೮೬ನೇ ಜನವರಿ ೧೬ಕ್ಕೆ ಸರಿಯಾದ ವಿಶ್ವಾವಸು ಸಂ॥ ಪುಷ್ಯಮಾಸದಲ್ಲಿ ಲಾರ್ಡ್‌ಪಾಲಿಸ ಸಾಹೇಬರವರು ಕೊಟ್ಟಿರುವ ೮೮ನೇ ನಂಬರು ಹುಕ್ಕುಂ. ೧೭೮೫ನೇ ಮಾರ್ಚಿ ೧೪ರಲ್ಲೂ ವೆಬ್ಬ್‌ಸಾಹೇಬರವರು ಕೊಟ್ಟಿರುವ ೨೫ನೇ ನಂಬರು ಹುಕ್ಕುಂ. ೧೭೯೦ನೇ ಸಾಧಾರಣ ಸಂ॥ ವೈಶಾಖಶುದ್ಧ ೧೧ ಯಲ್ಲು ಪ್ಲಾಯಡ್‌ಸಾಹೇಬರು ಸತ್ಯಮಂಗಲದ ಮೊಕ್ಕಾಂನಿದ ಕೊಟ್ಟಿರುವ ೨೦೦-೩೦೫ನೇ ನಂಬರುಹುಕ್ಕುಂ. ಸದರಿ ವೈಶಾಖ ಬಹುಳ ೧೧ ಯಲ್ಲೂ ಕಾರ್ಜಿಟ್‌ಸಾಹೇಬರು ಕೊಯಮುತ್ತೂರು ಮೊಕ್ಕಾಮಿನಿಂದ ಕೊಟ್ಟಿರುವ ೩೪೫ - ೪೦೫ನೇ ನಂ॥ ಹುಕ್ಕುಂ. ಸದರೀ ಜ್ಯೇಷ್ಠಶುದ್ಧ ೮ ಯಲ್ಲೂ ಸರ್ವಯಜಮಾನರಾದ ಲಾರ್ಡ್‌ಕಾರ್ನ್‌ವಾಲೀಸ್‌ಸಾಹೇಬರು ಕೊಟ್ಟಿರುವ ೪೨೮ - ೪೫೪ನೇ ನಂ॥ ಹುಕ್ಕುಂ. ಸದರೀ ಶ್ರಾವಣಶುದ್ಧ ೧೩ ಯಲ್ಲು ಮೇಜರ್‌ಕ್ಲೋಸ್‌ಸಾಹೇಬರವರು ಕೊಟ್ಟಿರುವ ೪೬೮ - ೫೭೬ನೇ ನಂ॥ ಹುಕ್ಕುಂ. ಸದರಿ ಶ್ರಾವಣ ಬಹುಳ ೫ ಯಲ್ಲೂ ದಂಡಿನ ಯಜಮಾನರಾದ ಚಾಲ್ಮರ್ಸ್‌ಸಾಹೇಬರು ಕೊಯಮುತ್ತೂರು ಮೊಕ್ಕಾಂನಿಂದ ಕೊಟ್ಟಿರುವ ೫೪೫ - ೫೬೮ನೇ ಹುಕ್ಕುಂ. ೧೭೯೧ನೇ ಮೇ ೧ಕ್ಕೆ ಸರಿಯಾದ ವಿರೋಧಿಕೃತು ಸಂ॥ ವೈಶಾಖಮಾಸದಲ್ಲಿ ಜನರಲ್‌ಹ್ಯಾರಿಸ್ ಸಾಹೇಬರು ಕೊಟ್ಟಿರುವ ೬೬೮ - ೭೮೨ನೇ ನಂ॥ ಹುಕ್ಕುಂ. ಸದರೀ ೧೭೯೧ನೇ ಮೇ ೫ರಲ್ಲೂ ಲಾರ್ಡ್‌ವೆಲ್ಲಸ್ಲಿಸಾಹೇಬರವರು ಕೋರ್ಟ್‌ಆಫ್ ಡೈರೆಕ್ಟರುಗಳಿಗೆ ಡಿಸ್ಪ್ಯಾಚನ್ನು ಬರಿಯುವದಕ್ಕೆ ಇಂಡಿಯಾ ಕಂಪೆನಿಯವರು ಕೊಟ್ಟಿರುವ ೧೪೧ನೇ ನಂ॥ ಹುಕ್ಕುಂ. ಸದರಿ ಮೇ ೧೫ರಲ್ಲೂ ಕೋರ್ಟ್‌ಆಫ್ ಡೈರೆಕ್ಟರುಗಳು ಕೊಟ್ಟಿರುವ ೧೩೨ನೇ ನಂಬರು ಹುಕುಂ. ೧೭೯೨ನೇ ಮಾರ್ಚಿ ೩ಕ್ಕೆ ಸರಿಯಾದ ವಿರೋಧಿಕೃತು ಸಂವತ್ಸರದ ಫಾಲ್ಗುಣಮಾಸದಲ್ಲಿ ಲಾರ್ಡ್ ಕಾರ್ನ್‌ವಾಲೀಸ್‌ಸಾಹೇಬರು ಕೊಟ್ಟಿರುವ ೯೨೪ - ೯೪೮ನೇ ನಂಬರು ಹುಕ್ಕುಂ. ೧೭೬೨ನೇ ಮೇ ೧೪ಕ್ಕೆ ಸರಿಯಾದ ಪರೀಧಾವಿ ಸಂವತ್ಸರದ ವೈಶಾಖಮಾಸದಲ್ಲಿ

ಲಾರ್ಡ್ ವೆಲ್ಲಿಸ್ಲಿಸಾಹೇಬರವರು ಕೊಟ್ಟಿರುವ ೩೧೧ನೇ ನಂಬರು ಹುಕ್ಕುಂ. ೧೭೯೩ನೇ ಪ್ರಮಾದೀಚ ಸಂವತ್ಸರದ ವೈಶಾಖ ಶು॥ ೮ ಯಲ್ಲೂ ಮೈಲಾಪುರಿಚನ್ನಪಟ್ಟಣದ ಗವರ್ನರ್ ಲಾರ್ಡ್‌ಹೋಬಾರ್ಟ್ ಸಾಹೇಬರವರು ಕೊಟ್ಟಿರುವ ೯೯೬ನೇ ನಂಬರು ಹುಕ್ಕುಂ. ಸದರಿ ವೈಶಾಖ ಬ॥ ೫ ಯಲ್ಲೂ ವೆಬ್ ಸಾಹೇಬರು ಕೊಟ್ಟಿರುವ ೯೯೮ನೇ ನಂಬರು ಹುಕ್ಕುಂ. ಸದರಿ ಜ್ಯೇಷ್ಠ ಶು॥ ೭ ಯಲ್ಲೂ ಜಾರ್ಜ್‌ಸಾಹೇಬರು ಕೊಟ್ಟಿರುವ ೨೧೮ನೇ ನಂಬರು ಹುಕ್ಕುಂ. ಸದರಿ ಪ್ರಮಾದೀಚ ಸಂವತ್ಸರದ ಕಾರ್ತೀಕಮಾಸದಲ್ಲಿ ದೊಡ್ಡನವಾಬರಾದ ಕ್ಲೈವರಲ್ಲಿ ಸಾಹೇಬರು ಕೊಟ್ಟಿರುವ ಸನ್ನದು. ೧೭೯೪ನೇ ಜೂನ್ ೨೮ಕ್ಕೆ ಸರಿಯಾದ ಆನಂದಸಂವತ್ಸರದ ಜ್ಯೇಷ್ಠಮಾಸದಲ್ಲಿ ಸದರಿ ಜಾರ್ಜ್‌ಸಾಹೇಬರವರು ಕೊಟ್ಟಿರುವ ೨೮೨ನೇ ನಂಬರು ಹುಕ್ಕುಂ. ೧೭೯೫ನೇ ಇಸವಿ ಜುಲೈ ೯ಕ್ಕೆ ಸರಿಯಾದ ರಾಕ್ಷಸ ಸಂವತ್ಸರದ ಆಷಾಢಮಾಸದಲ್ಲಿ ಮೈಲಾಪುರಿಚನ್ನಪಟ್ಟಣದ ಗವರ್ನರ್ ಲಾರ್ಡ್‌ಹೋಬಾರ್ಟ್ ಸಾಹೇಬರು ಕೊಟ್ಟಿರುವ ೭೧೮ನೇ ನಂಬರು ಹುಕ್ಕುಂ. ೧೭೯೬ನೇ ಇಸವಿ ಫೆಬ್ರುವರಿ ೧೫ರಲ್ಲೂ ಸದರಿ ಹೋಬಾರ್ಟ್‌ಸಾಹೇಬರು ಕೊಟ್ಟಿರುವ ೨೧೨ನೇ ನಂಬರು ಹುಕ್ಕುಂ. ೧೭೯೭ನೇ ಇಸವಿ ಆಗಸ್ಟ್ ೨೬ಕ್ಕೆ ಸರಿಯಾದ ಪಿಂಗಳ ಸಂವತ್ಸರದ ಶ್ರಾವಣಮಾಸದಲ್ಲಿ ಮೈಲಾಪುರಿಚನ್ನಪಟ್ಟಣದ ಗವರ್ನರ್ ಲಾರ್ಡ್ ಕ್ಲೈವ್‌ಸಾಹೇಬರು ಕೊಟ್ಟಿರುವ ೯೯೭ನೇ ನಂಬರು ಹುಕ್ಕುಂ. ೧೭೯೮ನೇ ಮಾರ್ಚಿ ೨೮ಕ್ಕೆ ಸರಿಯಾದ ಪಿಂಗಳ ಸಂವತ್ಸರದ ಫಾಲ್ಗುಣಮಾಸದಲ್ಲಿ ಸರ್ವ ಯಜಮಾನರಾದ ಬಂಗಾಳಾ ಗವರ್ನರ್‌ಜನರಲ್ ಲಾರ್ಡ್ ಮಾರ್ನಿಂಗ್ಟನ್ ಸಾಹೇಬರು ಕೊಟ್ಟಿರುವ ೩೬೬ನೇ ನಂಬರು ಹುಕ್ಕುಂ. ೧೭೯೮ನೇ ಮೆ ೧೦ಕ್ಕೆ ಸರಿಯಾದ ಕಾಳಾಯುಕ್ತಿ ಸಂವತ್ಸರದ ವೈಶಾಖಮಾಸದಲ್ಲಿ ಲಾರ್ಡ್‌ಕ್ಲೈವ್‌ಸಾಹೇಬರು, ಲಾರ್ಡ್ ಮಾರ್ನಿಂಗ್ಟನ್‌ಸಾಹೇಬರೂ ಸಹ ಕೊಟ್ಟಿರುವ ೧೭೮ನೇ ನಂ॥ ಹುಕ್ಕುಂ. ೧೭೯೯ನೇ ಜನವರಿ ೧೮ಕ್ಕೆ ಸರಿಯಾದ ಕಾಳಾಯುಕ್ತಿ ಸಂವತ್ಸರದ ಪುಷ್ಯಮಾಸದಲ್ಲಿ ಜನರಲ್ ಹಾರಿಸ್‌ಸಾಹೇಬರವರು ಕೊಟ್ಟಿರುವ ೧೧೦ನೇ ನಂಬರು ಹುಕ್ಕುಂ. ಇದೇ ಪುಷ್ಯ ಬ॥ ೧೮ರಲ್ಲೂ ವೆಬ್‌ಸಾಹೇಬರು ಕೊಟ್ಟಿರುವ ೩೮೭ನೇ ನಂಬರು ಹುಕ್ಕುಂ. ೧೭೯೯ನೇ ಎಪ್ರಿಲ್ ೧೬ಕ್ಕೆ ಸರಿಯಾದ ಸಿದ್ಧಾರ್ಥಿ ಸಂವತ್ಸರದ ಚೈತ್ರಮಾಸದಲ್ಲಿ ಲಾರ್ಡ್‌ಕ್ಲೈವ್‌ಸಾಹೇಬರ ಹುಕ್ಕುಂ ಮೇರಿಗೆ ವೆಬ್‌ಸಾಹೇಬರು ಕೊಟ್ಟಿರುವ ೭೧೬ನೇ ನಂಬರು ಹುಕ್ಕುಂ. ೧೭೯೯ನೇ ಮೇ ೧೮ಕ್ಕೆ ಸರಿಯಾದ ಸಿದ್ಧಾರ್ಥಿಸಂವತ್ಸರದ ವೈಶಾಖಮಾಸದಲ್ಲಿ ಜನರಲ್ ಹಾರಿಸ್‌ಸಾಹೇಬರು ಕೊಟ್ಟಿರುವ ೭೬-೩೩೬ನೇ ನಂಬರು ಹುಕ್ಕುಂ. ೧೭೯೯ನೇ ಜೂನ್ ೩ರಲ್ಲೂ ಸರ್ವ ಯಜಮಾನರಾದ ಬಂಗಾಳಾ ಗವರ್ನರ್‌ಜನರಲ್ ಲಾರ್ಡ್ ಮಾರ್ನಿಂಗ್ಟನ್‌ಸಾಹೇಬರವರು ಕೊಟ್ಟಿರುವ ೫೧೬ನೇ ನಂಬರು ಹುಕ್ಕುಂ. ಈ ಹುಕ್ಕುಂಗಳನ್ನು ಅನುಸರಿಸಿ ಶ್ರೀಮುಖಸಂವತ್ಸರದ ಆಶ್ವಿಜ ಶು॥ ೩ ಮುಚ್ಚಳಿಕನ್ನಲ್ಲೂ, ಸದರಿ ಪ್ರಭವಸಂವತ್ಸರದ ಮಾರ್ಗಶಿರ ಬ॥ ೩ ಭಾನುವಾರದ ಮುಚ್ಚಳಿಕನ್ನಲ್ಲೂ, ವಿಭವಸಂವತ್ಸರದ ಮಾರ್ಗಶಿರ ಶು॥ ೩ ಭಾನುವಾರದ ಮುಚ್ಚಳಿಕನ್ನಲ್ಲೂ ಸಹ ದಿವಾನ್ ಪೂರ್ಣಯ್ಯನವರು ಕೊಟ್ಟಿರುವ ಪರವಾನೆ ಮತ್ತು ರಹದಾರಿ. ೧೮೦೩ನೇ ಡಿಶೆಂಬರು ೨೩ರಲ್ಲೂ, ೧೮೦೮ನೇ ನವಂಬರು ೨೦ರಲ್ಲೂ ಸಹ ರಸಿಡೆಂಟರು ಕೋಲ್‌ಸಾಹೇಬರು ಕೊಟ್ಟಿರುವ ೯೮೨-೭೨೬ನೇ ನಂಬರು ಹುಕ್ಕುಂಗಳು, ೧೮೦೮ನೇ ನವಂಬರು ೨೦ರಲ್ಲೂ ಮೈಲಾಪುರಿಚನ್ನಪಟ್ಟಣದ ಗವರ್ನರ್ ಲಾರ್ಡ್ ಬಲೋರ್‌ಸಾಹೇಬರು ಕೊಟ್ಟಿರುವ ೯೦೮ನೇ ನಂಬರು ಹುಕ್ಕುಂ. ಸನ್ ೧೮೨೦ನೇ ಇಸವಿ ಜೂನ್ ತಾರೀಖು ೨೬ರಲ್ಲೂ ಮತ್ತು ೧೮೨೦ನೇ ಇಸವಿ ಸೆಪ್ಟಂಬರು ತಾರೀಖು ೯ರಲ್ಲೂ ಸಹ ಮಹಾರಾಜರುಸಾಹೇಬ್ ಬಹದ್ದೂರವರು ಕೊಟ್ಟಿರುವ ಸನ್ನದು, ಮತ್ತು ರಹದಾರಿ ಸಹ ಸಾದರಾಗಿ ಇರುವದನ್ನು ಶ್ರೀವ ತಪ ವ ರವಸ್ಯೋಗಿರ ಭಿಷ್ಟ್ಯಯಶಾಸ್ತ್ರಿಗಳು ಹುಜೂರಲ್ಲಿ ಹಾಜರ್ಮಾಡಿದ ಮೇರಿಗೆ ಅಪ್ಪಣೆ ಆಗಬೇಕೆಂದು ಅರ್ಜಿ ಮಾಡಿಕೊಂಡದ್ದರಿಂದ ಅಪ್ಪಣೆ ಕೊಡಿಸಿ ಇದ್ದೀತು. ಸದರಿ ಬರಸಿರುವ ಮೇರಿಗೂ ಬಿಬ್‌ಪೇಲ್‌ಸಾಬುಕಿನ ಹುಕ್ಕುಂಗಳು, ಪರವಾನೆ ಸನ್ನದು, ರಹದಾರಿ ಸಹ ಇರುವ ಮಾಮೂಲ್ಮೇರಿಗೆ ನಡೆಯಿಕೊಳ್ಳುವದು

ತಾರೀಖು ೫ನೇ ಮಾಹೆ ಸೆಪ್ಟಂಬರ್ ಸನ್ ೧೮೩೦ನೇ ಇಸವಿ ದರಖಾಗಾ ಬೆಂಗಳೂರು ಕ್ಯಾಷ್ ಮೇಜರ್ ಕಮಿಷನರ್ ಎಂದು ಸ್ಕೈನಿದೆ. ಸೂರಪ್ಪ, ಜೆ ಡಿ ಓರ್ವಾರ್ ಎಂದು ಸ್ಕೈನಿದೆ.

ಶ್ರೀಮತ್ಪರಮಹಂಸ ಯಥೋಕ್ತಬಿರುದಾಂಕಿತರಾದಂಥ ಶ್ರೀ ಸಚ್ಚಿದಾನಂದಭಾರತಿಗಳಿಗೆ.

ಟೀಪುಸುಲತಾನ್ ಪಾದಷಹರು ಮಾಡುವ ಸಲಾಂ. ನೀವು ಕಳುಹಿಸಿದ ಪತ್ರಿಕೆಯಿಂದ ಎಲ್ಲಾ ವಿವರವು ತಿಳಿಯಬಂತು. ನಮ್ಮ ಸರಕಾರದ ಶೀಮೆಯಲ್ಲಿ ಇರುವ ದೇವಸ್ಥಾನ ಪುಣ್ಯಕ್ಷೇತ್ರಗಳಲ್ಲೂ ದೇವತಾದರ್ಶನಮಾಡಿಕೊಂಡು ಬರತಕ್ಕಬಗ್ಯೆ ಅಪ್ಪಣೆಕೊಟ್ಟು ರಹದಾರಿ ಕಳುಹಿಸಿಕೊಟ್ಟಲ್ಲಿ ಹೋಗಿ ದೇವರ ಸನ್ನಿಧಿಗಳಲ್ಲಿ ಸರಕಾರದ ಶ್ರೇಯಸ್ಸು ಪ್ರಾರ್ಥಿಸಿಕೊಂಡು ಬರುವಬಾಗಿ ಬರದು ಇರುವದು ಸರಿಯಷ್ಟೆ; ಅದೇಪ್ರಕಾರಕ್ಕೆ ರಹದಾರಿ ಕಳುಹಿಸಿ ಇದ್ದೀತು. ಸರಕಾರದ ಶೀಮೆಯಲ್ಲಿರುವ ದೇವತಾಸ್ಥಳ ಪುಣ್ಯಕ್ಷೇತ್ರಗಳಲ್ಲಿ ಸಹ ಹೋಗಿ ದೇವರ ಸನ್ನಿಧಾನಗಳಲ್ಲು ತಾವು ತ್ರಿಕಾಲ ಈಶ್ವರಪೂಜೆಯನ್ನೂ ಸಹ ಸರಕಾರದ ಶ್ರೇಯೋಭಿವೃದ್ಧಿಯಾಗುವಂತೆ ಈಶ್ವರಪ್ರಾರ್ಥನ ಮಾಡಿಕೊಂಡು ಬರುವಹಾಗೆ ಮಾಡಿಸುವದು. ತಾರೀಖು ೧೦ನೇ ಮಾಹೆ ಜಾಫರಿ ಸಾಲ್ ಇರಾರಸಕ್ ಸನ್ ೧೨೧೮ ಮಹಮ್ಮದು ನಳಸಂವತ್ಸರ ಎಂತ ಇದೆ

ವಿಲಾಸಮುದ್ರಾಕ್ಷರಶಾಲಾ ದೊಡ್ಡಪೇಟೆ ಮೈಸೂರು.

1895

No. 1873

Name of Petitioner, Matha Mudre Viraraghava Shastry and others

Village,

Taluk,

District, Bangalore

Date of Arzi,

Date of Receipt, 23-11-95

Date of Disposal,

No. of Enclosure, 6

ABSTRACT.

A petition from the Smarta community protesting against the Sri Vaishnavas' objection of the Jagadguru entry into the Seringapatam temple.

Pet: 1044 Encl 7

× Transferred to the Secretary to Govt. Mysore Muzrai Dept.
26-11-95 By order

[signature]

for Revenue Sec

28-11-95

23 · 11

ಮೈಸೂರು ಸಂಸ್ಥಾನದ ಎಗ್ಸಿಕ್ಯೂಟಿವ್ ಕೌನ್ಸಿಲ್ ಪ್ರಸಿಡೆಂಟ್ ಮತ್ತು

ಶೇಷಾದ್ರಯ್ಯನವರ

ಸನ್ನಿಧಾನಂಗಳಿಗೆ.

ಹಾಸನದ ನಿವಾಸಿಗಳಾದ ಬ್ರಾಹ್ಮಣರು ಮೊದಲಾದ ಚತುರ್ವರ್ಣದ ಪ್ರಜೆಗಳು ಬರೆದುಕೊಂಡ ಅರ್ಜಿ—

ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳಸ್ವಾರಿಯು ಕಳೆದ ಜೂನ್ ಮಾಹೆಯಲ್ಲಿ ಮೈಸೂರಿಗೆ ಬಿಜಯಂಗೈಯುತ್ತಿದ್ದ ಕಾಲದಲ್ಲಿ ಶಿಷ್ಯಜನರ ಪ್ರಾರ್ಥನಪೂರ್ವಕ ಶ್ರೀರಂಗಪಟ್ಟಣದ ಕೋಟೆವಳಕ್ಕೆ ದಯಮಾಡಿಸಿ ಅಲ್ಲಿ ರಂಗನಾಥಸ್ವಾಮಿದೇವರ ದರ್ಶನವಂ ಮಾಡಿದ್ದಕ್ಕಾಗಿ ದೇವರಿಗೆ ಸಂಪ್ರೋಕ್ಷಣೆ ಆಗಬೇಕೆಂದು ಶ್ರೀವೈಷ್ಣವರಲ್ಲಿ ಕೆಲವರು ,,ಅ ಖಿ ಲ ವೈ ಷ್ಣ ವ ಸ ಭಾ,, ಎಂದು ದೊಡ್ಡ ಹೆಸರನ್ನಿಟ್ಟುಕೊಂಡು ಸರ್ಕಾರದಲ್ಲಿ ಫಿರ್ಯಾದುಮಾಡಿದ್ದರಮೇಲೆ ಸ್ಮಾರ್ತಜನಗಳು ಸಂಪ್ರೋಕ್ಷಣೆ ಮಾಡಕೂಡದೆಂದು ತಕರಾರುಮಾಡಿದ್ದಕ್ಕಾಗಿ ೧೮೯೫ನೇ ಇಸವಿ ಜೂನ್ ೨೩ನೇ ತಾರೀಖಿನಲ್ಲಿ ಮುಜರಾಯಿ ಸೂಪರಿಂಟೆಂಡೆಂಟರವರು ಖುದ್ದು ವಿಚಾರಣೆ ಮಾಡಿ ಗೌರ್ನಮೆಂಟಿಗೆ ಮಾಡಿದ ರಿಪೋರ್ಟನ್ನ ಪರಾಂಬರಿಸಿ ಗೌರ್ನಮೆಂಟನವರಿಂದ ತೀರ್ಮಾನದ ಹುಕುಂ ಕೊಡೋಣವಾಗಿರುತ್ತೆ. ಈತೀರ್ಮಾನವು ದ್ವೇಷಾಸೂಯಾಪರರಾದ ಕೆಲವರಿಗೆ ತೃಪ್ತಿಕರವಾಗದೆ ಅವರು ವರ್ತಮಾನಪತ್ರಿಕೆಗಳಿಂದ ಮನಸ್ವಿಚರ್ಚೆಯನ್ನು ಮಾಡುತ್ತಾ ಇರುವದಲ್ಲದೆ ತಮ್ಮ ಅಭಿಪ್ರಾಯದಂತೆ ಸಂಪ್ರೋಕ್ಷಣೆಗೆ ಹುಕುಂ ಕೊಡದೇಹೋದಲ್ಲಿ ಮತಸಮ್ಮಂಧವಾದ ಮರಣವನ್ನ ಹೊಂದುತ್ತೇವೆಂಬದಾಗಿ ಬರಿಯೋಣವೇ ಮುಂತಾದ್ದರಿಂದ ಗೌರ್ನಮೆಂಟನವರಿಗೆ ಘಾಬರಿಯನ್ನುಂಟುಮಾಡಿ ತನ್ಮೂಲಕ ನ್ಯಾಯಕ್ಕೆ ವಿರುದ್ಧವಾಗಿರತಕ್ಕ ತಮ್ಮ ಇಷ್ಟಾರ್ಥಗಳನ್ನ ಪಡಿಯಬೇಕೆಂದು ಪುನಃಪುನಃ ಶ್ರೀಮನ್ಮಹಾರಾಜ್ಞೀ ರೀಜಂಟರವರಿಗೂ ರಸಿಡೆಂಟ್ ಸಾಹೇಬರಿಗೂ ಅರ್ಜಿಯನ್ನು ಕೊಡುವದೇ ಮುಂತಾದ ಹಠಸಾಧನಾಪ್ರಯತ್ನದಲ್ಲಿರುತ್ತಾರೆ.

ಈ ವಿಚಾರವನ್ನ ಕುರಿತು ನಾವು ಗಾರ್ನಮೆಂಟಿಗೆ ಶೃತಪಡಿಸತಕ್ಕದ್ದೇನೂ ಇಲ್ಲದೇ ಇದ್ದಾಗ್ಯೂ ಪ್ರೊಸೀಡಿಂಗ್ಸಿನ ೪ನೇ ಪ್ಯಾರಾದಲ್ಲಿ ನಮೂದಿಸಿರುವ ಸಂದರ್ಭದಲ್ಲಿಯೂ ಶ್ರೀವೈಷ್ಣವರಿಗೆ ಶ್ರೀ.ರಂಗನಾಥಸ್ವಾಮಿದೇವರಮೇಲೆ ಇರತಕ್ಕ ಹಕ್ಕುದಾರಿ ವಿಚಾರದಲ್ಲೂ ಅರಿಕೆಮಾಡಿಕೊಳ್ಳುವದನ್ನ ಘನತೆಯನ್ನ ಹೊಂದಿದ ಕೌನ್ಸಿಲ್ ಸಭೆಯವರು ಸಾವಧಾನವಾಗಿ ಪರ್ಯಾಲೋಚಿಸಬೇಕೆಂದು ಬೇಡುತ್ತೇವೆ.

೧ ನೇದು ಮೇಲ್ಕಂಡ ಪ್ರೊಸಿಡಿಂಗ್ಸಿನ ನಾಲ್ಕನೇ ಪ್ಯಾರಾ. * * * * * * * *

* ವೇದೋಕ್ತ ಕರ್ಮಾನುಷ್ಠಾಯಿಗಳಾದ ಬ್ರಾಹ್ಮಣರಿಗೆ ವಿಧಿರೂಪವಾಗಿರುವ ಆಗಮಗಳಪ್ರಕಾರ ಪೂಜೆಗಳಂ ನಡೆಸಲ್ಪಡುವ ಒಂದು ದೇವಾಲಯದಲ್ಲಿ ಒಬ್ಬ ಮಠಾಧಿಪತಿಯಾದವರು ಪೂಜೆಮಾಡಬಹುದೆಂಬ ಸಾಮಾನ್ಯ ಜಿಜ್ಞಾಸೆಯನ್ನಾಗಲೀ ಅಥವಾ ಮಾಮೂಲ್ ಅನುಸರಿಸಿ ಶೃಂಗೇರಿಸ್ವಾಮಿಗಳವರಿಗೆ ಇಂಥಾ ವಿಷಯಗಳಲ್ಲಿ ಯಾವದಾದರೂ ವಿಶೇಷ ಬಾಧ್ಯತೆ ಉಂಟೆ ಎಂಬ ಮುಖ್ಯವಾದಜಿಜ್ಞಾಸೆಯನ್ನಾಗಲ್ಲ, ಪ್ರಕೃತ ಮೊಕದ್ದಮೆಯನ್ನು ಫೈಸಲ್ ಮಾಡುವದರಲ್ಲಿ ಆಲೋಚಿಸಬೇಕಾದ್ದು ದೈವಾತ್ ಅನಾವಶ್ಯಕವಾಗಿದೆ. ಕಳೆದ ಜೂನ್ ತಿಂಗಳು ೧೦ನೇ ತಾರೀಖಿನಲ್ಲಿ ಶೃಂಗೇರಿಸ್ವಾಮಿಗಳವರು ದೇವರಿಗೆ ಪೂಜೆಮಾಡಬೇಕೆಂಬ ಉದ್ದೇಶ್ಯದೊಡನೆ ದೇವಾಲಯಕ್ಕೆ ದಯಮಾಡಿಸಿದವರಲ್ಲವೆಂದು ಹೇಳುವದು ಪ್ರಕೃತ ಮೊಕದ್ದಮೇವ್ಯವಸ್ಥೆಗೆ ಸಾಕಾದ್ದಾಗಿದೆ. * *
* *

ವಿಷ್ಣುದೇವಾಲಯಗಳಲ್ಲಿ ಶೃಂಗೇರಿ ಜಗದ್ಗುರುಗಳವರು ಪೂಜೆಮಾಡತಕ್ಕದ್ದಕ್ಕೆ ಅವರಿಗೆ ವಿಶೇಷ ಬಾಧ್ಯತೆ ಇರತಕ್ಕದ್ದನ್ನ ವಿಚಾರಮಾಡತಕ್ಕದ್ದು ಈ ಮೊಕದ್ದಮಾ ತೀರ್ಮಾನಕ್ಕೆ ಮುಖ್ಯವಾದ ಅಂಶವಾಗಿತ್ತು.

ಹಾಗೆ ಮಾಡಿಸಿ ತೀರ್ಮಾನವನ್ನ ಅಪ್ಪಣೇಕೊಡಿಸಿದ್ದಪಕ್ಷದಲ್ಲಿ ಶ್ರೀವೈಷ್ಣವರು ಪುನಃಪುನಃ ಚರ್ಚಿಸುವದಕ್ಕೂ ಶ್ರಿಂಗೇರಿಮಠದ ಶಿಷ್ಯರಾದ ನಾಲ್ಕು ವರ್ಣದವರೂ ಈ ವಿಚಾರವಾಗಿ ಗೌರ್ನಮೆಂಟನವರಿಗೆ ತೊಂದರೆ ಕೊಡುವದಕ್ಕೂ ಅವಕಾಶವಾಗುತ್ತಿರಲಿಲ್ಲ. ಎಂಬುವದನ್ನ ಭಯಭಕ್ತಿಗಳೊಡನೆ ಅರಿಕ ಮಾಡಿಕೊಳ್ಳುತ್ತೇವೆಯೇ ಹೊರ್ತು ಗೌರ್ನಮೆಂಟನವರ ನಡವಳಿಕೆಮೇಲೆ ಆಕ್ಷೇಪರೂಪವನ್ನಾಗಿ ಅರಿಕೆಮಾಡುವದಿಲ್ಲ ಎಂಬುವದನ್ನ ಘನವಾದ ಚಿತ್ತದಲ್ಲಿ ಲಾಲಿಸಬೇಕು.

೨ ಬ್ರಾಹ್ಮಣ್ಯವು ಕೆಲವು ಶತಮಾನಗಳ ಕೆಳಗೆ ಬೌದ್ಧರ ಪ್ರಾಬಲ್ಯದಲ್ಲಿ ಕ್ಷೀಣಗತಿಗೆ ಬಂದದ್ದರಿಂದ ದೇವಾಲಯ ಮೊದಲಾದವುಗಳೆಲ್ಲಾ ಬೌದ್ಧಾಕ್ರಾಂತಗಳಾಗಿರಲು ಶ್ರೀಮಚ್ಛಂಕರಭಗವತ್ಪಾದರವರು ಅವತಾರವಂಮಾಡಿ ಈ ದುರ್ಮತಗಳನ್ನೆಲ್ಲಾ ಖಂಡಿಸಿ ಬ್ರಾಹ್ಮಣ್ಯವನ್ನ ಜೀರ್ಣೋದ್ಧಾರಮಾಡಿ ಷಣ್ಮತಗಳನ್ನೂ ಸನ್ಯಾಸಾಶ್ರಮವನ್ನೂ ಶಿವವಿಷ್ಣ್ವಾದಿ ಪಂಚಾಯತನಾರಾಧನ ಕ್ರಮವನ್ನೂ ಸಹಾ ಶಾಸ್ತ್ರೀಯವಾದದ್ದೆಂದು ಸ್ಥಾಪಿಸಿದಂಥಾವರಾಗಿ ಅದರಂತೆ ತಾವು ಆಚರಣೆಮಾಡುತ್ತಾ ತಮ್ಮ ಶಿಷ್ಯಮಂಡಲಿಯಿಂದ ನಡೆಸುತ್ತಲೂ ಬಂದರು. ಅನ್ಯಮತಾಕ್ರಾಂತವಾಗಿ ನಾಮಾವಶಿಷ್ಟವಾಗಿದ್ದ ಆಸೇತು ಹಿಮಾಚಲಪರ್ಯಂತ ಇರತಕ್ಕ ದೇವಾಲಯಗಳಿಗೆಲ್ಲಾ ಪ್ರೋಕ್ಷ ಅವುಗಳನ್ನ ವಿಧ್ಯುಕ್ತವಾಗಿ ಶುದ್ಧಿಮಾಡಿ ಶಿವವಿಷ್ಣುದೇವರುಗಳಿಗೆಲ್ಲಾ ಯಂತ್ರೋದ್ಧಾರ ಕುಂಭಾಭಿಷೇಕ ಮುಂತಾದ್ದನ್ನ ಶಾಸ್ತ್ರೋಕ್ತವಾದ ವಿಧಿಗಳಿಂದ ನಡಿಸಿ; ದೇವತಾಸಾನ್ನಿಧ್ಯ ಉಂಟಾಗುವಂತೆಮಾಡಿ ತಾವು ಸ್ವತಃ ಆ ದೇವರುಗಳನ್ನ ಪೂಜೆಮಾಡಿ ನಂತರ ಆಯಾಯ ಸ್ಥಲದಲ್ಲಿರತಕ್ಕ ಬ್ರಾಹ್ಮಣರಿಗೆ ಪೂಜೆಮಾಡುವದಕ್ಕೆ ಅಪ್ಪಣೇಕೊಡಿಸಿದರೆಂಬುವದು ಶಂಕರವಿಜಯ ಮೊದಲಾದ ಅನೇಕ ಗ್ರಂಥಗಳಿಂದ ತಿಳಿಯಬರುತ್ತೆ.

೩ ಶ್ರೀಶಂಕರ ಭಗವತ್ಪಾದರವರ ತರುವಾಯ ಆ ಪೀಠವನ್ನಲಂಕರಿಸಿದ ಗುರುಪರಂಪರೆಯವರೆಲ್ಲಾ ಮೇಲೆಹೇಳಿದ ಕ್ರಮದಲ್ಲೇ ಆಚಾರ ವಿಚಾರಗಳನ್ನ ಪರಾಮರ್ಶಿಸುವದಕ್ಕಾಗಿ ಸಂಚಾರ ಹೊರಟಕಾಲಗಳಲ್ಲಿ ಶಿಕ್ಕುವ ಶಿವವಿಷ್ಣು ದೇವಾಲಯಗಳಿಗೆ ದಯಮಾಡಿಸಿ ದೇವತಾರಾಧನೆಯನ್ನ ನಡೆಸುತ್ತಾ ಇದಾರೆ.

೪ ಏತನ್ಮಧ್ಯೆ ಅಂದರೆ ಶ್ರೀಶಂಕರಭಗತ್ಪಾದರವರು ಅವತಾರಮಾಡಿ ಮತಾಚಾರ ನಿಬಂಧನೆಗಳನ್ನ ಸ್ಥಿರಪಡಿಸಿದನಂತರ ಸುಮಾರು ಸಾವಿರಾರು ವರುಷಗಳವರಿಗೂ ಸ್ಮಾರ್ತರೇ ವಿಷ್ಣುದೇವಾಲಯಗಳಲ್ಲಿ ವೈದಿಕಾಗಮೋಕ್ತವಾದ ಪೂಜಾವಿಧಿಗಳನ್ನ ನಡೆಸುತ್ತಾಬಂದರು. ನಂತರ ಶ್ರೀ ರಾಮಾನುಜಾಚಾರ್ಯರವರು ಅವತಾರಮಾಡಿ ತಮ್ಮ ಮತಕ್ಕೆ ಶೇರಿಸಿಕೊಂಡವರಪೈಕಿ ಕೆಲವು ಸ್ಮಾರ್ತರು ವಿಷ್ಣುದೇವಾಲಯಗಳಲ್ಲಿ ಪೂಜಕರಾಗಿಯೂ, ಸ್ಥಾನೀಕ ಮುಂತಾದ ನೌಕರಿಯಲ್ಲಿಯೂ ಸೇರಿಕೊಂಡಿದ್ದರು. ಈ ನೌಕರಿಯಿಂದಲೇ ಅವರು ಜೀವಿಸುತ್ತಿದ್ದದ್ದರಿಂದ ಇವರಿಗೆ ಸಂಬಂಧಿಗಳಾಗಿಯೂ ಮಿತ್ರವರ್ಗದವರಾಗಿಯೂ ಇದ್ದ ಇತರ ಸ್ಮಾರ್ತಬ್ರಾಹ್ಮಣರು ಇವರ ಜೀವನಕ್ಕೆ ಉಪಹತಿಮಾಡುವದಕ್ಕೆ ಸಮ್ಮತವಿಲ್ಲದೆ ಇದ್ದದ್ದರಿಂದಲೂ ಇಂಥಾವರ ಪೂಜೆಯಿಂದ ದೇವರಸಾನ್ನಿಧ್ಯವು ಒಂದುವ್ಯಾಳೆ ಕಡಮೆಯಾದಾಗ್ಯೂ ಶ್ರೀ ಜಗದ್ಗುರುಗಳವರು ಆಗಾಗ್ಯೆ ದಯಮಾಡಿ ದೇವರನ್ನ ಪೂಜಿಸೋಣದರಿಂದ ಕಳಾಸಾನ್ನಿಧ್ಯವೃದ್ಧಿಯಾಗುತ್ತೆಂತಲೂ ಇದರಿಂದ ತಾವು ದೇವತಾಪ್ರಸಾದವನ್ನ ಪರಿಗ್ರಹಿಸಬಹುದೆಂದು ಯೋಚಿಸಿ ತಟಸ್ಥರಾಗಿದ್ದರು. ಇದರನ್ನ ಕುರಿತು ಆಕ್ಷೇಪಿಸದೆ ಅವರುಗಳು ದೇವತಾರಾಧನೆ ಮಾಡಿಕೊಂಡು ಬರುವದಕ್ಕೆ ಅವಕಾಶಕೊಟ್ಟದ್ದರಿಂದಲೇ ಶ್ರೀ ಜಗದ್ಗುರುಗಳವರಿಗೆ ಸಮಸ್ತ ಪ್ರಾಣಿಗಳಲ್ಲಿಯೂ ಇರತಕ್ಕ ದಯಾಳುತ್ವವೂ ಬ್ರಾಹ್ಮಣವರ್ಣಕ್ಕೆ ಸೇರಿದ ಮತಾಂತರಸ್ಥರಲ್ಲಿಯೂಕೂಡ ಇರತಕ್ಕ ಅನುರಾಗವು ಜಗದ್ವಿಖ್ಯಾತವಾಗಿದ್ದಾಗ್ಯೂ ಇಂಥಾ ಮಹಾನುಭಾವರು ರಾಜರು ಮತ್ತು ರಾಷ್ಟ್ರದ ಕ್ಷೇಮಾರ್ಥವಾಗಿ ಶಿವವಿಷ್ಣು ದೇವಾಲಯಗಳಲ್ಲಿರತಕ್ಕ ದೇವರುಗಳಿಗೆ ಮಾಡತಕ್ಕ ಪೂಜೆಯು ಬಹುಕಾಲದಾರಭ್ಯ ಆಚಾರವಾಗಿ ನಡೆದುಬರುವಂಥಾದ್ದಾದಪ್ಪಾಗ್ಯೂ ಇವರನ್ನ ಈ ಪೂಜಕರಾದ ಶ್ರೀವೈಷ್ಣವರು ದ್ವೇಷಾಸೂಯದಿಂದ ಈಚೀಚಿಗೆ ಅಡ್ಡಿಮಾಡುವದಕ್ಕೆ ಉಪಕ್ರಮಿಸಿದರು. ಅಂಥಾಸಂದರ್ಭಗಳಲ್ಲೆಲ್ಲಾ ಆಯಾಯ ಕಾಲದಲ್ಲಿದ್ದ ರಾಜರು ಈ ಪೂಜಕರಿಗೆ ನಿರ್ಬಂಧಪಡಿಸಿ, ಶ್ರೀಜಗದ್ಗುರುಗಳವರು ಪೂಜೆಮಾಡುವದಕ್ಕೆ ಅವಕಾಶಗೊಳಿಸಿದ್ದಲ್ಲದೆ ಕೆಲವು ಸಂದರ್ಭಗಳಲ್ಲಿ ನೌಕರಿಯಿಂದ ಇವರನ್ನ ಬರತರ್ಫ್‌ಮಾಡೋಣದರಮೂಲಕ ಶಿಕ್ಷೆಯನ್ನ ಕೊಟ್ಟಿರುತ್ತಾರೆ. ಈಗ್ಯೆ ೩೪ ವರ್ಷಗಳಮುಂಚೆ ಅಂದರೆ ವಿಳಂಬಿಸಂವತ್ಸರದಲ್ಲಿ ಶ್ರೀಜಗದ್ಗುರುನರಸಿಂಹಭಾರತೀಸ್ವಾಮಿಗಳವರು ತಿರಮಕೂಡ್ಲು ನರಶೀಪುರದ ಶ್ರೀ ಗುಂಜಾನರಸಿಂಹಸ್ವಾಮಿಗೆ ಪೂಜೆಮಾಡುವಕಾಲದಲ್ಲಿ ಅಡ್ಡೀಪಡಿಸುವದಕ್ಕೆಬಂದ ದೇವಸ್ಥಾನದ ನೌಕರರಿಗೆ ನಿರ್ಬಂಧಪಡಿಸಿ ಶ್ರೀಗಳವರು ಕ್ರಮವಾಗಿ ಪೂಜೆಮಾಡುವದಕ್ಕೆ ಅವಕಾಶ

ವಂಕೊಡಿಸಿದ್ದಲ್ಲದೆ ಅಡ್ಡಿಮಾಡಿದ ಶ್ರೀವೈಷ್ಣವರನ್ನು ನೌಕರಿಯಿಂದ ವಜಾಮಾಡಿ ಇವರು ಮಾಡುತ್ತಿದ್ದ ನೌಕರಿಯನ್ನು ಸ್ಮಾರ್ತರಿಂದ ನಡಿಸುತ್ತಾ ಬಂದರು. ಆ ಕಾಲದಲ್ಲಿ ಸಂಭವಿಸಿದ ಆಗಮೋಕ್ತವಾದ ರಥೋತ್ಸವಾದಿಗಳನ್ನೂ ಸಹ ಸ್ಮಾರ್ತರೇ ನಡೆಯಿಸಿರುತ್ತಾರೆ. ಎಂಬುವದು ತಿರುಮಕೂಡಲುನರಶೀಪುರ ತಾಲ್ಲೂಕ್ ಮತ್ತು ಕಮಿಷನರ ಹುಜೂರು ರಿಕಾರ್ಡಿನಲ್ಲಿಯೂ ದಾಖಲೆ ಇರುತ್ತೆಂದು ತಿಳಿಯಬರುವದರಿಂದ ಅದರನ್ನೂ ಪರಾಮರಿಸಿದಲ್ಲಿ ವ್ಯಕ್ತಪಡುತ್ತೆ.

೫ ಶ್ರೀಜಗದ್ಗುರುಗಳವರು ಮೈಸೂರು ಶೀಮೆಯಲ್ಲಿರತಕ್ಕ ಪ್ರಸಿದ್ಧವಾದ ದೇವಾಲಯಗಳಲ್ಲಿರುವ ದೇವರುಗಳನ್ನ ಆರಾಧನೆ ಮಾಡುವದು ಮಾತ್ರವಲ್ಲದೆ ಮದ್ರಾಸು, ಬೊಂಬಾಯಿ, ಮುಂತಾದ ಪ್ರಸಿಡೆನ್ಸಿಯಲ್ಲಿರತಕ್ಕ ಆಗಮೋಕ್ತಾರಾಧನೆಗೆ ಒಳಪಟ್ಟಿರುವ ಪ್ರಸಿದ್ಧ ಶಿವ ವಿಷ್ಣುದೇವಾಲಯಗಳಲ್ಲಿಯೂ ದೇವತಾರಾಧನೆ ಮಾಡಿರುತ್ತಾರೆಂಬುವದು ಲೋಕಪ್ರಸಿದ್ಧವಾಗಿರುತ್ತೆ. ಅಂದರೆ ದಕ್ಷಿಣದೇಶದಲ್ಲಿ ಪ್ರಸಿದ್ಧವಾದ ದೇವಾಲಯಗಳು ತಿರುಪತಿ, ಶ್ರೀರಂಗ, ಕಾಂಚಿ, ಅನಂತಶಯನ, ದರ್ಭಶಯನ ಮುಂತಾದ ಸ್ಥಳಗಳಲ್ಲಿ ಅನೇಕಾವರ್ತಿ ಪೂಜೆ ಮಾಡಿರತಕ್ಕ ದಾಖಲೆಗಳಪೈಕಿ ಪ್ರಕೃತ ದೊರತಿರುವಷ್ಟರನ್ನೂ ಪರಾಂಬರಿಕೆ ಬಗ್ಯೆ ಹಾಜರ್ಮಾಡಿರುತ್ತೇವೆ. ಇದರಂತೆಯೆ ಈ ದೇಶದ ದೇವಾಲಯಗಳಲ್ಲಿ ಶ್ರೀಗಳವರು ದೇವತಾರಾಧನೆ ಮಾಡುವದಕ್ಕಾಗಿ ಅನೇಕ ರಾಜರು ಮತ್ತು ಅಧಿಕಾರಿಗಳು ಕೊಟ್ಟರತಕ್ಕ ಲಿಖಾವಟ್ಟುಗಳು ಸರಕಾರದಲ್ಲೂ, ಮತ್ತು ಶ್ರೀಮಠದಲ್ಲೂ, ಅನೇಕವಾಗಿರುತ್ತೆ. ಇವುಗಳಲ್ಲಿ ಪ್ರಕೃತ ನಮಗೆ ದೊರತಿರತಕ್ಕ ದಾಖಲೆಗಳು ಅಂದರೆ ಟೀಪ್ರೂಸುಲ್ತಾನರು ಕೊಟ್ಟರತಕ್ಕ ಒಂದೆರಡು ಸನ್ನದಿನ ನಕಲು, ಈ ಸಂಸ್ಥಾನದ ರಾಜ್ಯಭಾರ ಬ್ರಿಟೀಷ್ ಆಫೀಸರ ಅಖ್ಯಾಕೆಗೆ ಒಳಪಟ್ಟಿದ್ದ ಕಾಲ ಅಂದರೆ ೧೮೩೨ನೇ ಇಸವಿ ನಂದನಸಂವತ್ಸರದಲ್ಲಿ ಕಮಿಷನರ್ ಕ್ಯಾಷ್ ಮೆಜರ್ ಸಾಹೇಬರು ಕೊಟ್ಟಿರುವ ಒಟ್ಟು ಪರವಾನೆ ನಕಲನ್ನೂ, ಚೀಫ್ ಕಮಿಷನರ್ ಬೌರಿಂಗ್‌ಸಾಹೇಬರವರು ಇಂಡಿಯಾ ಗೌರ್ನಮೆಂಟಗೆ ಬರದ ಲೆಟರು, ಅದರ ಜವಾಬಿನ ನಕಲನ್ನೂ, ಹೈದರಾಬಾದ್ ಸರಕಾರದವರು ಕೊಟ್ಟಿರುವ ಸನ್ನದಿನ ತರ್ಜುಮಾನಕಲನ್ನೂ ಸಹ ಇದರ ಸಂಗಡ ಹಾಜರ್ಮಾಡಿರುತ್ತೇವೆ. ಈ ಪೈಕಿ ನಂದನ ಸಂವತ್ಸರದ ಒಟ್ಟು ಪರವಾನೆಯಲ್ಲಿ ನಮೂದಿಸಿರುವ ಮದ್ರಾಸ್ ಬಂಗಾಳಾ ಗೌನರವರು ಕೊಟ್ಟರತಕ್ಕ ಲೆಟರುಗಳು ಮತ್ತು ದಿವಾನ್ ಪೂರ್ಣಯ್ಯನವರು ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರವರು ಕೊಟ್ಟರತಕ್ಕ ಸನ್ನದು ವಗೈರೆ ಕಾಗದಪತ್ರಗಳ ಸಂಖ್ಯೆ (೪೫) ಆಗುತ್ತೆ. ಇವುಗಳೆಲ್ಲಾ ಕಮಿಷನರ ಬಳಿಗೆ ಹಾಜರಾಗಿರುತ್ತೆಂಬುವದು ಸದರಿ ಒಟ್ಟು ಪರವಾನೆಯಿಂದಲೇ ಗೊತ್ತಾಗುತ್ತೆ. ಇವುಗಳು ವಾಪಸ್ ಆಗದೆ ಚೀಫ್‌ಕಮಿಷನರ ಆಫೀಸ್ ರಿಕಾರ್ಡಿನಲ್ಲಿರುತ್ತೆಂಬದಾಗಿ ಕೇಳುತ್ತೇವೆ. ಅವುಗಳನ್ನ ಪರಾಂಬರಿಸಬೇಕೆಂದು ಬೇಡುತ್ತೇವೆ.

೬ ಮೇಲೆ ನಮೂದಿಸಿಗತಕ್ಕ ರಿಕಾರ್ಡುಗಳಿಂದ ಶ್ರೀ ಶೃಂಗೇರಿ ಜಗದ್ಗುರುಗಳವರಿಗೆ ಪ್ರಕೃತದಲ್ಲಿ ಪಾಂಚರಾತ್ರವೈಖಾನಸಾದಿ ಆಗಮೋಕ್ತವಾಗಿ ಆರಾಧಿಸಲ್ಪಡುತ್ತಿರುವ ಶಿವವಿಷ್ಣು ದೇವಾಲಯಗಳಲ್ಲಿರುವ ದೇವರುಗಳಿಗೆ ಸ್ವತಃ ಪೂಜೆಮಾಡತಕ್ಕ ವಿಶೇಷಬಾಧ್ಯತೆಯು ಮತ್ತು ಹಕ್ಕು ಉಂಟೆಂಬುವದು ರುಜುವಾತು ಆಗುವದು ಸರಿಯಷ್ಟೆ; ಪ್ರಕೃತ ಚರ್ಚೆಗೆ ಸಮ್ಮಂಧಪಟ್ಟ ಶ್ರೀರಂಗಪಟ್ಟಣದ ರಂಗನಾಥಸ್ವಾಮಿಯವರಿಗೆ ಶ್ರೀಗುರುಗಳವರು ಸ್ವತಃ ಪೂಜೆಮಾಡುವ ಹಕ್ಕು ಉಂಟೆಂಬುವದಕ್ಕೆ ಮೇಲೆ ಹೇಳಲ್ಪಟ್ಟ ಟೀಪ್ರೂಸುಲ್ತಾನರವರ ಸನ್ನದೇ ಸಾಕ್ಷಿಯಾಗಿರುವದಲ್ಲದೆ, ಇದಕ್ಕೆ ಅನುಸಾರವಾಗಿ ಪೂಜೆ ಮಾಡುತ್ತಿದ್ದರೆಂಬ ಸಂಗತಿಯನ್ನು ಹೇಳತಕ್ಕಂಥಾ ದೊಡ್ಡವಂಶೀಯರಾದ ಮಹಮ್ಮದೀಯರ್ ದೊಡ್ಡಮನುಷ್ಯರು ಅನೇಕರಿರುತ್ತಾರೆ. ಅವರನ್ನೂ ಸಾಕ್ಷ್ಯ ಕೊಡುವದರಲ್ಲಿ ಅಭ್ಯಂತರವಿರುವದಿಲ್ಲ. ಇದು ಅವಶ್ಯಕವಾದ್ದೆಂದು ತೋರುವಪಕ್ಷದಲ್ಲಿ ಗೌರ್ನಮೆಂಟಿನವರು ಅವರಿಂದಲೂ ತಿಳಿದುಕೊಳ್ಳಬಹುದು.

೭ ಶ್ರೀರಂಗಪಟ್ಟಣದ ಶ್ರೀ ರಂಗನಾಥದೇವರನ್ನ ಇಂಥಾವರು ಇಂಥಾಕಾಲದಲ್ಲಿ ಈ ರೀತಿಯಾಗಿ ಪ್ರತಿಷ್ಠೆ ಮಾಡಿದ ಸಂಗತಿ ನಿಸ್ಸಂದೇಹವಾಗಿ ಗೊತ್ತಾಗದೇ ಇದ್ದಾಗ್ಯೂ, ಇದು ಬಹಳ ಪುರಾತನವಾದದ್ದು. ಕೆಲವು ಶತಮಾನಗಳಕೆಳಗೆ ಗೌತಮಮಹರ್ಷಿಗಳು ಪೂಜಿಸುತ್ತಿದ್ದರೆಂಬುವದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರಷ್ಟೆ; ಮಹರ್ಷಿಗಳು ತಾಂತ್ರಿಕಾಗಮದೀಕ್ಷಾಬದ್ಧರಾದವರಲ್ಲ; ಪಾಷಂಡಿಗಳೂ ಅಲ್ಲ. ಇವರುಗಳು ವೈದಿಕಾಗಮದಲ್ಲಿ ಅರ್ಚನೆ ಮಾಡುತ್ತಿದ್ದರೆಂಬುವದು ಶಾಸ್ತ್ರಸಿದ್ಧವಾಗಿರುತ್ತೆ. ಅದನ್ನ ಅನುಸರಿಸಿಯೇ ಶ್ರೀಮಚ್ಛಂಕರಭಗವತ್ಪಾದರವರು ಈದೇವರನ್ನ ಅರ್ಚಿಸಿದರು. ಅದರಂತೆ ಅವರ ಪೀಠವನ್ನಲಂಕರಿಸಿದ ಗುರುಪರಂಪರೆಯವರೆಲ್ಲಾ ಪೂಜಿಸುತ್ತಾ ಬಂದರು. ಈ ಗೌತಮ ಮಹರ್ಷಿಗಳಿಗೆ ಗೋಹತ್ಯಾಪಾಪ ಸಂಘಟನೆ ಮಾಡಬೇಕೆಂದು ಕೆಲವು ದುಷ್ಟರಾದ ಬ್ರಾಹ್ಮಣರು ನಡೆಸಿದ ತಂತ್ರ ಅವರಿಗೆ ತಿಳಿದು ಇಂಥಾ ದುಷ್ಟಕೃತ್ಯ

ವನ್ನು ಮಾಡಿದ ಬ್ರಾಹ್ಮಣರು ಇವರ ವಂಶೀಯರು ತಪ್ತಮುದ್ರಾಂಕಿತರಾಗಿ ಪಾಂಚರಾತ್ರ ಶೈವಾದ್ಯಾಗಮದೀಕ್ಷಾಬದ್ಧರಾಗಿ ಕೆಟ್ಟು ಹೋಗಲಿ, ಎಂದು ಶಾಪಕೊಟ್ಟರೆಂತ ಗ್ರಂಥಗಳು ಇರೋಣದರಿಂದ ಗೌತಮಋಷಿಗಳು ಪಾಂಚರಾತ್ರಾಗಮ ದೀಕ್ಷಾಬದ್ಧರಲ್ಲವೆಂಬುವದು ಸ್ಪಷ್ಟವಾಗುತ್ತೆ.

೮ ಶ್ರೀರಂಗಪಟ್ಟಣದ ಶ್ರೀರಂಗನಾಥದೇವರಿಗೆ ಹಿಂದೂಮತಕ್ಕೆ ಸೇರಿದ ನಾಲ್ಕು ವರ್ಣದವರೂ ಭಕ್ತರು. ಈಗ ಚರ್ಚೆಮಾಡುತ್ತಿರುವ ಶ್ರೀವೈಷ್ಣವರು ಈ ಭಕ್ತಸಮುದಾಯವೆಂಬ ಸಮುದ್ರದಲ್ಲಿ ಕೆಲವು ತುಂತುರೆಗಳಾಗಿರುತ್ತಾರೆ. ಅಧಾಗ್ಯೂ ತಮ್ಮ ಮತಸ್ಥರು ಪ್ರಕೃತದಲ್ಲಿ ಪೂಜಕರಾಗಿರುತ್ತಾರಷ್ಟೆ ಆದ್ದರಿಂದ ದೇವರು ತಮ್ಮ ಸ್ವಂತ ಪದಾರ್ಥವೆಂದು ಭಾವಿಸುವ ದುರಭಿಮಾನ ವಿನಹ ಇತರ ಭಕ್ತರಿಗೆ ಇರತಕ್ಕದ್ದಕ್ಕಿಂತಲೂ ಬ್ಯಾರೆ ಯಾವ ವಿಧವಾದ ವಿಶೇಷ ಬಾಧ್ಯತೆಯೂ ದೇವರಲ್ಲಿ ಇವರಿಗೆ ಇರುವಹಾಗೆ ತೋರುವದಿಲ್ಲ. ಈ ದೇವಾಲಯವು ಸಂಸ್ಥಾನಕ್ಕೆ ಸೇರಿದ್ದು, ಸರ್ಕಾರದ ಜನರಲ್ ರೆವಿನ್ಯೂಯಿಂದ ಈ ದೇವರ ಆರಾಧನೇಖರ್ಚು ಸಲ್ಲುತ್ತಾಯಿಧೆ. ದೇವರಿಗೆ ಧರಿಸತಕ್ಕ ವಸ್ತ್ರಾಭರಣಗಳಲ್ಲಿ ಪ್ರಾಯಶಃ ಮೈಸೂರು ಸಂಸ್ಥಾನದ ಮಹಾರಾಜರವರ ಸಂತತಿಯಿಂದಲೇ ಕೊಡಲ್ಪಟ್ಟದ್ದಾಗಿರುತ್ತೆ. ಭಕ್ತರಿಂದ ಕೊಡಲ್ಪಟ್ಟದ್ದು ಅತ್ಯಲ್ಪವಾಗಿದ್ದಾಗ್ಯೂ ಅದೂ ಸರ್ಕಾರಕ್ಕೆ ಸೇರಿದ್ದಾಗಿರುತ್ತೆ. ಹೀಗೆ ಸಂಸ್ಥಾನಕ್ಕೆ ಒಳಪಟ್ಟ ಬಾಧ್ಯತೆಯನ್ನು ಶ್ರೀವೈಷ್ಣವರಲ್ಲಿ ಕೆಲವರು ಮಾತ್ರ ತಮಗೇನೇ ಇರುವಂತೆ ಎಣಿಸಿ ಗದ್ದಲ ಮಾಡುವದು ಎಷ್ಟರಮಟ್ಟಿಗೆ ಊರ್ಜಿತಪಡತಕ್ಕದ್ದೋ ಅದರನ್ನು ಗೌರ್ನಮೆಂಟಿನವರೇ ಆಲೋಚಿಸಬೇಕು. ಈ ಕಾರಣದಿಂದ ಇವರಿಗೆ ವಿಶೇಷ ಬಾಧ್ಯತೆ ಏನೂ ಇಲ್ಲದೇ ಇದ್ದಾಗ್ಯೂ ಚಿಜ್ಞಾಸಾರ್ಥವಾಗಿ ಇಧೆಯೆಂದು ಇಟ್ಟುಕೊಳ್ಳುವ ಸಂದರ್ಭದಲ್ಲಿಯೂ ಇವರ ಮತಸ್ಥಾಪಕರಾದ ಶ್ರೀರಾಮಾನುಜಾಚಾರ್ಯರವರ ಅವತಾರಕ್ಕಿಂತ ಸಾವಿರಾರು ವರುಷಗಳ ಹಿಂದೆ ಶ್ರೀಮಚ್ಛಂಕರ ಭಗವತ್ಪಾದರವರು ಅವತಾರಮಾಡಿದರೆಂಬ ಅಂಶವನ್ನು ಶ್ರೀವೈಷ್ಣವರು ಒಪ್ಪಿಕೊಳ್ಳದೇ ಇದ್ದರೆ ವಿಧಿ ಇಲ್ಲವಷ್ಟೆ ಇದರಿಂದ ಶ್ರೀಜಗದ್ಗುರುಗಳವರಿಗೆ ಇರತಕ್ಕ ಬಾಧ್ಯತೆಯು ಇವರಿಗಿಂತ ಸಾವಿರಾರು ವರುಷಗಳಮಟ್ಟಿಗೂ ಪ್ರಾಚೀನವಾಗಿರುತ್ತೆಎಂಬುವದು ಸಾಮಾನ್ಯವಾಗಿ ಸಕಲರಿಗೂ ತಿಳಿಯಬರುವಂಥಾ ಅಂಶವು ಇವರಿಗೆ ತಿಳಿಯದೇ ಹೋದದ್ದು ಮಾತ್ರವಲ್ಲದೆ, ಶ್ರೀ ಜಗದ್ಗುರುಗಳವರಿಗೆ ಹಕ್ಕೇ ಇಲ್ಲವೆಂದು ಹೇಳುವದು ಪರ್ಯಾಲೋಚನೆ ಯಿಲ್ಲದಮಾತಾಗಿ ತೋರುತ್ತೆ ಅಥವಾ ಪ್ರಕೃತ ಸಂದರ್ಭದಲ್ಲಿ ಇವರುಮಾಡತಕ್ಕ ವ್ಯಾಜ್ಯವು ಊರ್ಜಿತವಾಗದೇ ಇದ್ದಾಗ್ಯೂ ಮುಂದೆ ಮಾಡಬೇಕಾಗುವ ಇಂಥಾ ವ್ಯಾಜ್ಯಗಳಿಗೆ ತಾವು ಫಿರ್ಯಾದಿಗಳಾಗಿ ನಿಲ್ಲುವದಕ್ಕೆ ಇದು ಬಾಧ್ಯತೆಯನ್ನು ಕೊಡತಕ್ಕ ಪ್ರಿಸೀಡೆಂಟೆಯಾನೆ ಪೀಠಿಕಾ ರಚನೆಯಾಗಿರುತ್ತೆಂದು ಭಾವಿಸಿರಬಹುದಾಗಿತೋರುತ್ತೆ.

೯ ಶ್ರೀರಂಗನಾಥದೇವರಿಗೆ ಸಂಪ್ರೋಕ್ಷಣೆ ಆಗಬೇಕೆಂದು ವ್ಯಾಜ್ಯಮಾಡುವರ ಸಂಖ್ಯೆಯು ಈ ದೇವರಲ್ಲಿ ಅಭಿಮಾನವಿರತಕ್ಕ ಮತ್ತು ಇವರಿಗೆ ಸಮಾನವಾಗಿ ಹಕ್ಕು, ಬಾಧ್ಯತೆವುಳ್ಳ ಇತರ ಭಕ್ತರ ಸಮುದಾಯ ಸಂಖ್ಯೆಗೂ ಮೊಕಾಬಿಲೆ ನೋಡಿದರೆ ಒಟ್ಟು ಸಮುದಾಯದಲ್ಲಿ ಲಕ್ಷ ಪ್ರಜೆಗೆ ವ್ಯಾಜ್ಯಮಾಡುವರು ಒಬ್ಬರೆಂದೂ ಕೂಡ ಗಣಿಸುವದಕ್ಕೆ ಸಾಲದ್ದಾಗಿರುತ್ತೆ. ಆದ್ದರಿಂದ ಶ್ರೀಜಗದ್ಗುರುಗಳವರು ಆಗಾಗ್ಯೆ ಶ್ರೀರಂಗನಾಥದೇವರ ಆರಾಧನೆಮಾಡತಕ್ಕದ್ದು ಸರ್ವಜನ ಸಮ್ಮತವಾದದೆಂದು ಸರ್ಕಾರದವರು ಧಾರಾಳವಾಗಿ ನಂಬತಕ್ಕದ್ದಾಗಿರುತ್ತೆ.

೧೦ ಮೇಲೆ ಹೇಳಲ್ಪಟ್ಟಿರುವ ಸಂಗತಿಗಳೆಲ್ಲಾ ಸರ್ಕಾರೀ ವ್ಯಾವಹಾರಿಕರೀತ್ಯಾ ಶ್ರೀಜಗದ್ಗುರುಗಳವರಿಗೆ ಶ್ರೀ ರಂಗನಾಥದೇವರನ್ನು ಆರಾಧಿಸತಕ್ಕ ವಿಷಯದಲ್ಲಿರತಕ್ಕ ವಿಶೇಷ ಬಾಧ್ಯತೆಯನ್ನು ತೋರಿಸತಕ್ಕವುಗಳಾಗಿ ಇರುತ್ತವೆ. ಈ ಸಂಬಂಧವಾದ ಶಾಸ್ತ್ರಾಧಾರ ಅಪ್ರತಿಹತವಾದ ಸದಾಚಾರ ಮುಂತಾದ್ದರನ್ನು ಇದರಡಿಯಲ್ಲಿ ಶೃತಪಡಿಸಿರುತ್ತೇವೆ ಏನಂದರೆ.--

೧೧ ಶ್ರೀಜಗದ್ಗುರುಗಳವರು ಶ್ರೀ ರಂಗನಾಥದೇವರಿಗೆ ಅರ್ಚನೆ ಮಾಡತಕ್ಕದ್ದು ಪಾಂಚರಾತ್ರಾಗಮಕ್ಕೆ ವಿರುದ್ಧವಾಗಿರುತ್ತೆಂದು ಫಿರ್ಯಾದಿಗಳು ಹೇಳುವ ಅಂಶವನ್ನು ಖಂಡನೆಮಾಡತಕ್ಕ ಶಾಸ್ತ್ರ ಮತ್ತು ಆಚಾರವು ಹೇರಳವಾಗಿರುತ್ತೆ. ಆ ವಿಚಾರವನ್ನು ಪೂರ್ವಪಕ್ಷ ಸಮಾಧಾನ ಸಿದ್ಧಾಂತರೂಪವಾಗಿ ಶೃತಪಡಿಸಲು ಬಹಳ ವಿಳಂಬವಾಗುತ್ತಾದ್ದರಿಂದ ಸೂಕ್ಷ್ಮವಾಗಿ ಸಾಮಾನ್ಯಾಂಶಗಳನ್ನು ತಿಳಸದೆ ಇದ್ದರೆ ವಿಧಿಯಿಲ್ಲವಾಗಿ ತಿಳಿಸುವದೇನಂದರೆ:-- ಶೃತಿಸ್ಮೃತಿಗಳಲ್ಲಿ ಪರಸ್ಪರ ಭಿನ್ನಾಭಿಪ್ರಾಯಬಂದಾಗ್ಯೆ ಶೃತಿಯೇ ಪ್ರಬಲವಾದದ್ದೆಂತಲೂ, ತದ್ವತ್ ಸ್ಮೃತಿ ಪುರಾಣಗಳಲ್ಲಿ ಸ್ಮೃತಿಬಲವಾದ್ದೆಂತಲೂ ಪುರಾಣ ಇತಿಹಾಸಾದಿಗಳಲ್ಲಿ ಪುರಾಣಬಲವಾದ್ದೆಂತಲೂ ಹೀಗೆ ಎಲ್ಲಾದ್ದರಲ್ಲಿಯೂ ಭಿನ್ನಾಭಿಪ್ರಾಯಗಳು ಬಂದಕಾಲದಲ್ಲಿ ಮಹಾಜನಗಳು ಅನುಸರಿಸಿ ನಡೆಸಿಕೊಂಡು

ಬರುವ ಆಚಾರವೇ ಶಿಷ್ಟವಾದದ್ದೆಂತಲೂ ಈ ಆಚಾರದಲ್ಲಿ ನವೀನಗಳು ಪ್ರಾಚೀನಗಳು ಇರುತ್ತವೆ. ಇವುಗಳಲ್ಲಿ ಪುರಾತನಕ್ಕೆ ಪ್ರಾಶಸ್ತ್ಯವಿರುತ್ತೆಂಬುವದು ಸಾಮಾನ್ಯವಾಗಿ ಸರ್ವರಿಗೂ ತಿಳಿದಿರುತ್ತೆ. ಈಗ ಶ್ರೀವೈಷ್ಣವರು ಶ್ರೀರಂಗನಾಥದೇವರಿಗೆ ತಾವು ನಡಿಸತಕ್ಕ ಆರಾಧನೆಯು ಪಾಂಚರಾತ್ರಾಗಮಕ್ಕೆ ಒಳಪಟ್ಟಿರುತ್ತೆಂದೂನ್ನೂ ಇದು ಶ್ರೀವೈಷ್ಣವರು ದೇವಾಲಯಕ್ಕೆ ಸೇರಿದಾರಭ್ಯ ಆಚರಣೆಗೆ ತಂದಿರುತ್ತಾರೆಂದೂ ಗೊತ್ತಾಗಿರೋಣದರಿಂದ ಇವರ ಮತವೇ ನೂತನವಾಗಿರುವಲ್ಲಿ ಇವರ ಆಚಾರ ಪುರಾತನವಾಗಲಾರದಷ್ಟೆ, ಆದ್ದರಿಂದ ಇವರ ಆಚಾರವು ನವೀನಾಚಾರವೇ ಸರಿಯೆಂದು ದಾರಾಳವಾಗಿ ಹೇಳಬಹುದು. ಶ್ರೀಜಗದ್ಗುರುಗಳವರು ಮಾಡತಕ್ಕ ಆರಾಧನೆಯು ರಾಮಾನುಜ ಮತಕ್ಕಿಂತ ಸಾವಿರಾರು ವರ್ಷಗಳ ಹಿಂದಿನಿಂದಾ ಆಚರಣೆಯಲ್ಲಿ ಇರುತ್ತಾಗಿ ಇದು ಪ್ರಾಚೀನವಾದ ಆಚಾರವೆಂಬುವದು ಸ್ಪಷ್ಟವಾಗಿರುತ್ತೆ. ಮತ್ತು ಶ್ರೀಜಗದ್ಗುರುಗಳವರು ಪರಮಹಂಸಾಶ್ರಮದಲ್ಲಿ ಮಹರ್ಷಿಗಳಂತೆ ಇರತಕ್ಕವರುಗಳಾದ್ದರಿಂದ ಇತರ ಗೃಹಸ್ಥಾಶ್ರಮಗಳಂತ ದೀಕ್ಷಾದಿ ವಿಧಿಗಳಿಗೆ ಬದ್ಧರಾಗುವದಿಲ್ಲ. ಇವರು ಎಲ್ಲಾ ದೀಕ್ಷಿತರಿಗಿಂತಲೂ ಶ್ರೇಷ್ಠವಾದವರು. ಮತ್ತು ಪಾಂಚರಾತ್ರಾಗಮದೀಕ್ಷೆಗೆ ಬದ್ಧರಲ್ಲದ ಗೌತಮಮಹರ್ಷಿಗಳು ಈ ದೇವರನ್ನ ಆರಾಧಿಸುತ್ತಾ ಇದ್ದರೆಂಬುವದು ಗ್ರಂಥಗಳಲ್ಲಿ ಹೇಳಲ್ಪಟ್ಟಿರುವದಲ್ಲದೆ ಇದರನ್ನ ಶ್ರೀವೈಷ್ಣವರೇ ಒಪ್ಪಿಕೊಳ್ಳುತ್ತಾರೆ. ಆಗ್ಯೆ ಇವರವೆಂದು ಹೇಳಿಕೊಳ್ಳುವ ಶ್ರೀರಂಗನಾಥದೇವರು ಹ್ಯಾಗೆ ಅಶುಚಿ ಆಗಲಿಲ್ಲವೋ ಅದರಂತೆಯೆ ಗೌತಮಮಹರ್ಷಿಗಳು ಮಾಡುತ್ತಿದ್ದ ವಿಧಿಯನ್ನ ಅನುಸರಿಸಿ ಶ್ರೀಜಗದ್ಗುರುಗಳವರ ಪರಂಪರೆಯವರೆಲ್ಲಾ ಆರಾಧಿಸತಕ್ಕದ್ದು ಅಶುಚಿತ್ವವನ್ನುಂಟುಮಾಡತಕ್ಕದ್ದಲ್ಲವೆಂಬುವದು ಮತ್ತು ಆಧುನಿಕರಿಂದ ಪ್ರತಿಷ್ಠಿತವಾದ ಬಿಂಬಕ್ಕೆ ಮಾಡತಕ್ಕ ಆರಾಧನೆಯಂತೆ ಶ್ರೀವೈಷ್ಣವರು ಈ ಅನಾದಿ ದೇವರಿಗೆ ಮಾಡುವ ಆರಾಧನೆಯಿಂದ ಉಂಟಾದ ದೋಷಗಳನ್ನ ಪರಿಹಾರ ಮಾಡತಕ್ಕ ಶ್ರೀಜಗದ್ಗುರುಗಳವರು ಮಾಡತಕ್ಕ ಆರಾಧನಾ ಕ್ರಮವು ಸದಾಚಾರವಾದ್ದೆಂತಲೂ [illegible] ಪರರಾದವರು ತೀರ್ಮಾನಿಸದೆ ಇರಲಾರರು. ಈ ಮೇರೆ ಲೌಕಿಕಪಾರಮಾರ್ಥಿಕ ಎರಡು ವಿಧವಾದ ನ್ಯಾಯಗಳು ಅಪೇಕ್ಷಿಸುವ ಸಮಾಧಾನರೂಪವಾದ ಸಂಗತಿಗಳನ್ನೆಲ್ಲಾ ಶೃತಪಡಿಸಿರುತ್ತೇವೆ.

೧೨ ಮೇಲೆ ವಿವರಿಸಲ್ಪಟ್ಟ ಗ್ರಂಥಗಳು, ರಾಜರು ಮುಂತಾದವರು ಕೊಟ್ಟಿರತಕ್ಕ ಸನ್ನದಿನ ದಾಖಲೆಗಳು ದೃಷ್ಟಾಂತಗಳು, ಚಿರಕಾಲಾರಭ್ಯ ನಡೆದುಬರುವ ಮಾಮೂಲು ಶಾಸ್ತ್ರಸಮ್ಮತವಾದ ಆಚಾರವು, ಸರ್ವಜನ ಸಮ್ಮತಿಯೂ, ಇವುಗಳೆಲ್ಲಾ ಶ್ರೀರಂಗನಾಥದೇವರನ್ನ ಆರಾಧಿಸತಕ್ಕದ್ದಕ್ಕೆ ಶ್ರೀಜಗದ್ಗುರುಗಳವರಿಗೆ ಇರತಕ್ಕ ವಿಶೇಷ ಹಕ್ಕುಬಾಧ್ಯತೆಗಳನ್ನ ಸ್ಥಿರಪಡಿಸುತ್ತವೆ. ಇವುಗಳನ್ನೆಲ್ಲಾ ಘನವನ್ನ ಹೊಂದಿದ ಕೌನ್ಸಿಲ್ ಸಭೆಯವರು ಪರ್ಯಾಲೋಚಿಸತಕ್ಕ ಸಮಯದಲ್ಲಿ ಶ್ರೀಜಗದ್ಗುರುಗಳವರು ಈ ಮೇರೆ ದೇವತಾರಾಧನೆ ಮಾಡತಕ್ಕದ್ದು ಆ ಮಹಾನುಭಾವರ ಸ್ವಪ್ರಯೋಜನಕ್ಕಾಗಿ ಅಲ್ಲ. ರಾಜರು ಮತ್ತು ರಾಷ್ಟ್ರದ ಕ್ಷೇಮಾರ್ಥವಾಗಿ ಇವರುಗಳ ಅಪೇಕ್ಷೆಯನ್ನು ನೆರವೇರಿಸುವದಕ್ಕಾಗಿ ಮಾಡುತ್ತಾರೆ ಎಂಬುವದರನ್ನು ಮನಸ್ಸಿನಲ್ಲಿಟ್ಟುಕೊಂಡು ಭಾರಿಭಾರಿಗೂ ದುಷ್ಟರು ತೊಂದರೆ ಕೊಡುವದಕ್ಕೆ ಆಸ್ಪದವಿಲ್ಲದಂತೆ ನ್ಯಾಯವಾಗಿಯೂ, ಖಂಡಿತವಾಗಿಯೂ, ಇರುವ ತೀರ್ಮಾನವನ್ನ ಅಪ್ಪಣೆ ಕೊಡಿಸಬೇಕೆಂದು ವಿನಯಪೂರ್ವಕವಾಗಿ ಬರದುಕೊಂಡ ಅರ್ಜಿ.

ಜಯಲಕ್ಷ್ಮೀವಿಲಾಸ ಮುದ್ರಾಕ್ಷರಶಾಲಾ ದೊಡ್ಡಪೇಟೆ ಮೈಸೂರು



[illegible]

M.V. [illegible] Pillai

T. Ramaiah

[illegible]

[illegible]

P. Venkata [illegible]

[illegible]

B.C. Anantharamiah

[illegible]

Krishna Sastri

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

H. P. Ramaiah

Sreekunteiah

[illegible]

[illegible]

[illegible]

[illegible]

[illegible]

[illegible]

[illegible]

K Subbarao Pleader

[illegible]

P. Seetha Ramaiah

A. Ramanna

[illegible]

[illegible]

[illegible] shamma [illegible]

[illegible]

[illegible]

[illegible]

ಕಮಿಶಾಷನರಯಾನೆ ಇಲಾಖಾ ಸರಕಾರ ಕುಂಫನಿ ಬಹದ್ದರವರ ಪ್ರಾಂತ್ಯ,

ಮೈ ಸೂ ರು .

ನಂಜನಸಂವತ್ಸರದ ಭಾದ್ರಪದ ಶುದ್ಧ ೧೦ ಯಲ್ಲೂ ಅರಮನೆಶೀಮೆಗಡಿಗಳ ಅಮಿಲದಾರವರಿಗೆ ಬರೆಸಿ ಕಳುಹಿಸಿದ ನಿರೂಪ ಅದಾಗಿ:---

ಶ್ರೀ ಶ್ರಿಂಗೇರೀಜಗದ್ಗುರುಗಳವರ ಶ್ರೀ ಮಠದಿಂದ ಮಠಮುದ್ರೆ ಬ್ರಾಹ್ಮಣರುಬಂದು ನಿಮ್ಮ ನಿಮ್ಮ ತಾಲ್ಲೂಕಿನಲ್ಲಿ ಮಾಮೂಲ್‌ಮೇರಿಗೆ ಅವರ ಶಿಷ್ಯವರ್ಗಗಳ ಶ್ರೀ ಮಠದ ಆಚಾರವಿಚಾರ ವಿಚಾರಿಸಿಕೊಂಡು ಶ್ರೀ ಮಠಕ್ಕೆ ಬರತಕ್ಕ ಚರಣಕಾಣಿಕೆ, ಮೂಲಾನಕ್ಷತ್ರಕಾಣಿಕೆ, ಅಗ್ರತಾಂಬೂಲ, ದೀಪಾರಾಧನೆಕಾಣಿಕೆ, ಪ್ರಾಯಶ್ಚಿತ್ತಕಾಣಿಕೆ ಮುಂತಾಗಿ ಶಿಷ್ಯವರ್ಗ ಜನರಿಂದ ಬರಮಾಡಿಕೊಳ್ಳುವಲ್ಲಿ ಯಾರಾದರೂ ಕಾಣಿಕೆ ಕೊಡದೆ ಮುದ್ರಾತಿಕ್ರಮವಾಗಿ ನಡೆಮಕೊಂಡವರಿಗೆ ತಾಕೀತ್‌ಮಾಡಿ ಬಂದೋಬಸ್ತು ಮಾಡಿಸಿಕೊಡುವಬಗ್ಯೆ ಸದರೀ ಶಿಷ್ಯರಿಂದ ವಸೂಲಾದ ಕಾಣಿಕೆಗಳಿಗೆ ಯಾವ ಸರ್ಕಾರದವರೂ ಸುಂಕ ವಸೂಲ್‌ಮಾಡದಿರುವಬಗ್ಯೆ ಶ್ರೀ ಶ್ರಿಂಗೇರಿ ಶ್ರೀಮಠಕ್ಕೆ ಪೂರ್ವದಾರಭ್ಯದಿಂದ ಸೇರಿದ ಶಿಷ್ಯಜನರಲ್ಲಿ ಕೆಟ್ಟ ಹೆಣ್ಣುಗಳನ್ನು ಶ್ರೀಮಠದವರ ಹವಾಲಿಗೆ ಕೊಟ್ಟು ರಶೀತಿ ತಗದುಕೊಳ್ಳುವಬಗ್ಯೆ ಸದರೀ ಶ್ರೀಮಠಕ್ಕೆ ಪೂರ್ವದಾರಭ್ಯದಿಂದ ಸೇರಿದ ಬ್ರಾಹ್ಮಣರು ಮತ್ತು ಸಮಸ್ತ ಇತರ ಜಾತಿಯವರುಗಳಲ್ಲಿಯೂ ಸಹ ಆಯಾಯ ವರ್ಣಾಶ್ರಮರೀತ್ಯಾ ಆಯಾಯ ಕಾಲಗಳಲ್ಲಿ ಮುಂಜಿ, ಮದುವೆ, ಪ್ರಾಯಶ್ಚಿತ್ತ, ವಗೈರೆ ಮಾಡಿಕೊಳ್ಳತಕ್ಕಭಾಗದಲ್ಲಿ ಮಠವಿಚಾರಗಳಿಗೆ ಯಾವ ಸರಕಾರದವರೂ ಪ್ರವೇಶ ಮಾಡಕೂಡದೆಂಬುವಬಗ್ಯೆ ಶ್ರೀ ಜಗದ್ಗುರುಗಳವರ ಸವಾರಿಯು ಯಾವ ಗ್ರಾಮಗಳಿಗೆ ಬಂದಾಗ್ಯೂ ಆ ಸ್ಥಳದಲ್ಲಿರುವ ಶಿವ, ವಿಷ್ಣು, ವಗೈರೆ ವಿಶಿಷ್ಟ ದೇವಸ್ಥಾನಗಳನ್ನು ಶ್ರೀಗಳವರು ಪೂಜೆಮಾಡತಕ್ಕಬಗ್ಯೆ ಬಿಟ್ಟುಕೊಡತಕ್ಕಬಗ್ಯೆಸಹಾ.

೧೭೭೬ನೇ ಇಸವಿ ಏಪ್ರಿಲ್ ೨೦ಕ್ಕೆ ಸರಿಯಾದ ದುರ್ಮುಖಿಸಂ॥ ಚೈತ್ರಮಾಸದಲ್ಲಿ ಮೈಲಾಪುರಿ ಚನ್ನಪಟ್ಣದ ಗವರ್ನರ್ ಲಾರ್ಡ್‌ಪಿಕ್ಟಯಿ ಸಾಹೇಬರು ಕೊಟ್ಟಿರುವ ೩೬-೫೪ನೇ ನಂಬರ್ ಹುಕ್ಕುಂ, ಸದರಿ ದುರ್ಮುಖಿ ಸಂ॥ ಶ್ರಾವಣಶುದ್ಧ ೩ ಯಲ್ಲೂ ಬಂಗಾಳಾ ಗೌವರ್ನರ್‌ಜನರಲ್ ಸಾಹೇಬರು ಕೊಟ್ಟಿರುವ ೧೩೮ನೇ ನಂಬರು ಹುಕ್ಕುಂ. ೧೭೭೭ನೇ ಜನವರಿ ೨೦ಕ್ಕೆ ಸರಿಯಾದ ದುರ್ಮುಖಿಸಂ॥ ಪುಷ್ಯಮಾಸದಲ್ಲಿ ಮೈಲಾಪುರಿ ಚನ್ನಪಟ್ಣದ ಗವರ್ನರ್ ಲಾರ್ಡ್‌ಪಿಕ್ಟಯಿಸಾಹೇಬರು ಕೊಟ್ಟಿರುವ ೮೮ನೇ ನಂಬರುಹುಕ್ಕುಂ. ೧೭೮೦ನೇ ಅಕ್ಟೋಬರ್ ೨೮ಕ್ಕೆ ಸರಿಯಾದ ಶುಭಕೃತು ಸಂ॥ ಆಶ್ವೀಜಮಾಸದಲ್ಲಿ ತಂಜಾವೂರು ರೆಸಿಡೆಂಟರು ಜಾರ್ಜಸಲಿವಾನ್ ಸಾಹೇಬರವರು ಕೊಟ್ಟಿರುವ ೧೮ - ೨೮ನೇ ನಂಬರ್ ಹುಕ್ಕುಂ. ೧೭೮೦ನೇ ನವಂಬರ್ ೨೭ರಲ್ಲಿ ಮೈಲಾಪುರಿ ಚನ್ನಪಟ್ಣದ ಗವರ್ನರ್ ಲಾರ್ಡ್‌ಮಕಾರ್ಟ್ನಿಯವರು ಕೊಟ್ಟಿರುವ ೬೫ - ೭೪ನೇ ನಂಬರ್ ಹುಕ್ಕುಂ. ಸದರಿ ಡಿಶಂಬರ್ ೮ನೇ ತಾರೀಖಿನಲ್ಲಿ ಪ್ರಾಷ್ಟ್‌ಸಾಹೇಬರವರು ತಂಜಾವೂರು ಮೊಕ್ಕಾಂನಿಂದ ಕೊಟ್ಟಿರುವ ೨೯ - ೮೬ ನೇ ನಂಬರ್ ಹುಕ್ಕುಂ. ೧೭೮೩ನೇ ಏಪ್ರಿಲ್ ೨೮ಕ್ಕೆಸರಿಯಾದ ಶೋಭಕೃತುಸಂ॥ ಚೈತ್ರಮಾಸದಲ್ಲಿ ಕರ್ನಲ್ ಲ್ಯಾಂಗ್ಸ್‌ಸಾಹೇಬರು ತಂಜಾವೂರು ಮೊಕ್ಕಾಂನಿಂದ ಕೊಟ್ಟಿರುವ ೮೫ - ೯೬ನೇ ನಂಬರ್ ಹುಕ್ಕುಂ. ೧೭೮೩ನೇ ಮೇ ತಾರೀಖು ೪ ರಲ್ಲೂ ಜನರಲ್‌ಕೂಟ್‌ಸಾಹೇಬರು ಕೊಟ್ಟಿರುವ ೪೫ - ೯೯ ನೇ ನಂಬರು ಹುಕ್ಕುಂ. ೧೭೮೩ನೇ ಮೇ ತಾರೀಖು ೧೬ರಲ್ಲು ಕರ್ನಲ್ ಪ್ರೋಲಾರ್ಟನ್ ಸಾಹೇಬರವರು ಕೊಟ್ಟಿರುವ ೧೧೫ - ೧೫೦ನೇ ನಂಬರ್ ಹುಕ್ಕುಂ. ೧೭೮೫ನೇ ಇಸವಿ ಮಾರ್ಚಿ ೧೬ಕ್ಕೆ ಸರಿಯಾದ ಕ್ರೋಧಿಸಂ॥ ಫಾಲ್ಗುಣಮಾಸದಲ್ಲಿ ತಂಜಾವೂರು ರೆಸಿಡೆಂಟ್ ಹಡ್ಲಸ್ಟನ್‌ಸಾಹೇಬರುಕೊಟ್ಟಿರುವ ೧೬೬ - ೧೭೬ನೇ ನಂಬರ್ ಹುಕ್ಕುಂ. ಸದರಿ ೧೭೮೫ನೇ ಏಪ್ರಿಲ್ ೧೮ಕ್ಕೆ ಸರಿಯಾದ ವಿಶ್ವಾವಸು ಸಂ॥ ಚೈತ್ರಮಾಸದಲ್ಲಿ ಮೈಲಾಪುರಿ ಚನ್ನಪಟ್ಣದ ಗವರ್ನರ್ ಲಾರ್ಡ್‌ಜನರಲ್ ಮೆಡೋಸಾಹೇಬರವರು ಕೊಟ್ಟಿರುವ ೧೮೮ - ೯೮ನೇ ನಂಬರ್ ಹುಕ್ಕುಂ. ೧೭೮೬ನೇ ಜನವರಿ ೧೬ಕ್ಕೆ ಸರಿಯಾದ ವಿಶ್ವಾವಸು ಸಂ॥ ಪುಷ್ಯಮಾಸದಲ್ಲಿ ಲಾರ್ಡ್‌ವಾಲಿಸ ಸಾಹೇಬರವರು ಕೊಟ್ಟಿರುವ ೮೮ನೇ ನಂಬರು ಹುಕ್ಕುಂ. ೧೭೮೫ನೇ ಮಾರ್ಚಿ ೧೪ರಲ್ಲೂ ವೆಬ್ಬ್‌ಸಾಹೇಬರವರು ಕೊಟ್ಟಿರುವ ೨೫ನೇ ನಂಬರು ಹುಕ್ಕುಂ. ೧೭೯೦ನೇ ಸಾಧಾರಣ ಸಂ॥ ವೈಶಾಖಶುದ್ಧ ೧೧ ಯಲ್ಲಿ ಪ್ಲಾಯಡ್‌ಸಾಹೇಬರು ಸತ್ಯಮಂಗಲದ ಮೊಕ್ಕಾಂನಿದ ಕೊಟ್ಟಿರುವ ೨೦-೩೦೫ನೇ ನಂಬರುಹುಕ್ಕುಂ. ಸದರಿ ವೈಶಾಖ ಬಹುಳ ೧೧ ಯಲ್ಲೂ ಕಾರ್ಜಿಟ್‌ಸಾಹೇಬರು ಕೊಯಮತ್ತೂರು ಮೊಕ್ಕಾಮಿನಿಂದ ಕೊಟ್ಟಿರುವ ೩೪೫ - ೪೦೫ನೇ ನಂ॥ ಹುಕ್ಕುಂ. ಸದರೀ ಜ್ಯೇಷ್ಠಶುದ್ಧ ೮ ಯಲ್ಲೂ ಸರ್ವಯಜಮಾನರಾದ ಲಾರ್ಡ್‌ಕಾರ್ನವಾಲೀಸ್‌ಸಾಹೇಬರು ಕೊಟ್ಟಿರುವ ೪೨೮ - ೪೫೪ನೇ ನಂ॥ ಹುಕ್ಕುಂ. ಸದರೀ ಶ್ರಾವಣಶುದ್ಧ ೧೩ ಯಲ್ಲು ಮೇಜರ್‌ಕ್ಲೋಸ್‌ಸಾಹೇಬರವರು ಕೊಟ್ಟಿರುವ ೪೬೮ - ೫೩೬ನೇ ನಂ॥ ಹುಕ್ಕುಂ. ಸದರಿ ಶ್ರಾವಣಬಹುಳ ೫ ಯಲ್ಲೂ ದಂಡಿನ ಯಜಮಾನರಾದ ಚಾಲ್ಮರ್ಸ್‌ಸಾಹೇಬರು ಕೊಯಮತ್ತೂರು ಮೊಕ್ಕಾಂನಿಂದ ಕೊಟ್ಟಿರುವ ೫೪೫ - ೫೬೮ನೇ ಹುಕ್ಕುಂ. ೧೭೯೧ನೇ ಮೇ ೧ಕ್ಕೆ ಸರಿಯಾದ ವಿರೋಧಿಕೃತು ಸಂ॥ ವೈಶಾಖಮಾಸದಲ್ಲಿ ಜನರಲ್‌ಹಾರಿಸ್ ಸಾಹೇಬರು ಕೊಟ್ಟಿರುವ ೬೬೮ - ೭೮೨ನೇ ನಂ॥ ಹುಕ್ಕುಂ. ಸದರೀ ೧೭೯೧ನೇ ಮೇ ೫ ರಲ್ಲೂ ಲಾರ್ಡ್‌ವೆಲ್ಲಸ್ಲಿಸಾಹೇಬರವರು ಕೋರ್ಟಾಫ್ ಡೈರೆಕ್ಟರುಗಳಿಗೆ ಡಿಸ್ಪ್ಯಾಚನ್ನು ಬರಿಯುವದಕ್ಕೆ ಇಂಡಿಯಾ ಕಂಪೆನಿಯವರು ಕೊಟ್ಟಿರುವ ೧೪೦ನೇ ನಂ॥ ಹುಕ್ಕುಂ. ಸದರಿ ಮೇ ೧೫ರಲ್ಲೂ ಕೋರ್ಟಾಫ್ ಡೈರೆಕ್ಟರುಗಳು ಕೊಟ್ಟಿರುವ ೧೩೭ನೇ ನಂಬರು ಹುಕುಂ. ೧೭೯೨ನೇ ಮಾರ್ಚಿ ೩ಕ್ಕೆ ಸರಿಯಾದ ವಿರೋಧಿಕೃತು ಸಂವತ್ಸರದ ಫಾಲ್ಗುಣಮಾಸದಲ್ಲಿ ಲಾರ್ಡ್ ಕಾರ್ನವಾಲೀಸ್‌ಸಾಹೇಬರು ಕೊಟ್ಟಿರುವ ೯೨೪ - ೯೪೮ನೇ ನಂಬರು ಹುಕ್ಕುಂ ೧೭೯೨ನೇ ಮೇ ೧೪ಕ್ಕೆ ಸರಿಯಾದ ಪರೀಧಾವಿ ಸಂವತ್ಸರದ ವೈಶಾಖಮಾಸದಲ್ಲಿ

ಲಾರ್ಡ್ ವೆಲ್ಲಸ್ಲಿಸಾಹೇಬರವರು ಕೊಟ್ಟರುವ ೩೧೧ನೇ ನಂಬರು ಹುಕ್ಕುಂ. ೧೭೯೩ನೇ ಪ್ರಮಾದೀಚ ಸಂವತ್ಸರದ ವೈಶಾಖ ಶು॥ ೪ ಯಲ್ಲೂ ಮೈಲಾಪ್ರುರಿಚನ್ನಪಟ್ಟಣದ ಗವರ್ನರ್ ಲಾರ್ಡ್‌ಹೋಬಾರ್ಟ್ ಸಾಹೇಬರವರು ಕೊಟ್ಟರುವ ೯೯೬ನೇ ನಂಬರು ಹುಕ್ಕುಂ. ಸದರಿ ವೈಶಾಖ ಬ॥ ೫ ಯಲ್ಲೂ ವೆಬ್ ಸಾಹೇಬರು ಕೊಟ್ಟರುವ ೯೯೪ನೇ ನಂಬರು ಹುಕ್ಕುಂ. ಸದರಿ ಜ್ಯೇಷ್ಠ ಶು॥ ೭ ಯಲ್ಲೂ ಜಾರ್ಜ್‌ಸಾಹೇಬರು ಕೊಟ್ಟರುವ ೨೧೪ನೇ ನಂಬರು ಹುಕ್ಕುಂ. ಸದರಿ ಪ್ರಮಾದೀಚ ಸಂವತ್ಸರದ ಕಾರ್ತೀಕಮಾಸದಲ್ಲಿ ದೊಡ್ಡನವಾಬರಾದ ಹೈದರಲ್ಲಿ ಸಾಹೇಬರು ಕೊಟ್ಟರುವ ಸನ್ನದು. ೧೭೯೪ನೇ ಜೂನ್ ೨೪ಕ್ಕೆ ಸರಿಯಾದ ಆನಂದಸಂವತ್ಸರದ ಜ್ಯೇಷ್ಠಮಾಸದಲ್ಲಿ ಸದರಿ ಜಾರ್ಜ್‌ಸಾಹೇಬರವರು ಕೊಟ್ಟರುವ ೨೪೨ನೇ ನಂಬರು ಹುಕ್ಕುಂ. ೧೭೯೫ನೇ ಇಸವಿ ಜುಲೈ ೯ಕ್ಕೆ ಸರಿಯಾದ ರಾಕ್ಷಸ ಸಂವತ್ಸರದ ಆಷಾಢಮಾಸದಲ್ಲಿ ಮೈಲಾಪ್ರುರಿಚನ್ನಪಟ್ಟಣದ ಗವರ್ನರ್ ಲಾರ್ಡ್‌ಹೋಬಾರ್ಟ್ ಸಾಹೇಬರು ಕೊಟ್ಟರುವ ೮೧೪ನೇ ನಂಬರು ಹುಕ್ಕುಂ. ೧೭೯೬ನೇ ಇಸವಿ ಫೆಬ್ರವರಿ ೧೫ರಲ್ಲೂ ಸದರಿ ಹೋಬಾರ್ಟ್‌ಸಾಹೇಬರು ಕೊಟ್ಟರುವ ೨೧೨ನೇ ನಂಬರು ಹುಕ್ಕುಂ. ೧೭೯೭ನೇ ಇಸವಿ ಆಗಸ್ಟ್ ೨೬ಕ್ಕೆ ಸರಿಯಾದ ಪಿಂಗಳ ಸಂವತ್ಸರದ ಶ್ರಾವಣಮಾಸದಲ್ಲಿ ಮೈಲಾಪ್ರುರಿಚನ್ನ ಪಟ್ಟಣದ ಗವರ್ನರ್ ಲಾರ್ಡ್ ಕ್ಲೈವ್‌ಸಾಹೇಬರು ಕೊಟ್ಟರುವ ೯೯೮ನೇ ನಂಬರು ಹುಕ್ಕುಂ. ೧೭೯೮ನೇ ಮಾರ್ಚ್ ೨೪ಕ್ಕೆ ಸರಿಯಾದ ಪಿಂಗಳ ಸಂವತ್ಸರದ ಫಾಲ್ಗುಣಮಾಸದಲ್ಲಿ ಸರ್ವ ಯಜಮಾನರಾದ ಬಂಗಾಳಾ ಗವರ್ನರ್‌ಜನರಲ್ ಲಾರ್ಡ್ ಮಾರ್ನಿಂಗ್ಟನ್ ಸಾಹೇಬರು ಕೊಟ್ಟರುವ ೩೦೬ನೇ ನಂಬರು ಹುಕ್ಕುಂ. ೧೭೯೮ನೇ ಮೆ ೧ಕ್ಕೆ ಸರಿಯಾದ ಕಾಳಾಯುಕ್ತಿ ಸಂವತ್ಸರದ ವೈಶಾಖಮಾಸದಲ್ಲಿ ಲಾರ್ಡ್‌ಕ್ಲೈವ್‌ಸಾಹೇಬರು, ಲಾರ್ಡ್ ಮಾರ್ನಿಂಗ್ಟನ್‌ಸಾಹೇಬರೂ ಸಹ ಕೊಟ್ಟರುವ ೧೮೪ನೇ ನಂ॥ ಹುಕ್ಕುಂ. ೧೭೯೯ನೇ ಜನವರಿ ೧೪ಕ್ಕೆ ಸರಿಯಾದ ಕಾಳಾಯುಕ್ತಿ ಸಂವತ್ಸರದ ಪುಷ್ಯಮಾಸದಲ್ಲಿ ಜನರಲ್ ಹಾರಿಸ್‌ಸಾಹೇಬರವರು ಕೊಟ್ಟರುವ ೧೧೦ನೇ ನಂಬರು ಹುಕ್ಕುಂ. ಇದೇ ಪುಷ್ಯ ಬ॥ ೧೪ರಲ್ಲೂ ವೆಬ್‌ಸಾಹೇಬರು ಕೊಟ್ಟರುವ ೩೪೮ನೇ ನಂಬರು ಹುಕ್ಕುಂ. ೧೭೯೯ನೇ ಎಪ್ರೈಲ್ ೧೬ಕ್ಕೆ ಸರಿಯಾದ ಸಿದ್ಧಾರ್ಥಿ ಸಂವತ್ಸರದ ಚೈತ್ರಮಾಸದಲ್ಲಿ ಲಾರ್ಡ್‌ಕ್ಲೈವ್‌ಸಾಹೇಬರ ಹುಕ್ಕುಂ ಮೇರಿಗೆ ವೆಬ್‌ಸಾಹೇಬರು ಕೊಟ್ಟರುವ ೮೧೬ನೇ ನಂಬರು ಹುಕ್ಕುಂ. ೧೭೯೯ನೇ ಮೇ ೧೪ಕ್ಕೆ ಸರಿಯಾದ ಸಿದ್ಧಾರ್ಥಿಸಂವತ್ಸರದ ವೈಶಾಖಮಾಸದಲ್ಲಿ ಜನರಲ್ ಹಾರಿಸ್‌ಸಾಹೇಬರು ಕೊಟ್ಟರುವ ೮೬ - ೩೩೬ನೇ ನಂಬರು ಹುಕ್ಕುಂ. ೧೭೯೯ನೇ ಜೂನ್ ೩೦ರಲ್ಲೂ ಸರ್ವ ಯಜಮಾನರಾದ ಬಂಗಾಳಾ ಗವರ್ನರ್‌ಜನರಲ್ ಲಾರ್ಡ್ ಮಾರ್ನಿಂಗ್ಟನ್‌ಸಾಹೇಬರವರು ಕೊಟ್ಟರುವ ೫೧೬ನೇ ನಂಬರು ಹುಕ್ಕುಂ. ಈ ಹುಕ್ಕುಂಗಳನ್ನು ಅನುಸರಿಸಿ ಪ್ರಭವಸಂವತ್ಸರದ ಆಶ್ವೀಜ ಶು॥ ೩ ಮುಕ್ಕಾಂನಲ್ಲೂ, ಸದರಿ ಪ್ರಭವಸಂವತ್ಸರದ ಮಾರ್ಗಶಿರ ಬ॥ ೧೩ ಭಾನುವಾರದ ಮುಕ್ಕಾಂನಲ್ಲೂ, ವಿಭವಸಂವತ್ಸರದ ಮಾರ್ಗಶಿರ ಶು॥ ೩ ಭಾನುವಾರದ ಮುಕ್ಕಾಂನಲ್ಲೂ ಸಹ ದಿವಾನ್ ಪೂರ್ಣಯ್ಯನವರು ಕೊಟ್ಟರುವ ಪರವಾನೆ ಮತ್ತು ರಹದಾರಿ. ೧೮೦೩ನೇ ಡಿಶಂಬರು ೨೩ರಲ್ಲೂ, ೧೮೦೮ನೇ ನವಂಬರು ೨೧ರಲ್ಲೂ ಸಹ ರಸಿಡೆಂಟರು ಕೋಲ್‌ಸಾಹೇಬರು ಕೊಟ್ಟರುವ ೯೪೨ - ೮೨೬ನೇ ನಂಬರು ಹುಕ್ಕುಂಗಳು, ೧೮೦೮ನೇ ನವಂಬರು ೨೧ರಲ್ಲೂ ಮೈಲಾಪ್ರುರಿಚನ್ನಪಟ್ಟಣದ ಗವರ್ನರ್ ಲಾರ್ಡ್ ಬಲ್ಲೂರ್‌ಸಾಹೇಬರು ಕೊಟ್ಟರುವ ೯೦೮ನೇ ನಂಬರು ಹುಕ್ಕುಂ. ಸನ್ ೧೮೨೨ನೇ ಇಸವಿ ಜೂನ್ ತಾರೀಖು ೨೬ರಲ್ಲೂ ಮತ್ತು ೧೮೨೬ನೇ ಇಸವಿ ಸೆಪ್ಟಂಬರು ತಾರೀಖು ೯ರಲ್ಲೂ ಸಹ ಮಹಾರಾಜರಾಜಾಸಾಹೇಬ್ ಬಹದ್ದೂರವರು ಕೊಟ್ಟರುವ ಸನ್ನದು, ಮತ್ತು ರಹದಾರಿ ಸಹ ಸಾದರಾಗಿ ಇರುವದನ್ನು ಶ್ರೀಮಠದ ಪಾರುಪತ್ಯೇಗಾರ ಭಿಷ್ಟಿತ್ರಯ್ಯಶಾಸ್ತ್ರಿಗಳು ಹುಜೂರಲ್ಲಿ ಹಾಜರ್‌ಮಾಡಿ ಈ ಮೇರಿಗೆ ಅಪ್ಪಣೆ ಆಗಬೇಕೆಂದು ಅರ್ಜಿ ಮಾಡಿಕೊಂಡದ್ದರಿಂದ ಅಪ್ಪಣೆ ಕೊಡಿಸಿ ಇದ್ದೀತು. ಸದರಿ ಬರಸಿರುವ ಮೇರಿಗೂ ಬಿಲ್‌ಷೇಲ್‌ಸಾಬುಕಿನ ಹುಕ್ಕುಂಗಳು, ಪರವಾನೆ ಸನ್ನದು, ರಹದಾರಿ ಸಹ ಇರುವ ಮಾಮೂಲ್ಮೇರಿಗೆ ನಡೆದುಕೊಳ್ಳುವದು.

ತಾರೀಖು ೫ನೇ ಮಾಹೆ ಸೆಪ್ಟಂಬರ್ ಸನ್ ೧೮೩೨ನೇ ಇಸವಿ ದರಜಾಗಾ ಬೆಂಗಳೂರು ಕ್ಯಾಷ್ ಮೇಜರ್ ಕಮಿಷನರ್ ಎಂದು ಸೈನಿಧೆ. ಸೂರಪ್ಪ, ಹೆಡ್ ದಿವಾನ್ ಎಂದು ಸೈನಿಧೆ.

ಶ್ರೀಮತ್ಪರಮಹಂಸ ಯಥೋಕ್ತಬಿರುದಾಂಕಿತರಾದಂಥ ಶ್ರೀ ಸಚ್ಚಿದಾನಂದಭಾರತಿಗ್ಳಳಿಗೆ.

ಟೀಪು ಸುಲತಾನ್ ಪಾದಷಹರು ಮಾಡುವ ಸಲಾಂ. ನೀವು ಕಳುಹಿಸಿದ ಪತ್ರಿಕೆಯಿಂದ ಎಲ್ಲಾ ವಿವರವು ತಿಳಿಯಬಂತು. ನಮ್ಮ ಸರಕಾರದ ಶೀಮೆಯಲ್ಲಿ ಇರುವ ದೇವಸ್ಥಾನ ಪುಣ್ಯಕ್ಷೇತ್ರಗಳಲ್ಲೂ ದೇವತಾದರ್ಶನಮಾಡಿಕೊಂಡು ಬರತಕ್ಕಬಗ್ಗೆ ಅಪ್ಪಣೆಕೊಟ್ಟು ರಹದಾರಿ ಕಳುಹಿಸಿಕೊಟ್ಟಲ್ಲಿ ಹೋಗಿ ದೇವರ ಸನ್ನಿಧಿಗಳಲ್ಲಿ ಸರಕಾರದ ಶ್ರೇಯಸ್ಸು ಪ್ರಾರ್ಥಿಸಿಕೊಂಡು ಬರುವದಾಗಿ ಬರದು ಇರುವದು ಸರಿಯಷ್ಟೆ; ಅದೇಪ್ರಕಾರಕ್ಕೆ ರಹದಾರಿ ಕಳುಹಿಸಿ ಇದ್ದೀತು. ಸರಕಾರದ ಶೀಮೆಯಲ್ಲಿರುವ ದೇವತಾಸ್ಥಳ ಪುಣ್ಯಕ್ಷೇತ್ರಗಳಲ್ಲಿ ಸಹ ಹೋಗಿ ದೇವರ ಸನ್ನಿಧಾನಗಳಲ್ಲು ತಾವು ತ್ರಿಕಾಲ ಈಶ್ವರಪೂಜೆಯನ್ನೂ ಸಹ ಸರಕಾರದ ಶ್ರೇಯೋಭಿವೃದ್ಧಿಯಾಗುವಂತೆ ಈಶ್ವರಪ್ರಾರ್ಥನೆ ಮಾಡಿಕೊಂಡು ಬರುವಹಾಗೆ ಮಾಡಿಸುವದು. ತಾರೀಖು ೧೦ನೇ ಮಾಹೆ ಜಾಫರಿಸಾಲ್ ಇರಾರಸಕ್ ಸನ್ ೧೨೨೪ ಮುಹಮ್ಮದು ನಳಸಂವತ್ಸರ ಎಂತ ಇಧೆ.

ಜಯಲಕ್ಷ್ಮೀವಿಲಾಸ ಮುದ್ರಾಕ್ಷರಶಾಲಾ ದೊಡ್ಡಪೇಟೆ ಮೈಸೂರು.

ಮುಲ್ಕಿ ೫೧ ನಂಬರು.
೨೯

ನರಶೀಪುರದ
ತಾಲ್ಲೂಕ ಮೊಹರು

ನ ರ ಶೀ ಪು ರ ದ ತಾ ಲ್ಲೂ ಕು ಕ ಚೇ ರಿ ಯಿಂ ದ.

ಕಸಬಾ ಲಕ್ಷ್ಮೀನರಸಿಂಹಸ್ವಾಮಿಯವರ ದೇವಸ್ಥಾನದ ಪಾರುಪತ್ಯಗಾರ ಕೃಷ್ಣಪ್ಪನವರಿಗೆ

ಇಂಡಾರ್ಸು ಹುಕುಂ.

ಶ್ರೀ ಶೃಂಗೇರಿ ಜಗದ್ಗುರುಗಳಾದ ನರಸಿಂಹಭಾರತೀಸ್ವಾಮಿಗಳವರು ನರಶೀಪುರಕ್ಕೆ ಚಿತ್ತೈಸಿದ್ದಾಗ್ಯೆ ದೇವರಪೂಜಾ ಮಂಗಳಾರತಿ ಪಾದಕಾಣಿಕೆ ಮುಂತಾದ್ದು ಮಾಡುವದಕ್ಕೆ ಮಾಮೂಲ್‌ಮೇರೆ ಸದರೀ ಲಕ್ಷ್ಮೀನರಸಿಂಹಸ್ವಾಮಿಯವರ ದೇವಸ್ಥಾನಕ್ಕೆ ದಯಮಾಡಿಸಿದ್ದವೇಳೆ ಅರ್ಚಕ ಕೃಷ್ಣಭಟ್ಟ ಬಾಗಿಲು ಹಾಕಿಕೊಂಡಿದ್ದನಿಮಿತ್ಯ ಸ್ವಲ್ಪಹೊತ್ತು ಸ್ವಾಮಿಗಳವರು ಬಾಗಿಲು ತಗೆಯುತಕ್ಕದ್ದರ ನಿರೀಕ್ಷಣೆಮಾಡುವಂತೆ ಮಾಡಲ್ಪಟ್ಟ ಸದರಿ ಅರ್ಚಕನಿಗೆ ಬಂದೋಬಸ್ತು ಆಗತಕ್ಕ ವಿಷಯದಲ್ಲಿ ನೀನು ಹುಜೂರು ಫಿರ್ಯಾದುಮಾಡಿದ್ದಕ್ಕೆ ತಾಲ್ಲೂಕಿನಿಂದ ಜಾಹಿರ್ಮಾಡಿದ್ದ ರಿಪೋರ್ಟಿನಮೇಲೆ ಈ ದಫಾಕ್ಕೆ ನಿಮ್ಮ ಮುನಾಸಬ್ ಅರ್ಚಕನಿಗೆ ಜುರ್ಮಾನೆವಿಧಿಸಿ ಫೈಸಲ್‌ಮಾಡುವಂತೆ ಕೊಟ್ಟಿರುವ ಹುಕುಂ ಅಮಲ್‌ಜಾರಿ ಆಗಿರುವ ತಪಶೀಲನ್ನು ಅರ್ಜೀದಾರಗೆ ತಿಳಿಸುವಂತೆ ಸರ್ ಮುಜಕೂರು ಮೆ ೧೭ನೇ ಮರ್ಕೂಂ ಮುಜರಾಯಿ ೧ನೇ ನಂಬರು ಹುಕುಂ ಸಾದರಾದಕಾರಣ ಈ ಮೊಕದ್ದಮಾ ಕಟ್ಟು ಮುಂತಾದ ಕಾಗದ ಪತ್ರಗಳ ನೋಡುವಾಗ್ಯೆ ಕೂಡ್ಲೆ ಅರ್ಚಕ ಬಾಗಿಲು ತೆಗದ್ದಾಗಿಯೂ ಶ್ರೀ ಸ್ವಾಮಿಗಳವರು ಕಟ್ಲೇಪ್ರಕಾರ ಪೂಜಾ, ಪಾದಕಾಣಿಕೆ, ಮಂಗಳಾರತಿ ಮುಂತಾಗಿ ನೆರವೇರಿಸಿದಬಳಿಕ ಮಾಮೂಲ್‌ಮೇರೆ ಮರಿಯಾದೆ ನಡೆಸಿರುವದಾಗಿ ಅರ್ಚಕ ಕೃಷ್ಣಭಟ್ಟನಕೈಫಿಯತಿನಿಂದ ತಿಳಿಯಬರುವದಲ್ಲದೆ ದೇವಸ್ಥಾನದ ಬಾಗಿಲು ಹಾಕಿದ ತಪ್ಪಿತಕ್ಕಾಗಿ ಸನ್ ೧೮೬೬ನೇ ಇಸವಿ ಏಪ್ರಿಲ್ ೧೬ನೇ ಮರ್ಕೂಂ ಮುಜರಾಯಿ ೫ನೇ ನಂಬರು ಹುಕುಂ ಪ್ರಕಾರ ಈ ದಫಾಕ್ಕೆ ಸದರಿ ಅರ್ಚಕ ಕೃಷ್ಣಭಟ್ಟನಿಗೆ ೨ರೂಪಾಯಿ ಜುರ್ಮಾನೆ ಮೊಕರರ್‌ಮಾಡಿ ವಸೂಲ್ಮಾಡಿರುತ್ತೆ. ತಿಳಿಯುವದು. ತಾರೀಖು ೧೪ನೇ ಮಾಹೆ ಜೂನ್ ಸನ್ ೧೮೬೬ನೇ ಇಸವಿ ಮೊಕ್ಕಾಂ ಕಸಬಾ. ... ... *

ರುಜು ನಾರಾಯಣರಾವ್ ಮಾಮಲೇದಾರ್,

ಖ ದಾಖಲ್. ಎಂದು ಮುಹಾರಾಜು

ಲಕ್ಷ್ಮೀವಿಲಾಸ ಮುದ್ರಾಕ್ಷರಶಾಲಾ ದೊಡ್ಡಪೇಟೆ

ಕೃ॥ ೩॥ ನಂಬರು.
295.

ಶ್ರೀ ಶೃಂಗೇರಿ ಸ್ವಾಮಿಗಳವರ ಮಠಕ್ಕೆ ಸೇರಿದ ಸರ್ವ ಧರ್ಮಾಧಿಕಾರ
ಲಕ್ಷ್ಮೀನರಸಿಂಹಶಾಸ್ತ್ರಿಗಳಿಗೆ-- ಅಂಕಿ.

ಈ ದಿವಸ ಶ್ರೀ ಶೃಂಗೇರಿ ಸ್ವಾಮಿಗಳವರು ನರಶೀಪುರದ ಶ್ರೀ ಗುಂಜಾನರಸಿಂಹಸ್ವಾಮಿಯವರ ದೇವಸ್ಥಾನಕ್ಕೆ ದಯಮಾಡಿಸಿ, ಪೂಜೇ ಮುಂತಾದ್ದುಮಾಡಿ ಬರಬೇಕಾದ್ದರಿಂದ ಮಾಮೂಲ್ ಅನುಸರಿಸಿ ಮರ್ಯಾದಿ ಮುಂತಾದ್ದು ನಡಿಯಲು ಹುಕ್ಕುಂ ಆಗಬೇಕೆಂದು ವಗೈರೇ ನೀವು ಬರಸಿದ ಖತ್ತು ತಲಪಿತು,

ಶ್ರೀ ಶೃಂಗೇರಿ ಸ್ವಾಮಿಗಳವರು ಮಾಮೂಲ್ ಮತ್ತು ಪದ್ಧತಿ ಅನುಸರಿಸಿ ಶ್ರೀ ಗುಂಜಾನರಸಿಂಹಸ್ವಾಮಿಗಳವರ ದೇವಸ್ಥಾನಕ್ಕೆ ದಯಮಾಡಿಸಿ ಮಾಮೂಲ್ ಮತ್ತು ಪದ್ಧತಿ ಅನುಸರಿಸಿ ದೇವರಿಗೆ ಅರ್ಚನೆ ಕರ್ಪೂರಾರತಿ ಮಾಡಿ ದಯಮಾಡಿಸಬಹುದು. ಇದರಲ್ಲಿ ಗೈರ್‌ಮಾಮೂಲ್ ಮತ್ತು ಜನರ ನೆಮ್ಮದಿಗೆ ಭಂಗಕರವಾದ ಕೃತ್ಯ ನಡೆಯಲು ಆಕರಮಾಡಕೂಡದು. ಹಾಗೆ ಮಠದಕಡೆ ಜನರಿಂದ ಗಲಾಟೆಗೆ ಆಕರವಾದಲ್ಲಿ ರಿಗಲರ್‌ಪೋಲೀಸ್ ರೂಲ್ಸ್‌ಅನುಸರಿಸಿ ಅಂಥಾಜನರವಿಷಯದಲ್ಲಿ ನಡೆಸಲು ಆಸ್ಪದವಾದೀತೆಂಬ ಈಸಂಗತಿಗಳನ್ನೆಲ್ಲಾ ಶ್ರೀಸ್ವಾಮಿಗಳವರಿಗೆ ಅರಿಕೇಮಾಡಿ, ಮಾಮೂಲ್ ಮತ್ತು ಪದ್ಧತಿ ಅನುಸರಿಸಿ ನಡೆಯಬೇಕಾಗಿದೆ. ಅದಕ್ಕೆ ವಿರೋಧವಾದ ಯಾವ ಕೃತ್ಯವೂ ನಡೆಯಬಾರದು. ಈ ವಿಷಯವನ್ನು ಕುರಿತು ದೇವಸ್ಥಾನದ ನೌಕರಿಗೂ ಹುಕ್ಕುಂ ಕೊಟ್ಟು ಉಸ್ತುವಾರೀಗೆ ಪೋಲೀಸ್ ಇಲಾಖೆಯವರಿಗೂ ತಿಳಿಯಪಡಿಸಿದೆ:

7—9—76.
ನರಶೀಪುರ ತಾಲ್ಲೂಕ್
ತಲಕಾಡು.

(Sd) *M. SHAIK IBRAHIM.*

ಥ- ಮೆ-

ತಲ್ಕಾಡು ತಾಲ್ಲೂಕ್
ಮೇಜಿಸ್ಟ್ರೇಟರ
ಮೊಹರು.

ಜಯಲಕ್ಷ್ಮೀವಿಲಾಸ ಮುದ್ರಾಕ್ಷರಶಾಲಾ ದೊಡ್ಡಪೇಟೆ ಮೈಸೂರು.

GENERAL NO. 2396/101 OF 1868-69.

MYSORE COMMISSIONER'S OFFICE.

Bangalore, 27th July, 1868

TO

The Secretary to the Government of India,

Foreign Department

SIMLA.

SIR,

In reply to para 2 of your letter 1201, dated 16th instant, I have the honor to submit for the information of the Government of India the following explanation

2. The Sringeri Guru is the direct representative of the Sect n ian Shunk n Acharya and is the acknowledged spiritual Director not only of the greater proportion of the Hindus of Southern India, but also of those of the leading Maharatta Houses, such as Holakr and the former Peshwas. It may be said that his influence is far greater than that of any Hindu spiritual guide in India and I presume it is for this reason that he is regarded with such unlimited respect He is the only Guru in the Province who is permitted to carry the Adda Palkee or Cross Palankeen, and he has in his possession Sunuds of great antiquity from the Nizam, the Peishwas, the Mysore Rajah, Holkar and others all enjoing the utmost respect to be paid to him

3. Owing to the extraordinary veneration in which he has always been held, a biradari of Silledars has been attached to him from the earliest period and on the occasion of his visiting H. M. Territory an extra escort has always been given, to which purport the Guru holds several communications to and from the Madras Government.

4. The Guru enjoys Enam lands valued at more than half a lac in the Kadur District near the sources of the Toongabhadra river, and during his periodical tours in Mysore receives from his disciples large sums of money which he distributes in charity. The late Rajah used to pay him Rs. 1000 a month

5 The Guru Narsing Bhartee is a venerable old man of 72, who has been a great traveller and has a considerable reputation for learning He is deservedly respected, being very unassuming in manner and having a well established character for benevolence and wisdom.

6 I may observe that I do not think it expedient to curtail the Guru of his customary guard of honor, but I have endeavoured to dissuade him from proceeding to Her Majesty's Territory with any additional followers, although he can quote undoubted precedents for the practice.

I have, &c,

(Signed) L. BOWRING.

No. 1360

FROM

W. S. SETON KARR, Esq.,

Secretary to the Government of India.

TO

THE COMMISSIONER OF MYSORE.

SIR,

I have the honor to acknowledge the receipt of your letter dated 27th ultimo, No. 2369/101, submitting an explanation in regard to the escort of Silledar Horse furnished to the Sringeri Guru.

2. In reply, I am directed to state that His Excellency the Viceroy and Governor General in Council accepts your explanation of the custom in force regarding the native gentleman and approves the views set forth in the 6th paragraph of the letter under acknowledgment.

I have the honor to be,
Sir.
Your most obedient Servant,
(Signed) W. S. SETON KARR,
Secretary to the Government of India,

SIMLA,
19th August, 1868.

True copy,

(Signed) L. BOWRING.

PRINCIPAL — SEAL of NIZAM ALI KHAN NIZA-MUL MULK DATED 1175-H — ROYAL ORDER

Addressed to the Goomastas of Jagirdars, Desa Mukies, Desa Pandyas, Monegars, Potels, Farmers, &c., &c , in the Subhas of Deckan, Hyderabad

Whereas the Vakeel of the *Sri Swami Jagadguru, Sumsthan Sringeri*, represents that the Sri Swami is about to set out on tour in the Deckan with certain insignia on the strength of a *Sunud* formerly issued by this Government; that the usual honors specified in the said *Sunud* issued under the seal of thist kingdom should be continued that the practice of offering to the Mutt annual contributions and nuzars during the occasion of marriage, &c , should be continued; that the Enams, Jagirs, &c . bestowed on the *Mutt* should be continued as before; and that no other Guru be allowed to travel about with the above said honors and insignia

Wherefore it is directed thus.—

In accordance with the above representation the orders formerly issued in regard to the Guru's progress in this kingdom with the usual insignia, the usual *Istakbal*, *Buksha Kamcay* (offering) of the people to the said Mutt are hereby renewed It is further ordered that the property of such disciples of the said *Mutt* as may die *Bewaris* (without heirs) shall vest in the said *Mutt* and that the *Swami* is the supreme in the matter of the performance on the part of his disciples of their respective religious duties. This order will have reference to the following matters.——

1. The said swami will have authority in the Mullikarjoona and other temples
2. *The Enams, Jagirs*, &c , bestowed on the *Mutt* to continue as before.
3. The elephants and horses in the possession of *Jorsas* to be the property of the *Mutt*.
4. The property of *Sunyasis*, *Avadhutas* and such others who may die without heirs to vest in the *Mutt*.
5. During the occation of marriages, &c , among the Mutt disciples, the first honors, *Nuzurs*, &c., to be offered to the *Mutt*.
6 That out of the temple founds a contribution of one anna in the Rupee to be paid in to the *Mutt*.
7. That a portion of the allowance made for the *Lungerkhana* and *Kyrat* for Mussulmen *Fakeers* to be paid in to the *Mutt*

Dated 24th Rubei Sani 1196 Higiri corresponding with the year A D. 1779 80
Registerd in the Huzur Dufter 3rd Jamadilevel in the year 1196 Hijiri
Registerd in the Dewan's Dufter 1st Jamadilevel in the year 1196 Hijiri
Copy registered in the Sultan's Dufter 1st Jamadi level in the year 1196 Hijiri corresponding to A. D. 1779—80

The above is a translation from Persian language

Jayalakshmi Vilasa press, Mysore

मोहर.

श्री.

॥ जगद्गुरुयाच ॥

हे संस्थान च विशिष्ट आमील व शिरस्तेदार यास लिहिवाबुन पाठविल संनद वैगेरे विला ऐसाजे आमलि न शिरस्तेदारा न हाल इस्तकबाल मोकदंमा निमुजारे या सरकार दारुल रियासत मैहिसूर विदानद ॥ ॥ श्री श्रिंगेरी ॥ ॥ श्रीमठाहून मटमुद्र ब्राह्मण एउन तुमच तुमच तालूकेंत मामूलप्रकार त्याच शिष्यवर्गा च वर्णाश्रम च आचारविचार विचारणाकरुन घेउन श्रीमठासएणे च चरणकाणिका मूलानक्षत्रकाणिका अग्रतांबूल दीपराधनकाणिका प्रायश्चित्तकाणिका सुदा शिष्यवर्गलोका कडून एणे सारीख करुन घेणेच्या विषयांत हि कोणी तरी काणिका देइनाते मुद्रा अतिक्रमवाणि चा ललतरि त्यास ताकीद करुन बंदोबस्त करवाउन देणेच्या सही सदरी शिष्या कडून वसूल जाहलेतें काणक्यास कोणि जकात वसूल करिना सारिखहि श्री श्रिंगेरी श्रीमठास पूर्वापासून मिळालते शिष्यमंडलींत वाइट जाहलेते बाइकास श्रीमटच हवाला करुन रशीद घेणे विशया सहि सदरी श्रीमंठास मिळालते ब्राह्मण सुदा समस्त इतर वर्णाश्रमांत हि सुदा त्याला वर्णाश्रमप्रकार त्याला कालांत उपनयन विवाह प्रायश्चित्त वगैरे करुन घेणेच विषयांत ही सरकारवालेनि प्रवेश करितानये ह्मणुन हि श्री श्रिंगेरि ॥ ॥ याच सवारिहि कोणत कोणतग्रामास आलियाहि तुमचतुमच तालूक सरहदेंत त्याला स्थलांत असणेच शिवालय विष्णु आलय वगैरे देवस्थानांतहि असणेच सदरि देवास श्री श्रियानि - पूजा करणेबदल सोडून देणेविषइ सुदा याप्रकार निरोपव्हाव ह्मणून हजूर शिरस्तेदार तिरमलपंडित व आणि द्यावपैया व श्रीमठाधिकार पद्मनाभशास्त्रि याणि सुदा हजूरात अर्जकरून घेतलकरिता त्यास निरोपदेणेच काय ह्मणिजे सदरी प्रमाणे वरिलिहिले सारिख केव्हाहि चालून घेउन एणेच नव्हत हेसंनदच नकल प्रति तालूकेच शिरस्तेदाराच दफ्तरास दाखल करुन घेउन असल संनद सदरि तिरमलपंडित याच सुफर्देसहो पद्मनाभशास्त्रीयाच सुफर्देसहो वापस देणेच आहे जाणिजे तारीख २९ विं माहे दिनिसालसाहोर संन १२२१ने मरकुंम प्रमादीच संवत्सर कार्तीकमास खत लक्षीनारणैया मुनषी हजूर.

हेजागि फारषींत टीपू सुलतानयाच दस्तखतआहे.

- हे जागि चादि महाराष्ट्र दफ्तरदाराच दाखला आहे.

मोहर.

हे जागि फारषीत संनददाखला आहे.

ಮೈಸೂರು ಸಂಸ್ಥಾನದ ಎಗ್ಸಿಕ್ಯೂಟಿವ್ ಕೌನ್ಸಿಲ್ ಪ್ರಸಿಡೆಂಟ್ ಮತ್ತು

ದಿವಾನ್ ಸರ್. ಕೆ. ಶೇಷಾದ್ರಯ್ಯನವರ

ಸನ್ನಿಧಾನಂಗಳಿಗೆ

— 0 —

[illegible] —

ನಿವಾಸಿಗಳಾದ ಬ್ರಾಹ್ಮಣರು ಮೊದಲಾದ ಚತುರ್ವರ್ಣದ ಪ್ರಜೆಗಳು ಬರೆದುಕೊಂಡ ಅರ್ಜಿ—

ಶ್ರೀ ಶೃಂಗೇರಿ ಜಗದ್ಗುರು [illegible] ಸ್ವಾಮಿಗಳಸ್ವಾರಿಯು ಕಳೆದ ಜೂನ್ ಮಾಹೆಯಲ್ಲಿ ಮೈಸೂರಿಗೆ ಬಿಜಯಂಗೈಯುತ್ತಿದ್ದ ಕಾಲದ [illegible] ಪ್ರಾರ್ಥನಪೂರ್ವಕ ಶ್ರೀರಂಗಪಟ್ಟಣದ ಕೋಟೆಗಳಕ್ಕೆ ದಯಮಾಡಿಸಿ ಅಲ್ಲಿ ರಂಗನಾಥಸ್ವಾಮಿದೇವರ ದರ್ಶನವಂ ಮಾಡಿದ್ದಕ್ಕಾಗಿ ದೇವರಿಗೆ ಸಂಪ್ರೋಕ್ಷಣೆ ಆಗಬೇಕೆಂದು ಶ್ರೀವೈಷ್ಣವರಲ್ಲಿ ಕೆಲವರು "ಅ ಖಿ ಲ ವೈ ಷ್ಣ ವ ಸ ಭಾ" ಎಂದು ದೊಡ್ಡ ಹೆಸರನ್ನಿಟ್ಟುಕೊಂಡು ಸರ್ಕಾರದಲ್ಲಿ ಫಿರ್ಯಾದುಮಾಡಿದ್ದರಮೇಲೆ ಸ್ಮಾರ್ತಜನಗಳು ಸಂಪ್ರೋಕ್ಷಣ ಮಾಡಕೂಡದೆಂದು ತಕರಾರುಮಾಡಿದ್ದಕ್ಕಾಗಿ ೧೮೯೫ನೇ ಇಸವಿ ಜೂನ್ ೩ನೇ ತಾರೀಖಿನಲ್ಲಿ ಮುಜರಾಯಿ ಸೂಪರಿಂಟೆಂಡೆಂಟರವರು ಬಂದು ವಿಚಾರಣೆ ಮಾಡಿ ಗೌರ್ನಮೆಂಟಿಗೆ ಮಾಡಿದ ರಿಪೋರ್ಟನ್ನು ಪರಾಂಬರಿಸಿ ಗೌರ್ನಮೆಂಟಿನವರಿಂದ ತೀರ್ಮಾನದ ಹುಕುಂ ಕೊಡೋಣವಾಗಿರುತ್ತೆ. ಈ ತೀರ್ಮಾನವು ದ್ವೇಷಾಸೂಯಾಪರರಾದ ಕೆಲವರಿಗೆ ತೃಪ್ತಿಕರವಾಗದೆ ಅವರು ವರ್ತಮಾನಪತ್ರಿಕೆಗಳಿಂದ ಮನಸ್ವೀಚರ್ಚೆಯನ್ನು ಮಾಡುತ್ತಾ ಇರುವದಲ್ಲದೆ ತಮ್ಮ ಅಭಿಪ್ರಾಯದಂತೆ ಸಂಪ್ರೋಕ್ಷಣೆಗೆ ಹುಕುಂ ಕೊಡದೇಹೋದಲ್ಲಿ ಮತಸಮ್ಬಂಧವಾದ ಮರಣವನ್ನು ಹೊಂದುತ್ತೇವೆಂಬದಾಗಿ ಬರಿಯೋಣವೇ ಮುಂತಾದ್ದರಿಂದ ಗೌರ್ನಮೆಂಟಿನವರಿಗೆ ಘಾಬರಿಯನ್ನುಂಟುಮಾಡಿ ತೀರ್ಮಾನ[illegible]ಕ್ಕೆ ವಿರುದ್ಧವಾಗಿರತಕ್ಕ ತಮ್ಮ ಸ್ವಾರ್ಥಗಳನ್ನು ಪಡೆಯಬೇಕೆಂದು ಪುನಃಪುನಃ ಶ್ರೀಮನ್ಮಹಾರಾಜ್ಞೀ ರೀಜೆಂಟರವರಿಗೂ ರಸಿಡೆಂಟ ಸಾಹೇಬರಿಗೂ ಅರ್ಜಿಯನ್ನು ಕೊಡುವದೇ ಮುಂತಾದ ಪ್ರಯತ್ನದಲ್ಲಿರುತ್ತಾರೆ.

ಈ ವಿಚಾರವನ್ನು ಕುರಿತು ನಾವು ಗೌರ್ನಮೆಂಟಿಗೆ ತೃತಪಡಿಸತಕ್ಕದ್ದೇನೂ ಇಲ್ಲದೇ ಇದ್ದಾಗ್ಯೂ ಪ್ರೊಸೀಡಿಂಗ್ಸಿನ ೪ನೇ ಪ್ಯಾರಾದಲ್ಲಿ ನಮೂದಿಸಿರುವ ಸಂದರ್ಭದಲ್ಲಿಯೂ ಶ್ರೀವೈಷ್ಣವರಿಗೆ ಶ್ರೀ ರಂಗನಾಥಸ್ವಾಮಿದೇವರಮೇಲೆ ಇರತಕ್ಕ ಹಕ್ಕುದಾರಿ ವಿಚಾರದಲ್ಲೂ ಅಧಿಕನಾದಕೊಳ್ಳುವದನ್ನು ಘನತೆಯನ್ನು ಹೊಂದಿದ ಕೌನ್ಸಿಲ್ ಸಭೆಯವರು ಸಾವಧಾನವಾಗಿ ಪರ್ಯಾಲೋಚಿಸಬೇಕೆಂದು ಬೇಡುತ್ತೇವೆ.

೧ ನೇದು ಮೇಲ್ಕಂಡ ಪ್ರೊಸಿಡಿಂಗ್ಸಿನ ನಾಲ್ಕನೇ ಪ್ಯಾರಾ.

ವೇದೋಕ್ತ ಕರ್ಮಾನುಷ್ಠಾಯಿಗಳಾದ ಬ್ರಾಹ್ಮಣರಿಗೆ ವಿಧಿರೂಪವಾಗಿರುವ ಆಗಮಗಳಪ್ರಕಾರ ಪೂಜೆಗಳಂ ನಡೆಸಲ್ಪಡುವ ಒಂದು ದೇವಾಲಯದಲ್ಲಿ ಒಬ್ಬ ಮಠಾಧಿಪತಿಯಾದವರು ಪೂಜೆಮಾಡಬಹುದೆಂಬ ಸಾಮಾನ್ಯ ಜಿಜ್ಞಾಸೆಯನ್ನಾಗಲೀ ಅಥವಾ ಮಾಮೂಲ್ ಅನುಸರಿಸಿ ಶೃಂಗೇರಿಸ್ವಾಮಿಗಳವರಿಗೆ ಇಂಥಾ ವಿಷಯಗಳಲ್ಲಿ ಯಾವದಾದರೂ ವಿಶೇಷ ಬಾಧ್ಯತೆ ಉಂಟೆ ಎಂಬ ಮುಖ್ಯವಾದಜಿಜ್ಞಾಸೆಯನ್ನಾಗಲಿ, ಪ್ರಕೃತ ಮೊಕದ್ದಮೆಯನ್ನು ಫೈಸಲ್ ಮಾಡುವದರಲ್ಲಿ ಆಲೋಚಿಸಬೇಕಾದ್ದು ದೈವಾತ್ ಅನಾವಶ್ಯಕವಾಗಿದೆ. ಕಳೆದ ಜೂನ್ ತಿಂಗಳು ೧ನೇ ತಾರೀಖಿನಲ್ಲಿ ಶೃಂಗೇರಿಸ್ವಾಮಿಗಳವರು ದೇವರಿಗೆ ಪೂಜೆಮಾಡಬೇಕೆಂಬ ಉದ್ದೇಶ್ಯದೊಡನೆ ದೇವಾಲಯಕ್ಕೆ ದಯಮಾಡಿಸಿದವರಲ್ಲವೆಂದು ಹೇಳುವದು ಪ್ರಕೃತ ಮೊಕದ್ದಮೆಯ ವ್ಯವಸ್ಥೆಗೆ ಸಾಕಾದ್ದಾಗಿದೆ.

ವಿಷ್ಣುದೇವಾಲಯಗಳಲ್ಲಿ ಶೃಂಗೇರಿ ಜಗದ್ಗುರುಗಳವರು ಪೂಜೆಮಾಡತಕ್ಕದ್ದಕ್ಕೆ ಅವರಿಗೆ ವಿಶೇಷ ಬಾಧ್ಯತೆ ಇರತಕ್ಕದ್ದನ್ನು ವಿಚಾರಮಾಡತಕ್ಕದ್ದು ಈ ಮೊಕದ್ದಮಾ ತೀರ್ಮಾನಕ್ಕೆ ಮುಖ್ಯವಾದ ಅಂಶವಾಗಿತ್ತು.

ಹಾಗೆ ಮಾಡಿಸಿ ತೀರ್ಮಾನವನ್ನ ಅಪ್ಪಣೇಕೊಡಿಸಿದ್ದ ಪಕ್ಷದಲ್ಲಿ ಶ್ರೀವೈಷ್ಣವರು ಪುನಃಪುನಃ ಚರ್ಚಿಸುವದಕ್ಕೂ ಶೃಂಗೇರಿಮಠದ ಶಿಷ್ಯರಾದ ನಾಲ್ಕು ವರ್ಣದವರೂ ಈ ವಿಚಾರವಾಗಿ ಗೌರ್ನಮೆಂಟಿನವರಿಗೆ ತೊಂದರೆ ಕೊಡುವದಕ್ಕೂ ಅವಕಾಶವಾಗುತ್ತಿರಲಿಲ್ಲ. ಎಂಬುವದನ್ನ ಭಯಭಕ್ತಿಗಳೊಡನೆ ಅರಿಕೆ ಮಾಡಿಕೊಳ್ಳುತ್ತೇವೆಯೇ ಹೊರ್ತು ಗೌರ್ನಮೆಂಟನವರ ನಡವಳಿಕೆಮೇಲೆ ಆಕ್ಷೇಪರೂಪವನ್ನಾಗಿ ಅರಿಕೆಮಾಡುವದಿಲ್ಲ ಎಂಬುವದನ್ನ ಘನವಾದ ಚಿತ್ತದಲ್ಲಿ ಲಾಲಿಸಬೇಕು.

೨ ಬ್ರಾಹ್ಮಣ್ಯವು ಕೆಲವು ಶತಮಾನಗಳ ಕೆಳಗೆ ಬೌದ್ಧರ ಪ್ರಾಬಲ್ಯದಲ್ಲಿ ಕ್ಷೀಣಗತಿಗೆ ಬಂದದ್ದರಿಂದ ದೇವಾಲಯ ಮೊದಲಾದವುಗಳೆಲ್ಲಾ ಬೌದ್ಧಾಕ್ರಾಂತಗಳಾಗಿರಲು ಶ್ರೀಮಚ್ಛಂಕರಭಗವತ್ಪಾದರವರು ಅವತಾರವಂಮಾಡಿ ಈ ದುರ್ಮತಗಳನ್ನೆಲ್ಲಾ ಖಂಡಿಸಿ ಬ್ರಾಹ್ಮಣ್ಯವನ್ನ ಜೀರ್ಣೋದ್ಧಾರಮಾಡಿ ಷಣ್ಮತಗಳನ್ನೂ ಸನ್ಯಾಸಾಶ್ರಮವನ್ನೂ ಶಿವವಿಷ್ಣ್ವಾದಿ ಪಂಚಾಯತನಾರಾಧನ ಕ್ರಮವನ್ನೂ ಸಹಾ ಶಾಸ್ತ್ರೀಯವಾದದ್ದೆಂದು ಸ್ಥಾಪಿಸಿದಂಥಾವರಾಗಿ ಅದರಂತೆ ತಾವು ಆಚರಣಮಾಡುತ್ತಾ ತಮ್ಮ ಶಿಷ್ಯಮಂಡಲಿಯಿಂದ ನಡೆಸುತ್ತಲೂ ಬಂದರು. ಅನ್ಯಮತಾಕ್ರಾಂತವಾಗಿ ನಾಮಾವಶಿಷ್ಟವಾಗಿದ್ದ ಆಸೇತು ಹಿಮಾಚಲಪರ್ಯಂತ ಇರತಕ್ಕ ದೇವಾಲಯಗಳಿಗೆಲ್ಲಾ ಪ್ರೋಕ್ಷ್ಯ ಅವುಗಳನ್ನ ವಿಧ್ಯುಕ್ತವಾಗಿ ಶುದ್ಧಿಮಾಡಿ ಶಿವವಿಷ್ಣುದೇವರುಗಳಿಗೆಲ್ಲಾ ಯಂತ್ರೋದ್ಧಾರ ಕುಂಭಾಭಿಷೇಕ ಮುಂತಾದ್ದನ್ನ ಶಾಸ್ತ್ರೋಕ್ತವಾದ ವಿಧಿಗಳಿಂದ ನಡಿಸಿ, ದೇವತಾಸಾನ್ನಿಧ್ಯ ಉಂಟಾಗುವಂತೆಮಾಡಿ ತಾವು ಸ್ವತಃ ಆ ದೇವರುಗಳನ್ನ ಪೂಜೆಮಾಡಿ ನಂತರ ಆಯಾಯ ಸ್ಥಲದಲ್ಲಿರತಕ್ಕ ಬ್ರಾಹ್ಮಣರಿಗೆ ಪೂಜೆಮಾಡುವದಕ್ಕೆ ಅಪ್ಪಣೇಕೊಡಿಸಿದರೆಂಬುವದು ಶಂಕರವಿಜಯ ಮೊದಲಾದ ಅನೇಕ ಗ್ರಂಥಗಳಿಂದ ತಿಳಿಯಬರುತ್ತೆ.

೩ ಶ್ರೀಶಂಕರ ಭಗವತ್ಪಾದರವರ ತರುವಾಯ ಆ ಪೀಠವನ್ನಲಂಕರಿಸಿದ ಗುರುಪರಂಪರೆಯವರೆಲ್ಲಾ ಮೇಲೆಹೇಳಿದ ಕ್ರಮದಲ್ಲೇ ಆಚಾರ ವಿಚಾರಗಳನ್ನ ಪರಾಮರ್ಶಿಸುವದಕ್ಕಾಗಿ ಸಂಚಾರ ಹೊರಟಕಾಲಗಳಲ್ಲಿ ಸಿಕ್ಕುವ ಶಿವವಿಷ್ಣು ದೇವಾಲಯಗಳಿಗೆ ದಯಮಾಡಿಸಿ ದೇವತಾರಾಧನೆಯನ್ನ ನಡೆಸುತ್ತಾ ಇದ್ದಾರೆ.

೪ ಏತನ್ಮಧ್ಯೆ ಅಂದರೆ ಶ್ರೀಶಂಕರಭಗತ್ಪಾದರವರು ಅವತಾರಮಾಡಿ ಮತಾಚಾರ ನಿಬಂಧನೆಗಳನ್ನ ಸ್ಥಿರಪಡಿಸಿದನಂತರ ಸುಮಾರು ಸಾವಿರಾರು ವರುಷಗಳವರಿಗೂ ಸ್ಮಾರ್ತರೇ ವಿಷ್ಣುದೇವಾಲಯಗಳಲ್ಲಿ ವೈಖಾನಸೋಕ್ತವಾದ ಪೂಜಾವಿಧಿಗಳನ್ನ ನಡೆಸುತ್ತಾಬಂದರು. ನಂತರ ಶ್ರೀ ರಾಮಾನುಜಾಚಾರ್ಯರವರು ಅವತಾರಮಾಡಿ ತಮ್ಮ ಮತಕ್ಕೆ ಸೇರಿಸಿಕೊಂಡವರಪೈಕಿ ಕೆಲವು ಸ್ಮಾರ್ತರು ವಿಷ್ಣುದೇವಾಲಯಗಳಲ್ಲಿ ಪೂಜಕರಾಗಿಯೂ, ಸ್ಥಾನೀಕ ಮುಂತಾದ ನೌಕರಿಯಲ್ಲಿಯೂ ಸೇರಿಕೊಂಡಿದ್ದರು. ಈ ನೌಕರಿಯಿಂದಲೇ ಅವರು ಜೀವಿಸುತ್ತಿದ್ದದ್ದರಿಂದ ಇವರಿಗೆ ಸಂಬಂಧಿಗಳಾಗಿಯೂ ಮಿತ್ರವರ್ಗದವರಾಗಿಯೂ ಇದ್ದ ಇತರ ಸ್ಮಾರ್ತಬ್ರಾಹ್ಮಣರು ಇವರ ಜೀವನಕ್ಕೆ ಉಪಹತಿಮಾಡುವದಕ್ಕೆ ಸಮ್ಮತವಿಲ್ಲದೆ ಇದ್ದದ್ದರಿಂದಲೂ ಇಂಥಾವರ ಪೂಜೆಯಿಂದ ದೇವರಸಾನ್ನಿಧ್ಯವು ಒಂದುವೇಳೆ ಕಡಿಮೆಯಾದಾಗ್ಯೂ ಶ್ರೀ ಜಗದ್ಗುರುಗಳವರು ಆಗಾಗ್ಯೆ ದಯಮಾಡಿ ದೇವರನ್ನ ಪೂಜಿಸೋಣದರಿಂದ ಕಳಾಸಾನ್ನಿಧ್ಯವೃದ್ಧಿಯಾಗುತ್ತೆಂತಲೂ ಇದರಿಂದ ತಾವು ದೇವತಾಪ್ರಸಾದವನ್ನ ಪರಿಗ್ರಹಿಸಬಹುದೆಂದು ಯೋಚಿಸಿ ತಟಸ್ಥರಾಗಿದ್ದರು. ಇದರನ್ನ ಕುರಿತು ಆಕ್ಷೇಪಿಸದೆ ಅವರುಗಳು ದೇವತಾರಾಧನೆ ಮಾಡಿಕೊಂಡು ಬರುವದಕ್ಕೆ ಅವಕಾಶಕೊಟ್ಟದ್ದರಿಂದಲೇ ಶ್ರೀ ಜಗದ್ಗುರುಗಳವರಿಗೆ ಸಮಸ್ತ ಪ್ರಾಣಿಗಳಲ್ಲಿಯೂ ಇರತಕ್ಕ ದಯಾಳುತ್ವವೂ ಬ್ರಾಹ್ಮಣವರ್ಣಕ್ಕೆ ಸೇರಿದ ಮತಾಂತರಸ್ಥರಲ್ಲಿಯೂಕೂಡ ಇರತಕ್ಕ ಅನುರಾಗವು ಜಗದ್ವಿಖ್ಯಾತವಾಗಿದ್ದಾಗ್ಯೂ ಇಂಥಾ ಮಹಾನುಭಾವರು ರಾಜರು ಮತ್ತು ರಾಷ್ಟ್ರದ ಕ್ಷೇಮಾರ್ಥವಾಗಿ ಶಿವವಿಷ್ಣು ದೇವಾಯಗಳಲ್ಲಿರತಕ್ಕ ದೇವರುಗಳಿಗೆ ಮಾಡತಕ್ಕ ಪೂಜೆಯು ಬಹುಕಾಲದಾರಭ್ಯ ಆಚಾರವಾಗಿ ನಡೆದುಬರುವಂಥಾದ್ದಾದಪ್ಪಾಗ್ಯೂ ಇವರನ್ನ ಈ ಪೂಜಕರಾದ ಶ್ರೀವೈಷ್ಣವರು ದ್ವೇಷಾಸೂಯೆಯಿಂದ ಈಚೀಚಿಗೆ ಅಡ್ಡಿಮಾಡುವದಕ್ಕೆ ಉಪಕ್ರಮಿಸಿದರು. ಅಂಥಾಸಂದರ್ಭಗಳಲ್ಲೆಲ್ಲಾ ಆಯಾಯ ಕಾಲದಲ್ಲಿದ್ದ ರಾಜರು ಈ ಪೂಜಕರಿಗೆ ನಿರ್ಬಂಧಪಡಿಸಿ, ಶ್ರೀಜಗದ್ಗುರುಗಳವರು ಪೂಜೆಮಾಡುವದಕ್ಕೆ ಅವಕಾಶಗೊಳಿಸಿದ್ದಲ್ಲದೆ ಕೆಲವು ಸಂದರ್ಭಗಳಲ್ಲಿ ನೌಕರಿಯಿಂದ ಇವರನ್ನ ಬರತರಫ್‌ಮಾಡೋಣದರಮೂಲಕ ಶಿಕ್ಷೆಯನ್ನ ಕೊಟ್ಟಿರುತ್ತಾರೆ. ಈಗ್ಯೆ ೪೮ ವರ್ಷಗಳಮುಂಚೆ ಅಂದರೆ ವಿಳಂಬಿಸಂವತ್ಸರದಲ್ಲಿ ಶ್ರೀಜಗದ್ಗುರುನರಸಿಂಹಭಾರತೀಸ್ವಾಮಿಗಳವರು ತಿರುಮಕೂಡ್ಲು ನರಸೀಪುರದ ಶ್ರೀ ಗುಂಜಾನರಸಿಂಹಸ್ವಾಮಿಗೆ ಪೂಜೆಮಾಡುವಕಾಲದಲ್ಲಿ ಅಡ್ಡಿಪಡಿಸುವದಕ್ಕೆಬಂದ ದೇವಸ್ಥಾನದ ನೌಕರರಿಗೆ ನಿರ್ಬಂಧಪಡಿಸಿ ಶ್ರೀಗಳವರು ಕ್ರಮವಾಗಿ ಪೂಜೆಮಾಡುವದಕ್ಕೆ ಅವಕಾಶ

ನಂಕೊಡಿಸಿದ್ದಲ್ಲದೆ ಅಡ್ಡಿಮಾಡಿದ ಶ್ರೀವೈಷ್ಣವರನ್ನು ನೌಕರಿಯಿಂದ ವಜಾಮಾಡಿ ಇವರು ಮಾಡುತ್ತಿದ್ದ ನೌಕರಿಯನ್ನು ಸ್ಮಾರ್ತರಿಂದ ನಡಿಸುತ್ತಾಬಂದರು. ಆ ಕಾಲದಲ್ಲಿ ಸಂಭವಿಸಿದ ಆಗಮೋಕ್ತವಾದ ರಥೋತ್ಸವಾಧಿಗಳನ್ನೂ ಸಹ ಸ್ಮಾರ್ತರೇ ನಡೆಯಿಸಿರುತ್ತಾರೆ. ಎಂಬುವದು ತಿರುಮಕೂಡಲುನರಸೀಪುರ ತಾಲ್ಲೂಕ್ ಮತ್ತು ಕಮಿಷನರ ಹುಜೂರು ರಿಕಾರ್ಡಿನಲ್ಲಿಯೂ ದಾಖಲೆ ಇರುತ್ತೆಂದು ತಿಳಿಯಬರುವದರಿಂದ ಅದರನ್ನೂ ಪರಾಮರಿಷಿದಲ್ಲಿ ವ್ಯಕ್ತವಡುತ್ತೆ.

೫ ಶ್ರೀಜಗದ್ಗುರುಗಳವರು ಮೈಸೂರು ಶೀಮೆಯಲ್ಲಿರತಕ್ಕ ಪ್ರಸಿದ್ಧವಾದ ದೇವಾಲಯಗಳಲ್ಲಿರುವ ದೇವರುಗಳನ್ನ ಆರಾಧನೆ ಮಾಡುವದು ಮಾತ್ರವಲ್ಲದೆ ಮದ್ರಾಸು, ಬೊಂಬಾಯಿ, ಮುಂತಾದ ಪ್ರಸಿಡೆನ್ಸಿಯಲ್ಲಿರತಕ್ಕ ಆಗಮೋಕ್ತಾರಾಧನೆಗೆ ಒಳಪಟ್ಟಿರುವ ಪ್ರಸಿದ್ಧ ಶಿವ ವಿಷ್ಣುದೇವಾಲಯಗಳಲ್ಲಿಯೂ ದೇವತಾರಾಧನೆ ಮಾಡಿರುತ್ತಾರೆಂಬುವದು ಲೋಕಪ್ರಸಿದ್ಧವಾಗಿರುತ್ತೆ. ಅಂದರೆ ದಕ್ಷಿಣದೇಶದಲ್ಲಿ ಪ್ರಸಿದ್ಧವಾದ ದೇವಾಲಯಗಳು ತಿರುಪತಿ, ಶ್ರೀರಂಗ, ಕಾಂಚಿ, ಅನಂತಶಯನ, ದರ್ಭಶಯನ ಮುಂತಾದ ಸ್ಥಳಗಳಲ್ಲಿ ಅನೇಕಾವರ್ತಿ ಪೂಜೆ ಮಾಡಿರತಕ್ಕ ದಾಖಲೆಗಳಪೈಕಿ ಪ್ರಕೃತ ದೊರತಿರುವಷ್ಟರನ್ನೂ ಪರಾಂಬರಿಕೆ ಬಗ್ಯೆ ಹಾಜರ್ಮಾಡಿರುತ್ತೇವೆ. ಇದರಂತೆಯೆ ಈ ದೇಶದ ದೇವಾಲಯಗಳಲ್ಲಿ ಶ್ರೀಗಳವರು ದೇವತಾರಾಧನೆ ಮಾಡುವದಕ್ಕಾಗಿ ಅನೇಕ ರಾಜರು ಮತ್ತು ಅಧಿಕಾರಿಗಳು ಕೊಟ್ಟಿರತಕ್ಕ ಲಿಖಾವಟ್ಟುಗಳು ಸರಕಾರದಲ್ಲೂ, ಮತ್ತು ಶ್ರೀಮಠದಲ್ಲೂ, ಅನೇಕವಾಗಿರುತ್ತೆ. ಇವುಗಳಲ್ಲ ಪ್ರಕೃತ ನಮಿಗೆ ದೊರತಿರತಕ್ಕ ದಾಖಲೆಗಳು ಅಂದರೆ ಟೀಪ್ರೊಸುಲ್ತಾನರು ಕೊಟ್ಟಿರತಕ್ಕ ಒಂದೆರಡು ಸನ್ನದಿನ ನಕಲು, ಈ ಸಂಸ್ಥಾನದ ರಾಜ್ಯಭಾರ ಬ್ರಿಟೀಷ್ ಅಧೀನರ ಅಕ್ಷ್ವಕಗೆ ಒಳಪಟ್ಟಿದ್ದ ಕಾಲ ಅಂದರೆ ೧೮೩೨ನೇ ಇಸವಿ ನಂದನಸಂವತ್ಸರದಲ್ಲಿ ಕಮಿಷನರ್ ಕ್ಯಾಷ್ ಮೆಜರ್ ಸಾಹೇಬರು ಕೊಟ್ಟಿರುವ ಒಟ್ಟು ಪರವಾನೆ ನಕಲನ್ನೂ, ಚೀಫ್ ಕಮಿಷನರ್ ಬೌರಿಂಗ್‌ಸಾಹೇಬರವರು ಇಂಡಿಯಾ ಗೌರ್ನ್‌ಮೆಂಟಗೆ ಬರದ ಲೆಟರು, ಅದರ ಜವಾಬಿನ ನಕಲನ್ನೂ, ಹೈದರಾಬಾದ್ ಸರಕಾರದವರು ಕೊಟ್ಟಿರುವ ಸನ್ನದಿನ ತರ್ಜುಮಾನಕಲನ್ನೂ ಸಹ ಇದರ ಸಂಗಡ ಹಾಜರ್ಮಾಡಿರುತ್ತೇವೆ. ಈ ಪೈಕಿ ನಂದನ ಸಂವತ್ಸರದ ಒಟ್ಟು ಪರವಾನೆಯಲ್ಲಿ ನಮೂದಿಸಿರುವ ಮದ್ರಾಸ್ ಬಂಗಾಳಾ ಗೌನರವರು ಕೊಟ್ಟಿರತಕ್ಕ ಲೆಟರುಗಳು ಮತ್ತು ದಿವಾನ್ ಪೂರ್ಣಯ್ಯನವರು ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರವರು ಕೊಟ್ಟಿರತಕ್ಕ ಸನ್ನದು ವಗೈರೆ ಕಾಗದಪತ್ರಗಳ ಸಂಖ್ಯೆ ೮೫) ಆಗುತ್ತೆ. ಇವುಗಳೆಲ್ಲಾ ಕಮಿಷನರ ಬಳಿಗೆ ಹಾಜರಾಗಿರುತ್ತೆಂಬುವದು ಸದರಿ ಒಟ್ಟು ಪರವಾನೆಯಿಂದಲೇ ಗೊತ್ತಾಗುತ್ತೆ. ಇವುಗಳು ವಾಪಸ್ ಆಗದೆ ಚೀಫ್‌ಕಮಿಷನರ ಆಫೀಸ್ ರಿಕಾರ್ಡಿನಲ್ಲಿರುತ್ತೆಂಬದಾಗಿ ಕೇಳುತ್ತೇವೆ. ಅವುಗಳನ್ನ ಪರಾಂಬರಿಸಬೇಕೆಂದು ಬೇಡುತ್ತೇವೆ.

೬ ಮೇಲೆ ನಮೂದಿಸಿರತಕ್ಕ ರಿಕಾರ್ಡುಗಳಿಂದ ಶ್ರೀ ಶೃಂಗೇರಿ ಜಗದ್ಗುರುಗಳವರಿಗೆ ಪ್ರಕೃತದಲ್ಲಿ ಪಾಂಚರಾತ್ರವೈಖಾನಸಾದಿ ಆಗಮೋಕ್ತವಾಗಿ ಆರಾಧಿಸಲ್ಪಡುತ್ತಿರುವ ಶಿವವಿಷ್ಣು ದೇವಾಲಯಗಳಲ್ಲಿರುವ ದೇವರುಗಳಿಗೆ ಸ್ವತಃ ಪೂಜೆಮಾಡತಕ್ಕ ವಿಶೇಷಬಾಧ್ಯತೆಯು ಮತ್ತು ಹಕ್ಕು ಉಂಟೆಂಬುವದು ರುಜುವಾತು ಆಗುವದು ಸರಿಯಷ್ಟೆ; ಪ್ರಕೃತ ಚರ್ಚೆಗೆ ಸಮ್ಮಂಧಪಟ್ಟ ಶ್ರೀರಂಗಪಟ್ಟಣದ ರಂಗನಾಥಸ್ವಾಮಿಯವರಿಗೆ ಶ್ರೀಗಳವರು ಸ್ವತಃ ಪೂಜೆಮಾಡುವ ಹಕ್ಕು ಉಂಟೆಂಬುವದಕ್ಕೆ ಮೇಲೆ ಹೇಳಲ್ಪಟ್ಟ ಟೀಪ್ರೊಸುಲ್ತಾನರವರ ಸನ್ನದೇ ಸಾಕ್ಷಿಯಾಗಿರುವದಲ್ಲದೆ, ಇದಕ್ಕೆ ಅನುಸಾರವಾಗಿ ಪೂಜೆ ಮಾಡುತ್ತಿದ್ದರೆಂಬ ಸಂಗತಿಯನ್ನು ಹೇಳತಕ್ಕಂಥಾ ದೊಡ್ಡವಂಶೀಯರಾದ ಮಹಮ್ಮದೀಯರ್ ದೊಡ್ಡಮನುಷ್ಯರು ಅನೇಕರಿರುತ್ತಾರೆ. ಅವರುನ್ನೂ ಸಾಕ್ಷ್ಯ ಕೊಡುವದರಲ್ಲಿ ಅಭ್ಯಂತರವಿರುವದಿಲ್ಲ. ಇದು ಅವಶ್ಯಕವಾದ್ದೆಂದು ತೋರುವಪಕ್ಷದಲ್ಲಿ ಗೌರ್ನ್‌ಮೆಂಟಿನವರು ಅವರಿಂದಲೂ ತಿಳಿದುಕೊಳ್ಳಬಹುದು.

೭ ಶ್ರೀರಂಗಪಟ್ಟಣದ ಶ್ರೀ ರಂಗನಾಥದೇವರನ್ನ ಇಂಥಾವರು ಇಂಥಾಕಾಲದಲ್ಲಿ ಈ ರೀತಿಯಾಗಿ ಪ್ರತಿಷ್ಠೆ ಮಾಡಿದ ಸಂಗತಿ ನಿಸ್ಸಂದೇಹವಾಗಿ ಗೊತ್ತಾಗದೇ ಇದ್ದಾಗ್ಯೂ, ಇದು ಬಹಳ ಪುರಾತನವಾದದ್ದು. ಕೆಲವು ಶತಮಾನಗಳಕೆಳಗೆ ಗೌತಮಮಹರ್ಷಿಗಳು ಪೂಜಿಸುತ್ತಿದ್ದರೆಂಬುವದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರಷ್ಟೆ; ಮಹರ್ಷಿಗಳು ತಾಂತ್ರಿಕಾಗಮದೀಕ್ಷಾಬದ್ಧರಾದವರಲ್ಲ; ಪಾಷಂಡಿಗಳೂ ಅಲ್ಲ. ಇವರುಗಳು ವೈದಿಕಾಗಮದಲ್ಲಿ ಅರ್ಚನೆ ಮಾಡುತ್ತಿದ್ದರೆಂಬುವದು ಶಾಸ್ತ್ರಸಿದ್ಧವಾಗಿರುತ್ತೆ. ಅದನ್ನ ಅನುಸರಿಸಿಯೇ ಶ್ರೀಮಚ್ಛಂಕರಭಗವತ್ಪಾದರವರು ಈದೇವರನ್ನ ಅರ್ಚಿಸಿದರು. ಅದರಂತೆ ಅವರ ಪೀಠವನ್ನಲಂಕರಿಸಿದ ಗುರುಪರಂಪರೆಯವರೆಲ್ಲಾ ಪೂಜಿಸುತ್ತಾಬಂದರು. ಈ ಗೌತಮ ಮಹರ್ಷಿಗಳಿಗೆ ಗೋಹತ್ಯಾಸವಾದ ಸಂಘಟನೆ ಮಾಡಬೇಕೆಂದು ಕೆಲವು ದುಷ್ಟರಾದ ಬ್ರಾಹ್ಮಣರು ನಡೆಸಿದ ತಂತ್ರ ಅವರಿಗೆ ತಿಳಿದು ಇಂಥಾ ದುಷ್ಟಕೃತ್ಯೆ

ವನ್ನ ಮಾಡಿದ ಬ್ರಾಹ್ಮಣರು ಇವರ ವಂಶೀಯರು ತಪ್ತಮುದ್ರಾಂಕಿತರಾಗಿ ಪಾಂಚರಾತ್ರ ಶೈವಾದ್ಯಾಗಮದೀಕ್ಷಾಬದ್ಧರಾಗಿ ಕೆಟ್ಟು ಹೋಗಲಿ, ಎಂದು ಶಾಪಕೊಟ್ಟರೆಂತ ಗ್ರಂಥಗಳು ಇರೋಣದರಿಂದ ಗೌತಮಋಷಿಗಳು ಪಾಂಚರಾತ್ರಾಗಮ ದೀಕ್ಷಾಬದ್ಧರಲ್ಲವೆಂಬುವದು ಸ್ಪಷ್ಟವಾಗುತ್ತೆ.

೮ ಶ್ರೀರಂಗಪಟ್ಣದ ಶ್ರೀರಂಗನಾಥದೇವರಿಗೆ ಹಿಂದೂಮತಕ್ಕೆ ಸೇರಿದ ನಾಲ್ಕು ವರ್ಣದವರೂ ಭಕ್ತರು. ಈಗ ಚರ್ಚೆಮಾಡುತ್ತಿರುವ ಶ್ರೀವೈಷ್ಣವರು ಈ ಭಕ್ತಸಮುದಾಯವೆಂಬ ಸಮುದ್ರದಲ್ಲಿ ಕೆಲವು ತುಂತುರೆಗಳಾಗಿರುತ್ತಾರೆ. ಆದಾಗ್ಯೂ ತಮ್ಮ ಮತಸ್ಥರು ಪ್ರಕೃತದಲ್ಲಿ ಪೂಜಕರಾಗಿರುತ್ತಾರಷ್ಟೆ. ಆದ್ದರಿಂದ ದೇವರು ತಮ್ಮ ಸ್ವಂತ ಪದಾರ್ಥವೆಂದು ಭಾವಿಸುವ ದುರಭಿಮಾನ ವಿನಹ ಇತರ ಭಕ್ತರಿಗೆ ಇರತಕ್ಕದ್ದಕ್ಕಿಂತಲೂ ಬ್ಯಾರೆ ಯಾವ ವಿಧವಾದ ವಿಶೇಷ ಬಾಧ್ಯತೆಯೂ ದೇವರಲ್ಲಿ ಇವರಿಗೆ ಇರುವಹಾಗೆ ತೋರುವದಿಲ್ಲ. ಈ ದೇವಾಲಯವು ಸಂಸ್ಥಾನಕ್ಕೆ ಸೇರಿದ್ದು, ಸರ್ಕಾರದ ಜನರಲ್ ರೆವಿನ್ಯೂಯಿಂದ ಈ ದೇವರ ಆರಾಧನೆ ಖರ್ಚು ಸಲ್ಲುತ್ತಾಯಿದೆ. ದೇವರಿಗೆ ಧರಿಸತಕ್ಕ ವಸ್ತ್ರಾಭರಣಗಳಲ್ಲಿ ಪ್ರಾಯಶಃ ಮೈಸೂರು ಸಂಸ್ಥಾನದ ಮಹಾರಾಜರವರ ಸಂತತಿಯಿಂದಲೇ ಕೊಡಲ್ಪಟ್ಟದ್ದಾಗಿರುತ್ತೆ. ಭಕ್ತರಿಂದ ಕೊಡಲ್ಪಟ್ಟದ್ದು ಅತ್ಯಲ್ಪವಾಗಿದ್ದಾಗ್ಯೂ ಅದೂ ಸರ್ಕಾರಕ್ಕೆ ಸೇರಿದ್ದಾಗಿರುತ್ತೆ. ಹೀಗೆ ಸಂಸ್ಥಾನಕ್ಕೆ ಒಳಪಟ್ಟ ಬಾಧ್ಯತೆಯನ್ನ ಶ್ರೀವೈಷ್ಣವರಲ್ಲಿ ಕೆಲವರು ಮಾತ್ರ ತಮಗೇನೇ ಇರುವಂತೆ ಎಣಿಸಿ ಗದ್ದಲ ಮಾಡುವದು ಎಷ್ಟರಮಟ್ಟಿಗೆ ಊರ್ಜಿತವಪಡತಕ್ಕದ್ದೋ ಅವರನ್ನ ಗೌರ್ರ್ನಮೆಂಟಿನವರೇ ಆಲೋಚಿಸಬೇಕು. ಈ ಕಾರಣದಿಂದ ಇವರಿಗೆ ವಿಶೇಷ ಬಾಧ್ಯತೆ ಏನೂ ಇಲ್ಲದೇ ಇದ್ದಾಗ್ಯೂ ಚಿಪ್ನ್ಪುಸಾರ್ಥವಾಗಿ ಇದೆಯೆಂದು ಇಟ್ಟುಕೊಳ್ಳುವ ಸಂದರ್ಭದಲ್ಲಿಯೂ ಇವರ ಮತಸ್ಥಾಪಕರಾದ ಶ್ರೀರಾಮಾನುಜಾಚಾರ್ಯರವರ ಅವತಾರಕ್ಕಿಂತ ನೂರಾರು ವರುಷಗಳ ಹಿಂದೆ ಶ್ರೀಮಚ್ಛಂಕರಭಗವತ್ಪಾದರವರು ಅವತಾರಮಾಡಿದರೆಂಬ ಅಂಶವನ್ನ ಶ್ರೀವೈಷ್ಣವರು ಒಪ್ಪಿಕೊಳ್ಳದೇ ಇದ್ದರೆ ವಿಧಿ ಇಲ್ಲವಷ್ಟೆ. ಇದರಿಂದ ಶ್ರೀಜಗದ್ಗುರುಗಳವರಿಗೆ ಇರತಕ್ಕ ಬಾಧ್ಯತೆಯು ಇವರಿಗಿಂತ ನೂರಾರು ವರುಷಗಳಮಟ್ಟಿಗೂ ಪ್ರಾಚೀನವಾಗಿರುತ್ತೆಎಂಬುವದು ಸಾಮಾನ್ಯವಾಗಿ ಸಕಲರಿಗೂ ತಿಳಿಯಬರುವಂಥಾ ಅಂಶವು ಇವರಿಗೆ ತಿಳಿಯದೇ ಹೋದದ್ದು ಮಾತ್ರವಲ್ಲದೆ, ಶ್ರೀ ಜಗದ್ಗುರುಗಳವರಿಗೆ ಹಕ್ಕೇ ಇಲ್ಲವೆಂದು ಹೇಳುವದು ಪರ್ಯಾಲೋಚನೆಯಿಲ್ಲವನಾಗಿ ತೋರುತ್ತೆ ಅಥವಾ ಪ್ರಕೃತ ಸಂದರ್ಭದಲ್ಲಿ ಇವರುಮಾಡತಕ್ಕ ವ್ಯಾಜ್ಯವು ಊರ್ಜಿತವಾಗದೇ ಇದ್ದಾಗ್ಯೂ ಮುಂದೆ ಮಾಡಬೇಕಾಗುವ ಇಂಥಾ ವ್ಯಾಜ್ಯಗಳಿಗೆ ತಾವು ಫಿರ್ಯಾದಿಗಳಾಗಿ ನಿಲ್ಲುವದಕ್ಕೆ ಇದು ಬಾಧ್ಯತೆಯನ್ನ ಕೊಡತಕ್ಕ ಪ್ರಸೀಡೆಂಟ್ ಆಗಾನೆ ಪೀಠಿಕಾ ರಚನೆಯಾಗಿರುತ್ತೆಂದು ಭಾವಿಸಿರಬಹುದಾಗಿತೋರುತ್ತೆ.

